ಸಂಪುಟ: 67 ಸಂಚಿಕೆ: 134 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದಿನಿಂದ ಭಾರತ-ಬಾಂಗ್ಲಾ ಟೆಸ್ಟ್ ಪಂದ್ಯ

ಪುಟ ತೆರೆದಂತೆ...

ಬಾತ್‌ರೂಮ್ ಬರಹ ಎಂಬ ನಿಜವಾದ ಸೃಜನಶೀಲ ಸಾಹಿತ್ಯ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್

ಸಂ.ಪುಟ | 6

ತಾಳಮದ್ದಳೆಯ ಹೆಸರಾಂತ ಅರ್ಥಧಾರಿ

ಸವಿನೆನಪು
ಶಿವಾನಂದ ಜಿ.ಹೆಗಡೆ

ಸಂ.ಗಮ | 7

ದಾರಿದೀಪೋಕ್ತಿ

ನೀವು ಯಾರನ್ನೇ ಆಗಲಿ ಏಕಾಏಕಿ ನಂಬಬಾರದು. ಹಾಗೆ ನಂಬುವಾಗ ಸಾಕಷ್ಟು ಯೋಚಿಸಬೇಕು. ನಿಮ್ಮ ನಂಬಿಕೆಯನ್ನು ದುರುಪಯೋಗಪಡಿಸಿಕೊಳ್ಳಬಹುದು. ನಂಬಿಕೆದ್ರೋಹ ಎಸಗಿದವರು ಕೂಡ ಒಂದು ಕಾಲದಲ್ಲಿ ಆತ್ಮೀಯ ಸ್ನೇಹಿತರು ಎಂಬುದನ್ನು ಮರೆಯಬಾರದು.

ವಕ್ರತುಂಡೋಕ್ತಿ

ಕೆಲವರ ದಾಂಪತ್ಯಕ್ಕೆ ನಂಬಿಕೆ ಮತ್ತು ತಿಳಿವಳಿಕೆಯೇ ಬುನಾದಿ. ಅವಳು ನಂಬುವುದಿಲ್ಲ ಮತ್ತು ಆತ ತಿಳಿದುಕೊಳ್ಳುವುದಿಲ್ಲ.

ಮೈಸೂರು ಫಿಲ್ಮ್ ಸಿಟಿ 110 ಎಕರೆ ಭೂಮಿ

ಬೆಂಗಳೂರು: ಮೈಸೂರು ಜಿಲ್ಲೆಯ ಹಿಮ್ಮಾವು ಗ್ರಾಮದಲ್ಲಿ ಚಿತ್ರನಗರಿ ನಿರ್ಮಾಣಕ್ಕೆ ಗುರುತಿಸಲಾಗಿರುವ 110 ಎಕರೆ ಕೆಐಎಡಿಬಿ ಭೂಮಿ ಹಸ್ತಾಂತರಿಸಿ ಆದೇಶ ಹೊರಡಿಸಬೇಕು. ಇದರೊಂದಿಗೆ ಹೆಚ್ಚುವರಿಯಾಗಿ ಎರಡನೇ ಹಂತದ ವಿಸ್ತರಣೆಗೆ 50 ಎಕರೆ ಗುರುತಿಸುವಂತೆ ಸಿಎಂ ಸಿದ್ದರಾಮಯ್ಯ ಸೂಚಿಸಿದರು.

ಕೋವಿಡ್ ಹೊಸ ತಳಿ: 27 ದೇಶಗಳಿಗೆ ಆತಂಕ

ವಾಷಿಂಗ್ಟನ್: 2020ರಲ್ಲಿ ಕಾಣಿಸಿಕೊಂಡು ವಿಶ್ವಾದ್ಯಂತ ಲಕ್ಷಾಂತರ ಜನರನ್ನು ಬಲಿ ಪಡೆದುಕೊಂಡಿದ್ದ ಕರೋನಾ ವೈರಸ್ ಇದೀಗ ಮತ್ತೊಂದು ಹೊಸ ರೂಪ ಪಡೆದುಕೊಂಡಿದೆ. ಎಕ್ಸ್‌ಇಸಿ (XEC) ಎಂಬ ಹೆಸರಿನ ಕೋವಿಡ್ ರೂಪಾಂತರ ಯುರೋಪ್ ದೇಶಗಳಲ್ಲಿ ಪತ್ತೆಯಾಗಿದ್ದು, 27 ದೇಶಗಳಿಗೆ ಭಾರಿ ಆತಂಕ ಹುಟ್ಟಿಸಿದೆ.

ಎಚ್‌ಎಸ್‌ಆರ್‌ಪಿ ಗಡುವು ವಿಸ್ತರಣೆ

ಬೆಂಗಳೂರು: ಎಚ್‌ಎಸ್‌ಆರ್‌ಪಿ ನೋಂದಣಿ ಫಲಕಗಳನ್ನು ನಿರ್ದಿಷ್ಟ ಉತ್ಪಾದಕರು ಮಾತ್ರ ಪೂರೈಸಬೇಕು ಮತ್ತು ನಿರ್ದಿಷ್ಟ ಡೀಲರ್‌ಗಳು ಮಾತ್ರ ಅಳವಡಿಸಬೇಕು ಎಂಬುದಕ್ಕೆ ಆಕ್ಷೇಪಿಸಿ ಸಲ್ಲಿಸಲಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ಹೈಕೋರ್ಟ್ ಸೆ.20ಕ್ಕೆ ಮುಂದೂಡಿದೆ.

ಮುನಿರತ್ನ ಜಾಮೀನು ಇಂದು ನಿರ್ಧಾರ

ಬೆಂಗಳೂರು: ಬಿಬಿಎಂಪಿ ಗುತ್ತಿಗೆದಾರನಿಗೆ ಕಿರುಕುಳ, ಜಾತಿ ನಿಂದನೆ ಮಾಡಿದ ಆರೋಪ ಪ್ರಕರಣದಲ್ಲಿ ಜೈಲು ಪಾಲಾಗಿರುವ ಶಾಸಕ ಮುನಿರತ್ನ ಜಾಮೀನು ಅರ್ಜಿ ಆದೇಶವನ್ನು ಬುಧವಾರ ಬೆಂಗಳೂರಿನ ವಿಶೇಷ ನ್ಯಾಯಾಲಯವು ಸೆ.19ಕ್ಕೆ ಆದೇಶ ಕಾಯ್ದಿರಿಸಿದೆ.

ಬಿಯರ್ ದರ ಮತ್ತೆ ಏರಿಕೆ?

ಬೆಂಗಳೂರು: ಅಕ್ಟೋಬರ್ ಮೊದಲ ವಾರದಿಂದಲೇ ಪರಿಷ್ಕೃತ ಮದ್ಯದ ದರ ಏರಿಕೆಯಾಗುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ. ಕಳೆದ ಆ.29ರಿಂದ ಪ್ರೀಮಿಯಂ, ಸೆಮಿ ಪ್ರೀಮಿಯಂ ಮದ್ಯದ ದರ ಇಳಿಸಿದ ಬೆನ್ನಲ್ಲೇ ಬಿಯರ್ ದರ ಹೆಚ್ಚಳಕ್ಕೆ ಸರಕಾರ ಮುಂದಾಗಿದ್ದು, ಅ.1ರಿಂದ ಹೊಸ ದರಗಳು ಪರಿಷ್ಕರಣೆಗೊಳ್ಳುವ ಸಾಧ್ಯತೆಯಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

'ಕಲ್ಯಾಣ' ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ



ಮುಂದಿನ ಸಂಸತ್ ಅಧಿವೇಶನದಲ್ಲೇ ಮಂಡನೆ ಸಾಧ್ಯತೆ | ಚಂದ್ರಯಾನ-4 ಯೋಜನೆಗೂ ಸಚಿವ ಸಂಪುಟ ಅಸ್ತು

ಏಕಕಾಲದ ಚುನಾವಣೆಗೆ ಅಸ್ತು

ದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ 'ಒಂದು ದೇಶ ಒಂದು ಚುನಾವಣೆ' ಕುರಿತು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಸಲ್ಲಿಸಿದ ಪರಾಮರ್ಶೆ ವರದಿಗೆ ಒಪ್ಪಿಗೆ ಸೂಚಿಸಿದೆ. ಮುಂಬರುವ ಚಳಿಗಾಲದ ಸಂಸತ್ ಅಧಿವೇಶನದಲ್ಲೇ 'ಒಂದು ದೇಶ-ಒಂದು ಚುನಾವಣೆ' ವಿಧೇಯಕ ಮಂಡನೆಯಾಗುವ ಸಾಧ್ಯತೆ ಇದೆ.

ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಪರಿಕಲ್ಪನೆಯಾದ 'ಒಂದು ದೇಶ-ಒಂದು ಚುನಾವಣೆ' ಪ್ರಸ್ತಾವನೆಗೆ ಸಂಸತ್ತಿನಲ್ಲಿ ಪ್ರತಿಪಕ್ಷಗಳಿಂದ ಸತತ ವಿರೋಧ ವ್ಯಕ್ತವಾಗಿದ್ದರಿಂದ ಪ್ರಸ್ತಾವನೆಯ ಪರಾಮರ್ಶೆಗಾಗಿ 2023ರ ಸೆಪ್ಟೆಂಬರ್‌ನಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚನೆ ಮಾಡಲಾಗಿತ್ತು. ಸಮಿತಿಯ ವಿವಿಧ ತಜ್ಞರು, ಸಂಶೋಧಕರನ್ನು ಭೇಟಿಯಾಗಿ 191 ದಿನಗಳ ಕಾಲ ಶ್ರಮಿಸಿ, ಬಹಳಷ್ಟು ಮಾಹಿತಿ ಸಂಗ್ರಹಿಸಿ ಇದೇ ಮಾರ್ಚ್ 14ರಂದು 'ಒಂದು ರಾಷ್ಟ್ರ, ಒಂದು ಚುನಾವಣೆ' ಕುರಿತು 18,626 ಪುಟಗಳ ಸುದೀರ್ಘ ಪರಾಮರ್ಶೆ ವರದಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿತ್ತು. ಕಾನೂನು ಸಚಿವಾಲಯದ 110 ದಿನಗಳ ಅಜೆಂಡಾ ಭಾಗವಾಗಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಇದೇ ವಿಚಾರ ಪ್ರಸ್ತಾಪಿಸಲಾಗಿದ್ದು, ವರದಿ ಜಾರಿಗೆ ಸಚಿವ ಸಂಪುಟದ ಅನುಮೋದನೆ ಸಿಕ್ಕಿದೆ.

ನರೇಂದ್ರ ಮೋದಿ ನೇತೃತ್ವದಲ್ಲಿ 3ನೇ ಬಾರಿಗೆ ರಚನೆಯಾಗಿರುವ ಕೇಂದ್ರ ಸರಕಾರಕ್ಕೆ 100 ದಿನ ಸಂದ ಹಿನ್ನೆಲೆ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಗೃಹ ಸಚಿವ ಅಮಿತ್ ಶಾ, 'ಒಂದು ದೇಶ ಒಂದು ಚುನಾವಣೆ' ಪ್ರಧಾನಿ ಮೋದಿ 3.0 ಅವಧಿಯಲ್ಲೇ ಜಾರಿಗೆ ಬರಲಿದೆ ಎಂದಿದ್ದರು. ಪ್ರಧಾನಿ ಮೋದಿ ಕೂಡ ಕೆಂಪು ಕೋಟೆ ಮೇಲಿನ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ 'ಒಂದು ದೇಶ ಒಂದು ಚುನಾವಣೆ' ಅಗತ್ಯವನ್ನು ಪುನರುಚ್ಚರಿಸಿದ್ದರು. ಪದೇ ಪದೆ ಚುನಾವಣೆಗಳು ನಡೆಯುವುದರಿಂದ ದೇಶದ ಅಭಿವೃದ್ಧಿಗೆ ತಡೆಯಾಗುತ್ತಿದೆ ಎಂದು ಮೋದಿ ಗಮನ ಸೆಳೆದಿದ್ದರು. ಕೆಂಪು ಕೋಟೆ ಮೇಲೆ ನಿಂತು ಮೋದಿ 'ದೇಶದ ಜನತೆ ಈ ಯೋಜನೆಗೆ ಜಾರಿಗೆ ಬೆಂಬಲಿಸಬೇಕು' ಎಂದು ಕರೆ ನೀಡಿದ್ದರು. ಹೀಗಾಗಿ ಈಗಿನ ಸರಕಾರದ ಅವಧಿಯಲ್ಲೇ 'ಒಂದು ದೇಶ ಒಂದು ಚುನಾವಣೆ' ಜಾರಿಗೆ ಬರುವ ನಿರೀಕ್ಷೆ ಹೆಚ್ಚಿತ್ತು.

→ 4

ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ 'ಒಂದು ರಾಷ್ಟ್ರ, ಒಂದು ಚುನಾವಣೆ' ಕುರಿತು 18,626 ಪುಟಗಳ ಸುದೀರ್ಘ ವರದಿ ಸಲ್ಲಿಸಿದರು. ಈ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಗುಲಾಂ ನಬಿ ಆಜಾದ್ ಇದ್ದರು.

ಸಚಿವ ಸಂಪುಟದ ಇತರ ನಿರ್ಣಯಗಳು

- ಚಂದ್ರನಿಂದ ಶಿಲೆ-ಮಣ್ಣು ತರುವ ಮಹತ್ವದ ಸಂಶೋಧನಾ ಕಾರ್ಯಕ್ಕಾಗಿ 2,104 ಕೋಟಿ ರು. ವೆಚ್ಚದಲ್ಲಿ ಚಂದ್ರಯಾನ -4 ಯೋಜನೆ ಕೈಗೊಳ್ಳುವುದಕ್ಕೆ ಅನುಮೋದನೆ.
- ರೈತರ ನೆರವಿಗೆ ಪಿಎಂ ಆಶಾ ಸ್ಕೀಮ್ (ಪಿಎಂ ಜನಜಾತೀಯ ಉನ್ನತ್ ಗ್ರಾಮ್ ಅಭಿಯೋಜನ್) ಜಾರಿಗೆ ಅನುಮೋದನೆ
- ಬುಡಕಟ್ಟು ಜನರ ಅಭಿವೃದ್ಧಿಗೆ ವಿಶೇಷ ಯೋಜನೆ
- ಐಐಐಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಫಾರ್ ಇಮ್ಮರ್ಸಿವ್ ಕ್ರಿಯೇಟರ್ಸ್ ಸಂಸ್ಥೆ ಸ್ಥಾಪನೆಗೆ ಕ್ರಮ

ಆಶಯಗಳ ಸಾಕಾರ: ಸಮಿತಿ ಅಭಿಮತ

'ಏಕಕಾಲದಲ್ಲೇ ದೇಶಾದ್ಯಂತ ಚುನಾವಣೆಗಳು ನಡೆದರೆ ದೇಶದ ಆರ್ಥಿಕ ಮತ್ತು ಮಾನವ ಸಂಪನ್ಮೂಲವನ್ನು ಉಳಿಸಲು ಸಹಾಯವಾಗುತ್ತದೆ. ಅಭಿವೃದ್ಧಿ ಮತ್ತು ಸಾಮಾಜಿಕ ಒಗ್ಗಟ್ಟನ್ನೂ ಇದು ಉತ್ತೇಜಿಸುತ್ತದೆ. ಪ್ರಜಾಪ್ರಭುತ್ವದ ಅಡಿಪಾಯವನ್ನು ಇನ್ನಷ್ಟು ಆಳಗೊಳಿಸುತ್ತದೆ. ಅಲ್ಲದೇ ಭಾರತದ ಆಶಯವನ್ನು ಸಾಕಾರಗೊಳಿಸಲು ಸಹಾಯ ಮಾಡುತ್ತದೆ ಎಂದು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿ ಅಭಿಪ್ರಾಯಪಟ್ಟಿದೆ.

2029ರಿಂದ ಜಾರಿ ಸಾಧ್ಯತೆ

ದೇಶ-ರಾಜ್ಯಗಳ ಸರಕಾರದ 3 ಹಂತಗಳಿಗೂ ಏಕಕಾಲದಲ್ಲೇ ಚುನಾವಣೆ ನಡೆಸುವ ಕುರಿತು ಶಿಫಾರಸು ಮಾಡುವ ಸಾಧ್ಯತೆ ಇದೆ. 2029ರಿಂದ 'ಒಂದು ದೇಶ ಒಂದು ಚುನಾವಣೆ' ಪರಿಕಲ್ಪನೆ ಜಾರಿಗೆ ಬರುವ ಸಾಧ್ಯತೆ ಇದೆ.

ಸಮಿತಿಯ ಪ್ರಮುಖ ಸಲಹೆಗಳು

- ಮೊದಲ ಹಂತದಲ್ಲಿ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸುವುದು. ಸದ್ಯ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ಜವಾಬ್ದಾರಿ ಕೇಂದ್ರ ಚುನಾವಣೆ ಆಯೋಗದ ಮೇಲಿದೆ.
- ಎರಡನೇ ಹಂತದಲ್ಲಿ ಚುನಾವಣೆ ನಡೆದ 100 ದಿನಗಳೊಳಗೆ ಏಕಕಾಲದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ (ನಗರಸಭೆ, ಪುರಸಭೆ, ಪಂಚಾಯತ್) ಕೈಗೊಳ್ಳುವುದು. ಸ್ಥಳೀಯ ಚುನಾವಣೆ ಜವಾಬ್ದಾರಿ ರಾಜ್ಯ ಚುನಾವಣಾ ಆಯೋಗದ ಮೇಲಿದೆ.
- ಸಮಿತಿ ನೀಡಿದ ಸಲಹೆಗಳನ್ನು ಜಾರಿಗೆ ತರಲು 'ಅನುಷ್ಠಾನ ಸಮಿತಿ' ರಚನೆ
- ರಾಜ್ಯ ಚುನಾವಣಾ ಪ್ರಾಧಿಕಾರದ ಸಲಹೆಗಳನ್ನು ಪಡೆದು ಕೇಂದ್ರ ಚುನಾವಣಾ ಆಯೋಗದಿಂದ ಸಾಮಾನ್ಯ ಮತದಾರರ ಪಟ್ಟಿ ಮತ್ತು ಗುರುತಿನ ಚೀಟಿ ಸಿದ್ಧಪಡಿಸಲು ಶಿಫಾರಸು
- 18 ಸಾಂವಿಧಾನಿಕ ತಿದ್ದುಪಡಿಗಳಿಗೆ ಶಿಫಾರಸು
- ಪ್ರಸ್ತಾವಿತ ಬಹುತೇಕ ತಿದ್ದುಪಡಿಗಳಿಗೆ ರಾಜ್ಯ ವಿಧಾನಸಭೆಯ ಅನುಮತಿ ಅನಗತ್ಯ
- ಸಾಂವಿಧಾನಿಕ ತಿದ್ದುಪಡಿ ಮಸೂದೆಗಳು ಸಂಸತ್‌ನಲ್ಲಿ ಅಂಗೀಕಾರಕ್ಕೆ ಮೂರನೇ ಎರಡರಷ್ಟು ಬೆಂಬಲ ಅಗತ್ಯ.



ಒಂದೇ ಹಂತದಲ್ಲಿ ಲೋಕಸಭೆ ಮತ್ತು ವಿಧಾನಸಭೆಗೆ ಚುನಾವಣೆ ನಡೆಸುವ ಯೋಜನೆ ಅಪ್ರಾಯೋಗಿಕ. ಜಾರಿ ಸಾಧ್ಯವೇ ಇಲ್ಲ. ಇದು ಚುನಾವಣಾ ಗಿಮಿಕ್, ಸದ್ಯ ವಿಧಾನಸಭೆ ಚುನಾವನೆಗಳು ಇರುವ ಹಿನ್ನೆಲೆ ಬಿಜೆಪಿ ಇಂತಹ ಯೋಜನೆಗಳನ್ನು ಜಾರಿಗೊಳಿಸುವ ವಿಚಾರ ಆರಂಭಿಸಿದೆ.
-ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ವರದಿ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಭಾಗಿಯಾದ ಶೇ.80ರಷ್ಟು ಜನ ಒಂದು ದೇಶ ಒಂದು ಚುನಾವಣೆ ಪರವಾಗಿ ಮಾತನಾಡಿದ್ದಾರೆ. ಯುವಜನತೆ ಈ ಯೋಜನೆಗೆ ಭಾರಿ ಬೆಂಬಲ ಸೂಚಿಸಿದ್ದಾರೆ. ಹೀಗಾಗಿ ಕಾಂಗ್ರೆಸ್‌ಗೆ ಈಗ ಆಂತರಿಕ ಒತ್ತಡ ಆರಂಭವಾಗಿದೆ.
- ಅಶ್ವಿನಿ ವೈಷ್ಣವ್ ಕೇಂದ್ರ ಸಚಿವ

ಲೋಕಸಭೆ-ರಾಜ್ಯಸಭೆ ಎರಡರಲ್ಲೂ ತಿದ್ದುಪಡಿಗೆ ಒಪ್ಪಿಗೆ ಪಡೆಯಲು ಅಗತ್ಯವಿರುವ ಸಂಖ್ಯೆಯ ಬೆಂಬಲವಿಲ್ಲ, ಇಂಡಿ ಒಕ್ಕೂಟ ಒಂದು ದೇಶ ಒಂದು ಚುನಾವಣೆ ಯೋಜನೆಗೆ ಸಂಪೂರ್ಣ ವಿರೋಧವಿದೆ.
- ಪಿ.ಚಿದಂಬರಂ ಕಾಂಗ್ರೆಸ್ ಹಿರಿಯ ನಾಯಕ

ಡ್ರಗ್ ಪೆಡ್ಲರ್‌ಗಳಿಗೆ ಜೀವಾವಧಿ ಸಜೆಗೆ ಕಾನೂನು ತಿದ್ದುಪಡಿ | ಮೆಡಿಕಲ್ ಸ್ಟೋರ್‌ಗಳಲ್ಲಿ ಸಿಂಥೆಟಿಕ್ ಡ್ರಗ್ಸ್ ಮಾರಾಟಕ್ಕೆ ಕಡಿವಾಣ

ಡ್ರಗ್ಸ್ ಹಾವಳಿ ತಡೆಗೆ ಟಾಸ್ಕ್‌ಫೋರ್ಸ್

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಡ್ರಗ್ಸ್ ಜಾಲಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಗೃಹ ಸಚಿವ ಡಾ.ಜಿ. ಪರಮೇಶ್ವರ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ರಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಮಾದಕ ವಸ್ತು ಸೇವನೆ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ಹಲವು ಕ್ರಮವಹಿಸಲಾಗಿದೆ. ಆದರೂ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿಲ್ಲ. ಆದ್ದರಿಂದ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಹೆಚ್ಚಿರುವ ಮಾದಕ ವಸ್ತುಗಳ ಹಾವಳಿಯನ್ನು ಹತ್ತಿಕ್ಕಲು ರಾಜ್ಯಮಟ್ಟದಲ್ಲಿ ವಿಶೇಷ ಕಾರ್ಯಪಡೆ ರಚಿಸಲಾಗುವುದು ಹಾಗೂ ಡ್ರಗ್ಸ್ ಸೇವನೆ ಹಾಗೂ ಮಾರಾಟಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಲು ತೀರ್ಮಾನಿಸಲಾಗಿದೆ.

→ 4

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಉನ್ನತಾಧಿಕಾರಿಗಳ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮತ್ತಿತರರು ಇದ್ದರು.

ಠಾಣಾಧಿಕಾರಿಗಳೇ ಹೊಣೆ

ಮಾದಕ ವಸ್ತುಗಳ ನಿಯಂತ್ರಣಕ್ಕೆ ಪೊಲೀಸರಿಗೆ ಮುಕ್ತ ಅವಕಾಶ ನೀಡಲಾಗಿದ್ದು, ಹೊಣೆಗಾರಿಕೆ ನಿಗದಿ ಮಾಡಲಾಗಿದೆ. ಇದನ್ನು ಮೀರಿದವರ ವಿರುದ್ಧ ಅಮಾನತು, ಸೇವೆಯಿಂದ ವಜಾ ಸೇರಿದಂತೆ ಕಠಿಣ ಕ್ರಮ ಜರುಗಿಸಲಾಗುತ್ತದೆ. ಪೊಲೀಸ್ ಠಾಣಾಧಿಕಾರಿಗಳಿಗೆ ಮಾದಕವಸ್ತುಗಳ ಮಾರಾಟ, ಸರಬರಾಜು ಸೇರಿದಂತೆ ಎಲ್ಲ ಮಾಹಿತಿ ಇರುತ್ತದೆ. ಅವರಿಗೆ ಗೊತ್ತಿಲ್ಲದೇ ಯಾವ ಚಟುವಟಿಕೆಗಳೂ ನಡೆಯಲು ಸಾಧ್ಯವಿಲ್ಲ. ಹೀಗಾಗಿ ಇನ್ನು ಮುಂದೆ ಡ್ರಗ್ಸ್ ಪ್ರಕರಣ ಕಂಡುಬಂದರೆ ಸಂಬಂಧಪಟ್ಟ ಠಾಣಾಧಿಕಾರಿಗಳು, ಡಿವೈಎಸ್‌ಪಿ, ಎಸಿಪಿ, ಡಿಸಿಪಿ, ಎಸ್‌ಪಿಗಳನ್ನು ಹೊಣೆಗಾರರನ್ನಾಗಿ ಮಾಡಲು ನಿರ್ಧರಿಸಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಮತ್ತೇರಿಸುವ ಮಾತ್ರೆ, ಕೆಮ್ಮಿನ ಔಷಧಗಳನ್ನು ಅನಧಿಕೃತವಾಗಿ ಮಾರಾಟ ಮಾಡುವ ಔಷಧಿ ಅಂಗಡಿಗಳ ಪರವಾನಗಿ ರದ್ದುಗೊಳಿಸಲಾಗುವುದು. ಉನ್ನತ ಮಟ್ಟದ ಕಾರ್ಯಪಡೆಯಲ್ಲಿ ಆರೋಗ್ಯ ಇಲಾಖೆ ಕಾರ್ಯದರ್ಶಿಗಳು ಸದಸ್ಯರಾಗಿರುತ್ತಾರೆ. ವೈದ್ಯರ ಶಿಫಾರಸ್ಸುಗಳಿಲ್ಲದೆ ಅನಧಿಕೃತವಾಗಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುತ್ತಿದೆ.
- ಸಿದ್ದರಾಮಯ್ಯ ಮುಖ್ಯಮಂತ್ರಿ

ಗಾಂಜಾ ಸೇರಿದಂತೆ ಇನ್ನಿತರ ಮಾದಕ ದ್ರವ್ಯಗಳನ್ನು ನಿಯಂತ್ರಿಸಿದ್ದೇವೆ. ಪ್ರಕರಣಗಳ ಅಂಕಿ-ಅಂಶಗಳನ್ನು ಗಮನಿಸಿದಾಗ ಬಹಳಷ್ಟು ಕಡಿಮೆಯಾಗಿದೆ. ಎಲ್ಲ ರೀತಿಯ ನಿಯಂತ್ರಣಕ್ಕೆ ಅಗತ್ಯ ಕ್ರಮ ತೆಗೆದುಕೊಂಡಿದ್ದೇವೆ. ಪೇನ್‌ಕಿಲ್ಲರ್ ಮಾತ್ರೆಗಳನ್ನು ಔಷಧವೆಂದು ಮಾರಾಟ ಮಾಡಲಾಗುತ್ತಿದೆ. ಈ ಬಗ್ಗೆ ಎಚ್ಚರವಹಿಸಲು ಡ್ರಗ್ ಕಂಟ್ರೋಲರ್‌ಗಳಿಗೆ ಸೂಚನೆ ನೀಡಲಾಗುವುದು.
- ಡಾ.ಜಿ.ಪರಮೇಶ್ವರ ಗೃಹ ಸಚಿವ

ವರ್ತನೆ ತಿದ್ದಿಕೊಳ್ಳಲು ಸಲಹೆ, ಪತ್ನಿ, ಸ್ನೇಹಿತರಿಂದ ಭೇಟಿ

ಸೆಲ್‌ಗೆ ಬಂದ ಟಿವಿಯಲ್ಲಿ ಒಂದೇ ಚಾನೆಲ್ ಪ್ರಸಾರ

ದರ್ಶನ್‌ಗೆ ವಕೀಲರಿಂದ ಎಚ್ಚರಿಕೆ, ಸನ್ನಡತೆ ಪಾಠ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ನಟ ದರ್ಶನ್ ಜೈಲು ಸೇರಿದ ದಿನದಿಂದ ನಿತ್ಯ ಒಂದಿಲ್ಲೊಂದು ವಿವಾದ ಕಾಣಿಸಿಕೊಳ್ಳುತ್ತಿದ್ದಾನೆ. ಆದ್ದರಿಂದ ಜೈಲಲ್ಲಿ ಕಿರಿಕ್ ಮಾಡಿಕೊಳ್ಳಬೇಡಿ ಎನ್ನುವ ಸ್ಪಷ್ಟ ಎಚ್ಚರಿಕೆಯನ್ನು ದರ್ಶನ್ ಪರ ವಕೀಲರು ರವಾನಿಸಿದ್ದಾರೆ ಎನ್ನಲಾಗಿದೆ.

ಪೊಲೀಸ್ ಕಸ್ಟಡಿ ಬಳಿಕ ನ್ಯಾಯಾಂಗ ಬಂಧನದಲ್ಲಿ ಪರಪ್ಪನ ಅಗ್ರಹಾರ ಸೇರಿದ ಬಳಿಕ ರೌಡಿಶೀಟರ್ ನಾಗನೊಂದಿಗೆ ಕಾಫಿ, ಸಿಗರೇಟ್ ಸೇದುವ ಮೂಲಕ ವಿವಾದ ಮೈಮೇಲೆ ಎಳೆದುಕೊಂಡರು. ಇದೇ ಕಾರಣಕ್ಕೆ ದರ್ಶನ್ ಹಾಗೂ ಗ್ಯಾಂಗ್‌ನ್ನು ಪರಪ್ಪನ ಅಗ್ರಹಾರದಿಂದ ಬೇರೆ ಬೇರೆ ಜೈಲಿಗೆ ಶಿಫ್ಟ್ ಆಗಿದ್ದರು. ಆದರೀಗ ದರ್ಶನ್ ಬಳ್ಳಾರಿ ಜೈಲಿನಲ್ಲಿ ದಿನಕ್ಕೊಂದು ಬೇಡಿಕೆ ಇಡುತ್ತಿರುವುದು ಹಾಗೂ ಕೆಲ ದಿನಗಳ ಹಿಂದೆ ಮಾಧ್ಯಮದವರಿಗೆ ಕೆಟ್ಟ ಸಂಜ್ಞೆ ಮಾಡುವ ಮೂಲಕ ವಿವಾದಕ್ಕೆ ಕಾರಣವಾ ಗಿದೆ. ಇದೀಗ ಈ ವಿಷಯಗಳು ಮತ್ತೆ ಸದ್ದು ಮಾಡುತ್ತಿವೆ. ಇದರಿಂದ ಮುಂದಿನ ದಿನ ದಲ್ಲಿ ಜಾಮೀನು ಅರ್ಜಿ ಸಲ್ಲಿಸುವಾಗ ಸಮಸ್ಯೆಯಾಗಲಿದೆ.

ಬೇಡಿಕೆ ಕಡಿಮೆ ಮಾಡಿ

ಜೈಲು ಸೇರಿದ ದಿನದಿಂದಲೂ ಒಂದಿಲ್ಲೊಂದು ಬೇಡಿಕೆಯನ್ನು ಮುಂದಿಡುತ್ತಿದ್ದಾನೆ. ಯಾವುದೇ ಬೇಡಿಕೆಗಳಿದ್ದರೂ ಅದನ್ನು ನ್ಯಾಯಾಲಯದಲ್ಲಿ ಮಂಡಿಸಬೇಕು. ಅದರ ಬದಲು ಜೈಲಾಧಿಕಾರಿಗಳ ಮುಂದಿಟ್ಟರೆ ಸಮಸ್ಯೆಯಾಗುತ್ತದೆ. ಬಳ್ಳಾರಿಗೆ ಜೈಲಿಗೆ ಹೋದ ಬಳಿಕ ಸರ್ಜಿಕಲ್ ಚೇರ್, ಟಿವಿ, ಫೋನ್ ನೀಡಲಾಯಿತು. ಇದೀಗ ಕೂರುವುದಕ್ಕೆ ಚೇರ್, ದಿಂಬು, ವಿಟಮಿನ್ ಟ್ಯಾಬ್ಲೆಟ್‌ಗಳಿಗೆ ಬೇಡಿಕೆ ಇರಿಸಿದ್ದಾರೆ. ಈ ರೀತಿ ಮಾಡುವುದರಿಂದ ಸಮಸ್ಯೆಯಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಎಚ್ಚರದಿಂದ ಇರಬೇಕು ಎನ್ನುವ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಆದ್ದರಿಂದ ಇನ್ನಾದರೂ ತಮ್ಮ ನಡತೆಯನ್ನು ಬದಲಾಯಿಸಿ ಕೊಳ್ಳ ಬೇಕು ಎನ್ನುವ ಎಚ್ಚರಿಕೆಯ ಸಂದೇಶವನ್ನು ಪತ್ನಿ ವಿಜಯಲಕ್ಷ್ಮೀ ಮೂಲಕ ರವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪತ್ರದಲ್ಲಿ ಏನಿದೆ?

ಜೈಲಿನಲ್ಲಿ ಅನಗತ್ಯವಾಗಿ ಕಿರಿಕ್ ಮಾಡಿಕೊಳ್ಳಬೇಡಿ. ಒಂದು ವೇಳೆ ಮಾಧ್ಯಮಗಳ ಮುಂದೆ ಕಾಣಿಸಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾದರೂ, ಯಾವುದೇ ದುರ್ನಡತೆ ತೋರುವ ರೀತಿಯಲ್ಲಿ ಮಾಡಬೇಡಿ. ವರ್ತನೆ ಬದಲಿಸಿಕೊಳ್ಳದಿದ್ದರೆ ನ್ಯಾಯಾಲಯದಲ್ಲಿ ಜಾಮೀನು ಕೋರಿ ಅರ್ಜಿ ಸಲ್ಲಿಸುವ ವೇಳೆ ಸಮಸ್ಯೆಯಾಗುತ್ತದೆ ಎಂದು ವಕೀಲರು ಪತ್ರದಲ್ಲಿ ಉಲ್ಲೇಖಿಸಿದ್ದರು ಎನ್ನಲಾಗಿದೆ. ಪತ್ನಿ ವಿಜಯಲಕ್ಷ್ಮೀ ಅವರು ಈ ಪತ್ರವನ್ನು ದರ್ಶನ್ ಅವರಿಗೆ ಹಸ್ತಾಂತರಿಸಿದ್ದಾರೆ. ಈ ವೇಳೆ ನಗುತ್ತ ಸೆಲ್‌ನಿಂದ ಬಂದ ದರ್ಶನ್ ವಾಪಸು ಹೋಗುವಾಗಲೂ ನಗುತ್ತಲೇ ಹೋಗಿದ್ದಾನೆ. ವಕೀಲರ ಪತ್ರ ತಲುಪಿಸಿದ ಬಳಿಕ ಎಚ್ಚೆತ್ತುಕೊಂಡಿರುವ ದರ್ಶನ್, ಜೈಲಿನಲ್ಲಿ ತಮ್ಮ ವರ್ತನೆ ಬದಲಾಯಿಸಿಕೊಂಡಿದ್ದಾರೆ ಎನ್ನಲಾಗಿದೆ.

31 ಸಾವಿರ ಕೋಟಿ ರು. ವೆಚ್ಚದ ಯೋಜನೆಗೆ ಸರಕಾರ ಅಸ್ತು

ಮ್ಯಾನ್ಮಾರ್ ಗಡಿಗೆ ಬೇಲಿ



ದೆಹಲಿ: ಮಾದಕ ವಸ್ತುಗಳು, ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡು ಗಳ ಕಳ್ಳಸಾಗಣೆ ಮೂಲಕ ಕುಖ್ಯಾತಿ ಪಡೆದಿರುವ ಭಾರತ-ಮ್ಯಾನ್ಮಾರ್ ನಡುವಿನ 1,643 ಕಿ.ಮೀ ಗಡಿಯುದ್ದಕ್ಕೂ ₹31,000 ಕೋಟಿ ವೆಚ್ಚದಲ್ಲಿ ಕೇಂದ್ರವು ಬೇಲಿ ನಿರ್ಮಿಸಲಿದೆ ಎಂದು ಮೂಲಗಳು ತಿಳಿಸಿವೆ.

ಜನಾಂಗೀಯ ಹಿಂಸೆಗೆ ಸಾಕ್ಷಿಯಾದ ಮಣಿಪುರ ರಾಜ್ಯವು ಮ್ಯಾನ್ಮಾರ್ ಜತೆ ಹಂಚಿಕೊಂಡಿರುವ 30 ಕಿ.ಮೀ ಗಡಿಯ ಬೇಲಿ ಅಳವಡಿಕೆ ಕಾರ್ಯ ಬಹುತೇಕ ಪೂರ್ಣ ಗೊಂಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಹೇಳಿದ್ದರು. ಅಂದಾಜು ₹31,000 ಕೋಟಿ ವೆಚ್ಚದಲ್ಲಿ ಭಾರತ ಮತ್ತು ಮ್ಯಾನ್ಮಾರ್ ನಡುವಿನ 1,643 ಕಿ.ಮೀ ಉದ್ದದ ಅಂತಾರಾಷ್ಟ್ರೀಯ ಗಡಿಯಲ್ಲಿ ಗಡಿ ಬೇಲಿ ಮತ್ತು ರಸ್ತೆಗಳ ನಿರ್ಮಾಣಕ್ಕೆ ಭದ್ರತೆಗೆ ಸಂಬಂಧಿಸಿದ ಕ್ಯಾಬಿನೆಟ್ ಸಮಿತಿಯು ತಾತ್ವಿಕವಾಗಿ ಅನುಮೋದನೆ ನೀಡಿದೆ.

- ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ, ಅರುಣಾಚಲ ಪ್ರದೇಶವು ಮ್ಯಾನ್ಮಾರ್ ಜತೆ ಗಡಿ ಹಂಚಿಕೊಂಡಿವೆ.
- ಮಾದಕ ವಸ್ತುಗಳು, ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳ ಕಳ್ಳಸಾಗಣೆ ಮೂಲಕ ಕುಖ್ಯಾತಿ ಪಡೆದಿರುವ ಗಡಿ

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆ

ಶೇ.59ರಷ್ಟು ಮತದಾನ



ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಯ ಮೊದಲ ಹಂತದ 24 ಕ್ಷೇತ್ರಗಳಿಗೆ ಬುಧವಾರ ಮತದಾನ ನಡೆದಿದ್ದು, ಸಂಜೆ 5 ಗಂಟೆ ವೇಳೆಗೆ ಶೇ.58.19ಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಕಿಶ್ತ್ವಾರ್ ಜಿಲ್ಲೆಯಲ್ಲಿ ಅತಿ ಹೆಚ್ಚು ಶೇ. 77.23ರಷ್ಟು ಮತದಾನವಾಗಿದ್ದರೆ, ಪುಲ್ವಾಮಾ ಜಿಲ್ಲೆಯಲ್ಲಿ ಅತಿ ಕಡಿಮೆ ಶೇ. 43.87ರಷ್ಟು ಮತದಾನವಾಗಿದೆ. ದೋಡಾ ಜಿಲ್ಲೆಯಲ್ಲಿ ಶೇ.69.33ರಷ್ಟು, ರಾಂಬನ್ ಜಿಲ್ಲೆಯಲ್ಲಿ ಶೇ.67.71ರಷ್ಟು, ಕುಲ್ಗಾಮ್ ಜಿಲ್ಲೆಯಲ್ಲಿ ಶೇ.59.62ರಷ್ಟು, ಶೋಪಿಯಾನ್ ಜಿಲ್ಲೆಯಲ್ಲಿ ಶೇ.53.64ರಷ್ಟು, ಅನಂತನಾಗ್ ಜಿಲ್ಲೆ ಯಲ್ಲಿ ಶೇ.54.17 ರಷ್ಟು ಮತದಾನವಾ ಗಿದೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ. ಕಿಶ್ತ್ವಾರ್ ಜಿಲ್ಲೆಯ ಮತಗಟ್ಟೆಯೊಂದರಲ್ಲಿ ಮತದಾರರ ಪಟ್ಟಿಗೆ ಸಂಬಂಧಿಸಿ ಗೊಂದಲ ಉಂಟಾದ ಪರಿಣಾಮ ಮತದಾನವನ್ನು ಕೆಲಕಾಲ ಸ್ಥಗಿತಗೊಳಿಸಲಾಗಿತ್ತು.

- ಕಿಶ್ತ್ವಾರ್ ಜಿಲ್ಲೆಯಲ್ಲಿ ಅತಿ ಹೆಚ್ಚು ಶೇ.77.23ರಷ್ಟು ಮತದಾನ
- ಪುಲ್ವಾಮಾ ಜಿಲ್ಲೆಯಲ್ಲಿ ಅತಿ ಕಡಿಮೆ ಶೇ.43.87ರಷ್ಟು ಮತದಾನ

ಬಿಎಸ್‌ವೈ, ಎಚ್‌ಡಿಕೆ ಜಂಟಿ ಡಿನೋಟಿಫಿಕೇಷನ್ ಪ್ರಕರಣ: ಅಧಿಕಾರಿಗಳ ವಿಚಾರಣೆ

ಮರೆತ ಪ್ರಕರಣಕ್ಕೆ ಮರುಜೀವ

ಬೆಂಗಳೂರು: ರಾಜ್ಯ ಸರಕಾರದ ವಿರುದ್ಧ ವಾಲ್ಮೀಕಿ, ಮುಡಾ ಪ್ರಕರಣವನ್ನು ಮುಂದಿಟ್ಟುಕೊಂಡು ಹೋರಾಡುತ್ತಿರುವ ಬಿಜೆಪಿ- ಜೆಡಿಎಸ್ ನಾಯಕರ ವಿರುದ್ಧ ಸಮರ ಸಾರಿರುವ ರಾಜ್ಯ ಸರಕಾರ ಇದೀಗ, ಮರೆತ ಪ್ರಕರಣಕ್ಕೆ ಮರುಜೀವ ನೀಡಲು ಮುಂದಾಗಿದೆ.

ದಶಕಗಳ ಹಿಂದೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವಧಿಯ ಡಿನೋಟೀಫಿಕೇಷನ್ ಪ್ರಕರಣದಲ್ಲಿ ಭಾಗಿಯಾಗಿದ್ದ ಹಲವು ಅಧಿಕಾರಿಗಳ ಹೇಳಿಕೆ ಪಡೆಯಲು ಲೋಕಾಯುಕ್ತ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಸೆ.19ರಂದು ಲೋಕಾಯುಕ್ತ ನ್ಯಾಯಾಲಯದಲ್ಲಿ ಹಲವು ಅಧಿಕಾರಿಗಳ ಹೇಳಿಕೆ ದಾಖಲಿಸಲು ಸಮಯ ನಿಗದಿಯಾಗಿದೆ. ನಿಯಮ 164 ರ ಅನ್ವಯ ವಿಚಾರಣೆಯ ಹಂತದಲ್ಲಿ ತಪ್ಪೊಪ್ಪಿಗೆ ಅಥವಾ ಸಾಕ್ಷ್ಯಗಳನ್ನು ನ್ಯಾಯಾಧೀಶರ ಸಮ್ಮುಖದಲ್ಲಿ ದಾಖಲೆ ಮಾಡಲಾಗುತ್ತದೆ. ಹೀಗೆ ಮಾಡುವುದರಿಂದ ವಿಚಾರಣೆಯಲ್ಲಿ ಸಾಕ್ಷಿದಾರರು ಪ್ರತಿಕೂಲ ಹೇಳಿಕೆ ನೀಡುವುದನ್ನು ತಪ್ಪಿಸಬಹುದು. ಈ ರೀತಿ ಹೇಳಿಕೆ ಆಧರಿಸಿ ತನಿಖಾಧಿಕಾರಿಗಳು ತ್ವರಿತವಾಗಿ ಪ್ರಕರಣ ಪೂರ್ಣಗೊಳಿಸಲು ನೆರವಾಗುತ್ತದೆ. ಈ ಪ್ರಕರಣ ಸಂಬಂಧ ಡಿನೋಟಿಫೈ ಪ್ರಕ್ರಿಯೆಯಲ್ಲಿ ಅಂದಿನ ಅಧಿಕಾರಿಗಳಾದ ರಾಕೇಶ್ ಸಿಂಗ್, ಜ್ಯೋತಿ ರಾಮಲಿಂಗಂ, ನಂದಕುಮಾರ್ ಮತ್ತಿತರ ಅಧಿಕಾರಿಗಳ ಹೇಳಿಕೆಗಳನ್ನು ಲೋಕಾಯುಕ್ತರು ದಾಖಲಿಸಿಕೊಳ್ಳಲಿದ್ದಾರೆ.

ಏನಿದು ಪ್ರಕರಣ?

ಬೆಂಗಳೂರಿನ ಗಂಗಾನಗರ (ಗಂಗೇನಹಳ್ಳಿ) ಪ್ರದೇಶದಲ್ಲಿ 1 ಎಕರೆ 11 ಗುಂಟೆ ಭೂಮಿಯನ್ನು ಸತ್ತವರ ಹೆಸರಿನಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪ ಅವರು ಜಂಟಿಯಾಗಿ ಡಿನೋಟಿಫೈ ಮಾಡಿಸಿದ್ದರು. ಡಿನೋಟಿಫೈ ಆದ ಭೂಮಿಯನ್ನು ಅಂತಿಮವಾಗಿ ಕುಮಾರಸ್ವಾಮಿ ಅವರ ಭಾಮೈದ ಡಾ.ಚನ್ನಪ್ಪ ಎಂಬುವವರಿಗೆ ನೋಂದಣಿ ಮಾಡಿಕೊಡಲಾಗಿತ್ತು. ಈ ಬಗ್ಗೆ 2015ರಲ್ಲಿ ಲೋಕಾಯುಕ್ತಕ್ಕೆ ದೂರು ನೀಡಲಾಗಿತ್ತು. ದೂರು ದಾಖಲಾಗಿ 9 ವರ್ಷ ಕಳೆದರೂ ಲೋಕಾಯುಕ್ತರು ತನಿಖೆ ಪೂರ್ಣಗೊಳಿಸಿರಲಿಲ್ಲ. ಈ ಪ್ರಕರಣ ಸಂಬಂಧ ತಮ್ಮ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿದ್ದ ತಕರಾರು ಅರ್ಜಿಯನ್ನು ಏಕ ಸದಸ್ಯ ನ್ಯಾಯಪೀಠ ವಜಾಗೊಳಿಸಿ, ಯಡಿಯೂರಪ್ಪ ಅವರಿಗೆ 25 ಸಾವಿರ ರು. ದಂಡ ವಿಧಿಸಿತ್ತು. ಪ್ರಕರಣದ ತನಿಖೆ ಮುಂದುವರಿಸುವಂತೆ ಲೋಕಾಯುಕ್ತ ಪೊಲೀಸರಿಗೆ ಸೂಚಿಸಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು.

ರಾಜ್ಯಪಾಲರ ಅಧಿಕಾರಕ್ಕೆ ಕತ್ತರಿ ಪ್ರಯೋಗ | ಅಧಿವೇಶನದಲ್ಲಿ ವಿಧೇಯಕ ಮಂಡನೆ ಸಾಧ್ಯತೆ

ಕುಲಪತಿ ನೇಮಕಕ್ಕೆ ಕೊಕ್ಕೆ?

ಬೆಂಗಳೂರು: ಕಳೆದ ಕೆಲ ತಿಂಗಳಿನಿಂದ ರಾಜ್ಯ ಸರಕಾರ ಹಾಗೂ ರಾಜಭವನದ ನಡುವೆ ನಡೆಯುತ್ತಿರುವ 'ಸಂಘರ್ಷ' ಇದೀಗ ಮತ್ತೊಂದು ಹಂತ ತಲುಪುವ ಸಾಧ್ಯತೆ ಇದೆ.

ಮಂಗಳವಾರ ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವಿಧೇಯಕಕ್ಕೆ ಅನುಮೋದನೆ ನೀಡಲಾಗಿದ್ದು, ಮುಂಬರುವ ಅಧಿವೇಶನದಲ್ಲಿ ಈ ವಿಧೇಯಕ ಮಂಡನೆಯಾಗಲಿದೆ. ಈ ವಿಧೇಯಕದಲ್ಲಿ ಕುಲಪತಿಗಳನ್ನು ನೇಮಿಸುವ ಅಧಿಕಾರವನ್ನು ಮುಖ್ಯಮಂತ್ರಿಗಳಿಗೆ ನೀಡಿರು ವುದು ಇದೀಗ ವಿವಾದಕ್ಕೆ ಕಾರಣವಾಗಿದೆ.

ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿ ಯಾದ ರಾಜ್ಯಪಾಲರಿಗೆ ಕುಲಪತಿಗಳನ್ನು ನೇಮಿಸುವ ಅಧಿಕಾರವಿರುತ್ತದೆ. ಆದರೀಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ವಿವಿಗೆ ಕುಲಪತಿಯನ್ನು ನೇಮಿಸುವ ಅಧಿಕಾರ ಸಿಎಂಗೆ ನೀಡುವ ಮೂಲಕ, ರಾಜ್ಯಪಾಲರಿಗೆ ಇರುವ ಬಹುದೊಡ್ಡ ಅಧಿಕಾರಕ್ಕೆ ಕೊಕ್ಕೆ ಹಾಕುವ ಪ್ರಯತ್ನಕ್ಕೆ ಸರಕಾರ ಮುಂದಾಗಿದೆ. ಸದ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿವಿಗೆ ಸೀಮಿತಗೊಳಿಸಿ ಈ ಬದಲಾವಣೆ ಮಾಡಿಕೊಂಡಿದ್ದರೂ, ಭವಿಷ್ಯದಲ್ಲಿ ಎಲ್ಲ ವಿವಿಗಳ ಕುಲಪತಿಗಳನ್ನು ನೇಮಿಸುವ ಅಧಿಕಾರವನ್ನು ಸರಕಾರದ ಸುಪರ್ದಿಗೆ ತೆಗೆದುಕೊಳ್ಳುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

→ 4

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿವಿ ಕುಲಪತಿ ನೇಮಕದ ಹೊಣೆ ಸಿಎಂ ಹೆಗಲಿಗೆ
- ರಾಜ್ಯ ಸರಕಾರ-ರಾಜಭವನದ ನಡುವೆ ನಡೆಯುತ್ತಿರುವ 'ಸಂಘರ್ಷ' ಮತ್ತೊಂದು ಹಂತ ತಲುಪುವ ಸಾಧ್ಯತೆ

ಹಲವು ರಾಜ್ಯದಲ್ಲಿ ಪ್ರಸ್ತಾಪ

ರಾಜ್ಯಪಾಲರ ಈ ಅಧಿಕಾರವನ್ನು ಮೊಟಕುಗೊಳಿಸಿರುವುದು ಇದೇ ಮೊದಲಲ್ಲ. ಪಶ್ಚಿಮ ಬಂಗಾಳ, ತಮಿಳುನಾಡು ಸೇರಿ ಹಲವು ರಾಜ್ಯಗಳಲ್ಲಿ ಈಗಾಗಲೇ ವಿಧೇಯಕ ಅನುಮೋದನೆಗೊಂಡಿದೆ. ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಸೇರಿ ಅನೇಕ ರಾಜ್ಯಗಳಲ್ಲಿ ಸರಕಾರದ ಶಿಫಾರಸ್ಸುಗಳನ್ನೆ ಕಾರ್ಯಾಂಗದ ಮುಖ್ಯಸ್ಥರಾಗಿರುವ ರಾಜ್ಯಪಾಲರು ತಿರಸ್ಕರಿಸಿದ್ದರು. ಕೇರಳದಲ್ಲಿ 8 ವಿವಿಗಳಿಗೆ ಉಪಕುಲಪತಿಗಳನ್ನು ಅಲ್ಲಿನ ಸರಕಾರ ನೇಮಕ ಮಾಡಿತ್ತು. ಆದರೆ ರಾಜ್ಯಪಾಲ ಅರೀಫ್ ಮೊಹ್ಮದ್ ಖಾನ್ ಕಾರಣ ಕೇಳಿ ವಾಪಸ್ ಕಳುಹಿಸಿದ್ದರು. ಸಿಂಡಿಕೇಟ್ ಸದಸ್ಯರು ಮತ್ತು ಉಪಕುಲಪತಿಗಳ ಪಟ್ಟಿಯನ್ನು ಸರಕಾರ ಕಳುಹಿಸಿದರೆ ರಾಜಭವನದಲ್ಲಿ ಬೇರೊಂದು ಹೆಸರುಗಳ ಪಟ್ಟಿ ಸಿದ್ಧವಾಗುತ್ತಿತ್ತು. ಹೀಗಾಗಿ ರಾಜಭವನ ಮತ್ತು ಸರಕಾರದ ನಡುವೆ ಕೇರಳದಲ್ಲಿ ಈಗಲೂ ತಿಕ್ಕಾಟ ನಡೆಯುತ್ತಲೇ ಇದೆ. ಇದೀಗ ರಾಜ್ಯದಲ್ಲೂ ಈ ರೀತಿಯ ಸಂಘರ್ಷಕ್ಕೆ ಈ ಆದೇಶ ನಾಂದಿ ಹಾಡಿದೆ.

PUBLIC NOTICE

The General Public are hereby informed that my client, has intended to purchase **Residential Vacant Site No. 5, B-Katha Serial No. 169, formed in northern portion of residential converted land bearing Survey No. 55/2, vide order NO. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk** morefully described in the Schedule hereunder for valuable consideration from **Sri. S. SARASWATHI,** Aged about 58 years, D/o Late Shanmugam, R/at No.1030/5, Vijayanagara, Bangarpet – 563 114. Any person/s objecting for the proposed purchase or having any right in the Schedule Property may lodge their objections and/or claims to the undersigned along with the supporting documentary evidences **within 07 (Seven) days** from the date of this publication, and any objections or claims received thereafter will not be taken for consideration and my client will proceed to purchase the Schedule Property as if there are no claimant/s or objections from any person/s.

SCHEDULE PROPERTY

All that piece and parcel of the Property bearing **Residential Vacant Site No. 5, B-Katha Serial No. 169, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: 27+28.6/2 Feet and North to South: 25+25.6/2 Feet, in all measuring 782 Square Feet** and bounded by: East by: Property retained by Vendors, West by:25 Feet Road, North by: Site No. 4, South by : Site No. 6.

RAGHAVENDRA C. Advocate, No. 109, 1st Floor, SSI Area, 5th Block, Rajajinagar, Bangalore – 560 010, Mob: 9845089883.

PUBLIC NOTICE

The General Public are hereby informed that my client, has intended to purchase **Residential Vacant Site No. 3, B-Katha Serial No. 168, formed in northern portion of residential converted land bearing Survey No. 55/2, vide order NO. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk** morefully described in the Schedule hereunder for valuable consideration from **Sri. S. BASKAR,** Aged about 52 years, S/o Late Shanmugam, R/at No. 4297, Srinivasagowda Layout, Bangarpet – 563114. Any person/s objecting for the proposed purchase or having any right in the Schedule Property may lodge their objections and/or claims to the undersigned along with the supporting documentary evidences **within 07 (Seven) days** from the date of this publication, and any objections or claims received thereafter will not be taken for consideration and my client will proceed to purchase the Schedule Property as if there are no claimant/s or objections from any person/s.

SCHEDULE PROPERTY

All that piece and parcel of the Property bearing **Residential Vacant Site No. 3, B-Katha Serial No. 168, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: 38+42.6/2 Feet and North to South: 25+25.6/2 Feet, in all measuring 1016.31 Square Feet** and bounded by: **East by:** Property retained by Vendors, **West by :** 25 Feet Road, **North by :** Site No. 2, **South by :** Site No. 4.

RAGHAVENDRA C. Advocate, No. 109, 1st Floor, SSI Area, 5th Block, Rajajinagar, Bangalore – 560 010, Mob: 9845089883.

PUBLIC NOTICE

The General Public are hereby informed that my client, has intended to purchase **Residential Vacant Site No. 1, 2, 4, 6 & 9 formed in northern portion of residential converted land bearing Survey No. 55/2, vide order NO. ALN(N.Y.) S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk** morefully described in the Schedule hereunder for valuable consideration from **Smt. B.C. PUSHPA,** Aged about 60 years, W/o H. C. Byregowda, R/at No.1288/3, KHB Colony, Govindarajanagar, Magadi Main Road., Bengaluru – 560040. Any person/s objecting for the proposed purchase or having any right in the Schedule Property may lodge their objections and/or claims to the undersigned along with the supporting documentary evidences **within 07 (Seven) days** from the date of this publication, and any objections or claims received thereafter will not be taken for consideration and my client will proceed to purchase the Schedule Property as if there are no claimant/s or objections from any person/s.

SCHEDULE PROPERTIES

ITEM No. 1: All that piece and parcel of the Property bearing **Residential Vacant Site No. 1, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: Northern Side: 34 Feet, Southern Side: 45 ½ Feet and North to South; Eastern Side: 28 Feet, Western Side: 34 Feet, in all measuring 1232.25 Square Feet** and bounded by: East by: Private Property, West by : Road, North by : Private Property, South by : Site No. 2.

ITEM No. 2 : All that piece and parcel of the Property bearing **Residential Vacant Site No. 2, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: Northern Side: 45 ½ Feet, Southern Side: 42 Feet and North to South; Eastern Side: 31 ½ Feet, Western Side: 25 Feet, in all measuring 1235.93 Square Feet** and bounded by: East by : Private Property, West by: Road, North by: Site No. 1, South by : Site No. 3.

ITEM No. 3 : All that piece and parcel of the Property bearing **Residential Vacant Site No. 4, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: Northern Side: 37.9 Feet, Southern Side: 33 Feet and North to South: Eastern Side: 25 ½ Feet, Western Side: 25 Feet, in all measuring 893.21 Square Feet** and bounded by: East by : Private Property, West by:Road, North by: Site No. 3, South by : Site No. 5.

ITEM No. 4 : All that piece and parcel of the Property bearing **Residential Vacant Site No. 6, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: Northern Side: 27 ½ Feet, Southern Side: 25 Feet and North to South: Eastern Side: 24 Feet, Western Side: 25 Feet, in all measuring 643.125 Square Feet** and bounded by: East by : Private Property, West by : Road, North by : Site No. 5, South by : Site No. 7.

ITEM No. 5 : All that piece and parcel of the Property bearing **Residential Vacant Site No. 9, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: Northern Side: 26 Feet, Southern Side: 32 ¼ Feet and North to South; Eastern Side: 25 Feet, Western Side: 25 Feet, in all measuring 728.125 Square Feet** and bounded by: East by: Private Property, West by:Road, North by: Site No. 8, South by : Site No. 10.

RAGHAVENDRA C. Advocate No. 109, 1st Floor, SSI Area, 5th Block, Rajajinagar, Bangalore –10, Mob: 9845089883.

ದರ್ಶನ್ ಜೈಲು ಸೇರಿ ನೂರು ದಿನ

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಬಂಧನ | ಜೈಲಿನಲ್ಲಿ ನಾನಾ ಸವಲತ್ತಿಗೆ ಬೇಡಿಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಬಂಧನಕ್ಕೆ ಒಳಗಾಗಿ ಸೆ. 18ಕ್ಕೆ ಬರೋಬ್ಬರಿ 100 ದಿನ ತುಂಬಿದೆ.

ನಟ ದರ್ಶನ್ ಈಗ ಜೈಲಿನಲ್ಲಿ ಕುಳಿತು ಟಿವಿ, ಕುರ್ಚಿ, ಮನೆಯೂಟ ಸೇರಿ ಅನೇಕ ಸವಲತ್ತಿಗೆ ಬೇಡಿಕೆ ಇಡುತ್ತಾ ಪರಿತಪಿಸಬೇಕಾಗುತ್ತಿದೆ. ದರ್ಶನ್ ಪರವಾಗಿ ಇನ್ನೂ ಜಾಮೀನು ಅರ್ಜಿ ಸಲ್ಲಿಕೆಯಾಗಿಲ್ಲ. ಆದ್ದರಿಂದ ಮತ್ತಷ್ಟು ದಿನ ಜೈಲಿನಲ್ಲೇ ಇರಬೇಕಾದ ಪರಿಸ್ಥಿತಿ ಇದೆ.

ಜೂನ್ 8ರಂದು ರೇಣುಕಾಸ್ವಾಮಿ ಕೊಲೆ ನಡೆಯಿತು. ಜೂನ್ 11ರಂದು ಮೈಸೂರಿನ ಹೋಟೆಲ್‌ನಲ್ಲಿ ದರ್ಶನ್ ಬಂಧನವಾಯಿತು. ಕೊಲೆ ನಡೆದ 60 ಗಂಟೆಯೊಳಗೆ ನಟನ ಬಂಧನ ಆಗಿತ್ತು. ಅದೇ ದಿನ ದರ್ಶನ್‌ನನ್ನು ಬೆಂಗಳೂರಿಗೆ ಪೊಲೀಸರು ಕರೆತಂದಿದ್ದರು. ಬಳಿಕ ಪ್ರಕರಣದಲ್ಲಿ ಭಾಗಿಯಾದ ಇತರ 16 ಆರೋಪಿಗಳನ್ನು ಬಂಧಿಸಲಾಯಿತು. ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ಪೊಲೀಸರು ವಿಚಾರಣೆ ನಡೆಸಿದ್ದರು. 12 ದಿನ ಕೊಲೆ ಪ್ರಕರಣ ಸಂಬಂಧ ಪೊಲೀಸರು ದರ್ಶನ್‌ನನ್ನು ವಿಚಾರಣೆ ನಡೆಸಿದ್ದರು.

ನಂತರ ಕೋರ್ಟ್ ದರ್ಶನ್‌ಗೆ ನ್ಯಾಯಾಂಗ ಬಂಧನ ವಿಧಿಸಿತು. ಹೀಗಾಗಿ, ದರ್ಶನ್ ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಶಿಫ್ಟ್ ಆದರು. ಅಲ್ಲಿ ಸುಮಾರು ಎರಡು ತಿಂಗಳು ಇದ್ದರು. ಆಗ ಅವರ ಐಷಾರಾಮಿ ಜೀವನದ ಫೋಟೋ ಹೊರಬಿತ್ತು. ರೌಡಿಶೀಟರ್ ನಾಗನ ಜತೆ ಸೇರಿ ಸಿಗರೇಟ್ ಸೇದುತ್ತಾ, ಕಾಫಿ ಹೀರುತ್ತಿದ್ದ ಫೋಟೋ ವೈರಲ್ ಆದ ಬೆನ್ನಲ್ಲೇ ದರ್ಶನ್‌ನನ್ನು ಬಳ್ಳಾರಿ ಜೈಲಿಗೆ ಶಿಫ್ಟ್ ಮಾಡಲಾಯಿತು.

ಪ್ರಮುಖ ಘಟ್ಟ

ಜೂನ್ 8: ದರ್ಶನ್ ಗೆಳತಿ ಪವಿತ್ರಾ ಗೌಡಗೆ ಕೆಟ್ಟದಾಗಿ ಮೆಸೇಜ್ ಮಾಡಿದ್ದಾನೆ ಎನ್ನುವ ಕಾರಣಕ್ಕೆ ದರ್ಶನ್ ಗ್ಯಾಂಗ್, ಚಿತ್ರದುರ್ಗದಿಂದ ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಕರೆತಂದರು. ಅಂದೇ ರೇಣುಕಾಸ್ವಾಮಿಯನ್ನು ಕೂಡಿ ಹಾಕಿದ್ದ ಶೆಡ್‌ಗೆ ಬಂದ ದರ್ಶನ್ ಹಾಗೂ ಪವಿತ್ರಾ ಆತನ ಮೇಲೆ ಹಲ್ಲೆ ನಡೆಸಿದರು ಎನ್ನುವ ವಿಚಾರ ಚಾರ್ಜ್‌ಶೀಟ್‌ನಲ್ಲಿ ದಾಖಲಾಗಿದೆ. ನಿರಂತರವಾಗಿ ಹಲ್ಲೆ ನಡೆಸಿದ ಬಳಿಕ ರೇಣುಕಾಸ್ವಾಮಿ ಸಾವನ್ನಪ್ಪಿದ್ದ ಎಂದು ವರದಿ ಆಗಿದೆ. ರೇಣುಕಾಸ್ವಾಮಿ ಸಾವನ್ನಪ್ಪಿರುವ ವಿಷಯವನ್ನು ಫೋನ್ ಮೂಲಕ ನಟ ದರ್ಶನ್‌ಗೆ ತಿಳಿಸಿದ್ದಾರೆ. ರಾತ್ರಿ ವೇಳೆ ವಿನಯ್ ಹಾಗೂ ಇತರೆ ಇಬ್ಬರು ಆರೋಪಿಗಳು ಸೇರಿ ರೇಣುಕಾಸ್ವಾಮಿ ಶವವನ್ನು ಸುಮನಹಳ್ಳಿ ರಾಜಕಾಲುವೆಗೆ ಎಸೆದಿದ್ದರು.

ಜೂನ್ 9: ಬೆಳಗ್ಗೆ 8 ಗಂಟೆಗೆ ರಾಜಕಾಲುವೆ ಬಳಿ ರೇಣುಕಾಸ್ವಾಮಿ ಶವ ಪತ್ತೆ ಆಗಿದೆ. ಬೆಳಗ್ಗೆ 8.30ಕ್ಕೆ ಸ್ಥಳಕ್ಕೆ ಕಾಮಾಕ್ಷಿಪಾಳ್ಯ ಪೊಲೀಸರ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೂನ್ 10: ದರ್ಶನ್ ಮೂವರಿಗೆ ಶರಣಾಗುವಂತೆ ಸುಪಾರಿ ನೀಡಿದರು. ಬಳಿಕ ಮೂವರು ದರ್ಶನ್ ಸಹಚರರು ಕೊಲೆ ಮಾಡಿದ್ದಾಗಿ ಒಪ್ಪಿಕೊಂಡು ಠಾಣೆಗೆ ಶರಣಾಗಿದ್ದರು. ಪೊಲೀಸರು ವಿಚಾರಣೆ ನಡೆಸಿದಾಗ ಅಸಲಿ ವಿಷಯ ಬೆಳಕಿಗೆ ಬಂದಿತ್ತು. ಈ ವೇಳೆ ಆರೋಪಿಗಳು ದರ್ಶನ್ ಹಾಗೂ ಪವಿತ್ರಾ ಗೌಡ ಹೆಸರನ್ನು ಬಾಯಿಬಿಟ್ಟಿದ್ದರು. ಅಂದು ರಾತ್ರಿಯೇ ಮೈಸೂರಿಗೆ ತೆರಳಿದ ಬೆಂಗಳೂರು ಪೊಲೀಸರು. ದರ್ಶನ್ ಇರುವ ಸ್ಥಳದ ಮಾಹಿತಿ ಕಲೆ ಹಾಕಿದ್ದರು. ಪ್ರಕರಣದ ಇತರೆ ಆರೋಪಿಗಳನ್ನೂ ಬಂಧಿಸಿದ್ದರು.

ಜೂನ್ 11: ಬೆಳಗ್ಗೆ 6.30ಕ್ಕೆ ಮೈಸೂರಿನ ರ್‍ಯಾಡಿಸನ್ ಹೋಟೆಲ್‌ನಲ್ಲಿ ಜಿಮ್ ಮಾಡುತ್ತಿದ್ದ ದರ್ಶನ್‌ನನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಪೊಲೀಸರು ಅದೇ ದಿನ ದರ್ಶನ್ ಅವರನ್ನು ಬೆಂಗಳೂರಿಗೆ ಕರೆತಂದಿದ್ದರು.

ಜೂನ್ 11ಕ್ಕೆ ಬಂಧನ

ಜೂನ್ 11 ರಿಂದ 21ರವರೆಗೂ ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ಪೊಲೀಸರು ದರ್ಶನ್ ವಿಚಾರಣೆ ನಡೆಸಿದ್ದರು. ಜೂನ್ 11ರಂದು ದರ್ಶನ್ ಬಂಧಿಸಿದ ಬಳಿಕ ಬರೋಬ್ಬರಿ 12 ದಿನಗಳ ದರ್ಶನ್ ಪೊಲೀಸ್ ಕಸ್ಟಡಿಯಲ್ಲಿದ್ದರು. ಕೊಲೆ ಪ್ರಕರ ಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದರು. ಆರಂಭದಲ್ಲಿ ನನಗೇನು ಗೊತ್ತಿಲ್ಲ ಅಂತಿದ್ದ ದರ್ಶನ್ ಬಳಿಕ ಖಾಕಿ ಸತ್ಯ ಬಾಯ್ಬಿಟ್ಟಿದ್ದಾರೆ ಎನ್ನಲಾಗುತ್ತಿದೆ. ಈ ಕೊಲೆ ಪ್ರಕರಣದಲ್ಲಿ ಪವಿತ್ರಾ ಗೌಡ ಎ1 ಆಗಿದ್ದು, ದರ್ಶನ್ ಎ2 ಆರೋಪಿ. ಜೂ.22ಕ್ಕೆ ಕಸ್ಟಡಿ ಅಂತ್ಯಗೊಂಡ ಬಳಿಕ ಕೋರ್ಟ್ ಮುಂದೆ ದರ್ಶನ್‌ನನ್ನು ಹಾಜರು ಪಡಿಸಲಾ ಯಿತು. ನ್ಯಾಯಾಲಯ ನಟ ದರ್ಶನ್ ಗೆ ನ್ಯಾಯಾಂಗ ಬಂಧನದ ಆದೇಶ ನೀಡಿತು.

ರೇಣುಕಾಸ್ವಾಮಿ ಕೊನೆ ಕ್ಷಣ ಫೋಟೊ ಕೃತಕ: ಆರೋಪ

ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿ ಸಂಚಲನ ಮೂಡಿಸಿದ್ದ ಚಿತ್ರದುರ್ಗದ ರೇಣುಕಾಸ್ವಾಮಿ ಕೊನೆ ಕ್ಷಣಗಳ ಫೋಟೊಗಳು ಎಐನಿಂದ ಮಾಡಿರುವುದು ಎನ್ನುವ ಆರೋಪ ಕೇಳಿಬಂದಿದೆ. ನಟ ದರ್ಶನ್ ಗ್ಯಾಂಗ್‌ನಿಂದ ಮಾರಣಾಂತಿಕ ಹಲ್ಲೆಗೊಳಗಾಗಿದ್ದ ರೇಣುಕಾಸ್ವಾಮಿ ಪ್ರಾಣಭಿಕ್ಷೆ ನೀಡುವಂತೆ ಕಣ್ಣೀರಿಟ್ಟು ಅಂಗಲಾಚಿದ್ದ ಸಂದರ್ಭದಲ್ಲಿ ತೆಗೆದಿತ್ತು ಎನ್ನಲಾದ ಫೋಟೊ ಎಲ್ಲೆಡೆ ವೈರಲ್ ಆಗಿತ್ತು. ಆದರೆ ಇದು ಎಐ ಫೋಟೊ ಎಂದು ಆರೋಪಿಗಳು ಹೇಳುತ್ತಿದ್ದಾರೆ. ಪ್ರಾಣಭಿಕ್ಷೆಯ ಫೋಟೊ 'ಎಐ'ದು ಎನ್ನುವ ಆರೋಪ ಹಿನ್ನೆಲೆಯಲ್ಲಿ ಆರೋಪಿ ವಿನಯ್ ಮೊಬೈಲ್‌ನ ಮತ್ತೆ ಎಫ್‌ಎಸ್‌ಎಲ್ ಪರೀಕ್ಷೆಗೆ ಒಳಪಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿನಯ್‌ನ ಐಫೋನ್ ಮೊಬೈಲ್‌ನಲ್ಲಿ ರೇಣುಕಾಸ್ವಾಮಿ ಫೋಟೊಗಳು ಪತ್ತೆಯಾಗಿದ್ದವು. ವಿನಯ್ ಮೊಬೈಲ್ ಎಕ್ಸ್‌ಟ್ರ್ಯಾಕ್ಟ್ ವೇಳೆ ರೇಣುಕಾಸ್ವಾಮಿಯ ರಕ್ತಸಿಕ್ತ ಫೋಟೊಗಳು ಪತ್ತೆಯಾಗಿದ್ದವು. ಇದೀಗ ಸಿಕ್ಕಿರುವ ಫೋಟೊಗಳನ್ನ ಮತ್ತೊಮ್ಮೆ ಪರೀಕ್ಷೆಗೊಳಪಡಿಸಲು ಪೊಲೀಸರು ನಿರ್ಧರಿಸಿದ್ದಾರೆ. ವಿನಯ್ ಮೊಬೈಲ್ ಮತ್ತೆ ಎಫ್‌ಎಸ್‌ಎಲ್‌ಗೆ ಕಳಿಸಲು ಪೊಲೀಸರು ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ. ವಿನಯ್ ಮೊಬೈಲ್‌ನಲ್ಲಿ ಸಿಕ್ಕಿದ್ದ ಫೋಟೊಗಳ ಮರುಪರೀಕ್ಷೆಗೆ ತಯಾರಿ ನಡೆ ದಿದೆ. ಆ ಮೂಲಕ ಫೋಟೊಗಳ ಅಸಲಿಯತ್ತಿನ ಪರೀಕ್ಷೆ ನಡೆಸಿ ಮತ್ತೊಮ್ಮೆ ವರದಿ ನೀಡಲು ನಿರ್ಧಾರಿಸಲಾಗಿದೆ. ಐಫೋನ್‌ನ ರಿಪೋರ್ಟ್ ಪಡೆಯಲು ಕೋರ್ಟ್ ನಿಂದ ಪೊಲೀಸರು ಅನುಮತಿ ಪಡೆದಿದ್ದಾರೆ.

ಕಲಬುರಗಿ ಜೈಲಿಗೆ ವಿಲ್ಸನ್ ಗಾರ್ಡನ್ ನಾಗ ಶಿಫ್ಟ್

ಬೆಂಗಳೂರು: ದರ್ಶನ್‌ಗೆ ರಾಜಾತಿಥ್ಯ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಲ್ಸನ್ ಗಾರ್ಡನ್ ನಾಗನನ್ನು ಪರಪ್ಪನ ಅಗ್ರಹಾರ ಜೈಲಿನಿಂದ ಕಲಬುರಗಿ ಜೈಲಿಗೆ ಶಿಫ್ಟ್ ಮಾಡಲು ಕೋರ್ಟ್ ಆದೇಶ ಪ್ರಕಟಿಸಿದೆ.

ವಿಲ್ಸನ್ ಗಾರ್ಡನ್ ನಾಗ ಸೇರಿ ಕೋಕಾ ಪ್ರಕರಣದಲ್ಲಿ ಬಂಧನವಾಗಿದ್ದ 20 ಜನರೂ ಕೂಡ ಬೇರೆ ಬೇರೆ ಜೈಲಿಗೆ ವರ್ಗವಾಗಿದ್ದಾರೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೊಲೆ ಆರೋಪಿ ನಟ ದರ್ಶನ್‌ಗೆ ರಾಜಾತಿಥ್ಯ ಕೊಟ್ಟಿದ್ದ ಆರೋಪ ವಿಲ್ಸನ್ ಗಾರ್ಡನ್ ನಾಗನ ಮೇಲಿತ್ತು. ನಾಗನ ಶಿಫ್ಟ್ ಮಾಡಲು ಜೈಲು ಅಧಿಕಾರಿಗಳು ಹಾಗೂ ಬೆಂಗಳೂರು ಪೊಲೀಸರು ಕೋರ್ಟ್ ಮೊರೆ ಹೋಗಿದ್ದರು. ಕಳೆದ ವರ್ಷ ಆಗಸ್ಟ್‌ನಲ್ಲಿ ಸಿದ್ದಾಪುರ ಮಹೇಶ್‌ನನ್ನು ನಾಗ ತಂಡ ಕೊಚ್ಚಿ ಕೊಲೆ ಮಾಡಿತ್ತು. ಪರಪ್ಪನ ಅಗ್ರಹಾರ ಜೈಲಿನಿಂದ ಹೊರಗಡೆ ಬಂದ ಕೇವಲ ಇನ್ನೂರು ಮೀಟರ್ ಅಂತರದಲ್ಲೇ ಸಿದ್ದಾಪುರ ಮಹೇಶನನ್ನು ಆರೋಪಿಗಳು ಕೊಲೆ ಮಾಡಿದ್ದರು. ಈ ಪ್ರಕರಣದಲ್ಲಿ ಬರೋಬ್ಬರಿ ಇಪ್ಪತ್ತು ಜನರನ್ನು ಬಂಧನ ಮಾಡಲಾಗಿದೆ. ತಮ್ಮ ವಿರೋಧಿ ತಂಡಕ್ಕೆ ಟಾಂಗ್ ನೀಡಲು ಜೈಲಿನ ಒಳಗಡೆ ನಾಗನ ತಂಡ ಕ್ಲಿಕ್ಕಿಸಿದ ಫೋಟೋ ವೈರಲ್ ಆಗಿತ್ತು.

ಸೀಟು ಹಂಚಿಕೆ ಪ್ರಕಟ

ಬೆಂಗಳೂರು: ಎಂಜಿನಿಯರಿಂಗ್, ವೈದ್ಯಕೀಯ ಸೇರಿ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶದ ಯುಜಿಸಿಇಟಿ-ಯುಜಿನೀಟ್ 2024ರ ಎರಡನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕೆಇಎ ಪ್ರಕಟಿಸಿದೆ.

ಎರಡನೇ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆಗೆ ಸೆ.13ರ ಮಧ್ಯಾಹ್ನ 2ರವರೆಗೆ ನಮೂದಿಸಿದ ಆಪ್ಷನ್‌ಗಳನ್ನು ಪರಿಗಣಿಸಲಾಗಿದೆ. ಇದು ಯುಜಿಸಿಇಟಿ- ಯುಜಿನೀಟ್ 2024ರ ಎರಡನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವಾಗಿದ್ದು, ಅಭ್ಯರ್ಥಿಗಳು ತಾತ್ಕಾಲಿಕವಾಗಿ ಹಂಚಿಕೆಯಾಗಿರುವ ಸೀಟಿಗೆ ಕಾಲೇಜಿನಲ್ಲಿ ಪ್ರವೇಶ ಪಡೆಯುವಂತಿಲ್ಲ ಎಂದು ತಿಳಿಸಿದ್ದಾರೆ.

ಯಾವುದಾದರೂ ನಿರ್ದಿಷ್ಟ ಆಕ್ಷೇಪಣೆಗಳಿದ್ದಲ್ಲಿ ಸೆ.19ರ ಬೆಳಗ್ಗೆ 10ರೊಳಗೆ ಎಲ್ಲಾ ವಿವರಗಳೊಂದಿಗೆ ಮೇಲ್ ಮಾಡಬಹುದು. ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶಗಳನ್ನು ಪ್ರಕಟಿಸಲಾಗುವುದು. ಸೀಟು ಹಂಚಿಕೆ ಕುರಿತು ಪ್ರಕಟಿಸಲಾಗುವ ಸೂಚನೆಗಳು, ಅಧಿಸೂಚನೆಗಳು ಮತ್ತು ಪ್ರಕಟಣೆಗಳನ್ನು ನೋಡದೆ ಇರುವ ಕಾರಣದಿಂದ ಉಂಟಾಗುವ ಯಾವುದೇ ಪರಿಣಾಮಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ. ಅಭ್ಯರ್ಥಿಗಳು ಪ್ರತಿದಿನ ಕನಿಷ್ಠ ಎರಡು ಬಾರಿ ಪ್ರಾಧಿಕಾರದ ವೆಬ್‌ಸೈಟಿಗೆ ಭೇಟಿ ನೀಡಿ ಖಚಿತಪಡಿಸಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

3 ವರ್ಷದ ಬಳಿಕ ವಾಡಿಕೆಗಿಂತ ಅಧಿಕ ಮಳೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ರಾಜ್ಯಾದ್ಯಂತ ವಾಡಿಕೆಗಿಂತ ಅಧಿಕ ಮಳೆ ಸುರಿದಿದ್ದು, ಈ ಮೂಲಕ 3 ವರ್ಷದ ಬಳಿಕ ವಾಡಿಕೆಗಿಂತ ಹೆಚ್ಚು ಮಳೆ ಸುರಿದಿರುವುದು ಗಮನಾರ್ಹವಾಗಿದೆ ಎಂದು ಬೆಂಗಳೂರು ಹವಾಮಾನ ಇಲಾಖೆಯ ಪ್ರಾದೇಶಿಕ ನಿರ್ದೇಶಕ ಸಿ. ಎಸ್ ಪಾಟೀಲ್ ಹೇಳಿದರು.

ಈ ಕುರಿತು ಮಾತನಾಡಿ, ಜೂ.1ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ವಾಡಿಕೆಯಂತೆ ರಾಜ್ಯದಲ್ಲಿ 766 ಮಿಮೀ ಮಳೆಯಾಗುವ ಬದಲು 918 ಮಿಮೀ ಮಳೆಯಾಗಿದ್ದು, ಶೇ.20 ಅಧಿಕವಾಗಿ ಮಳೆಯಾಗಿದೆ. ಕರಾವಳಿ ವ್ಯಾಪ್ತಿಯ ಜಿಲ್ಲೆಗಳಲ್ಲಿ 2,974 ಮಿಮೀ ಮಳೆಯಾಗಬೇಕಿತ್ತು. ಆದರೆ, 3,581 ಮಿಮೀ ಸುರಿದಿದ್ದು, ಶೇ.20 ಹೆಚ್ಚು ಬಿದ್ದಿದೆ. ಮಲೆನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ 1,469 ಮಿಮೀ ಮಳೆ ಬದಲಾಗಿ 1,694 ಸುರಿದಿದ್ದು, ಶೇ.15 ಅಧಿಕ ಮಳೆಯಾಗಿದೆ. ಉತ್ತರ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ 397 ಮಿಮೀ ಮಳೆ ಸುರಿಯಬೇಕಿತ್ತು. ಆದರೆ, 481 ಮಿಮೀ ಬಿದ್ದಿದ್ದು, ಶೇ.21 ಅಧಿಕ ವರ್ಷಧಾರೆಯಾಗಿದೆ. ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ 292 ಮಿಮೀ ಬದಲು 371 ಮಿಮೀ ಸುರಿದಿದ್ದು, ಶೇ.27ಗಿಂತ ಅಧಿಕ ವರ್ಷಧಾರೆಯಾಗಿದೆ ಎಂದರು.

ದ.ಕನ್ನಡ, ಉ.ಕನ್ನಡ, ಉಡುಪಿ, ಹಾಸನ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ವಿಜಯನಗರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಚಾಮರಾಜನಗರ, ಮೈಸೂರು, ಮಂಡ್ಯ ಜಿಲ್ಲೆಯಲ್ಲಿ ವಾಡಿಕೆಗಿಂತ ಅಧಿಕ ಮಳೆಯಾದರೆ, ಬೆಂಗಳೂರು, ಬೆಂ.ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಬೀದರ್, ಧಾರವಾಡ, ಹಾವೇರಿ, ಗದಗ, ಶಿವಮೊಗ್ಗ, ಕೊಡಗಿನಲ್ಲಿ ವಾಡಿಕೆಯಷ್ಟೇ ವರ್ಷಧಾರೆಯಾಗಿದೆ ಎಂದರು.

ಈ ತಿಂಗಳು ಮಳೆ ಕುಸಿತ

ಮುಂಗಾರು ಕೊನೆಗೊಳ್ಳಲು ಒಂದೆರಡು ವಾರ ಬಾಕಿ ಇರುವಾಗಲೇ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆ ಕಡಿಮೆಯಾಗಿದೆ. ವಾತಾವರಣದಲ್ಲಿ ತೇವಾಂಶ ಕೊರತೆ ಇರುವುದು, ಅರಬ್ಬಿ ಸಮುದ್ರದಲ್ಲಿ ಮೇಲ್ಮೈ ಸುಳಿಗಾಳಿ ಅಥವಾ ವಾಯುಭಾರ ಕುಸಿತ ಇಲ್ಲದಿರುವುದೂ ಸೇರಿ ಇತರೆ ಕಾರಣಗಳಿಂದ ಸದ್ಯ ಮುಂಗಾರು ದುರ್ಬಲವಾಗಿದೆ. ಈ ಹಿನ್ನೆಲೆ ಸೆ.23ರವರೆಗೆ ಕರಾವಳಿ, ಮಲೆನಾಡು, ದಕ್ಷಿಣ ಕರ್ನಾಟಕ ಸೇರಿ ರಾಜ್ಯದಲ್ಲಿ ಮಳೆ ಬೀಳುವ ಲಕ್ಷಣಗಳಿಲ್ಲ. ಸೆ.24ರಿಂದ ರಾಜ್ಯದಲ್ಲಿ ಹಗುರದಿಂದ ಕೂಡಿದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಮೂರು ತಿಂಗಳಿಂದ ಉತ್ತಮವಾಗಿ ಮಳೆಯಾಗಿದ್ದು, ರಾಜ್ಯದಲ್ಲಿ ಪ್ರಸಕ್ತ ತಿಂಗಳು ಮಳೆ ಕೊರತೆ ಎದುರಾಗಿದೆ. ಈ ತಿಂಗಳು ಇಲ್ಲಿಯವರೆಗೆ ರಾಜ್ಯಾದ್ಯಂತ 88 ಮಿಮೀ ಮಳೆಯಾಗಬೇಕಿತ್ತು. ಆದರೆ, 73 ಮಿಮೀ ಮಳೆಯಾಗಿದ್ದು, ಶೇ.17 ರಷ್ಟು ವಾಡಿಕೆಗಿಂತ ಕಡಿಮೆ ಸುರಿದಿದೆ. ಕರಾವಳಿ, ಮಲೆನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ವಾಡಿಕೆಯಷ್ಟು ಮಳೆ ಸುರಿದಿದೆ, ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ ಶೇ. 77, ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಶೇ.31ರಷ್ಟು ಮಳೆ ಕೊರತೆ ಉಂಟಾಗಿದೆ. ಒಟ್ಟು 21 ಜಿಲ್ಲೆಗಳಲ್ಲಿ ಶೇ.90ರಷ್ಟು ಮಳೆ ಕೊರತೆಯಾಗಿದೆ

– ಸಿ. ಎಸ್ ಪಾಟೀಲ್
ಪ್ರಾದೇಶಿಕ ನಿರ್ದೇಶಕ ಬೆಂಗಳೂರು ಹವಾಮಾನ ಇಲಾಖೆ

PUBLIC NOTICE

The General Public are hereby informed that my client, has intended to purchase **Residential Vacant Site No. 7 & 8, B-Katha Serial No. 167 & 171 respectively, formed in northern portion of residential converted land bearing Survey No. 55/2, vide order NO. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk** morefully described in the Schedule hereunder for valuable consideration from **Sri. S. ASHOK,** Aged about 54 years, S/o Late Shanmugam, R/at No. 4296, Srinivasagowda Layout, Bangarpet – 563 114. Any person/s objecting for the proposed purchase or having any right in the Schedule Property may lodge their objections and/or claims to the undersigned along with the supporting documentary evidences **within 07 (Seven) days** from the date of this publication, and any objections or claims received thereafter will not be taken for consideration and my client will proceed to purchase the Schedule Property as if there are no claimant/s or objections from any person/s.

SCHEDULE PROPERTIES

ITEM No. 1 : All that piece and parcel of the Property bearing **Residential Vacant Site No. 7, B-Katha Serial No. 167, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: 27+25.3/2 Feet and North to South: 25+25/2 Feet, in all measuring 653.75 Square Feet** and bounded by: East by :Property retained by Vendors, West by : 25 Feet Road, North by: Site No. 6, South by : Site No. 8.

ITEM No. 2 : All that piece and parcel of the Property bearing **Residential Vacant Site No. 8, B-Katha Serial No. 171, formed in northern portion of residential converted land bearing Survey No. 55/2, vide order No. ALN(N.Y.)S.R./58/2008-09, dated 1/10/2009 issued by Special Deputy Commissioner, Bangalore District, Bangalore, situated at Malagalu Village, Yeshwanthpura Hobli, Bangalore North Taluk, presently within the jurisdiction of BBMP Ward No. 73 - Kottegepalya, measuring East to West: 28+27/2 Feet and North to South: 25 Feet, in all measuring 687.50 Square Feet** and bounded by: East by : Property retained by Vendors, West by: 25 Feet Road, North by : Site No. 7, South by : Site No. 9.

RAGHAVENDRA C. Advocate, No. 109, 1st Floor, SSI Area, 5th Block, Rajajinagar, Bangalore – 10, Mob: 9845089883.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.01.2022** ರಂದು ಕರೆದು ಸಾಲಗಾರ **ಎ ಜಾನ್ಸನ್ ಮತ್ತು ಅಂಕುಲಾ ಸಲೋಮಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 25,43,346.38 (ರೂಪಾಯಿಗಳು ಇಪ್ಪತ್ತೈದು ಲಕ್ಷ ನಲವತ್ಮೂರು ಸಾವಿರದ ಮುನ್ನೂರ ನಲವತ್ತಾರು ಮತ್ತು ಮೂವತ್ತೆಂಟು ಪೈಸೆ ಮಾತ್ರ)** ಸಾಲ ಖಾತೆ ನಂ. **HHLSKN00413434** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **27.01.2022** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **13.09.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 25,43,346.38 (ರೂಪಾಯಿಗಳು ಇಪ್ಪತ್ತೈದು ಲಕ್ಷ ನಲವತ್ಮೂರು ಸಾವಿರದ ಮುನ್ನೂರ ನಲವತ್ತಾರು ಮತ್ತು ಮೂವತ್ತೆಂಟು ಪೈಸೆ ಮಾತ್ರ) 27.01.2022** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ನಂ. 3ನೇ ಮಹಡಿಯಲ್ಲಿರುವ ಟಿ 303, ''ಶ್ರೀ ರಾಮ್ ರೆಸಿಡೆನ್ಸಿ'' ಎಂದು ಕರೆಯಲ್ಪಡುವ 2 ಬೆಡ್ ರೂಮ್‌ಗಳನ್ನು ಒಳಗೊಂಡಿದೆ, ಸೈಟ್ ಬೇರಿಂಗ್ ನಂ. 08, ಕಟ್ಟಿಗೇನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ಕಥಾ ಸಂ. 200/8, ಅಂತರ್ನಿರ್ಮಿತ ಪ್ರದೇಶ 938 ಚದರ ಚದರ ಅಡಿ ಮತ್ತು ಸೂಪರ್ ಬಿಲ್ಟ್-ಅಪ್ ಏರಿಯಾ ಸುಮಾರು 1172.5 ಸ್ಕ್ವೇರ್ ಅಳತೆ. ಅಡಿ ಮತ್ತು 238 ಚದರ. ಬೇಸ್‌ಮೆಂಟ್‌ನಲ್ಲಿನ ಅವಿಭಜಿತ ಪಾಲು ಭೂಮಿ ಮತ್ತು ಒಂದು ಕವರ್ಡ್ ಕಾರ್ ಪಾರ್ಕಿಂಗ್ ಸ್ಲಾಟ್, ಕಟ್ಟಿಗೇನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು - 560064, ಕರ್ನಾಟಕ, ಇದು ಈ ಕೆಳಗಿನಂತೆ ಬಂಧಿಸಲ್ಪಟ್ಟಿದೆ:

ಪೂರ್ವದಲ್ಲಿ ಇದರಿಂದ : ಆಕಾಶಕ್ಕೆ ತೆರೆಯಿರಿ
ಪಶ್ಚಿಮದಲ್ಲಿ ಇದರಿಂದ : ಕಾಮನ್ ಪ್ಯಾಸೇಜ್ ಮತ್ತು ಫ್ಲಾಟ್ ನಂ. ಟಿ-301 ಮತ್ತು-302
ಉತ್ತರದಲ್ಲಿ ಇದರಿಂದ : ಖಾಸಗಿ ಆಸ್ತಿ
ದಕ್ಷಿಣದಲ್ಲಿ ಇದರಿಂದ : ಬಾಲ್ಕನಿ ರಸ್ತೆಗೆ ತೆರೆದಿದೆ

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 13.09.2024
ಸ್ಥಳ : ಬೆಂಗಳೂರು

ಸ್ನೇಹಿತರ ಗಲಾಟೆ: ಕೊಲೆಯಲ್ಲಿ ಅಂತ್ಯ

ಆನೇಕಲ್: ಬಟ್ಟೆ ಒಗೆಯುವ ವಿಚಾರಕ್ಕೆ ಇಬ್ಬರು ಸ್ನೇಹಿತರ ನಡುವಿನ ಕಿತ್ತಾಟ ಕೊಲೆಯಲ್ಲಿ ಅಂತ್ಯವಾದ ಘಟನೆ ಆನೇಕಲ್ ಭಾಗದ ಸಿದ್ದನಪಾಳ್ಯದಲ್ಲಿ ತಡರಾತ್ರಿ ನಡೆದಿದೆ. ಸಿದ್ದನಪಾಳ್ಯದ ಮದರ್ ಇಂಡಿಯಾ ಎನ್ನುವ ಜೆಸಿಬಿ ಬಿಡಿ ಭಾಗಗಳನ್ನು ತಯಾರಿಸುವ ಕಂಪನಿಯಲ್ಲಿ ಕೂಲಿ ಕಾರ್ಮಿಕನಾಗಿದ್ದ ಬಿಹಾರ ಮೂಲದ ಗಯಾ ಜಿಲ್ಲೆ ನಿತೀಶ್ ಕುಮಾರ್ (23) ಕೊಲೆಯಾದ ವ್ಯಕ್ತಿ. ಘಟನೆ ಬಗ್ಗೆ ಬೆಂಗಳೂರು ಗ್ರಾಮಾಂತರ ಎಸ್‌ಪಿ ಸಿ.ಕೆ.ಬಾಬಾ ಮಾಹಿತಿ ನೀಡಿದ್ದು, ಆನೇಕಲ್ ಠಾಣೆಯ ವ್ಯಾಪ್ತಿಯ ಸಿದ್ದನಪಾಳ್ಯದಲ್ಲಿ ಸೋಮವಾರ ತಡರಾತ್ರಿ ಮದರ್ ಇಂಡಿಯಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನೊಬ್ಬನನ್ನು ಕೊಲೆ ಮಾಡಲಾಗಿದೆ. ಈ ಕಂಪನಿಯಲ್ಲಿ ಕೆಲಸಕ್ಕೆ ಎಂದು ಬೇರೆಡೆಯಿಂದ ಬಂದವರು ಇಲ್ಲಿ ವಾಸವಾಗಿದ್ದಾರೆ. ಭಾನುವಾರ ದಿವಸ ಕೊಲೆಯಾದ ವ್ಯಕ್ತಿ ಹಾಗೂ ಕೊಲೆ ಮಾಡಿದ ವ್ಯಕ್ತಿಗೆ ಬಟ್ಟೆ ಒಗೆಯುವ ವಿಚಾರಕ್ಕೆ ವಾಗ್ವಾದವಾಗಿದೆ. ಮಂಗಳವಾರ ರಾತ್ರಿ ಎಲ್ಲರೂ ಮಲಗಿದ್ದಂತಹ ಸಂದರ್ಭದಲ್ಲಿ ಪಕ್ಕದಲ್ಲೇ ಇದ್ದಂತಹ ಕಲ್ಲನ್ನು ಮಲಗಿದ್ದ ನಿತೀಶ್ ಕುಮಾರ್ ತಲೆ ಮೇಲೆ ಎತ್ತಿ ಹಾಕಿ ಪರಾರಿಯಾಗಿದ್ದ. ಬುಧವಾರ ಬೆಳಗ್ಗೆ ಆಸ್ಪತ್ರೆಯಲ್ಲಿ ಆತ ಸಾವನ್ನಪ್ಪಿರುವುದಾಗಿ ತಿಳಿಸಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ಕೊಲೆಯಾದ ವ್ಯಕ್ತಿ ಬಿಹಾರದವನಾಗಿದ್ದು, ಆರೋಪಿ ಸೋಮನಾಥ್ (24) ಜಾರ್ಖಂಡ್ ಮೂಲದವನು. ಆತನನ್ನು ಈಗಾಗಲೇ ಬಂಧಿಸಿದ್ದು, ಮುಂದಿನ ತನಿಖೆ ಕೈಗೊಳ್ಳುತ್ತೇವೆ ಎಂದರು.

ಪ್ರೇಯಸಿ ಮೇಲೆ ಕಣ್ಣು ಹಾಕಿದ ಮಾಲೀಕನಿಗೆ ಚಾಕು ಇರಿತ

ಸದ್ದುಗುಂಟೆಪಾಳ್ಯ ಠಾಣೆ ವ್ಯಾಪ್ತಿಯ ಕೆಇಬಿ ಪಾರ್ಕ್ ಬಳಿ ಘಟನೆ

ಬೆಂಗಳೂರು: ಪಾರ್ಕ್‌ನಲ್ಲಿ ಪ್ರಿಯತಮೆಯೊಂದಿಗೆ ಕುಳಿತಿದ್ದ ವ್ಯಕ್ತಿಗೆ ಯುವತಿಯ ಸ್ನೇಹಿತ ಚಾಕು ಇರಿದಿರುವ ಘಟನೆ ಸದ್ದುಗುಂಟೆಪಾಳ್ಯ ಠಾಣೆ ವ್ಯಾಪ್ತಿಯ ಕೆಇಬಿ ಪಾರ್ಕ್ ಬಳಿ ಘಟನೆ ನಡೆದಿದೆ.

ಅಪರಾಧ ಸುದ್ದಿಗಳು

ಇರಿತಕ್ಕೊಳಗಾದ ಹಿತೇಂದ್ರ ಕುಮಾರ್ (58) ನೀಡಿರುವ ದೂರಿನ ನ್ವಯ ಯುವತಿ ಹಾಗೂ ಆಕೆಯ ಸ್ನೇಹಿತ ಸಿದ್ದು ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ. ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗು ತ್ತಿದೆ. ಜಯನಗರ 9ನೇ ಬ್ಲಾಕ್‌ನಲ್ಲಿ ಹಿತೇಂದ್ರ ಕುಮಾರ್ ಹೊಂದಿರುವ ಬಟ್ಟೆ ಅಂಗಡಿಯಲ್ಲಿ ಯುವತಿಯೊಬ್ಬಳು ಜೂನ್ ತಿಂಗಳಿನಲ್ಲಿ ಕೆಲಸಕ್ಕೆಂದು ಸೇರಿದ್ದಳು. ಆದರೆ 2-3 ತಿಂಗಳುಗಳ ಬಳಿಕ ಕೆಲಸ ಬಿಟ್ಟಿದ್ದಳು. ಯುವತಿಯ ಮೇಲೆ ಪ್ರೀತಿ ಹೊಂದಿದ್ದ ಹಿತೇಂದ್ರ ಕುಮಾರ್ ಸೆಪ್ಟೆಂಬರ್ 14ರಂದು ಆಕೆಯನ್ನು ಭೇಟಿಯಾಗಲು ಕರೆದಿದ್ದರು. ಅದರಂತೆ ಇಬ್ಬರೂ ಸಹ ಬಿಟಿಎಂ ಲೇಔಟ್‌ನ ಉಡುಪಿ ಗಾರ್ಡನ್ ಸಿಗ್ನಲ್ ಬಳಿಯಿರುವ ಕೆಇಬಿ ಪಾರ್ಕ್‌ನಲ್ಲಿ ಭೇಟಿಯಾಗಿದ್ದರು ಎನ್ನುವುದನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಈ ವೇಳೆ ಯುವತಿಯ ಬಳಿ ಹಿತೇಂದ್ರ ಕುಮಾರ್ ತನ್ನ ಪ್ರೀತಿ ಹೇಳಿಕೊಂಡಿದ್ದ. ಆಕೆಯೂ ಸಹ ಹಿತೇಂದ್ರ ಕುಮಾರ್ ಪ್ರೀತಿಗೆ ಸಮ್ಮತಿಸಿದ್ದಳು. ಅದೇ ಖುಷಿಯಲ್ಲಿದ್ದ ಹಿತೇಂದ್ರ ಕುಮಾರ್ 3ನೇ ದಿನವೂ ಸಹ ಯುವತಿಯನ್ನು ಅದೇ ಸ್ಥಳದಲ್ಲಿ ಭೇಟಿಗೆ ಕರೆದಿದ್ದ. ಅದೇ ಪಾರ್ಕ್‌ನಲ್ಲಿ ಮತ್ತೆ ಕುಳಿತು ಇಬ್ಬರೂ ಮಾತನಾಡುತ್ತಿದ್ದಾಗ ಏಕಾಏಕಿ ಯುವತಿಯ ಸ್ನೇಹಿತ ಚಾಕು ಸಮೇತ ಬಂದಿದ್ದ. ಈ ವೇಳೆ ಮೂರು ಜನರ ಮಧ್ಯೆ ಮಾತಿಗೆ ಮಾತು ಬೆಳೆದಿದ್ದು, ಹಿತೇಂದ್ರ ಕುಮಾರ್ ಹೊಟ್ಟೆ, ಬೆನ್ನಿಗೆ ಆರೋಪಿ ಚಾಕುವಿನಿಂದ ಇರಿದಿರುವ ಬಗ್ಗೆ ಎಫ್‌ಐಆರ್ ದಾಖಲಾಗಿದೆ.

ಆರೋಪಿಗಾಗಿ ಹುಡುಕಾಟ

ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಹಿತೇಂದ್ರ ಕುಮಾರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಯುವತಿ ಹಾಗೂ ಆಕೆಯ ಸ್ನೇಹಿತನ ಉದ್ದೇಶಪೂರ್ವಕವಾಗಿ ಕೊಲೆಗೆ ಯತ್ನಿಸಿರುವುದಾಗಿ ದೂರು ನೀಡಿದ್ದಾರೆ. ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಸುದ್ದುಗುಂಟೆ ಠಾಣೆ ಪೊಲೀಸರು ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಬಿಎಂಟಿಸಿ ಬಸ್‌ಗೆ ವಿಶೇಷ ಚೇತನ ಬಲಿ

ಬೆಂಗಳೂರು: ಬಿಎಂಟಿಸಿ ಬಸ್ ಅಪಘಾತಕ್ಕೆ ವಿಶೇಷ ಚೇತನ ಬಲಿಯಾಗಿರುವ ಘಟನೆ ನಗರದ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ನಡೆದಿದೆ. ಯಶವಂತಪುರದಿಂದ ಬಸ್ ಮೆಜೆಸ್ಟಿಕ್‌ಗೆ ಬರುತ್ತಿದ್ದ ವೇಳೆ ಮೆಜೆಸ್ಟಿಕ್ ಬಿಎಂಟಿಸಿ ಬಸ್ ನಿಲ್ದಾಣದ ಪ್ರವೇಶದ ಬಳಿ ಅವಘಡ ಸಂಭವಿಸಿದೆ. ಘಟನೆಗೆ ಅತಿವೇಗದ ಚಾಲನೆಯೇ ಕಾರಣ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಗೆ ಕಾರಣವಾದ ಬಿಎಂಟಿಸಿ ಚಾಲಕ ಗೋಪಾಲಯ್ಯನನ್ನ ಉಪ್ಪಾರಪೇಟೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪರಪ್ಪನ ಅಗ್ರಹಾರದಲ್ಲಿ ಮತ್ತೆ 9 ಮೊಬೈಲ್ ಪತ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿನ ವಿಚಾರಣಾಧೀನ ಕೈದಿಗಳಿರುವ ಬ್ಯಾರಕ್‌ಗಳಲ್ಲಿ ಮತ್ತೆ 9 ಮೊಬೈಲ್‌ಗಳು ಪತ್ತೆಯಾಗಿವೆ. ಈ ಬಗ್ಗೆ ಕಾರಾಗೃಹದ ಮುಖ್ಯ ಅಧೀಕ್ಷಕ ಸುರೇಶ್ ಅವರು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬ್ಯಾರಕ್‌ಗಳಲ್ಲಿ ಮೊಬೈಲ್‌ಗಳು ಹೇಗೆ ಬಂದವು, ಯಾರ್‍ಯಾರು ಇದರಲ್ಲಿ ಶಾಮೀಲಾಗಿದ್ದಾರೆ ಎಂಬುದನ್ನು ಪತ್ತೆಹಚ್ಚುವಂತೆ ಅವರು ದೂರು ನೀಡಿದ್ದಾರೆ. ಕಾರಾಗೃಹದ ವಿವಿಧ ಬ್ಯಾರಕ್‌ಗಳಲ್ಲಿ ಒಂದು ಕೀ ಪ್ಯಾಡ್, ಎಂಟು ಆಂಡ್ರಾಯ್ಡ್ ಫೋನ್‌ಗಳು ಸಿಕ್ಕಿವೆ. ಈ ಬಗ್ಗೆ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳೆದ ಶನಿವಾರ ಸಂಜೆ ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತೀಮಾ ಅವರ ನೇತೃತ್ವದಲ್ಲಿ ಒಬ್ಬರು ಎಸಿಪಿ, ನಾಲ್ವರು ಇನ್ಸ್‌ಪೆಕ್ಟರ್‌ಗಳು ಸೇರಿದಂತೆ 30 ಸಿಬ್ಬಂದಿ ತಂಡ ಜೈಲಿನ ಮೇಲೆ ದಾಳಿಮಾಡಿದ ಸಂದರ್ಭದಲ್ಲಿ 15 ಮೊಬೈಲ್‌ಗಳು, ಚಾರ್ಜರ್‌ಗಳು, ಪೆನ್‌ಡ್ರೈವ್, ಇಯರ್ ಫೋನ್‌ಗಳು ಸಿಕ್ಕಿದ್ದವು. ರೌಡಿ ವಿಲ್ಸನ್ ಗಾರ್ಡನ್ ನಾಗ ಮತ್ತು ಆತನ ಸಹಚರರು ಹಾಗೂ ಇತರರ ಬ್ಯಾರಕ್‌ಗಳಲ್ಲಿ ಪತ್ತೆಯಾಗಿದ್ದವು. ಈ ಬಗ್ಗೆಯೂ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯದಲ್ಲಿ ಮದ್ಯದ ದರ ಮತ್ತೆ ಏರಿಕೆ?

ಅಕ್ಟೋಬರ್ ಮೊದಲ ವಾರದಿಂದಲೇ ಪರಿಷ್ಕೃತ ದರ ಏರಿಕೆ ಸಾಧ್ಯತೆ

ಬೆಂಗಳೂರು: ಅಕ್ಟೋಬರ್ ಮೊದಲ ವಾರದಿಂದಲೇ ಪರಿಷ್ಕೃತ ಮದ್ಯದ ದರ ಏರಿಕೆಯಾಗುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಈಗಾಗಲೇ ಒಂದು ವರ್ಷದ ಅವಧಿಯಲ್ಲಿ ಎರಡು ಬಾರಿ ಮದ್ಯ ದರ ಏರಿಕೆ ಮಾಡಿ ಸರಕಾರ ಶಾಕ್ ನೀಡಿತ್ತು. ಇದೀಗ ಮತ್ತೆ ಸರಕಾರ ಶಾಕ್ ನೀಡಲು ಮುಂದಾಗಿದೆ.

2023ರ ಜುಲೈನಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯನವರು ಐಎಂಎಲ್ ಮೇಲೆ ಶೇ.20 ಮತ್ತು ಬಿಯರ್ ಮೇಲೆ ಶೇ.10 ಅಬಕಾರಿ ಸುಂಕ ಹೆಚ್ಚಿಸಿದ್ದರು. ಇದಕ್ಕೂ ಮುನ್ನ ರಾಜ್ಯದಲ್ಲಿ ತಯಾರಿಸಲಾದ ಅಥವಾ ಆಮದು ಮಾಡಿಕೊಳ್ಳುವ ಬಿಯರ್ ಬಾಟಲ್ ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು ಶೇ.10ರಷ್ಟು ಹೆಚ್ಚಿಸಲಾಗಿತ್ತು. ಈಗ ಮತ್ತೊಮ್ಮೆ ಬಿಯರ್ ಬೆಲೆ ಏರಿಕೆ ಬಗ್ಗೆ ಅಬಕಾರಿ ಇಲಾಖೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಇದಕ್ಕೆ ಸರಕಾರ ಅಸ್ತು ಅಂದಿದ್ದು, ಅ.1 ರಿಂದ ಬೆಲೆ ಏರಿಕೆಯಾಗುವ ಸಾಧ್ಯತೆ ಖಚಿತವಾದಂತಿದೆ. ಕಳೆದ ಆ.29ರಿಂದ ಪ್ರೀಮಿಯಂ, ಸೆಮಿ ಪ್ರೀಮಿಯಂ ಮದ್ಯದ ದರ ಇಳಿಸಿದ ಬೆನ್ನಲ್ಲೇ ಬಿಯರ್ ದರ ಹೆಚ್ಚಳಕ್ಕೆ ಸರಕಾರ ಮುಂದಾಗಿದ್ದು, ಅ.1ರಿಂದ ಹೊಸ ದರಗಳು ಪರಿಷ್ಕರಣೆಗೊಳ್ಳುವ ಸಾಧ್ಯತೆಯಿದೆ.

ಒಂದೂವರೆ ವರ್ಷದಲ್ಲಿ ಮೂರನೇ ಬಾರಿಗೆ ದರ ಪರಿಷ್ಕರಣೆಯಾಗುತ್ತಿದೆ. ರಾಜ್ಯದಲ್ಲಿ ಬಿಯರ್ ಮಾರಾಟ ಹೆಚ್ಚಾಗಿದೆ. ಈ ಮಧ್ಯೆ ಸರಕಾರ ಸುಂಕ ಹೆಚ್ಚಳ ಮಾಡಿದರೆ ಗ್ರಾಹಕರ ಜೊತೆಗೆ ಮಾರಾಟಗಾರರಿಗೂ ಹೊಡೆತ ಬೀಳಲಿದೆ. ಸರಕಾರ ಏರಿಕೆ ಬದಲು ದರ ಇಳಿಕೆ ಬಗ್ಗೆ ಯೋಚನೆ ಮಾಡಿದರೆ ಹೆಚ್ಚು ಮಾರಾಟವಾಗಲಿದೆ. ಈ ಮೂಲಕ ಸರಕಾರ ಮತ್ತು ಮಾಲೀಕರಿಗೆ ಅನೂಕೂಲವಾಗಲಿದೆ ಎನ್ನುತ್ತಿದ್ದಾರೆ. ಇಷ್ಟೇ ಅಲ್ಲದೆ ಇನ್ನುಳಿದ ಬ್ರ್ಯಾಂಡ್‌ಗಳ ಮೇಲೂ ಸುಮಾರು 10 ರಿಂದ 20 ರು. ವರೆಗೂ ದರ ಏರಿಕೆಯಾಗುವ ಸಾಧ್ಯತೆ ಇದ್ದು, ಅಕ್ಟೋಬರ್ ಮೊದಲ ವಾರವೇ ಹೊಸ ದರಗಳು ಪರಿಷ್ಕರಣೆಗೊಳ್ಳುವ ಸಾಧ್ಯತೆ ಇದೆ.

ಬೆಲೆ ಎಷ್ಟಾಗಬಹುದು?

ಬಿಯರ್	ಈಗಿನದರ	ಪರಿಷ್ಕೃತ ದರ ಸಾಧ್ಯತೆ
ಬೂಮ್ ಸ್ಟ್ರಾಂಗ್	163	172/175
ಬಡ್ವೈಸರ್ ಪ್ರಿಮಿಯಂ	200	215
ಕೆಎಫ್ ಪ್ರಿಮಿಯಂ	168	180
ಕೆಎಫ್ ಸ್ಟ್ರೋಮ್	177	187
ಕೆಎಫ್ ಸ್ಟ್ರಾಂಗ್	168	180
ಕೆಎಫ್ ಅಲ್ಟ್ರಾ	199	220
ಟ್ಯುಬರ್ಗ್ ಸ್ಟ್ರಾಂಗ್	168	180
ಯುಬಿ ಪ್ರಿಮೀಯಂ	131	143
ಯುಬಿ ಸ್ಟ್ರಾಂಗ್	131	142

ಸಮಾಚಾರ ಸಣ್ಣದಲ್ಲ

ಕೆಂಗೇರಿ: ಅಗರ್ವಾಲ್ಸ್‌ನ ಕಣ್ಣಾಸ್ಪತ್ರೆ ಮೊದಲ ಶಾಖೆ

ಬೆಂಗಳೂರು: ಕಣ್ಣಿನ ಆರೈಕೆ ಸೇವೆಗಳನ್ನು ಒದಗಿಸುವ ಭಾರತದ ಪ್ರಮುಖ ಆಸ್ಪತ್ರೆಗಳಲ್ಲಿ ಒಂದಾಗಿರುವ ಡಾ. ಅಗರ್ವಾಲ್ಸ್ ಗ್ರೂಪ್ ಆಫ್ ಐ ಹಾಸ್ಪಿಟಲ್ ಕೆಂಗೇರಿಯಲ್ಲಿ ತನ್ನ ಮೊದಲ ಶಾಖೆಯನ್ನು ಆರಂಭಿಸಿದೆ. ಶಾಸಕ ಎಸ್‌ಟಿ ಸೋಮಶೇಖರ್, ಬೆಂಗಳೂರು ಪಶ್ಚಿಮ ವಿಭಾಗದ ಡಿಸಿಪಿ ಎಸ್ ಗಿರೀಶ್, ಎಚ್ ಸೀತಾರಾಮ ಶರ್ಮಾ, ಮಾವೆರಿಕ್ ರೋಟರಿ ಕೆಂಗೇರಿ ಉಪನಗರದ ಅಧ್ಯಕ್ಷ ವಾಸು ಪ್ರಸಾದ್, ಮಾವೆರಿಕ್ ರೋಟರಿ ಕೆಂಗೇರಿ ಉಪನಗರದ ಸಮುದಾಯ ಸೇವೆ ನಿರ್ದೇಶಕಿ ಸ್ನೇಹಾ ಸುರೇಶ್, ಡಾ. ಅಗರ್ವಾಲ್ಸ್ ಐ ಹಾಸ್ಪಿಟಲ್‌ನ ಕ್ಲಿನಿಕಲ್ ಸರ್ವೀಸಸ್‌ನ ಪ್ರಾದೇಶಿಕ ಮುಖ್ಯಸ್ಥ ಡಾ. ಶ್ರೀಪತಿ ಡಿ.ಕೆ ಅವರು ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಎಸ್.ಟಿ ಸೋಮಶೇಖರ್, ಹೊಸ ಕ್ಲಿನಿಕ್ ಅನ್ನು ಉದ್ಘಾಟನೆ ಮಾಡುತ್ತಿರುವುದು ನನಗೆ ಸಂತೋಷ ತಂದಿದೆ. ಈ ರೀತಿಯ ಸೌಲಭ್ಯಗಳು ಬೆಂಗಳೂರಿನ ಆರೋಗ್ಯಸೇವೆ ವಲಯವನ್ನು ಇನ್ನಷ್ಟು ಸುಧಾರಿಸುತ್ತದೆ. ತಮ್ಮ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಜನರಿಗೆ ಸಹಾಯ ಮಾಡುತ್ತದೆ. ಜೀವನದ ಪ್ರತಿ ಹಂತದಲ್ಲೂ ಕಣ್ಣಿನ ಆರೋಗ್ಯವು ಮುಖ್ಯವಾಗಿದೆ ಮತ್ತು ದೃಷ್ಟಿ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಆಗಾಗ್ಗೆ ತಪಾಸಣೆ ಮಾಡಿಸಿಕೊಳ್ಳುತ್ತಿರಬೇಕು ಎಂದರು.

ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ಜಲಮಂಡಳಿ ವತಿಯಿಂದ ಸೆ.19ರಂದು ಬೆಳಗ್ಗೆ 9.30ರಿಂದ 11 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ನಗರದ ವಾಯುವ್ಯ-2, ವಾಯುವ್ಯ-4, ಕೇಂದ್ರ 1-2, ಈಶಾನ್ಯ - 2, ಉತ್ತರ 1-2, ಉತ್ತರ 2-2, ದಕ್ಷಿಣ 1-2, ದಕ್ಷಿಣ 2-2, ನೈರುತ್ಯ -2, ನೈರುತ್ಯ -5, ಪೂರ್ವ 1-3 ಮತ್ತು ಪೂರ್ವ 2-3, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ಅಥವಾ ವಾಟ್ಸ್ ಅಪ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ.

ಗ್ರಾಹಕ ಸಂವಾದ ಸಭೆ

ಬೆಂಗಳೂರು: ಬೆಸ್ಕಾಂನ ವತಿಯಿಂದ ಪ್ರತಿತಿಂಗಳ ಮೂರನೇ ಶನಿವಾರದಂದು ಮಧ್ಯಾಹ್ನ 3.00 ಗಂಟೆಯಿಂದ ಸಂಜೆ 5.30ರವರೆಗೆ ಗ್ರಾಹಕ ಸಂವಾದ ಸಭೆಯನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಬೆಸ್ಕಾಂನ ಎಲ್ಲಾ ಕಾರ್ಯ ಮತ್ತು ಪಾಲನಾ ಉಪವಿಭಾಗಗಳಲ್ಲಿ ನಡೆಯುವ ಈ ಸಭೆಯಲ್ಲಿ ಗ್ರಾಹಕರು ಪಾಲ್ಗೊಂಡು ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬೆಸ್ಕಾಂನ ಅಧಿಕಾರಿಗಳೊಂದಿಗೆ ಮುಖಾಮುಖಿ ಚರ್ಚಿಸಿ ಪರಿಹರಿಸಿಕೊಳ್ಳಬಹುದು ಎಂದು ತಿಳಿಸಿದೆ.

3 ದಿನಗಳ ಕಮ್ಮಟಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಎಂಬ ಹೆಸರಿನಲ್ಲಿ ಮೂರು ದಿನಗಳ ಕಮ್ಮಟವನ್ನು ಹಾವೇರಿ ಜಿಲ್ಲೆಯ ಕರ್ನಾಟಕ ಜಾನಪದ ವಿವಿಯ ಗೊಟಗೋಡಿಯಲ್ಲಿ ಏರ್ಪಡಿಸಲಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಗಿರಿಜನ ಉಪಯೋಜನೆಯಲ್ಲಿ ಹಾವೇರಿ ಜಿಲ್ಲೆಯ ಕರ್ನಾಟಕ ಜಾನಪದ ವಿವಿಯ ಗೊಟಗೋಡಿಯಲ್ಲಿ ಅಕ್ಟೋಬರ್ ಕೊನೆಯ ವಾರದಲ್ಲಿ ನಡೆಸಲಾಗುವುದು. ಆಸಕ್ತರು 20 ರಿಂದ 45 ವರ್ಷ ವಯಸ್ಸಿನ ಪರಿಶಿಷ್ಟ ಪಂಗಡದ ರಾಜ್ಯದ ಅಭ್ಯರ್ಥಿಗಳು ಅ.8 ರೊಳಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ನಮೂನೆ ಹಾಗೂ ವಿವರಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜಾಲತಾಣ http://karnatakasahithyaacademy.org ನಿಂದ ಪಡೆದುಕೊಳ್ಳಬಹುದಾಗಿದೆ.

ನಿರ್ದೇಶಕ ಕೋಡಳ್ಳಿ ಶಿವರಾಮ್ ನಿಧನ

ಬೆಂಗಳೂರು: ಗ್ರಹಣದಂತಹ ಪ್ರಶಸ್ತಿ ವಿಜೇತ ಸಿನಿಮಾಗಳಿಗೆ ಕಥೆ ಬರೆದಿದ್ದ ಕೋಡಳ್ಳಿ ಶಿವರಾಮ್(75) ನಿಧನರಾಗಿದ್ದಾರೆ. ವಯೋಸಹಜ ಬೆಂಗಳೂ ರಿನಲ್ಲಿ ವಾಸವಾಗಿದ್ದ ಶಿವರಾಮ್ ಹೃದಯಾಘಾ ತದಿಂದ

ಕೊನೆಯುಸಿರೆಳೆದಿದ್ದಾರೆ. 1970ರಲ್ಲಿ ತೆರೆಗೆ ಬಂದ ಗ್ರಹಣ ಚಿತ್ರಕ್ಕೆ ಶಿವರಾಮ್ ಕಥೆ ಬರೆದಿದ್ದರು, ಈ ಚಿತ್ರವನ್ನು ಟಿ.ಎಸ್.ನಾಗಾಭರಣ ನಿರ್ದೇಶಿಸಿದ್ದರು. ಈ ಚಿತ್ರಕ್ಕೆ ರಾಜ್ಯ ಹಾಗೂ ಈ ರಾಷ್ಟ್ರ ಪ್ರಶಸ್ತಿಯೂ ಲಭಿಸಿತ್ತು. ಶಿವರಾಮ್ ಅವರು ಚಿತ್ರದ ಕಥೆ ಬರೆಯುವುದರ ಜತೆಗೆ ನಿರ್ಮಾಣದಲ್ಲಿಯೂ ಕೈ ಜೋಡಿಸಿದ್ದರು. ಗ್ರಹಣದ ಜತೆಗೆ ಹಲವು ಸಿನಿಮಾಗಳನ್ನು ನಿರ್ಮಿಸುವ ಮೂಲಕ ಕನ್ನಡ ಚಿತ್ರರಂಗಕ್ಕೆ ತಮ್ಮದೇ ಕೊಡುಗೆ ನೀಡಿದ್ದರು. ಕೋಡಳ್ಳಿ ಶಿವರಾಮ್ ಅವರ ನಿಧನಕ್ಕೆ ಕನ್ನಡ ಚಿತ್ರರಂಗದ ಗಣ್ಯರು ಕಂಬನಿ ಮಿಡಿದಿದ್ದಾರೆ.

ಆಗಾಗ ನಡೆಯುವ ಅನಾಹುತಗಳಿಂದ ಸಂಚಾರ ವ್ಯತ್ಯಯ | ಪಿಎಸ್‌ಡಿ ಅಳವಡಿಕೆಗೆ ಪ್ರಯಾಣಿಕರ ಆಗ್ರಹ

ಸಾಲು ಸಾಲು ಆತ್ಮಹತ್ಯೆ; ಮೆಟ್ರೋದಿಂದ ಮಾರ್ಗಸೂಚಿ ಪ್ರಕಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಪರಾಧ ಸುದ್ದಿಗಳು

ನಮ್ಮ ಮೆಟ್ರೋ ನಿಲ್ದಾಣದಲ್ಲಿ ಕಳೆದೊಂದು ವರ್ಷದಲ್ಲಿ ಸಾಲು ಸಾಲು ಆತ್ಮಹತ್ಯೆ ಪ್ರಯತ್ನ ನಡೆದಿರುವ ಬೆನ್ನಲ್ಲೇ, ಎಚ್ಚೆತ್ತಿರುವ ಬಿಎಂಆರ್‌ಸಿಎಲ್ ಮಾರ್ಗಸೂಚಿ ಬಿಡುಗಡೆಗೊಳಿಸಿ, ಮುಂಜಾಗ್ರತಾ ಕ್ರಮಕ್ಕೆ ಮುಂದಾಗಿದೆ.

ಸಂಚಾರ ದಟ್ಟಣೆಯಿಂದ ಮುಕ್ತಿ ಪಡೆಯುವ ಸಲುವಾಗಿ ಮೆಟ್ರೋದಲ್ಲಿ ಸಂಚಾರ ನಡೆಸುವ ಪ್ರಯಾಣಿಕರು ಆಗಾಗ ನಡೆಯುವ ಅನಾಹುತಗಳಿಂದಾಗಿ ಉಂಟಾಗುವ ಸಂಚಾರ ವ್ಯತ್ಯಯಗಳಿಂದಾಗಿ ಹೈರಾಣಾಗಿದ್ದಾರೆ. ಮೆಟ್ರೋದಲ್ಲಿ ಕಳೆದ ಒಂಬತ್ತು ತಿಂಗಳಲ್ಲಿ ಏಳು ಅವಾಂತರಗಳು ಸಂಭವಿಸಿದ್ದು, ಇದರಲ್ಲಿ ಮೆಟ್ರೋ ಹಳಿಗೆ ಜಿಗಿದು ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಪದೇಪದೆ ಮೆಟ್ರೋ ಹಳಿಗೆ ಪ್ರಯಾಣಿಕರು ಜಿಗಿಯುತ್ತಿರುವ ಘಟನೆಗಳು ವರದಿಯಾಗುತ್ತಿರುವುದು ತೀವ್ರ ಆತಂಕಕ್ಕೆ ಕಾರಣವಾಗಿದೆ. ಆದ್ದರಿಂದ ಇದೀಗ ಮೆಟ್ರೋ ಅಧಿಕಾರಿಗಳು ಮಾರ್ಗಸೂಚಿ ಬಿಡುಗಡೆಗೊಳಿಸಿದ್ದಾರೆ.

ಪಿಎಸ್‌ಡಿ ಅಳವಡಿಕೆಗೆ ಪ್ರಯಾಣಿಕರ ಆಗ್ರಹ

ಈಗಾಗಲೇ ದೆಹಲಿ, ಚೆನ್ನೈ, ಕೊಚ್ಚಿ ಮೆಟ್ರೋದಲ್ಲಿ ಪಿಎಸ್‌ಡಿ ಅಳವಡಿಕೆ ಮಾಡಲಾಗಿದ್ದು, ನಮ್ಮ ಮೆಟ್ರೋದಲ್ಲಿ ಪಿಎಸ್‌ಡಿಯ ಅಳವಡಿಕೆಯಾಗಿಲ್ಲ. ನಮ್ಮ ಮೆಟ್ರೋ ನಿಲ್ದಾಣದಲ್ಲಿ ಟ್ರ್ಯಾಕ್‌ಗೆ ಯಾವುದೇ ಹೆಚ್ಚುವರಿ ಭದ್ರತೆ ಇಲ್ಲದೆ ಇರುವುದರಿಂದ ಅನಾಹುತಗಳುಂಟಾಗುತ್ತಿದ್ದು, ಈ ಡೋರ್ ಅಳವಡಿಸುವುದರಿಂದ ಮೆಟ್ರೋನ ಹಳಿಗೆ ಪ್ರಯಾಣಿಕರು ಜಿಗಿಯುವುದನ್ನು ತಡೆಯಬಹುದಾಗಿದೆ. ಮೆಟ್ರೋ ರೈಲು ನಿಲ್ದಾಣಕ್ಕೆ ಬಂದಾಗ ಮಾತ್ರ ಈ ಡೋರ್ ತೆರೆದುಕೊಳ್ಳುವುದರಿಂದ ಪ್ರಯಾಣಿಕರು ಹಳಿಗೆ ಹಾರುವುದನ್ನು ತಡೆಯಬಹುದಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಈಗಾಗಲೇ ಚಾಲನೆಯಲ್ಲಿರುವ ಮೆಟ್ರೋ ಮಾರ್ಗಗಳಿಗೆ ಪಿಎಸ್‌ಡಿಯನ್ನು ಅಳವಡಿಸಲು 500ಕೋಟಿಗೂ ಅಧಿಕ ಮೊತ್ತ ಬೇಕಾಗುವುದರಿಂದ ಹಾಗಾಗಿ ಭದ್ರತೆಯನ್ನು ಹೆಚ್ಚಿಸಿಕೊಳ್ಳಲು ಬೇರೆ ವಿಧಾನಗಳನ್ನು ಅಳವಡಿಸಿಕೊಳ್ಳಲು ಮೆಟ್ರೋ ಮುಂದಾಗಿದೆ. ಆದರೆ ಹೊಸದಾಗಿ ಆರಂಭವಾಗಲಿರುವ ಮೆಟ್ರೋ ಮಾರ್ಗಗಳಲ್ಲಿ ಪಿಎಸ್‌ಡಿ ಅಳವಡಿಸಲು ಮೆಟ್ರೋ ಅಧಿಕಾರಿಗಳು ಮುಂದಾಗಿದ್ದು, ಈಗಾಗಲೇ ಹಲವು ನಿಲ್ದಾಣಗಳಲ್ಲಿ ಪಿಎಸ್‌ಡಿಗಳ ಅಳವಡಿಕೆ ಕಾರ್ಯವು ಆರಂಭವಾಗಿದೆ.

ಮೆಟ್ರೋದಿಂದ ಬಿಡುಗಡೆಯಾಗಿರುವ ಮಾರ್ಗಸೂಚಿ

- ವೇಗದ ಮಿತಿ 100 ಮೀಟರ್ ಅಥವಾ 200 ಮೀಟರ್ ದೂರದಿಂದಲೇ ಕಡಿಮೆಯಿರಬೇಕು
- ಪ್ರಯಾಣಿಕರು ಮೆಟ್ರೋ ಹತ್ತಿರುವುದನ್ನು ಗಮನಿಸಿದ ಬಳಿಕ ಮೆಟ್ರೋ ಚಾಲನೆಯನ್ನು ಮಾಡಬೇಕು
- ಪೀಕ್ ಅವರ್‌ನಲ್ಲಿ ಮೆಟ್ರೋ ಕಂಟ್ರೋಲ್ ಬಗ್ಗೆ ನಿಗಾ ವಹಿಸಬೇಕು
- ಮೆಟ್ರೋ ನಿಲ್ದಾಣದ ಸಮೀಪ ವೇಗದ ಮಿತಿ ಕಡಿಮೆ ಮಾಡಬೇಕು
- ಆತ್ಮಹತ್ಯೆ ಯತ್ನ ಕಂಡು ಬಂದಲ್ಲಿ ಮೆಟ್ರೋ ಸಂಚಾರ ಸ್ಥಗಿತಗೊಳಿಸಬೇಕು

ನಮ್ಮ ಮೆಟ್ರೋದಲ್ಲಿ ನಡೆದ ಅವಘಡಗಳು

- **1 ಜನವರಿ 2024**
ವರ್ಷದ ಆರಂಭದಂದೇ ಇಂದಿರಾ ನಗರದ ಮೆಟ್ರೋ ನಿಲ್ದಾಣದಲ್ಲಿ ಮಹಿಳೆಯೊಬ್ಬರು ಹಳಿಗೆ ಹಾರಿದ ಹಿನ್ನೆಲೆ 15 ನಿಮಿಷಗಳ ಕಾಲ ಸಂಚಾರ ವ್ಯತ್ಯಯವಾಗಿತ್ತು. ಮೆಟ್ರೋಗಾಗಿ ಕಾದು ನಿಂತಿದ್ದ ಮಹಿಳೆಯೊಬ್ಬರ ಮೊಬೈಲ್ ಮೆಟ್ರೋ ಹಳಿಗೆ ಬಿದ್ದ ಹಿನ್ನಲೆ ಮೊಬೈಲ್ ಎತ್ತಿಕೊಳ್ಳುವ ಸಲುವಾಗಿ ಮಹಿಳೆ ಹಳಿಗೆ ಜಿಗಿದಿದ್ದರು. ಆಗ ಅಲ್ಲೇ ನಿಂತಿದ್ದ ಮೆಟ್ರೋ ಸಿಬ್ಬಂದಿ ತಕ್ಷಣವೇ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಿ, ದುರಂತ ತಪ್ಪಿಸಿದ್ದರು.
- **5 ಜನವರಿ 2024**
ಕೇರಳ ಮೂಲದ 23 ವರ್ಷದ ಯುವಕ ಶ್ಯಾರೋನ್ ಮೆಟ್ರೋನ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದು, ಶೇ.90ರಷ್ಟು ಸುಟ್ಟ ಗಾಯಗಳಾಗಿದ್ದವು. ಸ್ನೇಹಿತನ ಜತೆ ಜಾಲಹಳ್ಳಿ ಮೆಟ್ರೋ ನಿಲ್ದಾಣಕ್ಕೆ ಬಂದಿದ್ದ ಶ್ಯಾರೊನ್ ಮೆಜೆಸ್ಟಿಕ್‌ಗೆ ಹೋಗಲು ಟಿಕೆಟ್ ಪಡೆದುಕೊಂಡಿದ್ದ. ರೈಲು ಬಂದಾಗ ಏಕಾಏಕಿ ಹಳಿಗೆ ಜಿಗಿದ ಶ್ಯಾರೊನ್‌ಗೆ ಮೆಟ್ರೋ ಟ್ರೈನ್ ಡಿಕ್ಕಿ ಹೊಡೆದಿದ್ದು, ಹಸಿರು ಮಾರ್ಗದಲ್ಲಿ ಕೆಲಕಾಲ ಸಂಚಾರ ಸ್ಥಗಿತವಾಗಿತ್ತು.
- **6 ಜನವರಿ 2024**
ಮೆಟ್ರೋ ಹಳಿಯಲ್ಲಿ ಕಪ್ಪು ಬಣ್ಣದ ಬೆಕ್ಕು ಕಾಣಿಸಿಕೊಂಡಿದ್ದು, ಪ್ರಯಾಣಿಕರು ಆತಂಕಗೊಂಡ ಘಟನೆ ಜೆ.ಪಿ.ನಗರ ಮೆಟ್ರೋ ನಿಲ್ದಾಣದಲ್ಲಿ ಸಂಭವಿಸಿತ್ತು. ಕೂಡಲೇ ಪ್ರಯಾಣಿಕರು ಸಿಬ್ಬಂದಿ ಗಮನಕ್ಕೆ ತಂದಿದ್ದರು. ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಹಳಿಯಲ್ಲಿದ್ದ ಬೆಕ್ಕನ್ನು ಓಡಿಸಲಾಗಿತ್ತು.
- **12 ಮಾರ್ಚ್ 2024**
ಜ್ಞಾನಭಾರತಿ ಮೆಟ್ರೋ ಸ್ಟೇಷನ್‌ನಿಂದ ಪಟ್ಟಣಗೆರೆ ಮೆಟ್ರೋ ಸ್ಟೇಷನ್ ನಡುವಿನ ಮೆಟ್ರೋ ಹಳಿಯ ಮೇಲಿನ ವಯಾಡಕ್ಟ್‌ನಲ್ಲಿ ವ್ಯಕ್ತಿಯೊಬ್ಬನ ಚಲನವಲನ ಕಂಡು ಬಂದಿತ್ತು. ಹಲವು ಮೆಟ್ರೋ ರೈಲುಗಳ ಸಂಚಾರವನ್ನೇ ಸ್ಥಗಿತಗೊಳಿಸುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರಿಂದ ಸಾವಿರಾರು ಜನ ಪರದಾಡಿದ ಘಟನೆ ನಡೆದಿತ್ತು.
- **21 ಮಾರ್ಚ್ 2024**
ಅತ್ತಿಗುಪ್ಪೆ ಮೆಟ್ರೋ ಸ್ಟೇಷನ್‌ನಲ್ಲಿ ಧ್ರುವ್ ಟಕ್ಕರ್ ಎನ್ನುವ 19 ವರ್ಷದ ಯುವಕ ಹಳಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದ. ನ್ಯಾಷನಲ್ ಲಾ ಕಾಲೇಜಿನಲ್ಲಿ ಮೊದಲನೇ ವರ್ಷ ವ್ಯಾಸಂಗ ಮಾಡುತ್ತಿದ್ದ ಆತ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಎನ್ನುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿತ್ತು. ಈ ಘಟನೆಗೆ ಸಂಬಂಧಿಸಿದಂತೆ ಚಂದ್ರಲೇಔಟ್ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲು ಮಾಡಲಾಗಿತ್ತು.
- **3 ಆಗಸ್ಟ್ 2024**
ದೊಡ್ಡಕಲ್ಲಸಂದ್ರ ಮೆಟ್ರೋ ಸ್ಟೇಷನ್‌ನಲ್ಲಿ 35 ವರ್ಷದ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದ. ರೈಲು ಬರುತ್ತಿದ್ದಂತೆಯೇ ಹಳಿಗೆ ಜಿಗಿದಿದ್ದ. ಹಸಿರು ಮಾರ್ಗದ ನಾಗಸಂದ್ರ ಟು ಸಿಲ್ಕ್ ಇನ್‌ಸ್ಟಿಟ್ಯೂಟ್ ಮಾರ್ಗದಲ್ಲಿ ಘಟನೆ ಸಂಭವಿಸಿತ್ತು.
- **17 ಸೆಪ್ಟೆಂಬರ್ 2024**
ಜ್ಞಾನಭಾರತಿ ಮೆಟ್ರೋ ಸ್ಟೇಷನ್‌ನಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಯುವಕ ಟ್ರ್ಯಾಕ್‌ಗೆ ಜಿಗಿದಿದ್ದ. ನೇರಳೆ ಮಾರ್ಗದ ವೈಟ್ ಫೀಲ್ಡ್ ಟು ಚಲ್ಲಘಟ್ಟ ಮಾರ್ಗದಲ್ಲಿ ಘಟನೆ ಸಂಭವಿಸಿತ್ತು. ಯುವಕ ಹಳಿಗೆ ಹಾರಿದ ಬೆನ್ನಲ್ಲೇ ಮೆಟ್ರೋ ಸೆಕ್ಯುರಿಟಿ ಗಾರ್ಡ್ ರಶ್ಮಿ ಇಪಿಎಸ್ ಬಟನ್ ಆಫ್ ಮಾಡಿ ಸಿದ್ದಾರ್ಥ ಜೈನ್ ಪ್ರಾಣ ಉಳಿಸಿದ್ದಾರೆ. ಸಿದ್ದಾರ್ಥ ಜೈನ್ ಬಿಹಾರ ಮೂಲದವನಾಗಿದ್ದು ಕೆಂಗೇರಿಯಲ್ಲಿ ಕುಟುಂಬದ ಜತೆಗೆ ವಾಸವಾಗಿದ್ದ. ಎಸ್‌ಪಿ ರೋಡ್ ಮೊಬೈಲ್ ಶಾಪ್‌ನಲ್ಲಿ ಸೇಲ್ಸ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ. ಬ್ಯಾಂಕ್‌ನಲ್ಲಿ ಮಾಡಿದ್ದ ಮೂರು ಲಕ್ಷ ರುಪಾಯಿ ಸಾಲಕ್ಕಾಗಿ ಆತ್ಮಹತ್ಯೆಗೆ ಯತ್ನಿಸಿದ್ದಾನೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಸದ್ಯ ಜ್ಞಾನಭಾರತಿ ಸ್ಟೇಷನ್ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ಮಾಡುತ್ತಿದ್ದಾರೆ.

ಸಾಧಕ, ಸಾಧಕಿ ಎಂಜಿನಿಯರ್‌ಗಳಿಗೆ ಸರ್.ಎಂವಿ ಪ್ರಶಸ್ತಿ

ಬೆಂಗಳೂರು: ಬಿಬಿಎಂಪಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಂಜಿನಿಯರ್‌ಗಳು ಕಠಿಣ ಪರಿಸ್ಥಿತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನೌಕರರ ಭವನದ ಬಸವ ಸಭಾಂಗಣದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಜಯಂತಿ ಪ್ರಯುಕ್ತ ಎಂಜಿನಿಯರ್ ದಿನಾಚರಣೆ ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಭಿಯಂತರರು ಕಠಿಣ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸಿ ಅವಿರತ ಸೇವೆ ಸಲ್ಲಿಸುತ್ತಿದ್ದು, ದೇಶ ಕಟ್ಟಲು ಅಭಿಯಂತರರು ಸಾಕಷ್ಟು ಶ್ರಮಿಸುತ್ತಿದ್ದಾರೆ. ಆಡಳಿತದ ಜತೆ ಎಂಜಿನಿಯರ್ ಗಳು ಕೈ ಜೋಡಿಸಿದರೆ ಉತ್ತಮ ನಾಡು ಕಟ್ಟಲು ಸಾಧ್ಯವಾಗುತ್ತದೆ. ಸರ್.ಎಂ ವಿಶ್ವೇಶ್ವರಯ್ಯ ರವರು ವಿವಿಧ ರಾಜ್ಯಗಳಲ್ಲಿ ಕಾರ್ಯನಿರ್ವಹಿಸಿದ್ದು, ಅವರ ಸಾಕಷ್ಟು ಕೆಲಸಗಳು ಇಂದಿಗೂ ಶಾಶ್ವತವಾಗಿ ಉಳಿದಿವೆ. ರಾಜ್ಯವನ್ನು ಶ್ರೀಮಂತಗೊಳಿಸಲು ರಾಜರು ಹಾಗೂ ವಿಶ್ವೇಶ್ವರಯ್ಯ ರವರು ನೀಡಿರುವ ಕೊಡುಗೆ ಅಪಾರವಾದದ್ದು ಎಂದರು.

ಸರ್. ಎಂ.ವಿಶ್ವೇಶ್ವರಯ್ಯರವರ ಸ್ಮರಣೆಯ ಅಂಗವಾಗಿ ಸಾಧಕ ಎಂಜಿನಿಯರ್‌ಗಳಿಗೆ ಸನ್ಮಾನ ಮಾಡಲಾಗಿದೆ. ಎಂಜಿನಿಯರ್‌ಗಳ ಜತೆಗೆ ಪೌರಕಾರ್ಮಿಕರು, ವೈದ್ಯರು ಸೇರಿದಂತೆ ಇನ್ನಿತರೆ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲರನ್ನು ನಾವು ಸ್ಮರಿಸಬೇಕು. ಎಲ್ಲಾ ವಲಯಗಳು ಒಟ್ಟುಗೂಡಿ ಕೆಲಸ ಮಾಡಿದರೆ ಮಾತ್ರ ಹೆಚ್ಚು ಅಭಿವೃದ್ಧಿಯಾಗಲು ಸಾಧ್ಯ ಎಂದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಅಮೃತ್ ರಾಜ್ ಹಾಗೂ ಪದಾಧಿಕಾರಿಗಳ ನೇತೃತ್ವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸರ್.ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ ಪಡೆದವರ ವಿವರ

- ಸುಗುಣ, ಮುಖ್ಯ ಅಭಿಯಂತರರು(ಪೂರ್ವ ವಲಯ)
- ಬಸವರಾಜ್ ಆರ್. ಕಬಾಡೆ, ಮುಖ್ಯ ಪ್ರಧಾನ ವ್ಯವಸ್ಥಾಪಕರು(ಬಿ.ಎಸ್.ಡಬ್ಲ್ಯೂ.ಎಂ.ಎಲ್)
- ಎಚ್.ಎಸ್. ಮಹದೇಶ್, ಅಧೀಕ್ಷಕ ಅಭಿಯಂತರರು.
- ರೂಪೇಶ್, ಕಾರ್ಯಪಾಲಕ ಅಭಿಯಂತರರು.
- ಮುನಿರೆಡ್ಡಿ, ಕಾರ್ಯಪಾಲಕ ಅಭಿಯಂತರರು.
- ಎಲ್ ವೆಂಕಟೇಶ್, ಕಾರ್ಯಪಾಲಕ ಅಭಿಯಂತರರು(ಕೆರೆಗಳು)
- ರಾಮಚಂದ್ರಪ್ಪ ಎಚ್.ಎಸ್., ಕಾರ್ಯಪಾಲಕ ಅಭಿಯಂತರರು(ಜೆಡಿಟಿಪಿ, ದಕ್ಷಿಣ ವಲಯ)
- ರಾಜಣ್ಣ, ಕಾರ್ಯಪಾಲಕ ಅಭಿಯಂತರರು(ಟಿವಿಸಿಸಿ)
- ಬಿ. ಶರತ್, ಕಾರ್ಯಪಾಲಕ ಅಭಿಯಂತರರು(ಎಂಪಿಇಡಿ)
- ಬಿ.ಎನ್.ಪ್ರದೀಪ್, ಕಾರ್ಯಪಾಲಕ ಅಭಿಯಂತರರು.
- ಆಶಾ, ಕಾರ್ಯಪಾಲಕ ಅಭಿಯಂತರರು.
- ಚಂದ್ರಶೇಖರ್ ನಾಯಕ್, ಸಹಾಯಕ ಅಭಿಯಂತರರು(ಟಿಡಿಆರ್)

ಆದೇಶ ಹೊರಡಿಸಲು ಸಿದ್ದರಾಮಯ್ಯ ಸೂಚನೆ

ಗೃಹಕಚೇರಿ ಕೃಷ್ಣಾದಲ್ಲಿ ನಡೆದ ಸಭೆ

ಫಿಲ್ಮ್ ಸಿಟಿಗೆ ಕೆಐಎಡಿಬಿ ಭೂಮಿ

ಬೆಂಗಳೂರು: ಮೈಸೂರು ಜಿಲ್ಲೆಯ ಹಿಮ್ಮಾವು ಗ್ರಾಮದಲ್ಲಿ ಚಿತ್ರನಗರಿ ನಿರ್ಮಾಣಕ್ಕೆ ಗುರುತಿಸಲಾಗಿರುವ 110 ಎಕರೆ ಕೆಐಎಡಿಬಿ

ಭೂಮಿ ಹಸ್ತಾಂತರಿಸಿ ಆದೇಶ ಹೊರಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ, ಈಗಾಗಲೇ ಗುರುತಿಸಲಾಗಿರುವ 110 ಎಕರೆ ಕೆಐಎಡಿಬಿ ಭೂಮಿ ಹಸ್ತಾಂತರಿಸಿ ಆದೇಶ ಹೊರಡಿಸಬೇಕು. ಇದರೊಂದಿಗೆ ಹೆಚ್ಚುವರಿಯಾಗಿ ಎರಡನೇ ಹಂತದ ವಿಸ್ತರಣೆಗೆ 50 ಎಕರೆ ಗುರುತಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಮೊದಲ ಹಂತದ ಯೋಜನೆಯನ್ನು ಕೂಡಲೇ ಪ್ರಾರಂಭಿಸಬೇಕು. 2015-16ರಲ್ಲಿ ಆಯವ್ಯಯದಲ್ಲಿ ಇದರ ಘೋಷಣೆ ಮಾಡಲಾಗಿತ್ತು. ಆದರೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಟ್ರಾನ್ಸಾಕ್ಷನ್ ಅಡ್ವೈಸರ್ ನೇಮಕ ಮಾಡಲು ಟೆಂಡರ್ ಕರೆಯುವಂತೆ ಸೂಚನೆ ನೀಡಿದರು. ಸಭೆಯಲ್ಲಿ ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್ ಸೇರಿ ಹಲವರಿದ್ದರು.

ಅತ್ಯಾಧುನಿಕ ಚಿತ್ರನಗರಿ ನಿರ್ಮಿಸಬೇಕು

ಭೂಮಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಹಸ್ತಾಂತರ ಮಾಡಿದ ನಂತರ ಪಿಪಿಪಿ ಮಾದರಿಯಲ್ಲಿ ಕ್ರಮ ಕೈಗೊಳ್ಳಬೇಕು. ಇಂದಿನ ಚಿತ್ರರಂಗಕ್ಕೆ ಅಗತ್ಯವಿರುವ ತಂತ್ರಜ್ಞಾನಗಳನ್ನೊಳಗೊಂಡ ಅತ್ಯಾಧುನಿಕ ಮಾದರಿಯ ಚಿತ್ರನಗರಿ ನಿರ್ಮಿಸಬೇಕು. ಚಿತ್ರನಗರಿಯಲ್ಲಿ ಥಿಯೇಟರ್, ಸ್ಟುಡಿಯೋ, ಮಲ್ಟಿಪ್ಲೆಕ್ಸ್, ಥೀಮ್ ಪಾರ್ಕ್, ಹೋಟೆಲ್‌ಗಳನ್ನು ನಿರ್ಮಾಣ ಮಾಡಬೇಕು. ಟ್ರಾನ್ಸಾಕ್ಷನ್ ಅಡ್ವೈಸರ್ ನೇಮಕವಾದ ನಂತರ ಚಿತ್ರರಂಗದ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ, ಚಿತ್ರನಗರಿಯ ರೂಪುರೇಷೆಗಳನ್ನು ಅಂತಿಮಗೊಳಿಸಿ ಎಂದು ಸಿಎಂ ಸೂಚನೆ ನೀಡಿದರು.

ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ ಟೀಕೆ

ತೆರಿಗೆ ಭಾರಕ್ಕೆ ಸಚಿವರೇ ಸುಸ್ತು

ಬೆಂಗಳೂರು: ಬೆಂಗಳೂರಿನಲ್ಲಿ ತೆರಿಗೆ ತೀವ್ರ ಹೆಚ್ಚಳಕ್ಕೆ ಸಚಿವರೇ ಕೋರ್ಟಿನ ಮೊರೆ ಹೋಗಿರುವುದು ಸ್ಪಷ್ಟ ಕನ್ನಡಿಯಂತಿದೆ ಎಂದು ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ ಅವರು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರ ಆಡಳಿತಕ್ಕೆ ಬಂದ ದಿನದಿಂದ ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆ ಹಾಕುತ್ತಿದೆ. ಇದರ ವಿರುದ್ಧ ನಮ್ಮ ಪಕ್ಷದ ಮೂಲಕ ಬಹುತೇಕ ದಿನನಿತ್ಯ ಪ್ರತಿಭಟನೆ, ಹೋರಾಟ ಮಾಡಿ ಜನಜಾಗೃತಿ ಮಾಡುತ್ತಿದ್ದೇವೆ. ತೆರಿಗೆ ಏರಿಕೆಗೆ ಕನ್ನಡಿ ಹಿಡಿದಂತೆ ರಾಜ್ಯದ ಆರೋಗ್ಯ ಸಚಿವ ಮತ್ತು ಅವರ ಪತ್ನಿ ಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಅವರ ಕಟ್ಟಡಕ್ಕೆ ನಕ್ಷೆ ಬದಲಾಯಿಸಲು ಬಿಬಿಎಂಪಿಗೆ ಮೊರೆ ಹೋಗಿದ್ದಾರೆ. ಬಿಬಿಎಂಪಿಯವರು ಈ ಸೆಸ್ ಕಟ್ಟಬೇಕು, ಈ ತೆರಿಗೆ ಕಟ್ಟಬೇಕೆಂದು ಸುಮಾರು 45ರಿಂದ 50 ಲಕ್ಷಗಳಷ್ಟು ತೆರಿಗೆ ಕಟ್ಟಲು ನೋಟಿಸ್ ಜಾರಿ ಮಾಡಿದ ಹಿನ್ನಲೆಯಲ್ಲಿ ಅವರು ನ್ಯಾಯಾಲಯದ ಮೊರೆ ಹೋಗಿದ್ದಾರೆ ಎಂದು ವ್ಯಂಗ್ಯವಾಡಿದರು.

ಆರೋಗ್ಯ ಸಚಿವರಿಗೇ ಹೀಗಾದರೆ ಜನಸಾಮಾನ್ಯರ ಪರಿಸ್ಥಿತಿ ಏನು? ಉಪ ಮುಖ್ಯಮಂತ್ರಿಗಳು ಬ್ರ್ಯಾಂಡ್ ಬೆಂಗಳೂರು ನಿರ್ಮಾಣಕ್ಕೆ ಹೊರಟಿದ್ದು, ಅದರ ಹಿನ್ನಲೆಯಲ್ಲಿ ಪದೇಪದೆ ತೆರಿಗೆ ಹೆಚ್ಚಳ ನಡೆದಿದೆ. ರಸ್ತೆಗಳ ಗುಂಡಿ ಮುಚ್ಚಲಾಗದ ದುಸ್ಥಿತಿಯಿದೆ. ರಸ್ತೆಹೊಂಡ ಮುಚ್ಚುವ ಗಡುವು ಮುಂದೆ ಹೋಗುತ್ತಿದೆಯೇ ಹೊರತು ಕೆಲಸ ಆಗುತ್ತಿಲ್ಲ ಎಂದು ಟೀಕಿಸಿದರು.

ರಸ್ತೆ ಎಲ್ಲಿದೆ ಎಂದು ಹುಡುಕಾಟ

ಗಾಂಧಿನಗರದ ಚಿಕ್ಕಪೇಟೆ, ಬಳೆಪೇಟೆ ಮೊದಲಾದ ಕಡೆಗಳಲ್ಲಿ ರಸ್ತೆ ಎಲ್ಲಿದೆ ಎಂದು ಹುಡುಕಬೇಕಾಗಿದೆ. ಇವರು ಯಾವುದೋ ಮುಖ್ಯ ರಸ್ತೆಯ ಗುಂಡಿಗಳನ್ನಷ್ಟೇ ಮುಚ್ಚಿ ಗುಂಡಿಮುಕ್ತ ಎಂದಿದ್ದಾರೆ. ಆದರೆ, ನಗರವು ಗುಂಡಿಮುಕ್ತ ಆಗಿಲ್ಲ. ಸಣ್ಣ ಸಣ್ಣ ರಸ್ತೆಗಳು ಹದಗೆಟ್ಟ ಸ್ಥಿತಿಯಲ್ಲಿವೆ. ಯಾವುದೇ ಅಧಿಕಾರಿಗಳು ಸಿಗುತ್ತಿಲ್ಲ. ಇವರು ಮಹಾನಗರ ಪಾಲಿಕೆ ಚುನಾವಣೆ ನಡೆಸಿದ್ದರೆ ಜನಸಾಮಾನ್ಯರು ಕಾರ್ಪೊರೇಟರ್ ಬಳಿಗೆ ಹೋಗಿ ಅಧಿಕಾರಿಗಳ ಬಳಿ ಹೋಗಲು ಅವಕಾಶವಿತ್ತು. ಸಾಮಾನ್ಯ ಜನರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ ಎಂದು ಆರೋಪಿಸಿದರು.

ಪ್ರಾದೇಶಿಕ ಪಕ್ಷಗಳು ಬೆಳೆಯುತ್ತಿರುವುದನ್ನು ತಡೆಯಲು ಬಿಜೆಪಿಯ ಹುನ್ನಾರ

ಒಂದು ರಾಷ್ಟ್ರ, ಒಂದು ಚುನಾವಣೆ ಹಾಸ್ಯಾಸ್ಪದ

ಬೆಂಗಳೂರು: ನಮ್ಮ ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ರಾಷ್ಟ್ರ, ಒಂದು ಚುನಾವಣೆ ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. ಆಪರೇಷನ್

ಕಮಲಕ್ಕೆ ಮೂಲದಾತರುಗಳಾದ ಬಿಜೆಪಿಯವರೇ ಒಂದು ರಾಷ್ಟ್ರ, ಒಂದು ಚುನಾವಣೆ ಎಂದು ಹೇಳುತ್ತಿರುವುದು ಹಾಸ್ಯಾಸ್ಪದ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅನೇಕ ರಾಜ್ಯಗಳಲ್ಲಿ ಸರಕಾರಗಳನ್ನು ಅಸ್ಥಿರಗೊಳಿಸಲು ಬಿಜೆಪಿಯವರು ಮುಂದಾಗಿದ್ದಾರೆ. ಪ್ರಾದೇಶಿಕ ಪಕ್ಷಗಳು ಬೆಳೆಯುತ್ತಿರುವುದನ್ನು ತಡೆಯುವುದು ಬಿಜೆಪಿಯ ಹುನ್ನಾರ. ದೇಶದಲ್ಲಿ ಎಲ್ಲಾ ಪಕ್ಷಗಳಿಗೂ ಅವಕಾಶ ಸಿಗಬೇಕು. ಈ ಹಿಂದೆಯೂ ಒಂದು ರಾಷ್ಟ್ರ ಒಂದು ಚುನಾವಣೆ ವ್ಯವಸ್ಥೆ ನಮ್ಮಲ್ಲಿತ್ತು. ನಮ್ಮ ರಾಜ್ಯದಲ್ಲಿಯೂ ಒಟ್ಟಿಗೆ ಚುನಾವಣೆ ಮಾಡಲಾಯಿತು. ಆನಂತರ ಸಾಧ್ಯವಾಯಿಯೇ? ಆಗಲಿಲ್ಲ. ಏಕೆಂದರೆ ಒಂದಷ್ಟು ಸರಕಾರಗಳು ಕ್ಯಾಬಿನೆಟ್ ಅಲ್ಲಿ ಆರು ಹಾಗೂ ಮೂರು ತಿಂಗಳು ಮುಂಚಿತವಾಗಿ ಚುನಾವಣೆಗೆ ಹೋಗುತ್ತೇವೆ ಎಂದರು. ಒಂದಷ್ಟು ರಾಜ್ಯಗಳಲ್ಲಿ ಸರಕಾರಗಳೇ ವಿಸರ್ಜನೆಗೊಂಡವು. ಹೀಗಿರುವಾಗ ಈ ವ್ಯವಸ್ಥೆಯನ್ನು ಜಾರಿಗೆ ತರಲು ಹೇಗೆ ಸಾಧ್ಯ? ಎಂದರು.

ಬಿಜೆಪಿ ಈ ಪ್ರಯತ್ನ ಮಾಡುತ್ತಿರುವುದು ಸರಿಯಿಲ್ಲ. ಅಲ್ಲದೇ ಮೂರನೇ ಒಂದರಷ್ಟು ಬಹುಮತ ಅವರಿಗಿಲ್ಲ. ಹೀಗಿರುವಾಗ ಕೇಂದ್ರ ಸರಕಾರ ಸರ್ವಪಕ್ಷ ಸಭೆ ಕರೆದು ಒಮ್ಮತದ ಅಭಿಪ್ರಾಯ ಕೇಳಲಿ. ಇದರ ಹೊರತು ಇಂತಹ ಪ್ರಸ್ತಾವನೆಗಳು ವ್ಯರ್ಥ. ಮೊದಲು ಮಹಿಳಾ ಮೀಸಲಿನ ಬಗ್ಗೆ ಕ್ರಮ ತೆಗೆದುಕೊಳ್ಳಲಿ. ಕ್ಷೇತ್ರ ವಿಂಗಡಣೆಗೆ ಕ್ರಮ ತೆಗೆದುಕೊಳ್ಳಲಿ. ಒಂದು ಚುನಾವಣೆ ವಿಚಾರವಾಗಿ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭಾ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಅರ್ಥಪೂರ್ಣವಾದ ಮಾತಿಗೆ ನಮ್ಮ ಒಮ್ಮತದ ಒಪ್ಪಿಗೆಯಿದೆ ಎಂದರು.

ದೇವೇಗೌಡರೇ ಒಕ್ಕಲಿಗರ ಸರ್ವೋಚ್ಚ ನಾಯಕರು

ದೇವೇಗೌಡರೇ ಒಕ್ಕಲಿಗರ ಸರ್ವೋಚ್ಚ ನಾಯಕ ಎನ್ನುವ ಹೇಳಿಕೆ ಬಗ್ಗೆ ಕೇಳಿದಾಗ ದೇಶದ ಪ್ರಧಾನಿಗಳಾಗಿದ್ದ ದೇವೇಗೌಡರನ್ನು ಸರ್ವೋಚ್ಚ ನಾಯಕರಲ್ಲ ಎಂದು ನಾವು ಹೇಳಿಲ್ಲ. ಅವರನ್ನು ನಾವು ನಾಯಕರಲ್ಲ ಎಂದು ಹೇಳಲು ಸಾಧ್ಯವೇ? ದೇವೇಗೌಡರನ್ನು ದೇಶದ ಪ್ರಧಾನಿಗಳನ್ನಾಗಿ ಮಾಡಿದ್ದೇ ಕಾಂಗ್ರೆಸ್ ಪಕ್ಷ. ಬಿಜೆಪಿ ಅವರಿಗೆ ಸ್ಥಾನ ನೀಡಿಲ್ಲ. ರಾಜ್ಯದಲ್ಲಿ ಬಿಜೆಪಿಗೆ ಅಧಿಕಾರ ನೀಡದೇ ಇದ್ದಾಗ ಯಡಿಯೂರಪ್ಪ ಅವರು, ಆರ್. ಅಶೋಕ ಅವರು ಏನೇನು ಮಾತನಾಡಿದ್ದರು? ಸುಮ್ಮನೆ ಸಮಯಕ್ಕೆ ತಕ್ಕಂತೆ ಮಾತನಾಡುವುದಲ್ಲ ಎಂದರು.

{ ಡಿ.ಕೆ.ಸುರೇಶ್ } ಮಾಜಿ ಸಂಸದ

ನುಡಿದಂತೆ ಕಾಂಗ್ರೆಸ್ ಪಕ್ಷ ನಡೆದಿದೆ. ಚುನಾವಣೆಯಲ್ಲಿ ಗೆಲುವು ಸೋಲು ಸಹಜ. ನಮ್ಮ ಕಾರ್ಯಕ್ರಮವನ್ನು ಬಿಡಲ್ಲ. ನಾವು ಸೋತು ಮನೆಯಲ್ಲಿ ಕುಳಿತಿಲ್ಲ. ಜನರ ಕಷ್ಟದಲ್ಲಿ ಭಾಗಿಯಾಗಿದ್ದೇವೆ. ಕಾಂಗ್ರೆಸ್ ಸರಕಾರದ ಜನರ ಪರ ಇದೆ. ತಾಕತ್ತಿದ್ದರೆ ಬಿಜೆಪಿಯವರು ಗ್ಯಾರಂಟಿ ಕಿತ್ತು ಹಾಕಲಿ. ಅಭಿವೃದ್ಧಿ ಕುಂಠಿತವಾಗಿಲ್ಲ. ಬಾಕಿ ಇದ್ದ ಹಳೆ ಕೆಲಸಗಳೆಲ್ಲವೂ ನಡೆಯುತ್ತಿದೆ.

ಬಿಎಂಟಿಸಿಯಿಂದ ಸಾವಿರ ಎಲೆಕ್ಟ್ರಿಕ್ ಬಸ್ ಸಂಚಾರ

ಬೆಂಗಳೂರು: ವಾಯುಮಾಲಿನ್ಯವನ್ನು ತಗ್ಗಿಸುವ ನಿಟ್ಟಿನಲ್ಲಿ ಹಾಗೂ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಪರಿಸರ ಸ್ನೇಹಿ ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆಗೆ ಒತ್ತು ನೀಡಿದೆ. ಪ್ರಸ್ತುತ ಬಿಎಂಟಿಸಿಯು ಪ್ರತಿದಿನ 11.73 ಲಕ್ಷ ಕಿ.ಮೀನಲ್ಲಿ 5725 ಬಸ್

ಗಳ ಕಾರ್ಯಾಚರಣೆ ನಡೆಸುತ್ತಿದ್ದು, ಪ್ರತಿದಿನ 40.00 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿ 9 ಮೀ. ಉದ್ದದ 90 ಹವಾನಿಯಂತ್ರಣ ರಹಿತ ಎಲೆಕ್ಟ್ರಿಕ್ ಬಸ್ಸುಗಳನ್ನು ಮೆಟ್ರೋ-ಫೀಡರ್ ಸೇವೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಫೇಮ್-ಐಐ ಯೋಜನೆಯಲ್ಲಿ 12 ಮೀ.ಉದ್ದದ 300 ಹವಾನಿಯಂತ್ರಣ ರಹಿತ ಎಲೆಕ್ಟ್ರಿಕ್ ಬಸ್ಸುಗಳ ಸಂಚಾರವನ್ನು ನಗರ ಪ್ರದೇಶದಲ್ಲಿ ನಡೆಸಲಾಗುತ್ತಿದೆ. ಫೇಮ್-ಐಐ ಯೋಜನೆಯಲ್ಲಿ ಹೆಚ್ಚುವರಿ 637 ಹವಾನಿಯಂತ್ರಿತವಲ್ಲದ 12 ಮೀ.ಎಲೆಕ್ಟ್ರಿಕ್ ಬಸ್‌ಗಳನ್ನು ಪರಿಚಯಿಸಲಾಗಿದ್ದು, ನವೆಂಬರ್ ಅಂತ್ಯಕ್ಕೆ 287 ಬಸ್‌ಗಳನ್ನು ಪರಿಚಯಿಸಲಾಗುವುದು ಎಂದು ತಿಳಿದುಬಂದಿದೆ. ನಗರದಲ್ಲಿ 1,027 ಎಲೆಕ್ಟ್ರಿಕ್ ಬಸ್ಸುಗಳು ಕಾರ್ಯನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಹೆಚ್ಚುವರಿಯಾಗಿ 760 ಎಲೆಕ್ಟ್ರಿಕ್ ಬಸ್ಸುಗಳು, ಇದರಲ್ಲಿ 320 ಹವಾನಿ ಯಂತ್ರಿತ ಮತ್ತು 148 ಹವಾನಿಯಂತ್ರಣರಹಿತ 12 ಮೀ. ಬಸ್‌ಗಳು ಡಲ್ಟ್ ನಿಧಿ ಬಂಡವಾಳ ಹೂಡಿಕೆಯ 2023-24 ಯೋಜನೆಯಡಿಯಲ್ಲಿ ರಾಜ್ಯಗಳಿಗೆ ವಿಶೇಷ ಆರ್ಥಿಕ ನೆರವಿನಿಂದ ಬಿಎಂಟಿಸಿಗೆ ಸೇರ್ಪಡೆಯಾಗಲಿದೆ ಎನ್ನಲಾಗಿದೆ.

ಒಂದು ದೇಶ, ಒಂದು ಚುನಾವಣೆ: ಕೇಂದ್ರ ಸಂಪುಟ ನಿರ್ಣಯಕ್ಕೆ ಸ್ವಾಗತ

ರಾಹುಲ್‌ಗೆ ಪ್ರಬುದ್ಧತೆ ಇಲ್ಲ; ಆರ್.ಅಶೋಕ

ಬೆಂಗಳೂರು: ನರೇಂದ್ರ ಮೋದಿಯವರ ಭಯದಿಂದಾಗಿ ಒಂದು ದೇಶ, ಒಂದು ಚುನಾವಣೆಯನ್ನು ಕಾಂಗ್ರೆಸ್ ವಿರೋಧಿಸುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದು ದೇಶ, ಒಂದು ಚುನಾವಣೆ ನಡೆಸಲು ಕೇಂದ್ರ ಸರಕಾರ ಕೈಗೊಳ್ಳುತ್ತಿರುವ ಕ್ರಮ ಸ್ವಾಗತಿಸುತ್ತೇನೆ. ಇದರಿಂದ ತೆರಿಗೆದಾರರ ಹಣ ಉಳಿತಾಯವಾಗುತ್ತದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ, ವಿಧಾನಸಭೆ, ಲೋಕಸಭೆ ಹೀಗೆ ಒಂದೊಂದು ಚುನಾವಣೆ ಒಮ್ಮೊಮ್ಮೆ ನಡೆದಾಗ ನೀತಿ ಸಂಹಿತೆ ಜಾರಿಯಾಗುತ್ತದೆ. ಇದರಿಂದಾಗಿ ಕಾಮಗಾರಿಗಳು ವಿಳಂಬವಾಗಿ ಸರ್ಕಾರ ಯಾವುದೇ ಯೋಜನೆ ಸರಿಯಾಗಿ ಜಾರಿ ಮಾಡಲು ಸಾಧ್ಯವಾಗುವುದಿಲ್ಲ. ಹೊಸ ಕ್ರಮದಿಂದ ಈ ಸಮಸ್ಯೆ ನಿವಾರಣೆಯಾಗಲಿದೆ ಎಂದರು. ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಇಂತಹ ಕ್ರಮಕ್ಕೆ ವಿರೋಧ ಮಾಡುವುದು ಸಹಜ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ಒಟ್ಟಿಗೆ ನಡೆದರೆ, ಸಮಸ್ಯೆಯಾಗುತ್ತದೆ ಎಂದು ಅವರು ಹೆದರಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಅವರಿಗೆ ಮೋದಿಯವರ ಭಯವಿದೆ. ಈ ಕ್ರಮದಿಂದಾಗಿ ಪ್ರಧಾನಿ ಮತ್ತು ಮುಖ್ಯಮಂತ್ರಿಗೆ ಐದು ವರ್ಷಗಳ ಸಂಪೂರ್ಣ ಅವಧಿ ದೊರೆಯುತ್ತದೆ. ಆ ದೃಷ್ಟಿಯಿಂದ ಇದು ಉತ್ತಮ ಕ್ರಮ ಎಂದರು.

ರಾಹುಲ್ ಪ್ರಬುದ್ಧರಲ್ಲ: ಪ್ರಧಾನಿ ನರೇಂದ್ರ ಮೋದಿಯವರ ಹತ್ತಿರ ಹೋಗುವ ಸರಿಸಮನಾದ ನಾಯಕರು ಯಾರೂ ಕಾಂಗ್ರೆಸ್‌ನಲ್ಲಿ ಇಲ್ಲ. ರಾಹುಲ್ ಗಾಂಧಿಯವರಿಗೆ ಮಾತನಾಡಲು ಹಾಗೂ ತೀರ್ಮಾನ ಕೈಗೊಳ್ಳಲು ಬರಲ್ಲ. ಅವರು ಮಕ್ಕಳಂತೆ ಆಟವಾಡುತ್ತಿದ್ದು, ಅವರಿಗೆ ಪ್ರಬುದ್ಧತೆ ಇಲ್ಲ ಎಂಬುದು ಅವರ ವರ್ತನೆಯಿಂದ ಗೊತ್ತಾಗುತ್ತದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅತಂತ್ರವಾಗಿದ್ದು, ಆ ವಿಷಯ ಮರೆ ಮಾಚಲು ಮೋದಿ ಸರಕಾರದ ಬಗ್ಗೆ ಟೀಕೆ ಮಾಡಲಾಗುತ್ತಿದೆ ಎಂದರು.

ನಾಡಹಬ್ಬ ದಸರಾ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿರುವುದು ಸ್ವಾಗತಾರ್ಹ. ಕಳೆದ ವರ್ಷ ಅಂತಾರಾಷ್ಟ್ರೀಯ ಖ್ಯಾತಿಯ ಸರೋದ್ ವಾದಕ ಪಂಡಿತ್ ತಾರಾನಾಥ್ ಬಳಿಯೂ ಕಮಿಷನ್ ಕೇಳಿದ್ದ ಕಾಂಗ್ರೆಸ್ ಸರಕಾರ ರಾಜ್ಯದ ಮಾನ ಹರಾಜು ಹಾಕಿತ್ತು. ಈ ಬಾರಿಯ ನಾಡಹಬ್ಬ ದಸರಾ ಮಹೋತ್ಸವಕ್ಕೆ ಭ್ರಷ್ಟಾಚಾರದ ಸೋಂಕು ತಗುಲಿಸದೆ ನಾಡಿನ ಸಂಸ್ಕೃತಿ, ಪರಂಪರೆಯ ಗೌರವ ಉಳಿಸಲಿ. ಈ ವರ್ಷ ಮತ್ತೊಂದು ಭ್ರಷ್ಟಾಚಾರದ ಅಂಬಾರಿ ಹೊತ್ತು ಕನ್ನಡಿಗರ ಮಾನ ಕಳಿಯುತ್ತಾರೋ ಕಾದು ನೋಡಬೇಕು.

-ಆರ್. ಅಶೋಕ, ಪ್ರತಿಪಕ್ಷ ನಾಯಕ

ರಸ್ತೆಗಳ ಪುನಶ್ಚೇತನಕ್ಕೆ ಬಿಬಿಎಂಪಿ ನಿರ್ಧಾರ

ಬೆಂಗಳೂರು: ಬಿಬಿಎಂಪಿ ನಗರಾದ್ಯಂತ ನವೆಂಬರ್‌ನಿಂದ ನಗರಾದ್ಯಂತ 459.25ಕಿ.ಮೀ ರಸ್ತೆಗಳ ಪುನರುಜ್ಜೀವನಕ್ಕೆ ಮುಂದಾಗಿದ್ದು, ಈ ನಿಟ್ಟಿನಲ್ಲಿ 659.71ಕೋಟಿ ರು.ಗಳನ್ನು ವೆಚ್ಚ ಮಾಡಲು ಮುಂದಾಗಿದೆ.

ಈ ಹೊಸ ರಸ್ತೆ ಕಾಮಗಾರಿಗಳಿಗೆ ಅನುಕೂಲವಾಗುವಂತೆ ಸರಕಾರ ಅನುಮೋದಿಸಿದ ವಾರ್ಷಿಕ ಬಜೆಟ್‌ನ್ನು ಸರಿಹೊಂದಿಸಿದೆ. ಹೆಚ್ಚಿನ ಕೆಲಸಗಳು ರಸ್ತೆಗಳನ್ನು ಡಾಂಬರೀಕರಣ ಮಾಡುವುದನ್ನು ಒಳಗೊಂಡಿರುತ್ತವೆ, ಕೆಲವು ಯೋಜನೆಗಳು ಪಾದಚಾರಿ ಮಾರ್ಗಗಳು ಮತ್ತು ಕಲ್ವರ್ಟ್‌ಗಳನ್ನು ದುರಸ್ತಿ ಮಾಡುವತ್ತ ಗಮನ ಹರಿಸುತ್ತವೆ. ಪ್ರತಿ ಕಿ.ಮೀ ಕೆಲಸಕ್ಕೆ ಅಂದಾಜು 1.43 ಕೋಟಿ ರು.ಗಳನ್ನು ಖರ್ಚು ಮಾಡಲು ಬಿಬಿಎಂಪಿ ಯೋಜಿಸಿದೆ.

ನಾಗರಬಾವಿ ರಿಂಗ್ ರಸ್ತೆ, ಕಾಮಾಕ್ಯ ಜಂಕ್ಷನ್ ನಿಂದ ವೀರಭದ್ರನಗರ, ಆರ್.ವಿ.ರಸ್ತೆಯಿಂದ ಕನಕಪುರ ಮುಖ್ಯರಸ್ತೆ, ಡಾ.ವಿಷ್ಣುವರ್ಧನ್ ಮುಖ್ಯರಸ್ತೆ, ನಾಯಂಡಹಳ್ಳಿಯಿಂದ ಹೊಸಕೆರೆಹಳ್ಳಿ, ಕೋಗಿಲು-ಕಣ್ಣೂರು ಜೋಡಿ ರಸ್ತೆ, ಸೆಂಟ್ರಲ್ ಸಿಲ್ಕ್ ಬೋರ್ಡ್ ನಿಂದ ಇಬ್ಬಲೂರು ಸರ್ವಿಸ್ ರಸ್ತೆ, ಹುಳಿಮಾವು-ಬೇಗೂರು ರಸ್ತೆ, ಬೆಳ್ಳಂದೂರು ರಸ್ತೆ, ಕಸವನಹಳ್ಳಿ ರಸ್ತೆ, ಬಳಗೆರೆ ಮುಖ್ಯರಸ್ತೆ, ಜುನ್ನಸಂದ್ರ ಮುಖ್ಯರಸ್ತೆ, ಜುನ್ನಸಂದ್ರ ಮುಖ್ಯರಸ್ತೆಗಳಲ್ಲಿ ಕಾಮಗಾರಿ ನಡೆಯಲಿದೆ.

ಬಸ್ ಉರುಳಿ 15 ಪ್ರಯಾಣಿಕರಿಗೆ ಗಾಯ

ಹಾವೇರಿ: ಇಲ್ಲಿಯ ವರದಾಹಳ್ಳಿಯ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ನಸುಕಿನಲ್ಲಿ ಬಸ್ಸೊಂದು ಉರುಳಿಬಿದ್ದು ಅಪಘಾತ ಸಂಭವಿಸಿದ್ದು, 15ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ಖಾಸಗಿ ಕಂಪನಿಯ ಬಸ್, ಬೆಂಗಳೂರಿನಿಂದ ಹುಬ್ಬಳ್ಳಿ ಮಾರ್ಗವಾಗಿ ಗೋವಾಗೆ ಹೊರಟಿತ್ತು. ಚಾಲಕ, ನಿರ್ಲಕ್ಷ್ಯ ಹಾಗೂ ಅತೀವೇಗದಲ್ಲಿ ಬಸ್ ಚಲಾಯಿಸಿದ್ದ. ಇದರಿಂದಾಗಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಬಸ್ ಉರುಳಿಬಿದ್ದಿದೆ. ಬಸ್‌ನಲ್ಲಿದ್ದ 15 ಪ್ರಯಾಣಿಕರು ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು. ಕೆಲ ಪ್ರಯಾಣಿಕರು ತೀವ್ರ ಗಾಯಗೊಂಡಿದ್ದಾರೆ. ಉಳಿದವರಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ. ಅಪಘಾತ ಸಂಬಂಧ ಹಾವೇರಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಮೇಶ್ ಜಾರಕಿಹೊಳಿಗೆ ಟಾಂಗ್ ಕೊಟ್ಟ ವಿಜಯೇಂದ್ರ | ರಾಜ್ಯಾಧ್ಯಕ್ಷರಾಗಿ ಒಪ್ಪಿಕೊಳ್ಳದಿದ್ದರೆ ಸ್ವಾಗತ

ಬಿಜೆಪಿಯಲ್ಲಿ ಮುಗಿಯದ ಟಾಕ್‌ವಾರ್

ಬೆಂಗಳೂರು / ಕಲಬುರಗಿ: ಒಡೆದ ಮನೆಯಾಗಿರುವ ಬಿಜೆಪಿಯಲ್ಲಿನ ಗೊಂದಲ ಮುಗಿದಂತೆ ಕಾಣುತ್ತಿಲ್ಲ. ಇಷ್ಟು ದಿನ ವಿಜಯೇಂದ್ರ ವಿರುದ್ಧ ಬಹಿರಂಗವಾಗಿಯೇ ಟೀಕಿಸುತ್ತಿದ್ದ ನಾಯಕರಿಗೆ ಇದೀಗ ವಿಜಯೇಂದ್ರ ಬಹಿರಂಗವಾಗಿಯೇ ಟಾಂಗ್ ಕೊಡಲು ಮುಂದಾಗಿರುವುದು ಇದೀಗ ಪಕ್ಷದಲ್ಲಿ ಏನು ಸರಿಯಿಲ್ಲ ಎನ್ನುವುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.



ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ರಮೇಶ್ ಜಾರಕಿಹೊಳಿ ಅವರು ಬಿಜೆಪಿ ರಾಜ್ಯಾಧ್ಯಕ್ಷರಾಗಿ ತಮ್ಮನ್ನು (ವಿಜಯೇಂದ್ರನನ್ನು) ಒಪ್ಪಿಕೊಳ್ಳುವುದಿಲ್ಲ ಎಂದಿ ರುವುದನ್ನು ಸ್ವಾಗತ ಮಾಡುತ್ತೇನೆ ಎನ್ನುವ ಮೂಲಕ ಜಾರಕಿಹೊಳಿ ಅವರಿಗೆ ಟಾಂಗ್ ಕೊಟ್ಟಿದ್ದಾರೆ.

ನಾನು ನಾಯಕ ಎಂದು ಹೊರಟಿಲ್ಲ. ಪಕ್ಷದ ವರಿಷ್ಠರು, ಹಿರಿಯರು ನನ್ನನ್ನು ರಾಜ್ಯಾಧ್ಯಕ್ಷನಾಗಿ ನೇಮಕ ಮಾಡಿದ್ದಾರೆ. ರಾಜ್ಯಾಧ್ಯಕ್ಷನಾಗಿ, ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೇನೆ. ಭ್ರಷ್ಟ ಕಾಂಗ್ರೆಸ್ ಸರಕಾರವನ್ನು ಒಂಟಿಗಾಲಿನಲ್ಲಿ ನಿಲ್ಲಿಸುವ ಕೆಲಸವನ್ನು ಬೆಂಗಳೂರು- ಮೈಸೂರು ಪಾದಯಾತ್ರೆ ಮೂಲಕ ಯಶಸ್ವಿಯಾಗಿ ಮಾಡಿದ್ದೇವೆ. ರಮೇಶ್ ಜಾರಕಿಹೊಳಿ ಅವರ ಬಾಯಲ್ಲಿ ಪಕ್ಷ, ಪಕ್ಷದ ಸಿದ್ಧಾಂತದ ವಿಚಾರ ಬರುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದಿದ್ದಾರೆ.

ವಿಜಯೇಂದ್ರ ಅವರ ಈ ಹೇಳಿಕೆ ಮತ್ತೆ ವಿವಾದಕ್ಕೆ ಕಾರಣವಾಗುವ ಸಾಧ್ಯತೆಯಿದ್ದು, ಮುಂದಿನ ದಿನದಲ್ಲಿ ಜಾರಕಿಹೊಳಿ, ಯತ್ನಾಳ್ ಸೇರಿದಂತೆ ವಿರೋಧಿ ಬಣ ವಿಜಯೇಂದ್ರ ವಿರುದ್ಧ ಮುಗಿಬೀಳುವುದು ಖಚಿತ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಕುರ್ಚಿ ಉಳಿಸಿಕೊಳ್ಳಲು ಸಿಎಂ ನಾಟಕ: ಇನ್ನು ಇದೇ ವೇಳೆ ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಎಐಸಿಸಿ ಅಧ್ಯಕ್ಷರನ್ನು ಓಲೈಸಲು ಹಾಗೂ ತಮ್ಮ ಕುರ್ಚಿ ಉಳಿಸಿಕೊಳ್ಳಲು ಮುಖ್ಯಮಂತ್ರಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಚಿವ ಸಂಪುಟ ಸಭೆಯ ನಾಟಕ ಮಾಡಿದ್ದಾರೆ. ಸಚಿವ ಸಂಪುಟ ಸಭೆಯಿಂದ ಈ ಭಾಗದ ಅಭಿವೃದ್ಧಿ ಆಗಲು ಸಾಧ್ಯವಿಲ್ಲ. ಈ ಭಾಗಕ್ಕೆ 5 ಸಾವಿರ ಕೋಟಿ ಕೊಡುತ್ತೇವೆ. ಇಲ್ಲಿ ಶಾಲಾ ಕಾಲೇಜು ಮಾಡುತ್ತೇವೆ. 11,000 ಕೋಟಿಯ ಪ್ಯಾಕೇಜ್ ಕೊಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ ಹೊಸದೇನೂ ಇಲ್ಲ. ವರ್ಷದ ಹಿಂದೆ ಕೂಡ ಇದೇ ಮಾತು ಹೇಳಿದ್ದರು. ಆದರೆ, ಯಾವುದೇ ಪ್ರಯೋಜನ ಆಗಿಲ್ಲ ಎಂದು ಟೀಕಿಸಿದರು.

ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ 1,500 ಕೋಟಿ ಕೊಟ್ಟಿದ್ದರು. ತದನಂತರ ಬಸವರಾಜ ಬೊಮ್ಮಾಯಿ ಬಿಜೆಪಿ ಸರಕಾರ 3 ಸಾವಿರ ಕೋಟಿ ಮತ್ತು ಬಜೆಟ್‌ನಲ್ಲಿ 5 ಸಾವಿರ ಕೋಟಿ ಅನುದಾನ ಪ್ರಕಟಿಸಿತ್ತು. ಅದನ್ನೇ ಸಿದ್ದರಾಮಯ್ಯನವರು ಪುನರುಚ್ಚರಿಸಿದ್ದಾರೆ ಹೊರತು, ಯಾವುದೇ ಹೊಸ ವಿಚಾರಗಳನ್ನು ಹೇಳಿಲ್ಲ ಎಂದು ಟೀಕಿಸಿದರು.

ಕೇವಲ ಚುನಾವಣೆ ಬಂದಾಗ ಭಾಷಣಕ್ಕೆ ಸೀಮಿತ

ಮುಖ್ಯಮಂತ್ರಿ ರಾಜ್ಯಕ್ಕೆ ಮುಖ್ಯಮಂತ್ರಿಯೇ ಅಥವಾ ಕೇವಲ ಬೆಂಗಳೂರು, ಮೈಸೂರಿನ ಸಿಎಂ ಆಗಿದ್ದಾರೆಯೇ ಎಂದು ಜನರು ಮಾತನಾಡುತ್ತಿದ್ದಾರೆ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಅಥವಾ ಯಾವುದೇ ಸಚಿವರು ಇವತ್ತು ಕಲ್ಯಾಣ ಕರ್ನಾಟಕದ ಭಾಗದಲ್ಲಿ ಪ್ರವಾಸ ಮಾಡುತ್ತಿಲ್ಲ. ಏನು ಅಭಿವೃದ್ಧಿ ಆಗಬೇಕೆಂದು ಚಿಂತನೆ ಮಾಡುತ್ತಿಲ್ಲ, ಅನುದಾನ ಕೊಡುತ್ತಿಲ್ಲ. ಕೇವಲ ಚುನಾವಣೆ ಬಂದಾಗ ಭಾಷಣ ಮಾಡುವುದಕ್ಕಷ್ಟೇ ಸೀಮಿತರಾಗಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಒಂದು ಸಮರ್ಥ ನಿರ್ಧಾರ ಮಾತ್ರವಲ್ಲದೆ, ಐತಿಹಾಸಿಕ ತೀರ್ಮಾನ ಮಾಡಿದೆ. ಹಣ ಉಳಿಸಿ ಅಭಿವೃದ್ಧಿಗೆ ಬಳಸುವ ದೇಶದ ಹಿತಾಸಕ್ತಿಯ ಚಿಂತನೆ. ಕಡಿಮೆ ವೆಚ್ಚದಾಯಕ, ನೌಕರರ ಶ್ರಮ ಕಡಿಮೆ ಮಾಡುವ ಒಂದೇ ಚುನಾವಣೆ ಉತ್ತಮ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಒಂದು ದೇಶ ಒಂದು ಚುನಾವಣೆಗೆ ಹಸಿರು ನಿಶಾನೆ

← ಮೊದಲಪುಟದಿಂದ

ಸಮಿತಿ ಸದಸ್ಯರ ಪಟ್ಟಿ: ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದ ಉನ್ನತ ಸಮಿತಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯಸಭೆ ಮಾಜಿ ಪ್ರತಿಪಕ್ಷ ನಾಯಕ ಗುಲಾಂ ನಬಿ ಆಜಾದ್, 15ನೇ ಹಣಕಾಸು ಆಯೋಗದ ಮಾಜಿ ಅಧ್ಯಕ್ಷ ಎನ್.ಕೆ.ಸಿಂಗ್, ಲೋಕಸಭೆಯ ಮಾಜಿ ಮಹಾ ಕಾರ್ಯದರ್ಶಿ ಡಾ.ಸುಭಾಷ್ ಸಿ. ಕಶ್ಯಪ್, ಸುಪ್ರೀಂಕೋರ್ಟ್ ವಕೀಲ ಹರೀಶ್ ಸಾಳ್ವೆ, ಹಿರಿಯ ವಕೀಲ ಸಂಜಯ್ ಕೊಠಾರಿ, ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘ್ವಾಲ್, ಡಾ.ನಿತಿನ್ ಚಂದ್ರ ಸದಸ್ಯರಾಗಿದ್ದಾರೆ. 47 ರಾಜಕೀಯ ಪಕ್ಷಗಳು 'ಒಂದು ದೇಶ ಒಂದು ಚುನಾವಣೆ' ವಿಚಾರದಲ್ಲಿ ಅಭಿಪ್ರಾಯ ದಾಖಲಿಸಿವೆ. 32 ಪಕ್ಷಗಳು ಬೆಂಬಲ ಸೂಚಿಸಿವೆ.

ಪರಿಷತ್ ಚುನಾವಣೆ?

ದೇಶದ 6 ರಾಜ್ಯಗಳಲ್ಲಿ (ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಬಿಹಾರ, ಉತ್ತರಪ್ರದೇಶ) ವಿಧಾನ ಪರಿಷತ್ ಇವೆ. ಉಳಿದ 22 ರಾಜ್ಯಗಳಲ್ಲಿ ಈ ವ್ಯವಸ್ಥೆ ಇಲ್ಲದಿರುವುದರಿಂದ ಪರಿಷತ್ ವ್ಯವಸ್ಥೆಯ ಭವಿಷ್ಯವೇನು? ಎಂಬ ಚರ್ಚೆಯೂ ನಡೆದಿದೆ. ಒಂದು ದೇಶ ಒಂದು ಚುನಾವಣೆ ಜಾರಿಯಾದಲ್ಲಿ ಪರಿಷತ್‌ಗೆ ಯಾವ ಹಂತದಲ್ಲಿ ಚುನಾವಣೆ ನಡೆಯಲಿದೆ ಎಂಬ ಬಗ್ಗೆ ಸದ್ಯ ಸ್ಪಷ್ಟತೆ ಇಲ್ಲ.

ಆರ್.ಅಶೋಕ, ಶೋಭಾ ವಿರುದ್ಧ ಎಫ್‌ಐಆರ್ ದಾಖಲು

ನಾಗಮಂಗಲ: ನಾಗಮಂಗಲ ಪಟ್ಟಣದಲ್ಲಿ ಗಣಪತಿ ವಿಸರ್ಜನೆಯ ಮೆರವಣಿಗೆ ವಿಚಾರವಾಗಿ ನಡೆದ ಕೋಮುಗಲಭೆಗೆ ಸಂಬಂಧಿಸಿದಂತೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಗಲಭೆಗೆ ಸಂಬಂಧ ತಮ್ಮ ಅಧಿಕೃತ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಂಚಿಕೆ ಮಾಡಿದ್ದಾರೆಂಬ ಆರೋಪದಡಿ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಟ್ಟಣದಲ್ಲಿ ನಡೆದ ಗಲಭೆಗೆ ಸಂಬಂಧಿಸಿದ ವಿಡಿಯೊ, ಫೋಟೊಗಳನ್ನು ಪೋಸ್ಟ್ ಮಾಡಿ ದೊಂಬಿ ಗಲಭೆಗೆ ಪ್ರಚೋದನೆ ನೀಡುವಂತೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದು, ಪೋಸ್ಟ್‌ನಲ್ಲಿ ಕಲ್ಲುತೂರಿ, ಬೆಂಕಿ ಹಚ್ಚಿದವರನ್ನು ರಕ್ಷಿಸಿ, ಗಣೇಶ ಮೂರ್ತಿಯನ್ನು ಬಂಧಿಸಲಾಗಿದೆ ಎಂದು ಶೋಭಾ ಕರಂದ್ಲಾಜೆ ಪೋಸ್ಟ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ನಡೆದ ಘಟನೆಯನ್ನು ನಾಗಮಂಗಲದಲ್ಲಿ ನಡೆದ ಘಟನೆ ಎಂದು ಸುಳ್ಳು ಪೋಸ್ಟ್ ಮಾಡಿದ್ದಾರೆ. ಈ ಬಗ್ಗೆ ದೂರು ದಾಖಲಾಗಿದೆ.

ವಿಪಕ್ಷ ನಾಯಕ ಆರ್.ಅಶೋಕ ಅವರು ನಾಗಮಂಗಲ ಘಟನೆ ವೇಳೆ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ ಎಂದು ಪೋಸ್ಟ್ ಮಾಡಿ ಬೇರೆಡೆ ನಡೆದ 2 ವಿಡಿಯೋಗಳನ್ನು ಲಗತ್ತಿಸಿದ್ದಾರೆ. ಈ ಬಗ್ಗೆಯೂ ಪ್ರಕರಣ ದಾಖಲಾಗಿದೆ. ಈ ಸಂಬಂಧ ಪಟ್ಟಣ ಠಾಣೆಯ ಪೊಲೀಸ್ ಸಿಬ್ಬಂದಿ ರಮೇಶ್ ನೀಡಿದ ದೂರಿನ ಮೇರೆಗೆ ಬಿಎನ್‌ಎಸ್ ಕಾಯ್ದೆ 192 ರ ಅಡಿಯಲ್ಲಿ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡ್ರಗ್ಸ್ ಹಾವಳಿ ತಡೆಗೆ ಟಾಸ್ಕ್‌ಫೋರ್ಸ್

← ಮೊದಲಪುಟದಿಂದ

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಉನ್ನತಾಧಿಕಾರಿಗಳ ಸಭೆಯ ಬಳಿಕ ಮಾತನಾ ಡಿದ ಸಿದ್ದರಾಮಯ್ಯ ಅವರು, ಮಾದಕವಸ್ತುಗಳ ನಿಯಂತ್ರಣಕ್ಕೆ ಈಗಾಗಲೇ ಸರಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ರಾಜ್ಯಮಟ್ಟದ ಉನ್ನತಾಧಿಕಾರಿಗಳ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ಸಕ್ರಿಯವಾಗಿವೆ. ಇವುಗಳ ಮೇಲೆ ನಿಗಾವಹಿಸಲು ಗೃಹಸಚಿವರ ನೇತೃತ್ವದಲ್ಲಿ ರಾಜ್ಯಮಟ್ಟದ ಟಾಸ್ಕ್‌ಫೋರ್ಸ್ ರಚಿಸಲು ತೀರ್ಮಾನಿಸಲಾಗಿದೆ. ಈ ಸಮಿತಿಯಲ್ಲಿ ಆರೋಗ್ಯ, ಉನ್ನತ ಶಿಕ್ಷಣ, ಶಾಲಾ ಶಿಕ್ಷಣ, ಸಮಾಜ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸಚಿವರು ಸದಸ್ಯರಾಗಿರುತ್ತಾರೆ ಎಂದರು.

ರಾಜ್ಯ ಮತ್ತು ಜಿಲ್ಲಾಮಟ್ಟದ ಸಮಿತಿಗಳು ಪ್ರತಿ ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು. ಮಾದಕ ವಸ್ತುಗಳ ಬಳಕೆ, ಮಾರಾಟ, ಸಾಗಾಣಿಕೆ ಸೇರಿದಂತೆ ಎಲ್ಲ ರೀತಿಯ ಅಪರಾಧಗಳಿಗೆ ಜಾಮೀನು ರಹಿತ ಪ್ರಕರಣ ದಾಖಲಿಸುವುದರೊಂದಿಗೆ ಕನಿಷ್ಠ 10ರಿಂದ ಗರಿಷ್ಠ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶವಿರುವಂತಹ ಕಾಯಿದೆ ಜಾರಿಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಬೆಂಗಳೂರಿನಲ್ಲಿ ಹೆಚ್ಚು ಪ್ರಕರಣ ದಾಖಲು: ಬೆಂಗಳೂರಿನಲ್ಲಿ ಅತೀ ಹೆಚ್ಚು ಮಾದಕವಸ್ತು ಪ್ರಕರಣಗಳು ದಾಖಲಾಗಿವೆ. ಒಟ್ಟು ಪ್ರಕರಣಗಳ ಪೈಕಿ ಶೇ.50ರಷ್ಟು ಬೆಂಗಳೂರಿನಲ್ಲಿಯೇ ದಾಖಲಾಗಿವೆ. ಶೇ.22ರಷ್ಟು ಮಂಗಳೂರಿನಲ್ಲಿ, ಶೇ.11ರಷ್ಟು ರಾಜ್ಯದ ಇತರ ಭಾಗಗಳಲ್ಲಿ ದಾಖಲಾಗಿವೆ. ಬೆಂಗಳೂರಿನ ಪೂರ್ವ ಭಾಗದ ಮೂಲಕ ಮಾದಕವಸ್ತುಗಳು ಹೆಚ್ಚು ಸರಬರಾಜಾಗುತ್ತಿವೆ ಮತ್ತು ಹೆಚ್ಚು ಮಾದಕ ವ್ಯಸನ ಅಪರಾಧಗಳು ನಡೆಯುತ್ತಿವೆ ಎಂಬ ವರದಿಗಳಿವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

1,021 ಭಾರತೀಯರು, 21 ವಿದೇಶಿಯರ ಬಂಧನ: ಒರಿಸ್ಸಾ, ಆಂಧ್ರಪ್ರದೇಶ, ಉತ್ತರಪ್ರದೇಶದಂತಹ ರಾಜ್ಯದಿಂದ ಮಾದಕ ವಸ್ತುಗಳು ಕಳ್ಳಸಾಗಾಣಿಕೆಯಾಗುತ್ತಿವೆ. ಈ ಹಿಂದಿನ ಸರಕಾರ ತೆಗೆದುಕೊಂಡ ಕ್ರಮಗಳು ಸಾಲುವುದಿಲ್ಲ. ದಿನೇ ದಿನೆ ಈ ಪಿಡುಗು ಹೆಚ್ಚಾಗುತ್ತಿವೆ ಎಂಬುದು ಕಳವಳಕಾರಿ. 2021ರಲ್ಲಿ 7,511 ಮಂದಿ ಭಾರತೀಯರು, 190 ಮಂದಿ ವಿದೇಶಿಯರು, 2022ರಲ್ಲಿ 7,737 ಮಂದಿ ಭಾರತೀಯರು, 123 ವಿದೇಶಿಯರು, 2023 ರಲ್ಲಿ 8,016 ಭಾರತೀಯರು, 105 ವಿದೇಶಿಯರು, 2024ರ ಈವರೆಗೂ 1,021 ಭಾರತೀಯರು, 21 ವಿದೇಶಿಯರನ್ನು ಬಂಧಿಸಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಸಭೆಯಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಗೃಹ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಉಮಾಶಂಕರ್, ಡಿಜಿಪಿ ಅಲೋಕ್ ಮೋಹನ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಇದ್ದರು.

ಕುಲಪತಿ ನೇಮಕಕ್ಕೆ ಕೊಕ್ಕೆ?

← ಮೊದಲಪುಟದಿಂದ

ಸಾಮಾನ್ಯವಾಗಿ ಸರಕಾರ ಕಳುಹಿಸುವ ಪಟ್ಟಿಗೆ ರಾಜ್ಯಪಾಲರು ಸಹಿ ಹಾಕುತ್ತಾರೆ. ಆದರೀಗ ಈ ಶಿಫಾರಸಿನ ಬದಲಿಗೆ ನೇರವಾಗಿ ಸರಕಾರವೇ ಕುಲಪತಿಗಳನ್ನು ನೇಮಿಸುವ ಲೆಕ್ಕಾಚಾರದಲ್ಲಿ ಈ ವಿಧೇಯಕಕ್ಕೆ ಅನುಮೋದನೆ ನೀಡಲಾಗಿದೆ.

ಈ ರೀತಿ ಮಾಡುವುದರಿಂದ ವಿಶ್ವವಿದ್ಯಾಲಯಗಳ ಮೇಲೆ ರಾಜ್ಯಪಾಲರಿಗೆ ಇರುವ ಹಿಡಿತಕ್ಕೆ ಬ್ರೇಕ್ ಹಾಕಬಹುದು ಎನ್ನುವ ಲೆಕ್ಕಾಚಾರವಿದೆ ಎನ್ನಲಾಗಿದೆ. ಮೂಲಗಳ ಪ್ರಕಾರ, ಬೆಳಗಾವಿ ಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ವಿಧಾನ ಮಂಡಲದ ಉಭಯ ಸದನಗಳಲ್ಲಿ ರಾಜ್ಯಪಾಲರ ಅಧಿಕಾರವನ್ನು ಹಿಂಪಡೆಯುವ ಮಸೂದೆ ಮಂಡಿಸುವ ಸಾಧ್ಯತೆಯಿದೆ.

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಆಯುಕ್ತರ ಕಾರ್ಯಾಲಯ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಸಂ. ಡಿವೈಇಎಸ್/ಕ್ರೀಚಪ್ರೋ/08/2024–25 ದಿನಾಂಕ : 18.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ:– ದಸರಾ ಕ್ರೀಡಾಕೂಟ ಸಿಎಂ ಕಪ್ – 2024ರ ಸಂದರ್ಭದಲ್ಲಿ ಊಟೋಪಹಾರವನ್ನು ತಯಾರಿಸಿ ಸರಬರಾಜು ಮಾಡಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಮೈಸೂರಿನಲ್ಲಿ ಆಯೋಜಿಸುವ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ ಸಿಎಂ ಕಪ್‌ನಲ್ಲಿ ಭಾಗವಹಿಸುವ ಕ್ರೀಡಾಪಟುಗಳು / ತಾಂತ್ರಿಕ ಅಧಿಕಾರಿಗಳು/ ತರಬೇತುದಾರರಿಗೆ ನಿಗಧಿಪಡಿಸಿರುವ ಮೆನುವಿನ ಪ್ರಕಾರ ಊಟೋಪಹಾರವನ್ನು ತಯಾರಿಸಿ ಸರಬರಾಜು ಮಾಡಲು ಅರ್ಹ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ರ ಪ್ರಕಾರ ಅರ್ಹ ಸಂಸ್ಥೆಯಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಇ–ಟೆಂಡರ್ ನ್ನು ಆಹ್ವಾನಿಸಲಾಗಿದೆ.

ವಿವರ : ಟೆಂಡರ್ ಅಂದಾಜು ಮೊತ್ತದ ಬಗ್ಗೆ (ದಿನ ಒಂದಕ್ಕೆ ಒಬ್ಬರಿಗೆ ರೂ 400 * 4 ದಿನಗಳು * 4000 ಮಂದಿಗೆ), ಒಟ್ಟು ಮೊತ್ತ ರೂ 64.00 ಲಕ್ಷಗಳು, ಇ ಎಂ ಡಿ ಮೊತ್ತ : 1,28,000/–, ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ : 25.09.2024 ಬೆಳಿಗ್ಗೆ 11.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 26.09.2024, ಬೆಳಿಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 27.09.2024 ಸಂಜೆ 4.30 ಗಂಟೆಗೆ, ಪ್ರಮಾಣ : 4000 ಮಂದಿಗೆ ಉಪಹಾರ ಮತ್ತು 500 ಮಂದಿಗೆ ಲಘು ಉಪಹಾರ. ಮೆನು ಪ್ರಕಾರ ದಿನ ಒಂದಕ್ಕೆ, ಒಬ್ಬರಿಗೆ (ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿ ಊಟ ಸೇರಿದಂತೆ) ಗರಿಷ್ಠ ನಿಗಧಿಪಡಿಸಿರುವ ದರ : ರೂ. 400–00 ಜಿಎಸ್ ಟಿ ಸೇರಿದಂತೆ. ಟೆಂಡರ್ ತೆರೆಯುವ ಸ್ಥಳ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಆಯುಕ್ತರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001, 080–22215601.

ಸಹಿ/–
ಉಪ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
DIPR/CP/2057/Zen/2024-25

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ
ದೂರವಾಣಿ : 08472 –220196 www.midnglb@rediffmail.com.

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–1/ ಕೆ.ಡಬ್ಲ್ಯೂ–3,4 & ಕೆ.ಸಿ–8/2024-25/1982 ದಿ: 13-09-2024

–: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–3,4 & ಕೆ.ಸಿ–8) :–

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ ಕೆರೆಗಳ ಆಧುನೀಕರಣ, ಎಸ್.ಡಿ.ಎಂ.ಎಫ್. ಮತ್ತು ಪಿ.ಎಂ.ಕೆ.ಎಸ್.ವೈ. ಹೆಚ್.ಕೆ.ಕೆ.ಪಿ. (ಎಸ್.ಎಮ್.ಐ) ಕಾಮಗಾರಿಗಳಿಗಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಕನಿಷ್ಟ ರೂ. 8,52,359.45** ಗರಿಷ್ಟ ರೂ. **169,44,319.23** 3) ಗುತ್ತಿಗೆದಾರರ ಅರ್ಹತೆ ವಿವರ: 3ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: **ಕನಿಷ್ಟ ರೂ. 22,000.00 ಗರಿಷ್ಟ ರೂ. 2,54,200.00,** 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **23–09–2024 ಬೆಳಿಗ್ಗೆ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **24–09–2024 ಸಾಯಂಕಾಲ 17.30 ಗಂಟೆಯ ವರೆಗೆ,** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **: 25–09–2024 ಸಾಯಂಕಾಲ 17.30 ಗಂಟೆಯ ವರೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **26–09–2024 ಸಾಯಂಕಾಲ 17.30 ಗಂಟೆಯ ವರೆಗೆ,** 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: (https://KPPP.Karnataka.gov.in)

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/440/ಕೆ.ಎಸ್.ಎಂ.ಸಿ.&ಎ/2024–25

ಮಂಗಳೂರು ಮಹಾನಗರಪಾಲಿಕೆ

DMA/2024-25/WORK INDENT NO. 29311, 29312 ದಿನಾಂಕ: 17-09-2024

ಅಲ್ಪಾವಧಿ ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಮಹಾನಗರಪಾಲಿಕೆ ಅನುದಾನದಲ್ಲಿ DMA/2024-25/WORK INDENT NO. 29311, 29312 ಗಳಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. 2 ಕಾಮಗಾರಿಗಳ ಒಟ್ಟು ಮೊತ್ತ ರೂಪಾಯಿ 111.30 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30–09–2024, ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಮಹಾನಗರಪಾಲಿಕೆ ಮಂಗಳೂರು.
DIPR/MNG/KSMCA/638/24-25 dt: 18.09.2024

ಜಿಲ್ಲಾ ಪಂಚಾಯತ್, ತುಮಕೂರು
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ

ಸಂಖ್ಯೆ:08/2024–25 ದಿನಾಂಕ:11–09–2024

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ** ಕಾಮಗಾರಿಗೆ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಅನ್ನು ಕರೆಯಲಾಗಿದ್ದು, ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಟೆಂಡರ್‌ಗಳಿಗೆ **ದಿ:11–09–2024 ರಿಂದ 01–10–2024** ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: **080–25501216, 080–25501227** ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಪಂ.ರಾ.ಇಂ.ವಿಭಾಗ, ಮಧುಗಿರಿ.
DIPR/TUM/RO-12/24-25/Oysters

ಜಿಲ್ಲಾ ಪಂಚಾಯತ್, ತುಮಕೂರು
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ

ಸಂಖ್ಯೆ:09/2024–25 ದಿನಾಂಕ:12–09–2024

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ** ಕಾಮಗಾರಿಗೆ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಅನ್ನು ಕರೆಯಲಾಗಿದ್ದು, ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಟೆಂಡರ್‌ಗಳಿಗೆ **ದಿ:12–09–2024 ರಿಂದ 03–10–2024** ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: **080–25501216, 080–25501227** ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಪಂ.ರಾ.ಇಂ.ವಿಭಾಗ, ಮಧುಗಿರಿ.
DIPR/TUM/RO-14/24-25/Oysters

ಕರ್ನಾಟಕ ಸರ್ಕಾರ (ರಾಷ್ಟ್ರೀಯ ಆರೋಗ್ಯ ಅಭಿಯಾನ)
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ.
ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ ಫೋ.ನಂ.08372–220307
ಕ್ರ.ಸಂ:ಜಿಆಕುಕಸೋಗ/ಎನ್‌ಹೆಚ್‌ಎಮ್/IEC–ಟೆಂಡರ್‌ಪ್ರಕಟಣೆ/151/2024–25
ದಿನಾಂಕ : 18/09/2024

ಟೆಂಡರ ಪ್ರಕಟಣೆ

2024–25ನೇ ಸಾಲಿಗೆ ಗದಗ ಜಿಲ್ಲೆಯಲ್ಲಿ ಎನ್.ಹೆಚ್.ಎಂ ಕಾರ್ಯಕ್ರಮದಡಿಯಲ್ಲಿ ವಿವಿಧ ಕಾರ್ಯಕ್ರಮಗಳ ಚಟುವಟಿಕೆಗಳಿಗೆ ಅವಶ್ಯವಿರುವ **IEC** ಮತ್ತು **Non IEC** (ವರದಿ ನಮೂನೆಗಳು, ರಿಜಿಸ್ಟರ್ಸ್) ಸಾಮಗ್ರಿಗಳ ವಿನ್ಯಾಸ ಮತ್ತು ಮುದ್ರಣ ಮಾಡಿ ಪೂರೈಸಲು ಇ–ಪ್ರಕ್ಯೂರ್‌ಮೆಂಟ ಮೂಲಕ ಮರು ಅಲ್ಪಾವಧಿ ಟೆಂಡರ್ ಅಹ್ವಾನಿಸಲಾಗಿದೆ. ಮರು ಅಲ್ಪಾವಧಿ ಟೆಂಡರ್ ಅಂದಾಜು ಮೊತ್ತ ರೂ. **16.45** ಲಕ್ಷಗಳು ಇ.ಎಮ್.ಡಿ ಮೊತ್ತ ರೂ. **41,125/–** ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ : **18.09.2024** ರಿಂದ ದಿನಾಂಕ : **25.09.2024**ರ ಮಧ್ಯಾಹ್ನ 03:30 ಗಂಟೆ ವರೆಗೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in/** ಮೂಲಕ **Tender Reference No–(DHFWS/2024-25/IND0964)** ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ ಅಥವಾ **dhogadag@gmail.com/ rchogadag@gmail.com** ಸಂಪರ್ಕಿಸಬಹುದಾಗಿದೆ.

ಸಹಿ/– ಉಪಾಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಗದಗ
ವಾಸಾಸಂಇ/ಗದಗ/ಕೆ.ಎಸ್.ಎಂ.ಸಿ.ಎ/228/24–25

KARNATAKA NEERAVARI NIGAM LIMITED
(A Government of Karnataka Enterprises)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332–225213.

ಸಂಖ್ಯೆ:ಕನೀನಿನಿ/ಜಿಆರ್‌ಬಿಸಿಸಿವಿ–3/ಡಿಬಿ/ಟೆಂಡರ/ಚಚಡಿ ಏತ ನೀರಾವರಿ ಯೋಜನೆ/ಟೆಂಡರ್/2024–25/03 ದಿನಾಂಕ:17–09–2024

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘ.ಬ.ದಂ.ಕಾ.ನಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯೂ– I,II, III & IV ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಶೇಕಡಾ ವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಟೆಂಡರ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. (ಚಚಡಿ ಏತ ನೀರಾವರಿ ಯೋಜನೆ ಅಡಿ ಹೊಲಗಾಲುವೆ ಕಾಮಗಾರಿಗಳು)

1 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲಾತಿ ಕಾಮಗಾರಿಗಳು (14). ಕಾಮಗಾರಿಗಳ ಇಂಡೆಂಟ್ ನಂಬರುಗಳು, 1392, 1397, 1399, 1404, 1406, 1409,1412, 1417, 1390, 1391, 1394, 1395, 1405 & 1408 ಟೆಂಡರಿಗಿಟ್ಟ ಮೊತ್ತವು (ಜಿ.ಎಸ್.ಟಿ. ಒಳಗೊಂಡಿರುತ್ತದೆ) ರೂ. 9.18 ಲಕ್ಷಗಳು ದಿಂದ ರೂ. 67.98 ಲಕ್ಷಗಳು ಇರುತ್ತವೆ.

2 ಸಾಮಾನ್ಯ ಕಾಮಗಾರಿಗಳು (11). ಕಾಮಗಾರಿಗಳ ಇಂಡೆಂಟ್ ನಂಬರುಗಳು. 1396, 1398, 1400, 1401, 1402, 1403, 1407, 1410, 1411, 1415 & 1416 ಟೆಂಡರಿಗಿಟ್ಟ ಇಟ್ಟ ಅಂದಾಜು ಮೊತ್ತವು (ಜಿ.ಎಸ್.ಟಿ. ಒಳಗೊಂಡಿರುತ್ತದೆ) ರೂ. 67.91 ಲಕ್ಷಗಳು ದಿಂದ ರೂ. 225.56 ಲಕ್ಷಗಳು ಇರುತ್ತವೆ.

ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿ.ಆರ್.ಬಿ.ಸಿ.ಸಿ. ವಿಭಾಗ ನಂ.3, ಗೋಕಾಕ ಕಚೇರಿಯ ಟೆಂಡರಗಳನ್ನು ದಿ: 19–09–2024 ರಿಂದ ದಿ: 27–09–2024 ರಂದು 16.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ ಪೂರ್ವಭಾವಿ ಸಭೆ (ರೂ. 100.00 ಲಕ್ಷಕ್ಕೆ ಮೇಲ್ಪಟ್ಟ ಕಾಮಗಾರಿಗಳಿಗೆ) ದಿನಾಂಕ 23–09–2024 11.00 ಗಂಟೆಗೆ. ಟೆಂಡರ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯವು ದಿನಾಂಕ 25–09–2024, 17.00 ಗಂಟೆಯವರೆಗೆ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ & ಸಮಯವು 27–09–2024 ರಂದು 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 30–09–2024, 11.00 ಗಂಟೆಗೆ, ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರಗಳಲ್ಲಿ ಯಾವುದೇ ಬದಲಾವಣೆಗಳು/ ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆಪಿಪಿ – ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–(ಹೆಚ್.ಎಸ್.ಕಾಖಂಡಕಿ)
ಕಾರ್ಯನಿರ್ವಾಹಕ ಇಂಜಿನೀಯರು,
ಕನೀನಿನಿ ಜಿಆರ್‌ಬಿಸಿಸಿ ವಿಭಾಗ ನಂ–3, ಗೋಕಾಕ.
DIPR/BGM/RO-NO-818/KSMCA/2024-25

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)
E-Mail: pdchikkaballapur@gmail.com, Ph.:08156-277005

ಸಂಖ್ಯೆ:ಜಿನಕೋ/ಚಿಸಿ(1)/ಅ–ನಗರೋತ್ಥಾನ ಹಂತ–4/47/2024–25 ದಿನಾಂಕ:10.09.2024

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)–4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)	ಗುತ್ತಿಗೆ ಅವಧಿ
1	ಶಿಡ್ಲಘಟ್ಟ ನಗರ ವ್ಯಾಪ್ತಿಯ ಚಿಂತಾಮಣಿ ಮುಖ್ಯ ರಸ್ತೆ ಯಿಂದ ಉಲ್ಲೂರು ಪೇಟೆಯ ಮುಖ್ಯ ರಸ್ತೆಯ ಶೆಟ್ಟಿಗುಣಿ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು ಶಿಡ್ಲಘಟ್ಟ ನಗರ ವ್ಯಾಪ್ತಿಯ ಕುಡಿಯುವ ನೀರು ಅಭಾವವಿರುವ ವಾರ್ಡ್‌ಗಳಲ್ಲಿ ಗೌಡನ ಕೆರೆ ಹಾಗೂ ಅಮ್ಮನ ಕೆರೆ ಸರಹದ್ದಿನಲ್ಲಿ ಕೊಳವೆ ಬಾವಿಕೊರೆದು ಪಂಪು ಮೋಟಾರ್ ಹಾಗೂ ಇನ್ನಿತರೆ ಪೂರಕ ಸಲಕರಣೆಗಳನ್ನು ಅಳವಡಿಸುವುದು ಮತ್ತು **DMA/2024-25 /OW/ WORK_INDENT21093**	96.93 (ಜಿ.ಎಸ್.ಟಿ ಹೊರತು ಪಡಿಸಿ)	1.93	6 months
2	ಬಾಗೇಪಲ್ಲಿ ಪುರಸಭೆ ವ್ಯಾಪ್ತಿಯಲ್ಲಿ 1ನೇ ವಾಡಿನ ಆಶ್ರಯ ಬಡಾವಣೆಯಿಂದ ಕೆ.ಇ.ಬಿ. ರವಣಪ್ಪ ಮನೆವರೆಗೆ ರಸ್ತೆ ಮತ್ತು ಚರಂಡಿ, ಸಾಯಿ ಬಾಬಾ ಗುಡಿ ರಸ್ತೆಯಿಂದ ಡಾಕ್ಟರ್ ಮುರಳಿ ಮನೆವರಗೆ ರಸ್ತೆ ಅಭಿವೃದ್ಧಿಪಡಿಸುವುದು. 2ನೇ ವಾರ್ಡಿನ ವಾಲ್ಮೀಕಿ ದೇವಸ್ಥಾನದಿಂದ ಚಿನ್ನಪ್ಪ ಮನೆವರೆಗೂ, ವಾಲ್ಮೀಕಿ ದೇವಸ್ಥಾನದ ರಸ್ತೆಯಿಂದ ಗಂಗಮ್ಮ ದೇವಸ್ಥಾನದವರೆಗೂ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು ಬಾಗೇಪಲ್ಲಿ ಪುರಸಭೆ ವ್ಯಾಪ್ತಿಯಲ್ಲಿ 17ನೇ ವಾರ್ಡಿನಲ್ಲಿ ಕೊಳವೆ ಬಾವಿ ಕೊರೆಯುವುದು ಪಂಪು ಮೋಟಾರ್ ಮತ್ತು ಇರರೆ ಸಾಮಾಗ್ರಿಗಳನ್ನು ಅಳವಡಿಸುವುದು. **DMA/2024-25/OW/WORK_INDENT21109**	23.94 (ಜಿ.ಎಸ್.ಟಿ ಹೊರತು ಪಡಿಸಿ)	0.50	3 months
3	ಗುಡಿಬಂಡೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾರ್ಡ್ ನಂ6 ರಲ್ಲಿ ಕೆ.ಇ.ಬಿ ಪಕ್ಕದ ಶಿವಪ್ಪ ಮನೆಯಿಂದ ಹನುಮಂತಪ್ಪ ಮನೆ ಪಕ್ಕದ ರಾಜ ಕಾಲುವೆಯವರೆಗೆ ಮಳೆ ನೀರು ಚರಂಡಿ ನಿರ್ಮಿಸಿ ಕವರಿಂಗ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ. ಸಂತೆ ಮೈದಾನದ ಆಶ್ವತ್ಥಕಟ್ಟೆಯಿಂದ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದವರೆಗೆ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿ ಮತ್ತು ವ್ಯಾಪ್ತಿಯ ಬ್ರಾಹ್ಮಣರಹಳ್ಳಿ ರಸ್ತೆಯಿಂದ ಷಬ್ಬೀರ್ ಮನೆಯವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ ಮತ್ತು ವಾರ್ಡ್‌ನಂ.1 ರಲ್ಲಿ ಕೆಂಪಮ್ಮ ಮನೆಯಿಂದ ಗಂಗುಲಪ್ಪ ಮನೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. **DMA/2024-25/RD/ WORK_INDENT20891**	12.01 (ಜಿ.ಎಸ್.ಟಿ ಹೊರತು ಪಡಿಸಿ)	0.31	3 months

ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **https://kppp.karnataka.gov.in/** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **https://kppp.karnataka.gov.in/** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. (1) ಪೂರ್ವಭಾವಿ ಸಭೆ ಕ್ರಂ ಸಂ–01 ಕ್ಕೆ **(PRE -BID MEETING): 17.09.2024 ರ ಪೂರ್ವಾಹ್ನ 11:00 ಗಂಟೆಗೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ. (2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 25.09.2024 ರ ಸಂಜೆ 17.30 ಗಂಟೆಗೆ.** (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 27.09.2024 ರ ಪೂರ್ವಾಹ್ನ 11.00 ಗಂಟೆಗೆ.** (4) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.09.2024 ರ ಬೆಳಗ್ಗೆ 11.00 ಗಂಟೆಗೆ ಅಥವಾ ಮುಂದೆ ಸೂಚಿಸಿದ ದಿನದಂದು.**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:185/ಕೆಎಸ್‌ಎಂಸಿಎ/2024–25

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಚುನಾವಣಾ ಪ್ರಣಾಳಿಕೆಯಲ್ಲಿ ವರ್ಷದೊಳಗೆ ಕಲ್ಯಾಣ ಕರ್ನಾಟಕದಲ್ಲಿ 2500 ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುವುದೆಂದು ಬೊಗಳೆ ಬಿಟ್ಟಿದ್ದ INCKarnataka , ಸರಕಾರ ರಚಿಸಿ 16 ತಿಂಗಳಾದರೂ ಒಂದೇ ಒಂದು ಹೊಸ ಶಾಲಾ ಕೊಠಡಿ ನಿರ್ಮಿಸಿಲ್ಲ. ಕುಸಿದು ಬೀಳುತ್ತಿರುವ ಶಾಲೆಗಳ ದುರಸ್ತಿಗೂ ಸಹ ಈ ಭ್ರಷ್ಟ ಕಾಂಗ್ರೆಸ್ ಸರಕಾರ ಇದುವರೆಗೂ ಬಿಡಿಗಾಸು ಹಣ ಬಿಡುಗಡೆ ಮಾಡಿಲ್ಲ. ಸಿಎಂ siddaramaiah ಅವರೇ, ನಿಮ್ಮ ರಾಜೀನಾಮೆಗೂ ಮುನ್ನ 2500 ಶಾಲಾ ಕೊಠಡಿಗಳು ನಿರ್ಮಾಣವಾಗಬಹುದೆ..?

ರಾಜು.ಪಿ

ಹಿಂದಿನ ಬಿಜೆಪಿ ಸರಕಾರದ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಅಂಕಿಅಂಶ ಮುಂದಿಟ್ಟು ಈ ಪ್ರಶ್ನೆ ಮಾಡಿ. ಅದಕ್ಕೆ ಸೂಕ್ತ ಉತ್ತರ ಕೊಡಲು ಕಾಂಗ್ರೆಸ್ ಸರಕಾರ ರೆಡಿ. ಯಾವುದೋ ಅವಿವೇಕಿಗಳು ಐ ಟಿ ಸೆಲ್ ಜೀವನ ನಿರ್ವಹಣೆಗಾಗಿ ಪೋಸ್ಟ್ ಮಾಡಿದಾಕ್ಷಣ ಉತ್ತರಿಸಲು ಕಾಂಗ್ರೆಸ್ ನಲ್ಲಿ ನಿಮ್ಮಂತಹ ದಡ್ಡರು ಕಡಿಮೆ.

ಕೊಲೆ ಬೆದರಿಕೆ, ತೇಜೋವಧೆಗೆ ಸುಳ್ಳಿನ ಸರಮಾಲೆ ಸೃಷ್ಟಿ | ಬಿಜೆಪಿ ವಿರುದ್ಧ ಸಿಎಂ ಕಿಡಿ

ರಾಗಾ ಮುಗಿಸಲು ಸಂಚು

ಬೆಂಗಳೂರು: ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಮುಗಿಸಲು ಬಿಜೆಪಿ ಸಂಚು ನಡೆಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಹುಲ್ ಗಾಂಧಿ ಅವರಿಗೆ ಕೊಲೆ ಬೆದರಿಕೆ, ತೇಜೋವಧೆಗೆ ಸುಳ್ಳಿನ ಸರಮಾಲೆ ಸೃಷ್ಟಿ ಮಾಡುತ್ತಿದೆ. ತ್ಯಾಗ ಬಲಿದಾನದ ಸಂಸ್ಕೃತಿ ಮತ್ತು ಹುತಾತ್ಮರ ಕುಟುಂಬದಿಂದ ಬಂದ ರಾಹುಲ್ ಗಾಂಧಿ ಅವರು ಇದಕ್ಕೆಲ್ಲ ಹೆದರುವವರಲ್ಲ. ಇಂಧಿರಾಗಾಂಧಿ, ರಾಜೀವ್ ಗಾಂಧಿ ದೇಶಕ್ಕಾಗಿ ಹುತಾತ್ಮರಾಗಿದ್ದಾರೆ. ಇಂಥಾ ಉನ್ನತ ತ್ಯಾಗ ಬಲಿದಾನದ ಕುಟುಂಬದಿಂದ ಬಂದ ರಾಹುಲ್ ಗಾಂಧಿ ಅವರು ದೇಶಕ್ಕಾಗಿ ಅವಿರತ ಹೋರಾಟ ನಡೆಸುತ್ತಿದ್ದಾರೆ. ಅಜ್ಜಿ ಇಂದಿರಾಗಾಂಧಿ ಅವರಿಗೆ ಆದ ಗತಿಯೇ ನಿಮಗೂ ಆಗುತ್ತದೆ ಎಂದು ರಾಹುಲ್‌ಗೆ ಬಿಜೆಪಿ ಬೆದರಿಕೆ ಹಾಕಿದೆ ಎಂದು ವಾಗ್ದಾಳಿ ನಡೆಸಿದರು.

ಕೇಂದ್ರದ ರೈಲ್ವೆ ಖಾತೆ ರಾಜ್ಯ ಸಚಿವ ರವನೀತ್ ಬಿಟ್ಟು, ರಾಹುಲ್ ಗಾಂಧಿ ಅವರನ್ನು ಭಯೋತ್ಪಾದಕ ಎಂದು ಕರೆದಿದ್ದಾರೆ. ಈ ರೀತಿ ಜೀವ ಬೆದರಿಕೆಗಳ ಮೂಲಕ ಬಿಜೆಪಿಯ ಕಾರ್ಯಕರ್ತರನ್ನು ಎತ್ತಿಕಟ್ಟುವ ಷಡ್ಯಂತ್ರ ನಡೆಯುತ್ತಿದೆ. ರಾಹುಲ್ ಗಾಂಧಿ ನಾಲಿಗೆ ಕತ್ತರಿಸಿದವರಿಗೆ 11 ಲಕ್ಷ ಬಹುಮಾನ ಕೊಡುವುದಾಗಿ ಶಿವಸೇನೆಯ ಶಿಂಧೆ ಬಣದ ಶಾಸಕ ಸಂಜಯ್ ಗಾಯಕ್ವಾಡ್ ಹೇಳಿದ್ದಾರೆ. ಕೂಡಲೇ ಸಂಜಯ್ ಗಾಯಕ್ವಾಡ್ ಮೇಲೆ ಕ್ರಿಮಿನಲ್ ಕೇಸು ದಾಖಲಿಸಿ ಜೈಲಿಗೆ ಕಳುಹಿಸಬೇಕು ಎಂದು ಆಗ್ರಹಿಸಿದರು.

ರಾಹುಲ್ ಗಾಂಧಿಯವರನ್ನು ಮುಗಿಸಲು ಬಿಜೆಪಿ ಸಂಚು ನಡೆಸುತ್ತಿದೆ. ರಾಜಕೀಯವಾಗಿಯೂ ಮುಗಿಸುವ ಜತೆಗೆ ಪ್ರಾಣ ಭಯ ಹುಟ್ಟಿಸುವ ಬಿಜೆಪಿ ಷಡ್ಯಂತ್ರ ಆತಂಕಕಾರಿಯಾದದ್ದು. ರಾಹುಲ್ ಗಾಂಧಿ ಅವರಿಗೆ ಜೀವ ಬೆದರಿಕೆ ಹಾಕಿರುವ ಎಲ್ಲರ ವಿರುದ್ಧ ಕ್ರಿಮಿನಲ್ ಕೇಸು ಹಾಕಿ ತಕ್ಷಣ ಬಂಧಿಸಬೇಕು. ತ್ಯಾಗ ಬಲಿದಾನದ ಸಂಸ್ಕೃತಿ ಮತ್ತು ಹುತಾತ್ಮರ ಕುಟುಂಬದಿಂದ ಬಂದ ರಾಹುಲ್ ಗಾಂಧಿ ಅವರು ಇದಕ್ಕೆಲ್ಲಾ ಹೆದರುವವರಲ್ಲ ಎಂದು ಹೇಳಿದರು.

ಆಡಳಿತಾರೂಢ ಬಿಜೆಪಿ ಪಕ್ಷದ ಗುಪ್ತ ಅಜೆಂಡಾವನ್ನು ಒಳಗೊಂಡಿರುವ ಒಂದು ದೇಶ ಒಂದು ಚುನಾವಣೆ ಪ್ರಸ್ತಾವವನ್ನು ಸಂಸತ್ ನ ಒಳಗೆ ಮತ್ತು ಹೊರಗೆ ನಮ್ಮ ಪಕ್ಷ ಎದುರಿಸಲಿದೆ. ದೇಶದ ಜನಾಭಿಪ್ರಾಯವೂ ಒಂದು ದೇಶ ಒಂದು ಚುನಾವಣೆ . ಲೋಕಸಭೆ ಇಲ್ಲವೆ ವಿಧಾನಸಭೆಯಲ್ಲಿ ಆಡಳಿತಾರೂಢ ಪಕ್ಷ ವಿಶ್ವಾಸಮತ ಗಳಿಸಲು ಸೋತುಹೋಗುವ ಸಂದರ್ಭದಲ್ಲಿ ಎದುರಾಗುವ ಬಿಕ್ಕಟ್ಟಿಗೆ ಪ್ರಸ್ತಾವದಲ್ಲಿ ಪರಿಹಾರವಿಲ್ಲ. ಇಂತಹ ಸಂದರ್ಭದಲ್ಲಿ ಮಧ್ಯಂತರ ಚುನಾವಣೆಯೊಂದೇ ಯೋಗ್ಯ ಪರಿಹಾರವಾಗಿದೆ. ಇದರ ಬದಲಿಗೆ ಸದನದಲ್ಲಿ ವಿಶ್ವಾಸ ಮತ ಗಳಿಸಲು ವಿಫಲವಾದ ಅಲ್ಪಸಂಖ್ಯಾತ ಪಕ್ಷ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡಿದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಗೆಯುವ ದ್ರೋಹವಾಗುತ್ತದೆ ಎಂದು ಆರೋಪಿಸಿದ್ದಾರೆ.

ಆಡಳಿತಾರೂಢ ಬಿಜೆಪಿ ಪಕ್ಷದ ಗುಪ್ತ ಅಜೆಂಡಾವನ್ನು ಒಳಗೊಂಡಿರುವ ಒಂದು ದೇಶ ಒಂದು ಚುನಾವಣೆ ಪ್ರಸ್ತಾವವನ್ನು ಸಂಸತ್ ನ ಒಳಗೆ ಮತ್ತು ಹೊರಗೆ ನಮ್ಮ ಪಕ್ಷ ಎದುರಿಸಲಿದೆ. ದೇಶದ ಜನಾಭಿಪ್ರಾಯವೂ ಒಂದು ದೇಶ ಒಂದು ಚುನಾವಣೆ . ಲೋಕಸಭೆ ಇಲ್ಲವೆ ವಿಧಾನಸಭೆಯಲ್ಲಿ ಆಡಳಿತಾರೂಢ ಪಕ್ಷ ವಿಶ್ವಾಸಮತ ಗಳಿಸಲು ಸೋತುಹೋಗುವ ಸಂದರ್ಭದಲ್ಲಿ ಎದುರಾಗುವ ಬಿಕ್ಕಟ್ಟಿಗೆ ಪ್ರಸ್ತಾವದಲ್ಲಿ ಪರಿಹಾರವಿಲ್ಲ. ಇಂತಹ ಸಂದರ್ಭದಲ್ಲಿ ಮಧ್ಯಂತರ ಚುನಾವಣೆಯೊಂದೇ ಯೋಗ್ಯ ಪರಿಹಾರವಾಗಿದೆ. ಇದರ ಬದಲಿಗೆ ಸದನದಲ್ಲಿ ವಿಶ್ವಾಸ ಮತ ಗಳಿಸಲು ವಿಫಲವಾದ ಅಲ್ಪಸಂಖ್ಯಾತ ಪಕ್ಷ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡಿದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಗೆಯುವ ದ್ರೋಹವಾಗುತ್ತದೆ ಎಂದು ಆರೋಪಿಸಿದ್ದಾರೆ.

ಅಸಹ್ಯವಾಗಿ ನಾಲಗೆ ಹರಿಬಿಟ್ಟು ಮಹಿಳಾ ಸಮುದಾಯವನ್ನು, ದಲಿತ ಜನಾಂಗವನ್ನು, ಒಕ್ಕಲಿಗ ಸಮುದಾಯವನ್ನು ಅತ್ಯಂತ ಕೆಟ್ಟದಾಗಿ ಅವಹೇಳನ ಮಾಡಿರುವ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು ಎನ್ನುವ ಬೇಡಿಕೆ ಇದೆ. ಸದ್ಯ ಮುನಿರತ್ನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಪೊಲೀಸರು ತನಿಖೆ ನಡೆಸಿದ್ದಾರೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೋದಿ ಐದು ವರ್ಷ ಪೂರೈಸೋದು ಡೌಟು

ನರೇಂದ್ರ ಮೋದಿ ಈ ಬಾರಿ ಐದು ವರ್ಷ ಪೂರೈಸಲ್ಲ. ದೇಶದಲ್ಲಿ ಆಗುತ್ತಿರುವ ರಾಜಕಾರಣದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮೋದಿ ಅವರು ಈ ಬಾರಿ ಪೂರ್ಣಾವಧಿ ಮುಗಿಸೋದು ಡೌಟು. ನಿತೀಶ್ ಕುಮಾರ್, ಚಂದ್ರಬಾಬು ನಾಯ್ಡು ಅವರು ಹೆಚ್ಚು ದಿನ ಕೇಂದ್ರ ಸರಕಾರದೊಂದಿಗೆ ಇರುವುದಿಲ್ಲ ಎನಿಸುತ್ತದೆ ಎಂದು ಸಿಎಂ ತಿಳಿಸಿದರು.

ಒಂದು ದೇಶ, ಒಂದು ಚುನಾವಣೆ: ಒಕ್ಕೂಟ ವ್ಯವಸ್ಥೆಗೆ ವಿರುದ್ಧ

ಇನ್ನು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿರುವ ಒಂದು ದೇಶ ಒಂದು ಚುನಾವಣೆಗೆ ಸಂಬಂಧಿಸಿದಂತೆ ಮಾಧ್ಯಮ ಪ್ರಕಟಣೆ ಹೊರಡಿಸಿದ್ದು, ಈ ಪ್ರಸ್ತಾವ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು ಮಾತ್ರವಲ್ಲ ಅನುಷ್ಠಾನಗೊಳಿಸಲು ಅಸಾಧ್ಯವಾದುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಸರಕಾರದ ಆದ್ಯತೆಗಳು ಏನಿರಬೇಕೆಂಬ ಸಾಮಾನ್ಯ ಜ್ಞಾನವೂ ಕೇಂದ್ರ ಸರಕಾರಕ್ಕಾಗಲಿ, ಪ್ರಧಾನಮಂತ್ರಿಯವರಿಗಾಗಲಿ ಇದ್ದ ಹಾಗೆ ಕಾಣುವುದಿಲ್ಲ. ದೇಶಾದ್ಯಂತ ನಿರುದ್ಯೋಗ ತಾಂಡವವಾಡುತ್ತಿದೆ, ಹಣದುಬ್ಬರದಿಂದ ದೇಶದ ಆರ್ಥಿಕತೆ ತತ್ತರಿಸುತ್ತಿದೆ. ಅಗತ್ಯವಸ್ತುಗಳ ಬೆಲೆ ಏರಿಕೆಯಿಂದ ಜನ ಬವಣೆಪಡುತ್ತಿದ್ದಾರೆ. ದೇಶಾದ್ಯಂತ ಕಾನೂನು ಸುವ್ಯವಸ್ಥೆ ಮೇಲಿನ ನಿಯಂತ್ರಣ ತಪ್ಪಿಹೋಗಿದ್ದು, ದಲಿತರು ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳು ಮಿತಿಮೀರಿ ಹೋಗುತ್ತಿದೆ. ಈ ಬಗ್ಗೆ ಯೋಚನೆ ಮಾಡಲು ಕೂಡಾ ಪುರುಸೊತ್ತಿಲ್ಲದ ಪ್ರಧಾನ ಮಂತ್ರಿಗಳು ಒಂದು ದೇಶ ಒಂದು ಚುನಾವಣೆ ಎಂಬ ಗಿಮಿಕ್ ಮೂಲಕ ಜನರ ಗಮನವನ್ನು ಬೇರೆ ಕಡೆ ಸೆಳೆದು ತಮ್ಮ ವೈಫಲ್ಯವನ್ನು ಮುಚ್ಚಿಹಾಕಲು ಹೊರಟಿದ್ದಾರೆ ಎಂದು ಟೀಕಿಸಿದರು.

ದಸರಾ ಉತ್ಸವ: ಕಾಡಿನಿಂದ ನಾಡಿಗೆ ಬಂದ ಗಜಪಡೆ

ಅಭಿಮನ್ಯು ಸಾರಥ್ಯದಲ್ಲಿ ಮರದ ಅಂಬಾರಿ ತಾಲೀಮು ಆರಂಭ

ದಸರಾ ಉತ್ಸವದಲ್ಲಿ ಪಾಲ್ಗೊಳ್ಳಲು ಕಾಡಿನಿಂದ ನಾಡಿಗೆ ಆಗಮಿಸಿರುವ ಗಜಪಡೆಗೆ ಬುಧವಾರ ಮರದ ಅಂಬಾರಿ ಹೊರುವ ತಾಲೀಮು ಆರಂಭವಾಯಿತು.

ಮೈಸೂರು: ದಸರಾ ಉತ್ಸವದಲ್ಲಿ ಪಾಲ್ಗೊಳ್ಳಲು ಕಾಡಿನಿಂದ ನಾಡಿಗೆ ಆಗಮಿಸಿರುವ ಗಜಪಡೆಗೆ ಬುಧವಾರ ಮರದ ಅಂಬಾರಿ ಹೊರುವ ತಾಲೀಮು ಆರಂಭವಾಯಿತು.

ಮರದ ಅಂಬಾರಿ ಹೊತ್ತ ಕ್ಯಾಪ್ಟನ್ ಅಭಿಮನ್ಯು ರಾಜ ಬೀದಿಯಲ್ಲಿ ಗಾಂಭೀರ್ಯದಿಂದ ಸಾಗಿದ. ಅರಮನೆ ಅಂಗಳದಿಂದ ಮರದ ಅಂಬಾರಿ ಹೊತ್ತು ಸಖಿಯರಾದ ಹಿರಣ್ಯಾ ಮತ್ತು ಲಕ್ಷ್ಮಿಯೊಂದಿಗೆ ಬನ್ನಿಮಂಟಪದತ್ತ ಹೆಜ್ಜೆ ಹಾಕಿದ. ಈ ವೇಳೆ ಮಂಹೇಂದ್ರ, ಧನಂಜಯ, ಭೀಮ, ಪ್ರಶಾಂತ, ಗೋಪಿ, ಕಂಜನ್, ಸುಗ್ರೀವ, ರೋಹಿತ, ಏಕಲವ್ಯ, ದೊಡ್ಡಹರವೆ ಲಕ್ಷ್ಮಿ, ವರಲಕ್ಷ್ಮಿ ಆನೆಗಳು ಅಭಿಮನ್ಯುವನ್ನು ಅನುಸರಿಸಿದವು.

ರಾಜ ಬೀದಿಯಲ್ಲಿ ಅಭಿಮನ್ಯು ತನ್ನ ಪಡೆಯೊಂದಿಗೆ ಗಾಭೀರ್ಯದಿಂದ ಹೆಜ್ಜೆ ಹಾಕುತ್ತಾ ಸಾಗಿದರೆ, ದಾರಿಯುದ್ದಕ್ಕೂ ರಸ್ತೆ ಬದಿ ವ್ಯಾಪಾರಿಗಳು, ಸಾರ್ವಜನಿಕರು ಕೈಮುಗಿದು ನಮಸ್ಕರಿಸಿದರೆ, ಹೂ ಮತ್ತು ಹಣ್ಣು ವ್ಯಾಪಾರಿಗಳು ಆನೆಗಳಿಗೆ ನೀಡಿ ತಮ್ಮ ಭಕ್ತಿ ಮೆರೆದರು.

ವಿಶೇಷ ಪೂಜೆ: ಮರದ ಅಂಬಾರಿ ತಾಲೀಮು ಹಿನ್ನೆಲೆ ಸಂಜೆ 4ಕ್ಕೆ ಅರಮನೆ ಅಂಗಳದಲ್ಲಿನ ಕೋಡಿ ಸೋಮೇಶ್ವರ ದೇವಾಲಯ ಅಭಿಮನ್ಯುವಿನ ಹೆಗಲಿಗೆ ಗಾದಿ ಮತ್ತು ನಮ್ದ ಬಿಗಿದು, ರಾಜವಂಶಸ್ಥರು ವಾಸಿಸುವ ಖಾಸಗಿ ಅರಮನೆಯ ಮುಂಭಾಗಲ್ಲಿರುವ ಅಂಬಾರಿ ಕಟ್ಟುವ ಜಾಗಕ್ಕೆ ಕರೆತರಲಾಯಿತು. ಬಳಿಕ ಅರ್ಚಕ ಪ್ರಹ್ಲಾದ್ ರಾವ್ ಅವರು ಅಭಿಮನ್ಯು ನೇತೃತ್ವದ ಗಜಪಡೆ ಹಾಗೂ ಮರದ ಅಂಬಾರಿಗೆ ಪೂಜೆ ನೆರವೇರಿಸಿದರು. ಎಲ್ಲಾ ಆನೆಗಳಿಗೂ ಪಂಚಫಲ ನೀಡಲಾಯಿತು.

ಗಜಪಡೆಗೆ ಮರದ ಅಂಬಾರಿ ಹೊರುವ ತಾಲೀಮನ್ನು ಆರಂಭಿಸಲಾಗಿದ್ದು, ಮೊದಲ ದಿನ ಅಭಿಮನ್ಯುವಿಗೆ ನಡೆಸಲಾಗುತ್ತಿದೆ. 280 ಕೆಜಿ ತೂಕದ ಮರದ ಅಂಬಾರಿಯೊಂದಿಗೆ ಮರಳು ಮೂಟೆ, ಗಾದಿ ಮತ್ತು ನಮ್ದ ಸೇರಿ 750 ಕೆಜಿಯ ಭಾರ ಹೊರುವ ತಾಲೀಮು ಇದಾಗಿದೆ. ಹಂತ ಹಂತವಾಗಿ ಎಲ್ಲಾ ಆನೆಗಳಿಗೂ ಈ ತಾಲೀಮು ಇರಲಿದೆ.

-ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್

ಸಮಾಚಾರ ಸಣ್ಣದಲ್ಲ

ರಾಯಣ್ಣ ಪ್ರತಿಮೆ ವಿರೂಪ: ಒಬ್ಬ ವಶಕ್ಕೆ

ನವಲಗುಂದ: ತಾಲೂಕಿನ ಅಳಗವಾಡಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಕಿಡಿಗೇಡಿಗಳು ವಿರೂಪಗೊಳಿಸಿದ್ದಾರೆ. ರಾಯಣ್ಣ ಪ್ರತಿಮೆಯ ಬಲಗೈ ವಿರೂಪಗೊಳಿಸಲಾಗಿದೆ. ಗ್ರಾಮಸ್ಥರು ಇದನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೃತ್ಯಕ್ಕೆ ಸಂಬಂಧಿಸಿದಂತೆ ಅಶೋಕ ಕಾಲವಾಡ (44) ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಟ್ಟೆ ಸುತ್ತಿ ಪ್ರತಿಮೆಯನ್ನು ಮುಚ್ಚಲಾಗಿದೆ. ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

ಪ್ಯಾಲೆಸ್ತೀನ್ ಪರ ಫ್ಲೆಕ್ಸ್: ಕ್ರಮಕ್ಕೆ ಆರಗ ಒತ್ತಾಯ

ಶಿವಮೊಗ್ಗ: ತೀರ್ಥಹಳ್ಳಿ ತಾಲೂಕಿನ ಹಣಗೆರೆಕಟ್ಟೆಯಲ್ಲಿ ಪ್ಯಾಲೆಸ್ತೀನ್ ಪರವಾದ ಫ್ಲೆಕ್ಸ್ ಹಾಕಲಾಗಿರುವ ಕುರಿತು ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ಬುಧವಾರ ಒತ್ತಾಯಿಸಿದ್ದಾರೆ. ಹಿಂದೂ ಮತ್ತು ಮುಸ್ಲಿಂ ಎರಡೂ ಧರ್ಮಗಳ ಧಾರ್ಮಿಕ ಸೌಹಾರ್ದತೆಗೆ ಖ್ಯಾತಿಯಾಗಿರುವ ಸ್ಥಳ ಹಣಗೆರೆ ಕಟ್ಟೆಯಲ್ಲಿ ಮಂಗಳವಾರ ಪ್ಯಾಲೆಸ್ತೀನ್ ಪರವಾದ ಫ್ಲೆಕ್ಸ್ ಕಟ್ಟಲಾಗಿದ್ದು, ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಮುಜರಾಯಿ ಇಲಾಖೆ ಆಡಳಿತ ಜಾಗದಲ್ಲಿ ಫ್ಲೆಕ್ಸ್ ಹಾಕಿರುವ ಕಿಡಿಗೇಡಿಗಳ ವಿರುದ್ಧ ಕ್ರಮಕ್ಕೆ ಆರಗ ಜ್ಞಾನೇಂದ್ರ ಒತ್ತಾಯಿಸಿದ್ದು, ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಸ್ಥಳದಲ್ಲಿ ಪೊಲೀಸ್ ಪಡೆಗಳನ್ನು ನಿಯೋಜನೆ ಮಾಡಲಾಗಿದೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ

ಮೈಸೂರು: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಗಣೇಶ ಉತ್ಸವ ವಿಚಾರದಲ್ಲಿ ಗೃಹ ಇಲಾಖೆ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಜೆಡಿಎಸ್ ಕಾರ್ಯಾಧ್ಯಕ್ಷ ಸಾರಾ ಮಹೇಶ್ ಟೀಕಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಣೇಶನನ್ನು ಪೊಲೀಸ್ ವಾಹನದಲ್ಲಿ ಕೂರಿಸಿದ್ದು ಸರಿಯಲ್ಲ. ಪೊಲೀಸ್ ಇಲಾಖೆ ಸರಕಾರದ ಕಪಿಮುಷ್ಟಿಯಲ್ಲಿಲ್ಲ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಅವರ ಕಪಿಮುಷ್ಟಿಯಲ್ಲಿದೆ ಎಂದು ಆರೋಪಿಸಿದರು. ಸಿಎಂ ಸಿದ್ದರಾಮಯ್ಯ ವಿರುದ್ಧ ಕುಮಾರಸ್ವಾಮಿ ದಲಿತರ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆಂದು ಆರೋಪ ಮಾಡಿರುವ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಕುಮಾರಸ್ವಾಮಿ ಯಾವುದೇ ದಾಖಲೆ ಇಲ್ಲದೇ ಈ ರೀತಿ ಹೇಳಿಕೆ ಕೊಡುವುದಿಲ್ಲ. ಅವರು ರಾಜ್ಯಕ್ಕೆ ಬಂದ ನಂತರ ಈ ಬಗ್ಗೆ ಪ್ರತಿಕ್ರಿಯಿಸುತ್ತಾರೆ ಎಂದು ಹೇಳಿದರು. ಕಾಂಗ್ರೆಸ್ ಸ್ನೇಹಿತರು ಸಿದ್ದರಾಮಯ್ಯ ಅವರನ್ನು ಯಾವಾಗಲೂ ಸಮರ್ಥಿಸಿಕೊಳ್ಳುತ್ತಾರೆ. ಈ ಹಿಂದೆ ವಾಲ್ಮೀಕಿ ಪ್ರಕರಣದಲ್ಲೂ ಏನೂ ಆಗಿಲ್ಲ ಎನ್ನುತ್ತಿದ್ದರು. ಎಸ್ಸಿಎಸ್ಟಿ ಹಣ ದುರ್ಬಳಕೆ ನಾಚಿಕೆಗೇಡಿನತನ. ಹಣಕಾಸು ಸಚಿವರಾಗಿರುವ ಸಿದ್ದರಾಮಯ್ಯ ಅವರೇ ಇದಕ್ಕೆ ನೇರ ಹೊಣೆಗಾರರು ಎಂದು ಆರೋಪಿಸಿದರು.

{ವಾಟಾಳ್ ನಾಗರಾಜ್} ಕನ್ನಡ ಚಳುವಳಿ ವಾಟಾಳ್ ಪಕ್ಷದ ರಾಜ್ಯಾಧ್ಯಕ್ಷ

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಜೈಲಿಗೆ ಹೋದರೂ ಪರವಾಗಿಲ್ಲ, ಆದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ಮಾತ್ರ ಕೊಡಬಾರದು. ರಾಜ್ಯದಲ್ಲಿ ರಾಜ್ಯಪಾಲರು ರಾಜಕಾರಣಿಯಾಗಿ ವರ್ತಿಸುತ್ತಿದ್ದಾರೆ. ರಾಜಭವನ ರಾಜಕೀಯ ಭವನ ಆಗುತ್ತಿದೆ. ರಾಜ್ಯಪಾಲರ ಬಗ್ಗೆ ಲೋಕಸಭೆಯಲ್ಲಿ ಚರ್ಚೆಯಾಗಬೇಕು. ಚುನಾಯಿತ ಸರಕಾರವನ್ನು ಅವರು ಅಸ್ಥಿರಗೊಳಿಸುತ್ತಿದ್ದಾರೆ.

ಪ್ರವಾಸಿ ಮಂದಿರದಲ್ಲಿ ಮುಸ್ಲಿಂ ಮುಖಂಡರೊಂದಿಗೆ ಚರ್ಚೆ

ಗಲಭೆ: ಅಲ್ಪಸಂಖ್ಯಾತ ಆಯೋಗ ಅಧ್ಯಕ್ಷ ಭೇಟಿ

ನಾಗಮಂಗಲ: ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮ್ಮದ್ ನೇತೃತ್ವದ ಸಮಿತಿ ಭೇಟಿ ನೀಡಿ, ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮುಸ್ಲಿಂ ಮುಖಂಡರೊಂದಿಗೆ ಚರ್ಚಿಸಿದರು.

ನಂತರ ತಾಲೂಕು ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿ, ನಂತರ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಸಂತ್ರಸ್ತರ ಜತೆ ಮಾತುಕತೆ ನಡೆಸಿದರು.

ಈ ವೇಳೆ ಮುಸ್ಲಿಂ ಮುಖಂಡರು ಘಟನೆಗೆ ಪೊಲೀಸರ ವೈಫಲ್ಯ, ಮುಂಜಾಗ್ರತಾ ಕ್ರಮವಹಿಸದಿರುವುದು, ಯುವಕರ ಡ್ರಗ್ಸ್, ಮದ್ಯಸೇವನೆ, ಎರಡು ಸಮುದಾಯದ ಹಿರಿಯರು ಗಲಾಟೆ ತಡೆಗೆ ಮುಂದಾಗದೇ ಇರುವುದು ಕೂಡ ಕಾರಣ ಎಂದು ವಿವರಿಸಿದರು. ಗಣಪತಿ ಮೆರವಣಿಗೆಗೆ ಸೂಕ್ತ ಪೊಲೀಸ್ ಬಂದೋಬಸ್ತ್ ನಿಯೋಜನೆಗೊಂಡಿದ್ದರೇ ಈ ರೀತಿಯ ಘಟನೆಗಳು ನಡೆಯುತಿರಲಿಲ್ಲ. ನಂತರ ಬೆಂಕಿ, ಕಲ್ಲು ತೂರಾಟದಂತಹ ಘಟನೆಗಳು ನಡೆದು, ಪರಿಸ್ಥಿತಿ ಕೈ ಮೀರಿತು ಎಂದು ಹಲವು ಮುಖಂಡರು ಸಭೆಯಲ್ಲಿ ಅಧ್ಯಕ್ಷರಿಗೆ ಮಾಹಿತಿ ನೀಡಿದರು. ಅಲ್ಲದೇ ಘಟನೆಯಿಂದ ಆಸ್ತಿ-ಪಾಸ್ತಿ ಕಳೆದುಕೊಂಡವರಿಗೆ ಸೂಕ್ತ ಪರಿಹಾರ ನೀಡುವಂತೆಯೂ ಒತ್ತಾಯಿಸಿದರು.

ನಾಗಮಂಗಲ ಗಲಾಟೆ: 55 ಜನರ ಬಂಧನ

ಮಂಡ್ಯ: ಸೆ.11ರಂದು ನಡೆದ ಘಟನೆ ಬಳಿಕ ಸದ್ಯ ನಾಗಮಂಗಲ ಪಟ್ಟಣ ಶಾಂತವಾಗಿದೆ. ಘಟನೆ ಸಂಬಂಧ 24 ಪ್ರಕರಣ ದಾಖಲಿಸಲಾಗಿದ್ದು, 55 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗಮಂಗಲದಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳಿದೆ. ಅಮಾಯಕರಿಗೆ ಏನೂ ಮಾಡಲ್ಲ, ಅವರು ಪಟ್ಟಣಕ್ಕೆ ಬರಬಹುದು. ಘಟನೆಯ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣದ ಮೇಲೆ ನಿಗಾ ವಹಿಸಲಾಗಿದೆ. ಜಾಲತಾಣಗಳಲ್ಲಿ ಪ್ರಚೋದನಕಾರಿ ಪೋಸ್ಟ್ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸ್ ತಂಡ ರಚನೆ ಮಾಡಲಾಗಿದೆ. ಬೇರೆ ಬೇರೆ ಜಿಲ್ಲೆಯಲ್ಲಿ ನಡೆದಿರುವ ಘಟನೆಗಳ ವಿಡಿಯೊ ಬಿಟ್ಟು, ನಾಗಮಂಗಲ ಪ್ರಕರಣ ಅಂತ ಪೋಸ್ಟ್ ಹಾಕುತ್ತಿದ್ದಾರೆ. ಅಂತವರ ವಿರುದ್ಧ ಕ್ರಮ ಕೈಗೊಂಡಿದ್ದೇವೆ ಎಂದು ಎಸ್‌ಪಿ ತಿಳಿಸಿದರು.

ಆರೋಪಿಗಳು ಇಬ್ಬರು ಕೇರಳ ಮೂಲದವರು: ಬಂಧಿತ ಆರೋಪಿಗಳಲ್ಲಿ ಇಬ್ಬರು ಕೇರಳ ಮೂಲದವರಾಗಿದ್ದಾರೆ. ಮಲಪ್ಪುರಂ ಜಿಲ್ಲೆಯ ಯುಸೂಫ್ ಹಾಗೂ ನಾಸೀರ್ ಎಂಬುಯವರನ್ನು ಬಂಧಿಸಲಾಗಿದೆ. ಇವರಿಬ್ಬರೂ 18 ವರ್ಷಗಳಿಂದಲೂ ನಾಗಮಂಗಲ ಪಟ್ಟಣದ ಅಂಗಡಿಯೊಂದನ್ನು ಇಟ್ಟುಕೊಂಡಿದ್ದರು. ಇವರಿಗೆ ಪಿಎಫ್‌ಐ ಸೇರಿದಂತೆ ಯಾವುದೇ ಸಂಘಟನೆಗಳೊಂದಿಗೆ ಲಿಂಕ್ ಇರುವ ಬಗ್ಗೆ ಇದುವರೆಗಿನ ತನಿಖೆಯಲ್ಲಿ ಮಾಹಿತಿ ತಿಳಿದಿಲ್ಲ. ಹೆಚ್ಚಿನ ತನಿಖೆ ನಡೆಯುತ್ತಿದೆ. ಇದೇ ವೇಳೆ ಕೇರಳದವರ ಜೊತೆ ಬಾಂಗ್ಲಾದೇಶದವರೂ ವಾಸವಿದ್ದಾರೆ ಎಂಬ ಬಗ್ಗೆ ಮಾಧ್ಯಮಗಳಲ್ಲಿ ನೋಡಿದ್ದೇನೆ ಎಂದು ತಿಳಿಸಿದರು.

ವೈ.ಎನ್.ಹೊಸಕೋಟೆಯಲ್ಲಿ ಹೃದಯ ವಿದ್ರಾವಕ ಘಟನೆ

ತಂದೆ ಮೃತದೇಹ ಬೈಕ್‌ನಲ್ಲಿ ಸಾಗಾಟ

ಪಾವಗಡ: ತಂದೆಯ ಮೃತದೇಹವನ್ನು ಸಾಗಿಸಲು ಆಂಬ್ಯುಲೆನ್ಸ್ ಇಲ್ಲದ ಕಾರಣ ಮಕ್ಕಳು ತಮ್ಮ ದ್ವಿಚಕ್ರ ವಾಹನದಲ್ಲಿ ಸಾಗಿಸಿದ ಹೃದಯವಿದ್ರಾವಕ ಘಟನೆ ಪಾವಗಡ ತಾಲೂಕಿನ ವೈ.ಎನ್. ಹೊಸಕೋಟೆಯಲ್ಲಿ ನಡೆದಿದೆ.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಪಾವಗಡ ತಾಲೂಕಿನ ದಳವಾಯಿಹಳ್ಳಿ ಗ್ರಾಮದ ಹೊನ್ನೂರಪ್ಪ (68) ಎನ್ನುವ ವ್ಯಕ್ತಿ ವೈ.ಎನ್.ಹೊಸಕೋಟೆಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೃತಪಟ್ಟಿದ್ದರು. ಇವರ ಶವವನ್ನು ಸಾಗಿಸಲು ಆಂಬ್ಯುಲೆನ್ಸ್ ಸಿಗದ ಕಾರಣ ದ್ವಿಚಕ್ರ ವಾಹನದಲ್ಲಿಯೇ ಹಿರಿಯ ಪುತ್ರ ಚಂದ್ರಣ್ಣ ಮತ್ತು ಕಿರಿಯ ಪುತ್ರ ಗೋಪಾಲಪ್ಪ ತಮ್ಮೂರಿಗೆ ಸಾಗಿಸಿದ್ದಾರೆ. ಅತೀ ಹಿಂದುಳಿದ ತಾಲೂಕು ಪಾವಗಡದ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹಾಗೂ ಸಚಿವರು ಇಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಅಗತ್ಯವಿದೆ ಎಂದು ಸ್ಥಳೀಯರು ಆಗ್ರಹಿಸಿದರು.

ದಳವಾಯಿ ಹಳ್ಳಿ ಗ್ರಾಮದ ವಾಸಿ ಹೊನ್ನೂರಪ್ಪ ಎಂಬ ವೃದ್ಧರನ್ನು ಆಂಬ್ಯುಲೆನ್ಸ್ ನಲ್ಲಿ ಕರೆತಂದಿದ್ದರು. ಆದರೆ ಮಾರ್ಗ ಮಧ್ಯದಲ್ಲಿ ಪ್ರಾಣ ಹೋಗಿತ್ತು ಪರಿಶೀಲನೆ ಮಾಡಿ ಕುಟುಂಬ ಸದಸ್ಯರಿಗೆ ತಿಳಿಸಿದೆ. ನಂತರ ಆಂಬ್ಯುಲೆನ್ಸ್ ಕೇಳಿದಾಗ ರಿಪೇರಿಗಾಗಿ ಹೋಗಿದ್ದ ಹಿನ್ನೆಲೆಯಲ್ಲಿ ಆಂಬ್ಯುಲೆನ್ಸ್ ಇರಲಿಲ್ಲ ಎಂದು ಅವರ ಗಮನಕ್ಕೆ ತರಲಾಗಿತ್ತು.

-ಡಾ. ಲೋಕೇಶ್, ಆರೋಗ್ಯ ಕೇಂದ್ರ, ಹೊಸಕೋಟೆ

ದಳವಾಯಿ ಹಳ್ಳಿಯಿಂದ 12:30 ರಲ್ಲಿ ನಮ್ಮ ತಾತನ ಕರೆದೊಕೊಂಡು ಆಸ್ಪತ್ರೆಗೆ ಹೋದೆವು ಅದರೆ ವೈದ್ಯರು ನೋಡಿ ಈಗಾಗಲೇ ಮರಣ ಹೊಂದಿದ್ದಾರೆ ಎಂಬುದಾಗಿ ತಿಳಿಸಿದರು. ನಂತರ ನಮ್ಮನ್ನು ಕರೆತಂದಿದ್ದ 108 ಆಂಬ್ಯುಲೆನ್ಸ್ ಡ್ರೈವರ್‌ಗೆ ಹಳ್ಳಿಗೆ ಬಿಡಿ ಎಂದು ಕೇಳಿಕೊಂಡೆವು. ಆದರೆ ನಾವು ಬಿಡಲು ಸಾಧ್ಯವಿಲ್ಲ ಎಂಬುದಾಗಿ ಆಂಬ್ಯುಲೆನ್ಸ್ ಡ್ರೈವರ್ ಹೇಳಿದ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನದಲ್ಲಿ ನಮ್ಮ ತಾತನಿಗೆ ಕೂರಿಸಿಕೊಂಡು ನಮ್ಮ ಹಳ್ಳಿಗೆ ಹೋದೆವು.

-ಅಭಿ .ಮೃತರ ಮೊಮ್ಮಗ, ಖುದಳವಾಯಿ ಹಳ್ಳಿ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಆರೋಪ

ಹಗರಣ ಮರೆಮಾಚಲು ಗಣೇಶ ಗಲಾಟೆ

ಮೈಸೂರು: ರಾಜ್ಯ ಸರಕಾರ ಹಗರಣದಲ್ಲಿ ನಿರತವಾಗಿದ್ದು, ಅದನ್ನು ಮುಚ್ಚಿಕೊಳ್ಳಲು ಈ ರೀತಿಯ ಗಲಾಟೆ ಇತ್ಯಾದಿಗಳನ್ನು ಮಾಡಿಸುತ್ತಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು.

ರಾಜ್ಯದಲ್ಲಿ ಗಣೇಶ ಗಲಾಟೆ ವಿಚಾರ ಕುರಿತು ಮಾತನಾಡಿದ ಅವರು, ರಾಜ್ಯದಲ್ಲಿಗುಪ್ತಚರ ಇಲಾಖೆ ಸಂಪೂರ್ಣ ವಿಫಲವಾಗಿದೆ. ಒಂದು ಸಮುದಾಯದ ಓಲೈಕೆಗಾಗಿ ಇನ್ನೊಂದು ಸಮುದಾಯವನ್ನು ಕೈ ಬಿಟ್ಟಿದ್ದಾರೆ. ಮಂಡ್ಯದ ಜನ ಸಾಕಷ್ಟು ಪ್ರಬುದ್ಧರಿದ್ದಾರೆ. ಎಲ್ಲವನ್ನೂ ಗಮನಿಸುತ್ತಿದ್ದಾರೆ ಎಂದು ಸೂಚ್ಯವಾಗಿ ತಿಳಿಸಿದರು.

ಎನ್‌ಡಿಎ ಅಭ್ಯರ್ಥಿ: ಚನ್ನಪಟ್ಟಣ ಬೈ ಎಲೆಕ್ಷನ್ ವಿಚಾರ ಕುರಿತು ಈಗಾಗಲೇ ಸಿ.ಪಿ.ಯೋಗೇಶ್ವರ್ ಕೂಡ ಸಭೆಗಳನ್ನು ಮಾಡುತ್ತಿದ್ದಾರೆ. ನಾವು ಕೂಡ ನಮ್ಮ ಕಾರ್ಯಕರ್ತರ ಜತೆ ಸಭೆ ಮಾಡುತ್ತಿದ್ದೇವೆ. ಒಟ್ಟಾರೆಯಾಗಿ ಎನ್‌ಡಿಎ ಅಭ್ಯರ್ಥಿ ಕಣಕ್ಕಿಳಿಯುತ್ತಾರೆ ಎಂದು ಸ್ಪಷ್ಟಪಡಿಸಿದರು. ನಾನು ನಿಲ್ಲುತ್ತೇನೋ, ಇನ್ಯಾರು ನಿಲ್ಲುತ್ತಾರೋ ಎಂಬ ಪ್ರಶ್ನೆ ಸದ್ಯಕ್ಕೆ ಇಲ್ಲ. ಇನ್ನು ಉಪ ಚುನಾವಣೆ ದಿನಾಂಕ ಪ್ರಕಟ ಆಗಿಲ್ಲ. ಕಾರ್ಯಕರ್ತರ ಭಾವನೆಗೆ ತಕ್ಕಂತೆ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಸತ್ಯಾಸತ್ಯತೆ ತಿಳಿಯಲಿದೆ

ಶಾಸಕ ಮುನಿರತ್ನ ವಿರುದ್ಧ ಜಾತಿ ನಿಂದನೆ ಪ್ರಕರಣ ವಿಚಾರ ಕುರಿತು ಮಾತನಾಡಿದ ಅವರು, ತನಿಖೆ ಪ್ರಾರಂಭವಾಗಿದೆ. ಎಫ್‌ಎಸ್‌ಎಲ್ ವರದಿ ಬರಬೇಕಿದ್ದು, ನಂತರ ಸತ್ಯಾಸತ್ಯತೆ ಹೊರಬರತ್ತದೆ. ಈ ವಿಚಾರದಲ್ಲಿ ರಾಜ್ಯ ಸರಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ಪಿಎಸ್‌ಐ ಪರಶುರಾಮ ಆತ್ಮಹತ್ಯೆ ಪ್ರಕರಣಕ್ಕೆ ರಾಜ್ಯ ಸರಕಾರ ಯಾವ ರೀತಿ ಕ್ರಮ ಜರುಗಿಸಿದೆ ಎಂದು ನೋಡಿದ್ದೇವೆ ಎಂದು ಟೀಕಿಸಿದರು.

ಆರ್.ಅಶೋಕ ಬಾಯಿಗೆ ಬದ್ಧತೆ ಇಲ್ಲ: ಸಚಿವ ಎನ್.ಎಸ್.ಬೋಸರಾಜು

ಬಿಜೆಪಿಯವರಿಗೆ ಸಾಮಾನ್ಯ ಜ್ಞಾನ ಇಲ್ಲ

ರಾಯಚೂರು: ಬಿಜೆಪಿಯವರು ಮೈಮೇಲೆ ಬಂದಂತೆ ಆಡುತ್ತಿದ್ದಾರೆ. ರಾಜ್ಯ ಸರಕಾರದಿಂದ ಕೆಲಸ ಆಗುತ್ತಿಲ್ಲ ಎಂದು ಜನರಿಗೆ ಬಿಂಬಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಹೇಳಿದರು.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿ, ಬಿಜೆಪಿಯವರಿಗೆ ಸಾಮಾನ್ಯ ಜ್ಞಾನ ಇಲ್ಲದಂತಾಗಿದೆ. ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವರಾದರೂ ರಾಜ್ಯದಲ್ಲಿ ನಡೆಯುವ ಸಣ್ಣ ಘಟನೆಗಳಿಗೂ ಪ್ರತಿಕ್ರಿಯೆ ನೀಡುವ ಮೂಲಕ ತಮ್ಮ ಅಸ್ತಿತ್ವ ಸಾಬೀತು ಮಾಡಿಕೊಳ್ಳುತ್ತಿದ್ದಾರೆ. ಆರ್.ಅಶೋಕ ಬಾಯಿಗೆ ಬದ್ಧತೆ ಇಲ್ಲ. ಸಂಬಂಧ ಇಲ್ಲದ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಅವರಿಗೆ ಏನಾದರೂ ಕೆಲಸ ಇದೆಯಾ? ಎಂದು ವಾಗ್ದಾಳಿ ನಡೆಸಿದರು.

ತಾಲೂಕು ಮಟ್ಟದಲ್ಲಿ ಆಗಿರುವ ವಿಷಯವನ್ನು ರಾಷ್ಟ್ರಮಟ್ಟದಲ್ಲಿ ಮಾತನಾಡ್ತಾರೆ ಎಂದರೆ ಬಿಜೆಪಿಯವರಿಗೆ ಏನಾದರೂ ನೈತಿಕತೆ ಇದೆಯಾ ? ನಾಗಮಂಗಲ ಗಲಾಟೆಯನ್ನು ರಾಷ್ಟ್ರಮಟ್ಟದ ವಿಷಯ ಮಾಡಿದ್ದಾರೆ. ದೇಶದ ಪ್ರಧಾನಿಯೊಬ್ಬರು ಗಣೇಶ ಪೂಜೆಗೆ ಮುಖ್ಯ ನ್ಯಾಯಾಧೀಶರ ಮನೆಗೆ ಹೋಗುತ್ತಾರೆಂದರೆ ಏನು ಹೇಳಬೇಕು. ಪ್ರಧಾನಿಯವರಿಗೆ ತಮ್ಮದೇ ಆದ ಶಿಷ್ಟಾಚಾರ ಇರುತ್ತದೆ. ಅದೆಲ್ಲ ಮೀರಿ ನಡೆದುಕೊಳ್ಳುವ ಮೂಲಕ ಯಾವ ಸಂದೇಶ ಕೊಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.



ವಾಲ್ಮೀಕಿ ಹಗರಣ ವಿಚಾರದಲ್ಲಿ ಕೇಂದ್ರ ಸರಕಾರ ಸಿಬಿಐ, ಇಡಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬುದು ಇಡೀ ರಾಜ್ಯಕ್ಕೆ ಗೊತ್ತಾಗಿದೆ. ಇಲ್ಲಿ ದಾಖಲಾದ ಆರೋಪಗಳೆಲ್ಲ ನಿರಾಧಾರ. ಈ ವಿಚಾರದಲ್ಲಿ ನ್ಯಾಯಾಲಯದ ತೀರ್ಪು ಅಂತಿಮವಾಗುತ್ತದೆ. ಆದರೆ, ಇಡಿ, ಸಿಬಿಐ ಬಳಸಿಕೊಂಡು ರಾಜಕೀಯಕ್ಕೆ ತಳಕು ಹಾಕುವುದು ಮೋದಿ , ಶಾ ನೀತಿಯಾಗಿದೆ. ಕಳೆದ 10 ವರ್ಷದಲ್ಲಿ ಕೇಂದ್ರ ಸರಕಾರ ತನಿಖಾ ಸಂಸ್ಥೆಗಳನ್ನು ಕುಲಗೆಡಿಸಿದೆ.

-ಎನ್.ಎಸ್.ಬೋಸರಾಜು, ಸಚಿವ

ರಾಜ್ಯ ಸರಕಾರದ ಖಜಾನೆ ಖಾಲಿಯಾಗಿದೆ: ಛಲವಾದಿ

ರಾಯಚೂರು: 5 ಸಾವಿರ ಕೋಟಿ ರು.ಕೊಡುವುದಾಗಿ ಹೇಳುತ್ತಿದ್ದಾರೆ. ರಾಜ್ಯ ಸರಕಾರದ ಖಜಾನೆ ಖಾಲಿಯಾಗಿದೆ. ಎಲ್ಲಿಂದ ತಂದು ಕೊಡ್ತಾರೆ ಗೊತ್ತಿಲ್ಲ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ನಗರದ ಅಂಬೇಡ್ಕರ್ ವೃತ್ತದಲ್ಲಿ ಬಿಜೆಪಿಯಿಂದ ರಾಹುಲ್ ಗಾಂಧಿ ಅವರು ಎಸ್ಸಿ, ಎಸ್ಟಿ ಮೀಸಲಾತಿ ವಿರೋಧಿ ಹೇಳಿಕೆ ನೀಡಿರುವುದನ್ನು ಖಂಡಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿ, 5 ಸಾವಿರ ಕೋಟಿ ರು. ಕೊಡದಿದ್ದರೂ ಪರವಾಗಿಲ್ಲ, ಗುಲ್ಬರ್ಗಾದಲ್ಲಿರುವ 5 ಸಾವಿರ ಗುಂಡಿಗಳನ್ನಾದರೂ ಮುಚ್ಚಿ. ಈ ಸರಕಾರ ಅಭಿವೃದ್ಧಿಯ ಪರವಾಗಿಲ್ಲ. ಅವರನ್ನು ಗೇಲಿ ಮಾಡುವಂತಹ ಪರಿಸ್ಥಿತಿ ಬಂದಿದೆ. ಕೇವಲ ನಾಟಕ ಕಂಪನಿಯನ್ನು ತಂದು ನಾಟಕ ತೋರಿಸಿ ಹೋಗಿದ್ದಾರೆ ಎಂದು ಸರಕಾರದ ವಿರುದ್ಧ ಗೇಲಿ ಮಾಡಿದರು.

ಬೆಂಕಿ ಹಚ್ಚುತ್ತಿರುವುದು ಕಾಂಗ್ರೆಸ್, ಬೆಂಕಿ ಆರಿಸಲು ನಾವು ಹೋಗಬೇಕು ಅಲ್ವಾ. ಬೆಂಕಿ ಆರಿಸುವ ಕೆಲಸ ನಮಗಿದೆ. ನಾಗಮಂಗಲಕ್ಕೆ ಹೋಗಿ, ಪರಿಸ್ಥಿತಿಯನ್ನು ಕೂಡ ನಾನು ನೋಡಿ ಬಂದಿದ್ದೇನೆ. ಹಿಂದೂಗಳನ್ನು ಟಾರ್ಗೆಟ್ ಮಾಡಿ ಅವರ ಅಂಗಡಿಗಳಿಗೆ ಬೆಂಕಿ ಹಾಕಿದ್ದಾರೆ. ಕೇರಳದವರಿಗೆ ನಾಗಮಂಗಲದಲ್ಲಿ ಕೆಲಸ ಏನು ಎಂದು ಪ್ರಶ್ನಿಸಿದರು.

ಬೆಳಗಾವಿ ಗಣೇಶೋತ್ಸದಲ್ಲಿ ಮೂವರಿಗೆ ಗಾಯ | ಮೂವರು ಆರೋಪಿಗಳ ಬಂಧನ

ಗಣೇಶ ವಿರ್ಸಜನೆ ವೇಳೆ ದಾಂಧಲೆ: ಮೂವರಿಗೆ ಚಾಕು ಇರಿತ

ಬೆಳಗಾವಿ: ಜಿಲ್ಲಾಡಳಿತ ಹಾಗೂ ನಗರ ಪೊಲೀಸ್ ಇಲಾಖೆ ಗಣೇಶೋತ್ಸವದ ವಿಸರ್ಜನೆಯ ವೇಳೆ ಯಾವುದೇ ಅನಾಹುತ ನಡೆಯದಂತೆ ಹದ್ದಿನ ಕಣ್ಣಿಟ್ಟಿದ್ದರೂ ಬೆಳಗಾವಿಯ ಮೂವರು ಯುವಕರ ಮೇಲೆ ಅಪರಿಚಿತರಿಂದ ಚಾಕು ಇರಿತ ಘಟನೆ ಬುಧವಾರ ನಸುಕಿನ ಜಾವ ನಡೆದಿದೆ.

ಗಣೇಶ ವಿಸರ್ಜನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಯುವಕರ ಮೇಲೆ ದಾಳಿ ನಡೆಯುತ್ತದೆ. ಈ ಸಂದರ್ಭದಲ್ಲಿ

ದರ್ಶನ್ ಪಾಟೀಲ, ಸತೀಶ ಪೂಜಾರಿ, ಪ್ರವೀಣ್ ಗುಂಡ್ಯಾಗೋಳಗೆ ಗಂಭೀರ ಗಾಯವಾಗಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಮಂಗಳವಾರ ಸಂಜೆ 5 ಗಂಟೆಗೆ ಪ್ರಾರಂಭವಾಗಿದ್ದ ಗಣೇಶ ವಿಸರ್ಜನೆ ಮೆರವಣಿಗೆ ಬುಧವಾರ ತಡರಾತ್ರಿ ವರೆಗೂ ನಡೆದಿದೆ. ಬೆಳಗಾವಿಯಲ್ಲಿ ಗಣೇಶೋತ್ಸವ ವಿಸರ್ಜನಾ ಮೆರವಣಿಗೆ ಈ ಬಾರಿಯೂ ಅತ್ಯಂತ ಯಶಸ್ವಿಯಾಗಿ ಜರುಗಿದ್ದರೂ ಕೂಡ ಎರಡು ಕಡೆ ಚಾಕು ಇರಿತ ಹಾಗೂ ಗಣೇಶ ವಿಸರ್ಜನೆಗೆ ಬಳಸಿದ್ದ ಟ್ರ್ಯಾಕ್ಟರ್ ಹರಿದು ಓರ್ವ ವ್ಯಕ್ತಿ ಮೃತಪಟ್ಟ ಘಟನೆ ನಡೆದಿದೆ.

ಗಣೇಶ ವಿಸರ್ಜನೆ ಮೆರವಣಿಗೆಯಲ್ಲಿ ಗಮನಸೆಳೆದ ಬೃಹತ್ ಗಾತ್ರದ ಗಣೇಶ ಮೂರ್ತಿ

ಚಾಕು ಇರಿತ ಘಟನೆ ಕುರಿತು ಪ್ರತಿಕ್ರಿಯೆ ನೀಡಿದ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್, ಗಣೇಶ ವಿಸರ್ಜನೆ ಯಶಸ್ವಿಯಾಗಿ ನಡೆಸುವ ಉದ್ದೇಶದಿಂದ ಸಕಲ ಪೊಲೀಸ್ ಭದ್ರತೆ ಮಾಡಿಕೊಳ್ಳಲಾಗಿತ್ತು. ನಮ್ಮ ಅಧಿಕಾರಿಗಳು ರಾತ್ರಿಯಿಡೀ ನಿದ್ರೆ ಮಾಡದೆ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿದ ಫಲವಾಗಿ ಈ ಬಾರಿ ಅತ್ಯಂತ ಯಶಸ್ವಿಯಾಗಿ ಗಣೇಶೋತ್ಸವ ವಿಸರ್ಜನಾ ಮೆರವಣಿಗೆ ಮುಕ್ತಾಯವಾಗಿದೆ ಎಂದು ತಿಳಿಸಿದರು.

ಟ್ರ್ಯಾಕ್ಟರ್ ಚಕ್ರಕ್ಕೆ ಸಿಲುಕಿ ವ್ಯಕ್ತಿ ಸಾವು

ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಟ್ರ್ಯಾಕ್ಟರ್ ಗೆ ಸಿಲುಕಿ ಪಾಟೀಲ್ ಗಲ್ಲಿಯ ನಿವಾಸಿ ಸದಾನಂದ ಪಾಟೀಲ್ (48) ಮೃತಪಟ್ಟಿದ್ದು ವಿಜಯ ರಾಜಗೋಳ ಎಂಬುವರು ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಗಣೇಶ್ ವಿಸರ್ಜನೆ ವೇಳೆ ಕಪಿಲೇಶ್ವರ ಬ್ರಿಜ್ ಬಳಿ ಇಳಿಜಾರು ಇರುವುದರಿಂದ ಟ್ರ್ಯಾಕ್ಟರ್ ಚಾಲಕನ ನಿಯಂತ್ರಣ ಸಿಗದೇ ಮುಂದೆ ಚಲಿಸಿದೆ. ಈ ಸಂದರ್ಭದಲ್ಲಿ ಚಕ್ರಕ್ಕೆ ಸಿಲುಕಿ ವ್ಯಕ್ತಿ ಮೃತಪಟ್ಟಿದ್ದಾನೆ. ಮೃತ ವ್ಯಕ್ತಿಯ ಕುಟುಂಬಕ್ಕೆ ಗಣೇಶ ಮಂಡಳಿಗಳಿಂದ ತಲಾ ಹತ್ತು ಸಾವಿರ ರು. ಪರಿಹಾರ ನೀಡುವಂತೆ ಸಾಮಾಜಿಕ ಕಾರ್ಯಕರ್ತ ವಿಜಯ್ ಮೋರೆ ಆಗ್ರಹಿಸಿದರು.

ಬುಧವಾರ ನಸುಕಿನ ಜಾವ ನಡೆದ ಚಾಕು ಇರಿತ ಪ್ರಕರಣದಲ್ಲಿ ಮೂವರು ಯುವಕರು ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಘಟನೆಗೆ ಯುವಕ ವೈಯಕ್ತಿಕ ಜಗಳ ಕಾರಣ ಎಂಬುದು ತಿಳಿದುಬಂದಿದೆ. ಗಣೇಶ ಮೆರವಣಿಗೆ ಸಂದರ್ಭದಲ್ಲಿ ಎರಡು ಗುಂಪುಗಳ ಮಧ್ಯೆ ಜಗಳ ನಡೆದಿದ್ದು ನಂತರ ಚಾಕು ಇರಿತ ನಡೆಸಿದ್ದಾರೆ. ಈ ಕುರಿತು ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

-ಯಡಾ ಮಾರ್ಟಿನ್, ನಗರ ಪೊಲೀಸ್ ಆಯುಕ್ತ

ವಿಶ್ವವಾಣಿ

ಸಂಪಾದಕೀಯ

ಕಲ್ಯಾಣ ಕರ್ನಾಟಕ ಸಾಕಾರಗೊಳ್ಳಲಿ

ಕಲಬುರಗಿಯಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸಂಬಂಧ ಹಲವು ಯೋಜನೆಗಳನ್ನು ಪ್ರಕಟಿಸಲಾಗಿದೆ. ಸುಮಾರು 46 ಯೋಜನೆಗಳಿಗೆ 11,770 ಕೋಟಿ ರೂ. ಅನುದಾನ ನೀಡಲು ಸಂಪುಟ ಒಪ್ಪಿಗೆ ನೀಡಿದೆ. ಬೀದರ್ ಮತ್ತು ರಾಯಚೂರು ಪಟ್ಟಣಗಳನ್ನು ನಗರಪಾಲಿಕೆಯಾಗಿ ಪರಿವರ್ತಿಸುವ, ಬೀದರ್ ಮತ್ತು ಕಲಬುರಗಿ ವ್ಯಾಪ್ತಿಯ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ 7,200 ಕೋಟಿ ರು. ಯೋಜನೆಗೂ ಸಂಪುಟ ಅನುಮತಿಸಿದೆ. ಇವೆಲ್ಲವೂ ಅಂದುಕೊಂಡಂತೆ ನಡೆದರೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಹೊಸ ವೇಗ ಪಡೆಯುವುದರಲ್ಲಿ ಸಂಶಯವಿಲ್ಲ. ಈ ಭಾಗದ ಅಭಿವೃದ್ಧಿ ಹೆಸರಿನಲ್ಲಿ ಈ ಹಿಂದೆಯೂ ಸಾಕಷ್ಟು ಯೋಜನೆಗಳನ್ನು ಘೋಷಿಸಲಾಗಿದೆ. ಆದರೆ ಹಲವು ಯೋಜನೆಗಳು ಇನ್ನೂ ಸಾಕಾರಗೊಂಡಿಲ್ಲ. ಮುಖ್ಯವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ರೈಲ್ವೆ ಸಚಿವರಾಗಿದ್ದಾಗ ಘೋಷಿಸಿದ ಹಲವು ಯೋಜನೆಗಳು ಇನ್ನೂ ಸಾಕಾರಗೊಂಡಿಲ್ಲ, ಕಲಬುರ್ಗಿ ವಿಭಾಗಕ್ಕೆ ಪ್ರತ್ಯೇಕ ರೈಲ್ವೆ ಮಂಡಳಿ ರಚಿಸುವ ಪ್ರಸ್ತಾಪಕ್ಕೂ ಕೇಂದ್ರದ ಅನುಮೋದನೆ ದೊರೆತಿಲ್ಲ. ರಾಜ್ಯ ಸರಕಾರ ಪ್ರತಿ ವರ್ಷ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಹೆಸರಿನಲ್ಲಿ ಹೆಚ್ಚುವರಿ ಅನುದಾನ ಘೋಷಿಸುತ್ತಾ ಬಂದಿದೆ. ಇದರ ಫಲಶ್ರುತಿ ಈ ಭಾಗದ ಜಿಲ್ಲೆಗಳಲ್ಲಿ ಕಾಣಿಸಬೇಕಿತ್ತು. ಆದರೆ ಉದ್ಯೋಗ ಅರಸಿ ಕಲ್ಯಾಣ ಕರ್ನಾಟಕದಿಂದ ಬೆಂಗಳೂರು, ಮುಂಬಯಿ ಮತ್ತು ರಾಜ್ಯ ದಕ್ಷಿಣ ಜಿಲ್ಲೆಗಳಿಗೆ ಗುಳೆ ಹೋಗುವವರ ಸಂಖ್ಯೆ ಕಡಿಮೆ ಆಗಿಲ್ಲ. 2012ರಲ್ಲಿ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ವೇಳೆ ಸಂವಿಧಾನ ತಿದ್ದುಪಡಿ ತಂದು 371ಜೆಯಡಿ ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಲಾಗಿತ್ತು. ಇದಾಗಿ 12 ವರ್ಷಗಳು ಕಳೆದರೂ ಕೇಂದ್ರದಿಂದ ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಅನುದಾನವೇನೂ ದೊರೆತಿಲ್ಲ. ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆ ಕುರಿತಂತೆ ನಂಜುಂಡಪ್ಪ ಸಮಿತಿ ವರದಿ ನೀಡಿ 22 ವರ್ಷಗಳು ಕಳೆದಿವೆ. ಈಗ ಈ ಭಾಗದ ತಾಲ್ಲೂಕುಗಳ ಸ್ಥಿತಿಗತಿಯ ಪರಿಶೀಲನೆ ನಡೆಸಲು ಡಾ.ಗೋವಿಂದ ರಾವ್ ಅವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿ ರಚಿಸಲಾಗಿದೆ. ಸಮಿತಿ, ವರದಿ, ಘೋಷಣೆಗಳು, ಭರವಸೆಗಳು ಕಾರ್ಯರೂಪಕ್ಕೆ ಬರಬೇಕಾದ ಸಮಯವಿದು. ಇದಕ್ಕಾಗಿ ಇಲ್ಲಿನ ಹಿರಿಯ ರಾಜಕೀಯ ನಾಯಕರು ಹೆಚ್ಚಿನ ಕಾಳಜಿ ವಹಿಸಬೇಕಾಗಿದೆ.

ಸೊಂಪಾದಕೀಯ

ನಾಯಿಯ ಭೂ ಬಾಣ!

ಒಂದು ಕುಟುಂಬದಲ್ಲಿನ ಆಸ್ತಿಗೆ ಸಂಬಂಧಿಸಿದ ಜಗಳಗಳು ಯಾವ ಹಂತಕ್ಕೆ ಬೇಕಾದರೂ ಹೋಗಬಲ್ಲವು. ಅದರಲ್ಲೂ ಅಪ್ಪ-ಅಮ್ಮ ತೀರಿಕೊಂಡು ಅವರ 'ಅಸ್ಥಿ' ಬಿಟ್ಟ ಮೇಲೆ 'ಆಸ್ತಿ'ಗೆ ಸಂಬಂಧಿಸಿದ ತಕರಾರುಗಳು ಜಾಸ್ತಿ. ಈ ಸಂಬಂಧವಾಗಿ ಸಂಬಂಧಿಕರಲ್ಲಿ ಪ್ರಾಣ ತೆಗೆಯುವ ಹಂತಕ್ಕೂ ಜಗಳಗಳು ಹೋಗುತ್ತವೆ. ಹಾಗಂತ ಇದು ದೂರದ ಸಂಬಂಧಿಕರಿಗೆ ಮಾತ್ರ ಸಂಬಂಧಪಡುವ ಜಗಳ ಅಲ್ಲ. ಸ್ವಂತ ಅಕ್ಕ, ತಮ್ಮ, ಅಣ್ಣ, ತಮ್ಮಂದಿರ ಜತೆಗೂ ಇದು ಸಾಧ್ಯ. ಇದನ್ನು ನೋಡಿಯೇ 'ಯಾಕೆ ಬಡಿದಾಡ್ತಿ ತಮ್ಮ' ಅಂತ ದೊಡ್ಡವರು ಹಾಡು ಬರೆದಿದ್ದರು. ಇಲ್ಲಿ ಅಂಥದ್ದೇ ಒಂದು ಜಗಳ ಶುರುವಾಗಿದ್ದು ಅದು ಕೋರ್ಟಿಗೆ ಬಂದಾಗ ಕೊಂಚ ನಗೆಪಾಟಲಿಗೆ ಈಡಾಗಿದೆ. ಯಾಕಂದ್ರೆ ಇಲ್ಲಿ ಸೋದರನೊಬ್ಬ ತನ್ನ ಸೋದರಿಯೊಂದಿಗೆ ಜಗಳ ಆಡಿದ್ದಾನೆ. ಆಸ್ತಿ ವಿಷಯದಲ್ಲಿ ತಕರಾರು ಎತ್ತಿ ಮನೆಗೆ ಬಂದ ಸೋದರಿ ಜತೆಗೆ ವಾಗ್ವಾದ ಮಾಡುತ್ತಾ ಆತ ಈ ಜಗಳದ ಶಮನಕ್ಕೆ ಶ್ವಾನವನ್ನು ಬಳಸಿಕೊಂಡಿದ್ದಾನೆ ಅನ್ನೋದು ಇಂಟರೆಸ್ಟಿಂಗ್. ಹೌದು, ಜಗಳ ಶುರುವಾಗಿದೆ, ಮಾತಿಗೆ ಮಾತು ಬೆಳೆದಿದೆ, ಆದರೆ ಇದ್ಯಾವುದೂ ಫಲ ಕೊಡುತ್ತಿಲ್ಲ ಅಂತ ಈ ಸಹೋದರನಿಗೆ ಅನ್ನಿಸಿದೆ. ನಾನು ಬರೀ ಮಾತಲ್ಲಿ ಹೇಳಿದರೆ ಇವಳು ಕೇಳೋದಿಲ್ಲ ಅಂತ ತಡ ಮಾಡದೇ ತನ್ನ ಮನೆಯಲ್ಲಿದ್ದ ನಾಯಿಯನ್ನು ಸಹೋದರಿಯ ಮೇಲೆ ಛೂ ಬಿಟ್ಟಿದ್ದಾನೆ. ಇದನ್ನು ಕೇಳಿದರೆ ಕೊಂಚ ಗಾಬರಿ ಆಗೋದು ಸಹಜ. ಯಾಕಂದ್ರೆ ಹಾವು ಕಚ್ಚಿದರೆ ಹೆಂಗೋ ಆ ಕ್ಷಣದಲ್ಲಿ ಸಾವು, ಬದುಕು ಅಂತ ನಿರ್ಧಾರ ಆಗಿಬಿಡುತ್ತದೆ. ಆದರೆ ನಾಯಿ ಕಚ್ಚಿದರೆ ಅದರ ಅವಾಂತರ ಯಾರಿಗೂ ಬೇಡ. ಈ ಕೇಸಿಗೆ ಸಂಬಂಧಿಸಿ ಕೋರ್ಟ್‌ನಲ್ಲಿ ನ್ಯಾಯಾಧೀಶರು ಕೂಡಾ ನಾಯಿಯ ವಿಷಯವನ್ನು ಲೈಟ್ ಆಗಿ ತಗೊಂಡು ತಮಾಷೆಯಾಗಿ ಪ್ರಶ್ನೆ ಮಾಡಿದ್ದಾರೆ. 'ಆಸ್ತಿ ಜಗಳ ಅನ್ನೋದು ಜಗದಗಲ ವ್ಯಾಪಿಸಿರುವ ಸಮಸ್ಯೆ; ಅದನ್ನು ನೀವೇ ಸರಿ ಮಾಡಿಕೊಳ್ಳೋದು ಬಿಟ್ಟು ಜಗಳ ಬಗೆಹರಿಸುವ ಕೆಲಸವನ್ನು ನಾಯಿಗೆ ಯಾಕೆ ಕೊಟ್ರಿ?' ಅನ್ನೋದು ಅವರ ಪ್ರಶ್ನೆ. ಅದೂ ಸರಿಯೇ. ಪಾಪ ಮನುಷ್ಯರಿಂದ ಬಗೆಹರಿಯದ ಸಮಸ್ಯೆ ನಾಯಿಯ ಮಾತಿನಿಂದ ಅರ್ಥಾತ್ ಬೊಗಳುವಿಕೆಯಿಂದ ಇತ್ಯರ್ಥ ಆಗುತ್ತದೆಯೇ? ಆದರೆ ಸಹೋದರಿಯನ್ನು ಮಟ್ಟ ಹಾಕಲು ಮಾತಿನ ತಿರುಗುಬಾಣ ಹಾಕುವುದರ ಬದಲು ಸಹೋದರ ನಾಯಿಯ 'ಛೂ' ಬಾಣ ಹಾಕಿರೋದು ಮಾತ್ರ ಎಲ್ಲರ ಗಮನಸೆಳೆದಿದೆ.

ಸಂಪಾದಕರ ಸದ್ಯಶೋಧನೆ

ಮೊಬೈಲ್ ಬಿಟ್ಟು ಇರಬಹುದಾ?

ಗಂಡ-ಹೆಂಡತಿ ಏಕಾಂತದಲ್ಲಿ, ರಸಮಯವಾಗಿ, ರೊಮ್ಯಾಂಟಿಕ್ ಆಗಿ ಕಾಲ ಕಳೆಯುವ ತಾಣವೆಂದರೆ ಬೆಡ್ ರೂಮ್. ಆದರೆ ಅವರಿಬ್ಬರೂ ಮೊಬೈಲ್‌ನಲ್ಲಿ ಹೆಚ್ಚು ಸಮಯ ಕಳೆಯುವ ತಾಣವೂ ಅದೇ. ಗಂಡ-ಹೆಂಡತಿ ಬೆಡ್ ರೂಮ್ ಸೇರಿದರೆ, ಇಬ್ಬರ ಕೈಯಲ್ಲೂ ಮೊಬೈಲ್. ಇಬ್ಬರೂ ಅವರವರ ಲೋಕದಲ್ಲಿ ಮಗ್ನ. ಗಂಡ ತನ್ನನ್ನು ತನ್ನಷ್ಟಕ್ಕೆ ಬಿಟ್ಟರೆ ಸಾಕು ಎಂದು ಹೆಂಡತಿ ಯೋಚಿಸುತ್ತಾಳೆ. ಗಂಡನ ಯೋಚನೆಯೂ ಹಾಗೆ. ಇಬ್ಬರೇ ಹಾಯಾಗಿ ಕಾಲ ಕಳೆಯಬೇಕಾದ ಬೆಡ್ ರೂಮಿನಲ್ಲಿ ಮೊಬೈಲ್ ಎಂಬ ಸವತಿ ನಿತ್ಯವೂ ಕಾಡುತ್ತಾಳೆ. ಇಂದಿನ ದಿನಗಳಲ್ಲಿ ಮೊಬೈಲ್ ಮನುಷ್ಯನ ಅಶಾಂತಿ, ಹಲವು ಸಮಸ್ಯೆಗಳಿಗೆ ಕಾರಣವಾಗಿದೆ. ಕ್ಯಾಥರೀನ್ ಪ್ರೈಸ್ ಎಂಬುವವಳು How To Break Up With Your Phone: The 30 day plan to take back your life ಎಂಬ ಪುಸ್ತಕದಲ್ಲಿ ಮೊಬೈಲ್ ಫೋನ್ ಕೊಟ್ಟಂತರ ಸಂಸಾರ ಹಾಳು ಮಾಡಿದ ಕಥೆಯನ್ನೇ ಬರೆದಿದ್ದಾಳೆ. ನಿದ್ದೆ ಬರುವುದಕ್ಕಿಂತ ಮೊದಲು ಎಲ್ಲರೂ ಮೊಬೈಲ್ ನೋಡಿಯೇ ಮಲಗುತ್ತಾರೆ. ಬೆಳಗ್ಗೆ ಎದ್ದ ತಕ್ಷಣ ಮೊಬೈಲ್ ನೋಡಲೇಬೇಕು. ಇವೆರಡರ ಮಧ್ಯೆ ನೂರಾರು ಸಲ ಮೊಬೈಲ್ ನೋಡುತ್ತಾರೆ. ಒಂದು ನಿಮಿಷ ಪುರುಸೊತ್ತು ಸಿಕ್ಕರೂ ಮೊಬೈಲ್ ನೋಡಲೇಬೇಕು. ಸ್ಮಾರ್ಟ್ ಫೋನ್ ಇಟ್ಟುಕೊಂಡವರು ದಿನಕ್ಕೆ ಏನಿಲ್ಲವೆಂದರೂ ಮೂರರಿಂದ-ನಾಲ್ಕು ಗಂಟೆ ಮೊಬೈಲಿನಲ್ಲಿರುತ್ತಾರೆ. ಕೆಲವರು ಆರರಿಂದ ಏಳು ಗಂಟೆ ಹಿಡಿದಿರುತ್ತಾರೆ. ನೀವು ಎಲ್ಲಿಯೇ ಹೋಗಲಿ, ಬರಲಿ ಅದು ನಿಮ್ಮೊಂದಿಗೆ ಇರುತ್ತದೆ. ನಿಮ್ಮೊಂದಿಗೆ ಯಾರು ಇರದಿದ್ದರೂ ಮೊಬೈಲ್ ಇದ್ದೇ ಇರುತ್ತದೆ. ಮೊಬೈಲ್ ಇದ್ದರೆ ಬೇರೆ ಯಾರೂ ಇರಬೇಕಿಲ್ಲ. ಇಂದು ಮೊಬೈಲ್ ಇಲ್ಲದ ಮನೆಯಿಂದ ಸಾಸಿವೆಯನ್ನು ತರುವುದು ಸಾಧ್ಯವೇ ಇಲ್ಲ. ಮೊಬೈಲ್ ಮಹಾ ವ್ಯಸನಕಾರಿ. ಅಂದರೆ addictive. ಮೊಬೈಲ್ ಆ್ಯಪ್‌ಗಳನ್ನು ಆ ರೀತಿಯಿಂದಲೇ ರೂಪಿಸಿರುತ್ತಾರೆ. ಕೈಯಲ್ಲಿ ಮೊಬೈಲ್ ಇದ್ದರೆ ನಾವು ಬೇರೆ ಸಂಗತಿಗಳ ಮೇಲೆ ಗಮನ ಹರಿಸಲು ಸಾಧ್ಯವಾಗುವುದಿಲ್ಲ. ಯಾವ ವಿಷಯದ ಬಗ್ಗೆಯೂ ಆಳವಾಗಿ ಯೋಚಿಸಲು, ಬಹುಕಾಲ ಚಿಂತನೆ ನಡೆಸಲು ಸಾಧ್ಯವಾಗುವುದಿಲ್ಲ. ಇದು ನೆನಪಿನ ಶಕ್ತಿಯನ್ನೂ ಕುಂದಿಸುತ್ತದೆ. ಜಗತ್ತಿಗೆ ಐಫೋನ್ ಅನ್ನು ಪರಿಚಯಿಸಿದ ಆಪಲ್ ಕಂಪನಿಯ ಮುಖ್ಯಸ್ಥನಾಗಿದ್ದ ದಿವಂಗತ ಸ್ಟೀವ್ ಜಾಬ್ಸ್, ತನ್ನ ಮಕ್ಕಳಿಗೆ ಆಪಲ್ ಪ್ರಾಡಕ್ಟ್‌ಗಳ ಬಳಕೆಯನ್ನು ನಿಯಂತ್ರಿಸಿರುವುದಾಗಿ ಹೇಳಿದ್ದ. ಅದರಲ್ಲೂ ಐಫೋನ್ ಬಳಕೆ ಬಗ್ಗೆ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯ ಟೆಕ್ನಾಲಜಿ ವರದಿಗಾರ ನಿಕ್ ಬಿಲ್ಟನ್ ಕೇಳಿದ ಪ್ರಶ್ನೆಗೆ, They haven't used it. We limit how much technology our kids use at home ಎಂದು ಹೇಳಿದ್ದ. ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್ ಗೇಟ್ಸ್ ಕೂಡ ತನ್ನ ಮಕ್ಕಳ ಮೇಲೆ ಇದೇ ನಿಯಂತ್ರಣ ಹೇರಿದ್ದ. 'ನನ್ನ ಮಕ್ಕಳಿಗೆ ಹದಿನಾಲ್ಕು ವರ್ಷ ಆಗುವವರೆಗೆ, ನಾನು ಮೊಬೈಲ್ ಫೋನ್ ಕೊಟ್ಟಿರಲಿಲ್ಲ, ಅವುಗಳಿಂದ ಅವರನ್ನು ದೂರ ಇಟ್ಟಿದ್ದೆ' ಎಂದು ಹೇಳಿದ್ದ. ಯುರೋಪಿನ ಕೆಲ ದೇಶಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ, ಆಫೀಸುಗಳಲ್ಲಿ No Mobile Zone ಕಾಣಿಸಿಕೊಳ್ಳುತ್ತಿವೆ. ಕೆಲವರು ತಮ್ಮ ಮನೆಗಳಲ್ಲೂ ಈ ತಾಣವನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಡೈನಿಂಗ್ ಟೇಬಲ್‌ಗೆ ಬರುವಾಗ ಮೊಬೈಲ್ ಅನ್ನು ಹಿಡಿದು ತರಬಾರದು ಎಂಬ ನಿಯಮ ಜನಪ್ರಿಯವಾಗುತ್ತಿದೆ. ದಿನದಲ್ಲಿ ಒಂದು ಗಂಟೆಗಿಂತ ಅಧಿಕವಾಗಿ ಮೊಬೈಲ್ ಬಳಸಬಾರದು ಎಂಬ ನಿಯಮವನ್ನು ತಮ್ಮ ಮೇಲೆ ವಿಧಿಸಿಕೊಳ್ಳುತ್ತಿದ್ದಾರೆ. ಕೆಲವರಂತೂ ಫೇಸ್‌ಬುಕ್, ಇನ್ಸ್ಟಾಗ್ರಾಂ, ವಾಟ್ಸ್ಯಾಪ್ ಆ್ಯಪ್‌ಗಳನ್ನು ಡಿಲೀಟ್ ಮಾಡುತ್ತಿದ್ದಾರೆ. ಇವುಗಳ ಗೊಡವೆಯೇ ಬೇಡ ಎಂದು ಬೇಸಿಕ್ ಸೆಟ್‌ಗೆ ಮೊರೆಹೋಗುತ್ತಿದ್ದಾರೆ. ಮೊಬೈಲ್ ಇಲ್ಲದೇ ಬದುಕಬಹುದು ಎಂಬ ವಾದ ಜನಪ್ರಿಯವಾಗುತ್ತಿದೆ. ಅದು ಸಹ ಫ್ಯಾಷನ್ ಆಗುತ್ತಿದೆ. ನಾನು ಮೊಬೈಲ್ ಬಳಸುತ್ತಿಲ್ಲ, ನಾನು ವಾಟ್ಸ್ಯಾಪ್ ಬಳಸುವುದಿಲ್ಲ, ನಾನು ಸೋಷಿಯಲ್ ಮೀಡಿಯಾದಲ್ಲಿ ಇಲ್ಲ.. ಎಂಬ ಮಾತುಗಳೂ ಹೆಚ್ಚು ಕೇಳಿಬರಲಾರಂಭಿಸಿವೆ.

ಬಾತ್‌ರೂಮ್ ಬರಹ ಎಂಬ ನಿಜವಾದ ಸೃಜನಶೀಲ ಸಾಹಿತ್ಯ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಕೆಲ ವರ್ಷಗಳ ಹಿಂದೆ ನಮ್ಮ ಪತ್ರಿಕೆಯ ಮುಖಪುಟದಲ್ಲಿ ಒಂದು ಸುದ್ದಿ ಪ್ರಕಟವಾಗಿತ್ತು. 'ಬಯಲಲ್ಲಿ ಮೂತ್ರ ವಿಸರ್ಜನೆ ಮಾಡೀರಿ ಜೋಕೆ, ದಂಡ ತೆರಬೇಕಾದೀತು' ಎಂಬ ಶೀರ್ಷಿಕೆಯಡಿ ಪ್ರಕಟವಾಗಿದ್ದ ಸುದ್ದಿಯದು. ''ಇನ್ನುಮುಂದೆ ಕಂಡ ಕಂಡಲ್ಲಿ ಉಚ್ಚೆ ಹುಯ್ದರೆ, ಸರಕಾರ ಐದು ಸಾವಿರ ರುಪಾಯಿ ದಂಡ ಹಾಕುತ್ತದೆ. ಏಪ್ರಿಲ್ 30ರಿಂದ ಈ ಕಾನೂನು ಜಾರಿಗೆ ಬರಲಿದೆ. ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ 'ಸ್ವಚ್ಛ ಭಾರತ' ಯೋಜನೆಗೆ ನಿರೀಕ್ಷಿತ ಪ್ರತಿಸ್ಪಂದನ ಸಿಗದ ಹಿನ್ನೆಲೆಯಲ್ಲಿ, ನಗರಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಉಗುಳುವ, ಮಲ-ಮೂತ್ರ ವಿಸರ್ಜಿಸುವ ವ್ಯಕ್ತಿಗಳಿಗೆ ದಂಡ ವಿಧಿಸುವ ಕ್ರಮಕ್ಕೆ ಕೇಂದ್ರ, ಸರಕಾರ ರಾಜ್ಯಗಳಿಗೆ ಸೂಚನೆ ನೀಡಲಿದೆ'' ಎಂಬುದು ಆ ಸುದ್ದಿಯ ಸಾರಾಂಶವಾಗಿತ್ತು.

ತಪ್ಪೇನಿಲ್ಲ ಬಿಡಿ, ಇಂಥದ್ದೊಂದು ಕಾನೂನನ್ನು ಜಾರಿಗೊಳಿಸುವ ಅಗತ್ಯವಿತ್ತು. 'ಕೋಣ ಉಚ್ಚೆ ಹುಯ್ದಂಗೆ' ಎಂಬ ಗಾದೆ, ಕೋಣಕ್ಕೆ ಮಾತ್ರ ಅಲ್ಲ, ಜಾಣರಿಗೂ ಅನ್ವಯವಾಗುವಂತಾಗಿದೆ. ಕಾರಣ ಸುಶಿಕ್ಷಿತರು, ಜಾಣರು ಸಹಿತ ಕಂಡ ಕಂಡಲ್ಲಿ ಉಚ್ಚೆ ಹುಯ್ಯುವುದು ಸಾಮಾನ್ಯ ದೃಶ್ಯ. ಜಗತ್ತಿನ ಅತಿ ದೊಡ್ಡ ಮೂತ್ರಾಲಯ ಎಂಬ ಅಭಿದಾನವನ್ನು ಭಾರತೀಯ ರೈಲ್ವೆ ನಮ್ಮ ದೇಶಕ್ಕೆ ದಯಪಾಲಿಸಿ ಒಂದೂವರೆ ಶತಮಾನಗಳಾದವು. ಆದರೆ ನಾವು ಕಂಡಲ್ಲಿ ಹುಯ್ದು ಜಗತ್ತಿನ ವಿಶಾಲ ಬಯಲು ಮೂತ್ರಾಲಯ ಎಂಬ ಅಗ್ಗಳಿಕೆಗೆ ನಮ್ಮ ದೇಶ ಪಾತ್ರವಾಗುವ ಹಾಗೆ ಮಾಡಿದ್ದೇವೆ. ಉಗುಳಿದರೆ, ಮೂತ್ರ ವಿಸರ್ಜಿಸಿದರೆ ಸಿಂಗಾಪುರದಲ್ಲಿ ಬರೀ ದಂಡ ವಿಧಿಸುವುದಷ್ಟೇ ಅಲ್ಲ, ಸೆರೆಮನೆಗೂ ಅಟ್ಟುತ್ತಾರೆ. ನಮ್ಮ ದೇಶದಲ್ಲಿ ಅಂಥ ಕಾನೂನನ್ನು ಜಾರಿಗೆ ತಂದರೆ ಮನೆಯಲ್ಲಿರುವುದಕ್ಕಿಂತ ಹೆಚ್ಚು ಜನ ಸೆರೆಮನೆಗಳಲ್ಲೇ ಇರುತ್ತಾರೆ.

ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಸರಕಾರ ಇನ್ನೂ ಒಂದು ಹೆಜ್ಜೆ ಇಟ್ಟಿದೆ. ಅದೇನೆಂದರೆ, ಜನ ಬಯಲಲ್ಲಿ ಮೂತ್ರ ವಿಸರ್ಜಿಸಬಾರದೆಂದರೆ, ಶೌಚಾಲಯಗಳು ಎಲ್ಲೆಡೆ ಇರುವಂತಾಗಬೇಕು, ಅವು ಸ್ವಚ್ಛವಾಗಿರಬೇಕು, ಜನರು ಅದನ್ನು ಸ್ವಚ್ಛವಾಗಿರುವಂತೆ ಕಾಪಾಡಿಕೊಳ್ಳಬೇಕು. ಶೌಚಾಲಯಗಳನ್ನು ಸ್ವಚ್ಛ ಹಾಗೂ ಅಂದವಾಗಿಡುವ ಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಅಂಗವಾಗಿ, ಟಾಯ್ಲೆಟ್ ಗೋಡೆಗಳ ಮೇಲೆ ಬರೆಯುವುದನ್ನು ನಿಷೇಧಿಸಲು ಸರಕಾರ ಚಿಂತಿಸುತ್ತಿದೆಯಂತೆ.

ತಕರಾರು ಇರುವುದೇ ಇಲ್ಲಿ.

ಸರಕಾರವೇನಾದರೂ ಈ ಚಿಂತನೆಯನ್ನು ಕಾನೂನಾಗಿ ಕಾರ್ಯರೂಪಕ್ಕೆ ತಂದಿದ್ದೇ ಆದಲ್ಲಿ, ಈಗಿರುವ ಬಾತ್‌ರೂಮು ಸಾಹಿತ್ಯವೆಲ್ಲ ಕಣ್ಮರೆಯಾಗುತ್ತವೆ. ಇನ್ನು ಮುಂದೆ ಟಾಯ್ಲೆಟ್ ಗೋಡೆ ಮೇಲೆ ಯಾರೂ ಬರೆಯುವಂತಿಲ್ಲ, ಬರೆದರೆ ದಂಡ ವಿಧಿಸಲಾಗುತ್ತದೆ. ಟಾಯ್ಲೆಟ್ ಅನ್ನು ವಿರೂಪಗೊಳಿಸಿದ, ಅಸ್ವಚ್ಛಗೊಳಿಸಿದ ಅಪರಾಧಕ್ಕೆ ಕಾರಣವಾಗಬೇಕಾಗುತ್ತದೆ.

ಅಂದರೆ, ಈ ಕಾನೂನು ಜಾರಿಗೆ ಬಂದರೆ ಮನುಕುಲದ ಪ್ರಪ್ರಥಮ ಸಾಹಿತ್ಯ, ನಿಜವಾದ, ಸಹಜವಾದ ಸಾಹಿತ್ಯ, ಜನಸಾಮಾನ್ಯರ ಸಾಹಿತ್ಯ ಹಾಗೂ ಅತ್ಯಂತ ಜನಪ್ರಿಯ ಪ್ರಕಾರವಾದ ಬಾತ್‌ರೂಮು ಸಾಹಿತ್ಯ ಅಥವಾ ಟಾಯ್ಲೆಟ್ ಸಾಹಿತ್ಯವೇ ನಶಿಸಿಹೋಗುತ್ತದೆ. ಬಾತ್‌ರೂಮು ಸಿಂಗರುಗಳಂತೆ ಬಾತ್‌ರೂಮು ಸಾಹಿತಿಗಳಿಗೂ ಕೊರತೆಯಿಲ್ಲ, ಟಾಯ್ಲೆಟ್‌ಗೆ ಹೋದಾಗ ಕೈಯಲ್ಲೊಂದು ಪೆನ್ನು ಹಾಗೂ ಅಂದವಾದ ಬಿಳಿಗೋಡೆ ಕಂಡರೆ, ಮೂತ್ರ ವಿಸರ್ಜಿಸುವ ಸಮಯದಲ್ಲಿ ಒಂದು ಪೋಲಿಚಿತ್ರ ಗೀಚದವರು, ವಕ್ರತುಂಡೋಕ್ತಿ ಬರೆಯದವರು ವಿರಳ. 'ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ' ಎಂಬ ವಕ್ರೋಕ್ತಿಯಂತೂ ಬಾತ್‌ರೂಮು ಸಾಹಿತ್ಯದ ಮುನ್ನುಡಿಯೋ, ಘೋಷವಾಕ್ಯವೋ ಎನ್ನುವಷ್ಟು ಜನಪ್ರಿಯತೆ ಹಾಗೂ ಸಾರ್ವತ್ರಿಕತೆಯನ್ನು ಗಳಿಸಿರುವುದು, ಅದು ದೇಶದ ಯಾವುದೇ ರಾಜ್ಯಗಳ ಟಾಯ್ಲೆಟ್‌ಗೆ ಹೋದರೂ ಅಲ್ಲಿನ ಪ್ರಾದೇಶಿಕ ಭಾಷೆಯಲ್ಲಿ ಬರೆದಿರುವುದಕ್ಕೆ ಸಾಕ್ಷಿ. ಯಾವುದಾದರೂ ಊರಿಗೆ ಹೋದರೆ ಅಲ್ಲಿ ನಿಮಗೆ ಬರಹಗಾರರು ಸಿಗದಿರಬಹುದು. ಆದರೆ ಅದೇ ಊರಿನ ಟಾಯ್ಲೆಟ್‌ಗೆ ಹೋದರೆ ಈ ಅಭಿಪ್ರಾಯವನ್ನು ಬದಲಿಸಿಕೊಳ್ಳಬೇಕು. ಟಾಯ್ಲೆಟ್ ಸಾಹಿತ್ಯವನ್ನು ಸಹ ಸೃಷ್ಟಿಸದ ಅರಸಿಕರು, ಅಸಾಹಿತಿಗಳು ಎಲ್ಲೂ ಇರಲಿಕ್ಕಿಲ್ಲ. ಹಿಮಾಲಯ ಪರ್ವತದ ತುತ್ತ ತುದಿಯೇರುವ ಮುನ್ನ ಸಿಗುವ ಕ್ಯಾಂಪ್‌ನಲ್ಲಿ ಪುಟ್ಟ ಟಾಯ್ಲೆಟ್‌ನ ಡೇರೆಯ ಬಟ್ಟೆ ಮೇಲೆ 'ಉಸಿರು ಬಿಗಿಹಿಡಿದು ಹಿಮಾಲಯವನ್ನು ಯಾರು ಬೇಕಾದರೂ ಏರಬಹುದು. ಆದರೆ ಒಮ್ಮೊಮ್ಮೆ ಉಚ್ಚೆ ಕಟ್ಟಿಕೊಳ್ಳಲು ಆಗೊಲ್ಲ' ಎಂದು ಬರೆದಿದೆಯಂತೆ. ಹಾಗೆಂದು ಖ್ಯಾತ ಪ್ರವಾಸಿ ಲೇಖಕ ಹ್ಯೂ ಗುಂಟರ್ ಕಾಲಿನ್ ಬರೆದಿದ್ದರು.

ಟಾಯ್ಲೆಟ್ ಸಾಹಿತ್ಯ ನಿಜವಾದ ಸ್ವಾನುಭವ ಸಾಹಿತ್ಯ, ಮಣ್ಣಿನ ವಾಸನೆ ಅಲ್ಲಲ್ಲ.. ಉಚ್ಚೆ ವಾಸನೆ ಸಾಹಿತ್ಯ, ಮಣ್ಣಿಗಿಂತ nativity, ಸಾಂದ್ರತೆ ಹಾಗೂ ವಾಸನೆಯುಳ್ಳ ಸಾಹಿತ್ಯ. ಮನಸ್ಸು ಹಗುರವಾಗಿ, ಒತ್ತಡವನ್ನೆಲ್ಲ ಕಳಚಿಕೊಂಡು ಬರೆದ ಅತ್ಯಂತ ರಿಲೀಫ್ ಆದ ಸಾಹಿತ್ಯ ಅದು. ಇಂಥ ಸಾಹಿತ್ಯಪ್ರಕಾರವೇ ನಾಶವಾದರೆ?

'ನಿಜವಾದ ಸೃಜನಶೀಲ ಸಾಹಿತ್ಯ ಅಂದ್ರೆ ಯಾವುದು?' ಎಂಬ ಪ್ರಶ್ನೆಗೆ ಖ್ಯಾತ ಹಾಸ್ಯಸಾಹಿತಿ ಬೀಚಿ ಅವರು 'ಬಾತ್‌ರೂಮ್ ಸಾಹಿತ್ಯ' ಎಂದು ಚಟಾಕಿ ಹಾರಿಸಿದ್ದರು. ಉದ್ದಾಮ ಸಾಹಿತಿಗಳಾಗಲಿ, ಬರಹಗಾರರಾಗಲಿ, ಬಾತ್‌ರೂಮಿನಲ್ಲಾಗಲಿ, ಸಾರ್ವಜನಿಕ ಶೌಚಾಲಯಗಳಲ್ಲಾಗಲಿ ಬರೆಯಲು ಹೋಗುವುದಿಲ್ಲ, ಶೌಚಾಲಯದಲ್ಲಿ ಬರೆಯುವಷ್ಟು ಅವರಲ್ಲಿ ಉತ್ಕಟತೆ, ಒತ್ತಾಸೆ ಬರಬೇಕೆಂದರೆ ಅದಕ್ಕೆ ಹಿಡಿದಿಟ್ಟುಕೊಳ್ಳಲಾಗದ ಸೃಜನಶೀಲತೆಯೇ ಕಾರಣ.

ಸಾಹಿತ್ಯದ ಉದಯವೇ ಶೌಚಾಲಯದಲ್ಲಾಯಿತು ಎಂದು ಸಾಹಿತಿ ಮಾರ್ಕ್ ಟ್ವೈನ್ ಹೇಳಿದ್ದು ತಮಾಷೆಯಲ್ಲ, ಅದಕ್ಕೆ ಜಗತ್ತಿನಲ್ಲಿರುವ ಎಲ್ಲ ಟಾಯ್ಲೆಟ್‌ಗಳಲ್ಲಿ ಬರೆದಿರುವ ಸಾಲುಗಳೇ ಸಾಕ್ಷಿ. ಟಾಯ್ಲೆಟ್ ಗೋಡೆ ಎಷ್ಟೇ ಸ್ವಚ್ಛವಾಗಿರಬಹುದು, ಅದು ಕೆಲವು ವಾಕ್ಯಗಳಾದರೂ ಬರೆಯಲಾರದಷ್ಟು ಸ್ವಚ್ಛವಾಗಿರಲು ಸಾಧ್ಯವೇ ಇಲ್ಲ, ಪಂಚತಾರಾ ಹೋಟೆಲ್‌ನ ಟಾಯ್ಲೆಟ್‌ಗಳು ಸಹ ಇದಕ್ಕೆ ಹೊರತಲ್ಲ.

ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯ ಟಾಯ್ಲೆಟ್‌ನಲ್ಲಿ ಒಂದು ಸಾಲು- 'ನೀವು ಇಲ್ಲಿ ಎಷ್ಟು ಪ್ರೆಶರ್ ಹಾಕುತ್ತೀರೋ ಅಷ್ಟೇ ಪ್ರೆಶರ್ ಅನ್ನು ನಿಮ್ಮ ಕೆಲಸದಲ್ಲೂ ಹಾಕಿದ್ದರೆ, ನೀವು ಹಾಗೂ ನಿಮ್ಮನ್ನು ನೇಮಿಸಿಕೊಂಡ ಕಂಪನಿ ಎಂದೋ ಉದ್ಧಾರವಾಗುತ್ತಿತ್ತು'.

ನ್ಯೂಯಾರ್ಕಿನಲ್ಲಿರುವ ವಿಶ್ವಸಂಸ್ಥೆ ಕಟ್ಟಡದಲ್ಲಿರುವ ಶೌಚಾಲಯವೊಂದರಲ್ಲೂ ಸ್ವಾರಸ್ಯಕರವಾದ ಸಾಲು ಬರೆದಿರುವುದನ್ನು ವಿಶ್ವಸಂಸ್ಥೆಯ ಮಾಜಿ ನಿರ್ದೇಶಕರಾದ ಬೈಚಂದ್ ಪಟೇಲ್ ಬರೆದಿದ್ದರು- 'This is the only place in the building where I know what I am doing'.

ಮತ್ತೊಂದು ಸಾಲನ್ನು ಗಮನಿಸಿ- 'Since writing on toilet walls is done neither for critical acclaim nor financial rewards, it is the purest form of art'.

ಇಸ್ತಾನ್‌ಬುಲ್‌ನ ವಿಮಾನ ನಿಲ್ದಾಣದ ರೆಸ್ಟ್‌ರೂಮ್‌ನಲ್ಲಿ ಬರೆದಿರುವ ಸಾಲು ನನ್ನ ಮನಸ್ಸಿನಲ್ಲಿ ಇಂದಿಗೂ ಕುಳಿತಿದೆ. ಅಲ್ಲಿನ ಟಾಯ್ಲೆಟ್ ಗೋಡೆ ಮೇಲೆ 'Make love, not war' ಎಂದು ಯಾರೋ ಬರೆದಿದ್ದರು. ಅದರ ಕೆಳಗೆ ಬೇರೊಬ್ಬರ ಹಸ್ತಾಕ್ಷರದಲ್ಲಿ ಬರೆದಿತ್ತು- 'Hell, do both, get married'.

ಯಾವ ಬುದ್ಧಿವಂತ ಈ ಸಾಲನ್ನು ಬರೆದಿದ್ದಾನೋ ಗೊತ್ತಿಲ್ಲ, ಕಮೋಡ್‌ನೊಳಗೆ ಸರಿಯಾಗಿ ಮಲ ವಿಸರ್ಜಿಸದೇ, ಸುತ್ತೆಲ್ಲ ರಾಡಿ ಮಾಡಿ ಹೋಗುವವರನ್ನು ದ್ವೇಷಿಸಿ ಬರೆದ ಈ ಸಾಲನ್ನು ನಾನು ನೋಡಿದ್ದು ಅಮೆರಿಕದ ಲಾಸ್ ವೇಗಾಸ್‌ನಲ್ಲಿ- 'How can a man hit a deer at 250 yards keep missing the toilet?'.

ನಾನು ಸಿಂಗಾಪುರದ ಬಹುರಾಷ್ಟ್ರೀಯ ಕಂಪನಿಯೊಂದರ ಪ್ರಧಾನ ಕಚೇರಿಗೆ ಹೋಗಿದ್ದೆ. ಅಲ್ಲಿನ ರೆಸ್ಟ್‌ರೂಮಿನಲ್ಲಿ ಕಾಣಿಸಿದ ಸಾಲು ಹೀಗಿದೆ- 'No job is finished, untill the paper work is done'.

ಈ ಸಾಲನ್ನು ಬರೆದವನ ಸೃಜನಶೀಲತೆಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ. ಕನಿಷ್ಠ ಪಕ್ಷ ಬರೆದವರು ಯಾರೇ ಆಗಿರಲಿ, ಅವರು ತಮ್ಮ ಹೆಸರನ್ನಾದರೂ ಬರೆದಿದ್ದರೆ, ಅವರ ಹೆಸರಿನಲ್ಲಿ ಈ ಸಾಲು ಅಮರವಾಣಿಯಾಗಿ ಉಳಿಯುತ್ತಿತ್ತು. ಈ ಸಾಲು ನನ್ನ ಕಣ್ಣಿಗೆ ಬಿದ್ದಿದ್ದು ಇಸ್ರೇಲಿನ ಹೋಟೆಲ್‌ನಲ್ಲಿ, ಅದು ಹೀಗಿದೆ- 'People are assholes. Just make sure you are not the toilet paper'

ಕೆಲ ವರ್ಷಗಳ ಹಿಂದೆ ನಾನು ಲಂಡನ್‌ನ ಒಂದು ಹೋಟೆಲ್‌ನಲ್ಲಿ ತಂಗಿದ್ದೆ. ಅಲ್ಲಿನ ಟಾಯ್ಲೆಟ್‌ನಲ್ಲಿ Toilet Rules ಎಂಬ ಬೋರ್ಡ್ ಅನ್ನು ನೇತು ಹಾಕಿದ್ದರು. ಅದರಲ್ಲಿ ಬರೆದಿತ್ತು- 'If you lift it up, Put it down, If it runs out, Replace it. If you miss it, Wipe it. If you finished, Flush it. If it smells, Spray it. Ladies- Please remain seated for the whole performance. Gentlemen- Stand closer. It may be shorter than you think'. ಇಷ್ಟು ಕಡಿಮೆ ವಾಕ್ಯಗಳಲ್ಲಿ ಇಷ್ಟೆಲ್ಲ ಸೂಚನೆಗಳನ್ನು ಇಷ್ಟು ಪರಿಣಾಮಕಾರಿಯಾಗಿ ಬರೆದ ಆ ಬಾತ್‌ರೂಮ್ ಸಾಹಿತಿಗೆ ಶರಣು.

ಈ ವಾಕ್ಯವನ್ನು ಬರೆದವನು ಕಿಲಾಡಿಯೇ ಇರಬೇಕು. ಇದನ್ನು ಎಲ್ಲಿ ನೋಡಿದ್ದೇನೆಂಬುದು ನೆನಪಾಗುತ್ತಿಲ್ಲ, ಟಾಯ್ಲೆಟ್ ಗೋಡೆ ಮೇಲೆ ಬರೆದಿತ್ತು- 'Use me well and keep me clean, I will never tell what I have seen'.

ಒಮ್ಮೆ ದಕ್ಷಿಣ ಆಫ್ರಿಕಾದ ರಾಜಧಾನಿ ಜೋಹಾನ್ಸ್‌ಬರ್ಗ್‌ನ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದೆ. ಅಲ್ಲಿನ ಟಾಯ್ಲೆಟ್‌ನಲ್ಲಿ ಅಂದವಾಗಿ ಚೌಕಟ್ಟು ತೊಡಿಸಿ ಒಂದು ಫ್ರೇಮನ್ನು ನೇತುಹಾಕಿದ್ದರು. ಅದರಲ್ಲಿ ಬರೆದಿತ್ತು- 'Whenever you are sad, just remember that somewhere in this building there is some one who doesn't even know how to flush the toilet after using it'.

ವಕ್ರತುಂಡೋಕ್ತಿ ಮಾದರಿಯ ಸಾಲುಗಳನ್ನು ನಾನು ಗಮನಿಸಿದ್ದು ಜುರಿಕ್‌ನ ಹೋಟೆಲ್‌ನಲ್ಲಿ, ಟಾಯ್ಲೆಟ್ ಪೇಪರ್ ಕುರಿತು ಬರೆದ ಸಾಲು- 'You never know what you have until its gone. Toilet paper is a good example'.

ಕಾಲೇಜು ದಿನಗಳಲ್ಲಿ ಎಲ್ಲರೂ ಬಾತ್‌ರೂಮು ಸಾಹಿಗಳೇ. ಅದರಲ್ಲೂ ಹಾಸ್ಟೆಲ್ ಗೋಡೆಗಳ ಮೇಲೆಲ್ಲ ಕ್ಯಾಂಪಸ್‌ನಲ್ಲಿರುವ ಹುಡುಗಿಯರ ವಿವರಗಳೇ. ಅವರನ್ನು ಬಣ್ಣಿಸುವಾಗ ಎಲ್ಲರೂ ಕವಿಗಳೇ. ಸಭ್ಯತೆ ಮೀರುವ ಅವಕಾಶ ಸಿಗುವುದು ಇಲ್ಲೊಂದೇ. ಅಶ್ಲೀಲ ಬರೆದೂ ದಕ್ಕಿಸಿಕೊಳ್ಳುವ ಸ್ವಾತಂತ್ರ್ಯವಿರುವುದು ಸಹ ಇಲ್ಲೊಂದೇ.

ಬಹುತೇಕ ಟಾಯ್ಲೆಟ್ ಸಾಹಿತ್ಯದ ಮೂಲ ಲೇಖಕರು ಯಾರೆಂಬುದೇ ಗೊತ್ತಿಲ್ಲ, ಬರಹಗಾರರಲ್ಲೊಂದು ಅಹಂ ಇರುತ್ತದೆ. ಏನೇ ಬರೆಯಲಿ, ಒಂದು ಸಾಲು ಬರೆಯಲಿ, ಕೊನೆಯಲ್ಲಿ ಅವರ ಹೆಸರು ಬರೆದಿರಬೇಕು. ಅವರ ಹೆಸರನ್ನೂ ಬರೆಯದಿದ್ದರೆ, ತೆಗೆದುಹಾಕಿದರೆ ಲೇಖಕರು ನೊಂದುಕೊಳ್ಳುತ್ತಾರೆ. ಅವರ 'ಅಹಂ'ಗೆ ದೊಡ್ಡ ಪೆಟ್ಟು ಕೊಟ್ಟಂತೆ. ಆದರೆ ಟಾಯ್ಲೆಟ್‌ನಲ್ಲಿ ಬರೆಯುವ ಯಾವುದೇ ಸಾಲುಗಳಿಗೂ ಯಾರೂ ತಮ್ಮ ಹೆಸರನ್ನು ಹಾಕಿಕೊಳ್ಳದೇ ಹೃದಯ ವೈಶಾಲ್ಯ ಮೆರೆಯುತ್ತಾರೆ. ಹೀಗಾಗಿ ಬಹುತೇಕ ಬಾತ್‌ರೂಮು ಸಾಹಿತಿಗಳು, ತಾಳೆಗರಿಯಲ್ಲಿನ ಬರಹಗಳಂತೆ 'ಅನಾಮಧೇಯ'ರಾಗಿಯೇ ಉಳಿದುಬಿಟ್ಟಿದ್ದಾರೆ.

ಲಂಡನ್‌ನ ಟ್ಯೂಬ್(ಅಂಡರ್‌ಗ್ರೌಂಡ್ ಟ್ರೇನ್)ನ ಟಾಯ್ಲೆಟ್‌ನಲ್ಲಿ ಸುಮಾರು ನೂರ ಎಂಬತ್ತು ವರ್ಷಗಳ ಹಿಂದೆ ಬರೆದ ಕವನವೊಂದನ್ನು ಹಾಗೇ ಕಾದಿರಿಸಲಾಗಿದೆ. ಆ ಕವನದ ಸುತ್ತಮುತ್ತ ಅನೇಕರು ಗೀಚಿದ್ದಾರೆ. ಆದರೆ ಈ ಕವನವನ್ನು ಸಂರಕ್ಷಿಸುವಂತೆ ರೈಲ್ವೆ ಅಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು. ಇದನ್ನು ಯಾರು ಬರೆದಿರಬಹುದು ಎಂಬ ಬಗ್ಗೆ ಆಗಾಗ ಜಿಜ್ಞಾಸೆ ಮೂಡುತ್ತಿರುತ್ತದೆ. ಲಂಡನ್‌ನ ಟ್ಯಾಬ್ಲಾಯಿಡ್‌ಗಳಿಗೆ ಯಾವುದೂ ಸುದ್ದಿ ಸಿಗದಿದ್ದಾಗ, ಈ ಕವನವನ್ನು ಇವರು ಬರೆದಿದ್ದು, ಅವರು ಬರೆದಿದ್ದು ಎಂಬ ಊಹಾಪೋಹವನ್ನು ಹರಿಯಬಿಟ್ಟು ಓದುಗರ ಕುತೂಹಲವನ್ನು ಕೆಣಕುತ್ತಾರೆ. ಈ ಕವನವನ್ನು ಯಾರು ಬರೆದಿರಬಹುದು ಎಂಬ ಬಗ್ಗೆ ಕನಿಷ್ಠ ನೂರಾರು ಹೆಸರುಗಳನ್ನು ತೇಲಿಬಿಟ್ಟಿರಬಹುದು. ಈ ಕವನದ ಮೂಲಲೇಖಕರ ಬಗ್ಗೆ ನಾಳೆ ಒಂದು ಸುದ್ದಿ ಪ್ರಕಟಿಸಿದರೂ ಅದನ್ನು ಜನ ಆಸ್ಥೆಯಿಂದ ಓದುತ್ತಾರೆ.

ಜಿನೀವಾದ ಮೆರಿಯಟ್ ಹೋಟೆಲ್‌ನ ಲಾಬಿಯಲ್ಲಿರುವ ರೆಸ್ಟ್‌ರೂಮಿನಲ್ಲಿ ಒಂದು ಬೋರ್ಡು ಗಮನ ಸೆಳೆಯುತ್ತದೆ. 'ನಿಮಗೆ ಏನಾದರೂ ಬರೆಯಬೇಕು ಅಂತೆನಿಸಿದರೆ, ನಮ್ಮ ಗೋಡೆಗಳ ಮೇಲೆ ಬರೆಯಬೇಡಿ. ಅದಕ್ಕಾಗಿಯೇ ಇಲ್ಲೊಂದು ದೊಡ್ಡ ನೋಟ್‌ಬುಕ್ ಇಟ್ಟಿದ್ದೇವೆ. ಅದರಲ್ಲಿ ಬರೆಯಿರಿ' ಎಂಬ ಬೋರ್ಡ್ ಓದಿ, ಆ ನೋಟ್‌ಬುಕ್‌ಗೆ ತಡಕಾಡಿದೆ. ರೆಸ್ಟ್‌ರೂಮಿನ ಒಂದು ಮೂಲೆಯಲ್ಲಿ ಒಂದು ಟೇಬಲ್ ಮೇಲೆ ಹೂದಾನಿ, ಅದರ ಪಕ್ಕ ಈ ನೋಟ್‌ಬುಕ್, ಅದರ ಪಕ್ಕದಲ್ಲಿ ಸೋಫಾ. ಅಲ್ಲಿ ಕುಳಿತು ಮನಸ್ಸಿಗೆ ತೋಚಿದ್ದನ್ನು ಗೀಚಬಹುದು. ಸುಮಾರು ಆರುನೂರು ಪುಟಗಳಷ್ಟು ದೊಡ್ಡದಾದ ಆ ನೋಟ್‌ಬುಕ್ಕನ್ನು ಕೈ ತೊಳೆದುಕೊಂಡೇ ಮುಟ್ಟಬೇಕು ಹಾಗೂ ಅಲ್ಲಿಟ್ಟಿರುವ ಪೆನ್ನಿನಲ್ಲಿಯೇ ಬರೆಯಬೇಕು. ಈ ಬುಕ್‌ನಲ್ಲಿ ಯಾರು ಏನೇನು ಗೀಚಿದ್ದಾರೆ ಎಂದು ಆಸಕ್ತಿಯಿಂದ ಎತ್ತಿಕೊಂಡೆ. ಅದನ್ನು ಕೆಳಗಿಡುವ ಮನಸ್ಸಾಗಲಿಲ್ಲ, ಪುಟ್ಟ ಪುಟ್ಟ ಬರಹಗಳು, ಕಚಗುಳಿಯಿಡುವ ಸಾಲುಗಳು. ಕೆಲವು ಪೋಲಿ ಚಿತ್ರಗಳು. ಯಾರೂ ತಮ್ಮ ಹೆಸರನ್ನು ಬರೆದಿಲ್ಲ.

'ಪ್ರತಿ ಎರಡು ತಿಂಗಳಿಗೊಮ್ಮೆ ಈ ನೋಟ್‌ಬುಕ್ ಭರ್ತಿಯಾಗುತ್ತದೆ. ಇಂಥ ನೂರಾರು ನೋಟ್‌ಬುಕ್‌ಗಳು ಹೋಟೆಲ್ ಲೈಬ್ರರಿಯಲ್ಲಿವೆ. ವರ್ಷಕ್ಕೊಮ್ಮೆ ಇವುಗಳ ಪ್ರದರ್ಶನ ಏರ್ಪಡಿಸುತ್ತೇವೆ. ಸಾವಿರಾರು ಸಂಖ್ಯೆಯಲ್ಲಿ ಜನ ಬಂದು ಈ ಸಾಹಿತ್ಯವನ್ನು ಓದಿ ಹೋಗುತ್ತಾರೆ' ಎಂದು ಹೌಸ್‌ಕೀಪಿಂಗ್ ಸಿಬ್ಬಂದಿ ಹೇಳಿದಾಗ ಅಚ್ಚರಿಯಾಯಿತು. ಅಲ್ಲಿನ ಗೋಡೆಗಳೂ ಅಂದವಾಗಿವೆ. ಆ ನೆಪದಲ್ಲಿ ಒಂದಷ್ಟು ಸಾಹಿತ್ಯವೂ ಸೃಷ್ಟಿಯಾಗಿವೆ. ಈ ನೋಟ್‌ಬುಕ್‌ಗಳಿಗೆ ಬಂಗಾರದ ಲೇಪವಿರುವ ಹೊದಿಕೆ ಹಾಕಿರುವುದರಿಂದ ಪುರಾತನ ಗ್ರಂಥಗಳಂತೆ ಗೋಚರಿಸುತ್ತವೆ. 'ಬೆಲೆ ಕಟ್ಟಲಾಗದ ಸಾಹಿತ್ಯ' ಎಂದು ಕರೆಸಿಕೊಳ್ಳುತ್ತಿದೆ.

ಇತ್ತೀಚೆಗೆ ಕೆಲವು ಹೋಟೆಲ್‌ಗಳು ಹೊಸ ಸಂಪ್ರದಾಯ ಆರಂಭಿಸಿವೆ. ಟಾಯ್ಲೆಟ್‌ನಲ್ಲಿ ಯಾರಾದರೂ ಅಶ್ಲೀಲವಲ್ಲದ, ಸೊಗಸಾದ ಸಾಲುಗಳನ್ನು ಬರೆದು ಹೋದರೆ ಅವುಗಳ ಫೋಟೊ ತೆಗೆದು ಫೇಸ್‌ಬುಕ್ ಅಥವಾ ಟ್ವಿಟರ್‌ನಲ್ಲಿ share ಮಾಡುತ್ತಿವೆ. ಇವುಗಳನ್ನು ಇಷ್ಟಪಡುವ ಒಂದು ದೊಡ್ಡ ಓದುಗವಲಯ ಹುಟ್ಟಿಕೊಂಡಿರುವುದಕ್ಕೆ ಲೈಕ್, ರೀಟ್ವೀಟ್ ಸಂಖ್ಯೆಯೇ ನಿದರ್ಶನ.

ಮಾನವನ ನಾಗರಿಕತೆ ಹುಟ್ಟಿದ್ದೇ ಬಚ್ಚಲುಮನೆಯಲ್ಲಿ ಅರ್ಥಾತ್ ಟಾಯ್ಲೆಟ್‌ನಲ್ಲಿ. ಅಂತೆಯೇ ಸಾಹಿತ್ಯ ಹುಟ್ಟಿದ್ದೂ ಇಲ್ಲಿಯೇ. ಹೀಗಿರುವಾಗ ಮೂಲಸ್ಥಾನದಲ್ಲಿಯೇ ಸಾಹಿತ್ಯವನ್ನು ನಿಷೇಧಿಸಿಬಿಟ್ಟರೆ ಹೇಗೆ? ಒಂದಂತೂ ಸತ್ಯ. ಟಾಯ್ಲೆಟ್ ಇರುವ ತನಕ ಟಾಯ್ಲೆಟ್ ಸಾಹಿತ್ಯ ಜೀವಂತವಾಗಿರುತ್ತದೆ. ಈ ಸಾಹಿತ್ಯದ ಮಣ್ಣಿನ (?) ವಾಸನೆ ಸದಾ ಪಸರಿಸುತ್ತಿರುತ್ತದೆ!

ನಾನು ಐವತ್ತು ದೇಶಗಳಿಗೆ ಭೇಟಿ ನೀಡಿದ್ದರೂ, ಲೇಡೀಸ್ ಟಾಯ್ಲೆಟ್‌ಗೆ ಇನ್ನೂ ಭೇಟಿ ಕೊಟ್ಟಿಲ್ಲ, ಹೀಗಾಗಿ ಅಲ್ಲಿನ ಗೋಡೆಗಳ ಮೇಲೆ ಎಂಥ ಬರಹಗಳಿರುತ್ತವೆ ಎಂಬುದನ್ನು ತಿಳಿಯುವ ಕುತೂಹಲ ಹಾಗೇ ಉಳಿದಿದೆ. 'ಟಾಯ್ಲೆಟ್ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ' ಎಂಬ ಸಂವಾದ, ವಿಚಾರ ಸಂಕಿರಣ ಏರ್ಪಡಿಸಿದರೆ, ಒಂದಷ್ಟು ಅಮೂಲ್ಯ ಸಂಗತಿಗಳ ವಿಸರ್ಜನೆಯಾಗಬಹುದು!

ಆಕ್ಸ್‌ಫರ್ಡ್ ಯೂನಿಯನ್ ಯಾರದ್ದೋ ಕೈಗೊಂಬೆಯೇ?

ತಣ್ಣಗಿನ ಬ್ರಿಟನ್‌ನಲ್ಲಿ ಕಾಶ್ಮೀರವು ಯಾವಾಗಲೂ ಬಿಸಿ ಚರ್ಚೆಯ ವಿಷಯವಾಗುವುದೇಕೆ? ಅವರಿಗೆ ಅವರದೇ ಸಮಸ್ಯೆಗಳನ್ನು ಇನ್ನೂ ಬಗೆಹರಿಸಿಕೊಳ್ಳಲು ಆಗಿಲ್ಲ. ಹಾಗಿರುವಾಗ ನಮ್ಮ ವ್ಯವಹಾರಗಳಲ್ಲಿ ಮೂಗು ತೂರಿಸುವ ದರ್ದು ಏಕೆ? ಸ್ವತಂತ್ರ ಚಿಂತನೆಯ ಸೋಗಿನಲ್ಲಿ ಭಾರತದ ವಿರುದ್ಧ ಹುನ್ನಾರ ನಡೆಸಲು ಯಾರಿಗೂ ನಾವು ಅವಕಾಶ ನೀಡುವುದಿಲ್ಲ.

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಖ್ಯಾತ ಚಿತ್ರನಿರ್ದೇಶಕ ಹಾಗೂ ನಿರ್ಮಾಪಕ ವಿವೇಕ್ ಅಗ್ನಿಹೋತ್ರಿ ಕಳೆದ ವಾರ ಆಕ್ಸ್‌ಫರ್ಡ್ ಯೂನಿಯನ್‌ನ ಸಂವಾದದಲ್ಲಿ ಪಾಲ್ಗೊಳ್ಳಲು ನಿರಾಕರಿಸಿರುವುದು ದೊಡ್ಡ ಸುದ್ದಿಯಾಗಿದೆ. ವಿವೇಕ್ ಅಗ್ನಿಹೋತ್ರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿರುವ ಚಿತ್ರ ನಿರ್ದೇಶಕ. ಅವರ 'ದಿ ಕಾಶ್ಮೀರ್ ಫೈಲ್ಸ್' ಜಗತ್ತಿನಾದ್ಯಂತ ಸದ್ದು ಮಾಡಿತ್ತು. ಹೀಗಾಗಿ ಅವರು ಪ್ರತಿಷ್ಠಿತ ಆಕ್ಸ್‌ಫರ್ಡ್ ಯೂನಿಯನ್‌ನ ಆಹ್ವಾನವನ್ನು ತಿರಸ್ಕರಿಸಿದಾಗ ಸಹಜವಾಗಿಯೇ ಸುದ್ದಿಯಾಗುತ್ತದೆ. ಆದರೆ ನಿಮಗೊಂದು ವಿಷಯ ಗೊತ್ತೇ? 2022ರಲ್ಲೂ ಒಮ್ಮೆ ಆಕ್ಸ್‌ಫರ್ಡ್ ಯೂನಿಯನ್‌ನಲ್ಲಿ ವಿವೇಕ್ ಅಗ್ನಿಹೋತ್ರಿಯವರ ಸಂವಾದ ನಿಗದಿಯಾಗಿತ್ತು. ಅದರಲ್ಲಿ ಪಾಲ್ಗೊಳ್ಳಲು ವಿವೇಕ್ ಸಿದ್ಧರಾಗಿದ್ದರು. ಆದರೆ ಪಾಕಿಸ್ತಾನದ ಸಣ್ಣದೊಂದು ಗುಂಪು ಅದರ ವಿರುದ್ಧ ಪ್ರತಿಭಟಿಸಿತು ಎಂಬ ಕಾರಣಕ್ಕೆ ಆಕ್ಸ್‌ಫರ್ಡ್ ಯೂನಿಯನ್ನಿನವರು ತರಾತುರಿಯಲ್ಲಿ ಆ ಸಂವಾದವನ್ನೇ ರದ್ದುಪಡಿಸಿದ್ದರು.

ಈಗ ಮತ್ತೊಮ್ಮೆ ಆಕ್ಸ್‌ಫರ್ಡ್ ಯೂನಿಯನ್‌ನಿಂದ ವಿವೇಕ್ ಅಗ್ನಿಹೋತ್ರಿಗೆ ಆಹ್ವಾನ ಬಂದಿದ್ದರಿಂದ ಇದನ್ನು ಪ್ರಸ್ತಾಪಿಸಬೇಕಾಯಿತು. ಈ ಬಾರಿ ಅವರ ಜತೆಗೆ ಸಂವಾದಕ್ಕೆ ನಿಗದಿಪಡಿಸಿದ್ದ ವಿಷಯ, 'ಸದನಕ್ಕೆ ಕಾಶ್ಮೀರದ ಸ್ವಾತಂತ್ರ್ಯದಲ್ಲಿ ನಂಬಿಕೆಯಿದೆ'. ಸುಮ್ಮನೆ ಒಮ್ಮೆ ಯೋಚಿಸಿ ನೋಡಿ. ಇಂಥ ಪೂರ್ವಗ್ರಹಪೀಡಿತ ವಿಷಯದ ಕುರಿತ ಸಂವಾದದಲ್ಲಿ ಭಾರತೀಯರು ಯಾರಾದರೂ ಭಾಗವಹಿಸುತ್ತಾರೆಯೇ? ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಎಂಬುದು ಇಡೀ ಜಗತ್ತಿಗೆ ಗೊತ್ತಿದೆ. ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಕೂಡ ಒಂದು ಭಾಗವನ್ನು ಅಚಾತುರ್ಯದಿಂದ ಚೀನಾಕ್ಕೆ ಉಡುಗೊರೆ ನೀಡಲಾಗಿದೆ ಮತ್ತು ಅದು ಸಹ ಭಾರತದ ಅವಿಭಾಜ್ಯ ಭಾಗವೇ ಆಗಿದೆ ಎಂಬುದು ಕೂಡ ಎಲ್ಲರಿಗೂ ತಿಳಿದಿದೆ. ಅದು ಭಾರತಕ್ಕೆ ಸೇರಿದ ಭಾಗವಾಗಿರುವುದರಿಂದ ಈ ವಿಷಯದಲ್ಲಿ ಸಂವಾದ ನಡೆಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹೀಗಾಗಿ ವಿವೇಕ್ ಅಗ್ನಿಹೋತ್ರಿ ತಮಗೆ ಆಕ್ಸ್‌ಫರ್ಡ್ ಯೂನಿಯನ್ನಿನ ಆಹ್ವಾನ ಬಂದಾಗ ಅದಕ್ಕೆ ಸರಿಯಾದ ಉತ್ತರವನ್ನೇ ನೀಡಿದ್ದಾರೆ. 'ನಿಮ್ಮ ಡಿಬೇಟಿನ ವಿಷಯ ನೇರವಾಗಿ ಭಾರತದ ಸಾರ್ವಭೌಮತೆಗೆ ಸವಾಲೆಸೆಯುವಂತಿದೆ. ಹೀಗಾಗಿ ಇಂಥ ಸಂವಾದದಲ್ಲಿ ನಾನು ಪಾಲ್ಗೊಳ್ಳಲು ಸಾಧ್ಯವೇ ಇಲ್ಲ' ಎಂದು ಖಡಾಖಂಡಿತವಾಗಿ ಹೇಳಿದ್ದಾರೆ. 'ನೀವು ಚರ್ಚೆಗೆ ಆಯ್ದುಕೊಂಡಿರುವ ವಿಷಯ ಪೂರ್ವಗ್ರಹಪೀಡಿತ ಮಾತ್ರವಲ್ಲ, ಭಾರತೀಯರಿಗೆ ನೋವು ಉಂಟುಮಾಡುವ ಸಂಗತಿ ಕೂಡ ಆಗಿದೆ. ಇದು 140 ಕೋಟಿ ಭಾರತೀಯರಿಗೆ ಅವಮಾನ ಮಾಡುವಂಥ ವಿಷಯ. ಅಷ್ಟೇಕೆ, 1990ರಲ್ಲಿ ನಡೆದ ಕಾಶ್ಮೀರದ ಹತ್ಯಾಕಾಂಡದಲ್ಲಿ ಸಂತ್ರಸ್ತರಾಗಿ ತಾಯ್ನೆಲ ತೊರೆದು ನಿರಾಶ್ರಿತರಾದ ಲಕ್ಷಾಂತರ ಹಿಂದೂಗಳನ್ನು ರೊಚ್ಚಿಗೇಳಿಸುವ ವಿಷಯ ಕೂಡ ಆಗಿದೆ. ಇದನ್ನೊಂದು ಚರ್ಚೆಯೆಂದು ಕರೆಯುವುದು ದುರಂತವೊಂದನ್ನು 'ಪಾರ್ಲರ್ ಗೇಮ್' ರೀತಿ ಆಡಿದಂತೆ... ಬೌದ್ಧಿಕ ಆಟಕ್ಕಾಗಿ ಆಕ್ಸ್‌ಫರ್ಡ್ ಯೂನಿಯನ್ ಇನ್ನಾರಿಗೋ ಆಗಿರುವ ಗಾಯವನ್ನು ಕೆರೆದು ಹುಣ್ಣು ಮಾಡುವ ಕೆಲಸಕ್ಕೆ ಕೈಹಾಕಬಾರದು ಎಂದು ವಿವೇಕ್ ಅಗ್ನಿಹೋತ್ರಿ ತೀಕ್ಷ್ಣವಾದ ಉತ್ತರ ನೀಡಿದ್ದಾರೆ. ವಿವೇಕ್ ಹೇಳಿದ ಮಾತಿಗೆ ನನ್ನ ಸಂಪೂರ್ಣ ಬೆಂಬಲವಿದೆ. ಆಕ್ಸ್‌ಫರ್ಡ್ ಯೂನಿಯನ್ ಅಷ್ಟೇ ಅಲ್ಲ, ಜಗತ್ತಿನ ಯಾವುದೇ ದೇಶದ ಸಂಸತ್ತು ಈ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳುವ ಸಾಹಸಕ್ಕೆ ಕೈಹಾಕಿದರೆ ಭಾರತ ಸುಮ್ಮನಿರುವುದಿಲ್ಲ. ಸಾರ್ವಭೌಮ ಸ್ವತಂತ್ರ ರಾಷ್ಟ್ರದ ಅವಿಭಾಜ್ಯ ಅಂಗವಾಗಿರುವ ಜಮ್ಮು ಮತ್ತು ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸುವ ಉಪದ್ವ್ಯಾಪಕ್ಕೆ ಯಾವ ದೇಶ ಕೈಹಾಕಿದರೂ ಅದನ್ನು ನೋಡಿಕೊಂಡು ಭಾರತ ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. ಇಷ್ಟಕ್ಕೂ ಅಂಥ ದುಸ್ಸಾಹಸಕ್ಕೆ ಕೈಹಾಕುವ ಧೈರ್ಯವಾದರೂ ಯಾರಿಗಿದೆ!

ಅದು ಹಾಗಿರಲಿ, ಈ ಆಕ್ಸ್‌ಫರ್ಡ್ ಯೂನಿಯನ್ ಅಥವಾ ಬ್ರಿಟನ್ ಸರಕಾರಕ್ಕೆ ಬೇರೆಯವರ ಗೊಡವೆ ಏಕೆ? ಬ್ರಿಟನ್ ದೇಶವೇ ಇಂದು ನೂರೆಂಟು ಸಮಸ್ಯೆಗಳಲ್ಲಿ ಮುಳುಗಿದೆ. ಅಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. ಆರ್ಥಿಕ ಕುಸಿತ ಉಂಟಾಗಿದೆ. ಆರೋಗ್ಯ ಸೇವೆಗಳು ಹಳ್ಳ ಹಿಡಿದಿವೆ. ಜನರು ಸರಕಾರದ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಬ್ರಿಟಿಷರು ಬೆಲೆಯೇರಿಕೆಯ ಬಿಸಿಯಿಂದ ತತ್ತರಿಸುತ್ತಿದ್ದಾರೆ. ಅದನ್ನೆಲ್ಲ ಸರಿಪಡಿಸಿಕೊಳ್ಳುವುದಕ್ಕೇ ಇನ್ನೂ ಅವರಿಗೆ ಸಾಧ್ಯವಾಗಿಲ್ಲ. ಹೀಗಿರುವಾಗ ತಮ್ಮ ದೇಶದ ಬಿಕ್ಕಟ್ಟಿನ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ನಮ್ಮ ವ್ಯವಹಾರದಲ್ಲಿ ಮೂಗು ತೂರಿಸುವ ದರ್ದು ಅವರಿಗೆ ಏಕೆ? ತಣ್ಣಗೆ ಮೈಕೊರೆಯುವಂಥ ಚಳಿಯ ಹವಾಮಾನದ ಬ್ರಿಟನ್ ದೇಶಕ್ಕೆ ಕಾಶ್ಮೀರದಂಥ ಬಿಸಿ ಚರ್ಚಾ ವಿಷಯ ಏಕೆ ಬೇಕು? ಇಷ್ಟಕ್ಕೂ ಆಕ್ಸ್‌ಫರ್ಡ್ ಯೂನಿಯನ್ ಎಂಬುದು ಇನ್ನಾರದೋ ಕೈಗೊಂಬೆಯೇ? ಎಲ್ಲೋ ಕುಳಿತ ಮಾಸ್ಟರ್ ಅಥವಾ ಹ್ಯಾಂಡ್ಲರ್‌ಗಳು ಹೇಳಿಕೊಟ್ಟಿದ್ದನ್ನು ಈ ಯೂನಿಯನ್ ಮಾಡುತ್ತಿದೆಯೇ? ಅವರ ತುತ್ತೂರಿಯನ್ನು ಯೂನಿಯನ್ ಊದುತ್ತಿದೆಯೇ? ಒಂದು ವಿಷಯವನ್ನು ಬ್ರಿಟನ್ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಬೇರೆ ದೇಶಗಳನ್ನು ಒಡೆದು ಆಳುವ ಕಾಲ ಹೋಯಿತು. ಬ್ರಿಟಿಷರು ಏನೇ ತಿಪ್ಪರಲಾಗ ಹಾಕಿದರೂ ಇನ್ನುಮುಂದೆ ಯಾವ ದೇಶವನ್ನೂ ಆಳಲು ಸಾಧ್ಯವಿಲ್ಲ. ಶತಮಾನಗಳ ಹಿಂದೆ ಅವರು ಮಾಡಿದ್ದ ಸಾಹಸಗಳೆಲ್ಲ ಈಗ ಇತಿಹಾಸ. ಅದು ಮರುಕಳಿಸುವ ಸಾಧ್ಯತೆ ಲವಲೇಶವೂ ಇಲ್ಲ. ಹೀಗಿರುವಾಗ ಅಂಥ ದುಸ್ಸಾಹಸದ ಕನಸು ಕಾಣುವುದಕ್ಕೂ ಬ್ರಿಟನ್ ಹೋಗಬಾರದು. ಬೇರೆ ದೇಶಗಳ ಆಂತರಿಕ ವ್ಯವಹಾರದಲ್ಲಿ ಕೈಹಾಕಿ ಕಚ್ಚಿಸಿಕೊಳ್ಳುವ ಕೆಲಸವನ್ನು ಮೊದಲು ನಿಲ್ಲಿಸಬೇಕು. ನನಗೆ ಚೆನ್ನಾಗಿ ನೆನಪಿದೆ, ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆಯಲು ಸಂವಿಧಾನದ 370ನೇ ಪರಿಚ್ಛೇದವನ್ನು ರದ್ದುಪಡಿಸಿದಾಗಲೂ ಆಕ್ಸ್‌ಫರ್ಡ್ ಯೂನಿಯನ್ ಈ ವಿಷಯದ ಬಗ್ಗೆ ಸಂವಾದ ಏರ್ಪಡಿಸಿತ್ತು. 'ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದುಪಡಿಸುವುದು ಸರಿಯೇ?' ಎಂಬುದು ಚರ್ಚೆಯ ವಿಷಯವಾಗಿತ್ತು. ಬಿಜೆಪಿಯ ಹಿರಿಯ ನಾಯಕ ಬೈಜಯಂತ್ ಪಾಂಡಾ ಹಾಗೂ ಸಿಪಿಎಂನ ಹಿರಿಯ ನಾಯಕ ದಿ.ಸೀತಾರಾಂ ಯೆಚೂರಿ ಆ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಆಗಲೂ ನನಗೆ ಇವರು ಏಕೆ ಅಂಥ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಆಶ್ಚರ್ಯವಾಗಿತ್ತು.

ನಾನು ಕೂಡ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆಯಿಟ್ಟಿರುವ ವ್ಯಕ್ತಿ. ಅಪ್ಪಟ ಮುಕ್ತ ಚಿಂತನೆಯನ್ನು ನಾನು ಪ್ರತಿಪಾದಿಸುತ್ತೇನೆ. ಭಾರತದಂಥ ಪ್ರಜಾಪ್ರಭುತ್ವ ರಾಷ್ಟ್ರದ ಪ್ರಜೆ ನಾನು. ಹೀಗಾಗಿ ಚರ್ಚೆ ಮತ್ತು ಸಂವಾದದಲ್ಲಿ ನನಗೆ ತುಂಬಾ ವಿಶ್ವಾಸವಿದೆ. ಆದರೆ ಚರ್ಚೆಯ ಉದ್ದೇಶ ಒಳ್ಳೆಯದಿರಬೇಕು. ಯಾವಾಗ ಚರ್ಚೆಯ ಹಿಂದೆ ಷಡ್ಯಂತ್ರದ ಅನುಮಾನಗಳು ಮೂಡುತ್ತವೆಯೋ ಆಗ ಅಂಥ ಚರ್ಚೆಯನ್ನು ಬಹಿಷ್ಕರಿಸಬೇಕು. ಇದು ನನ್ನ ಸಿದ್ಧಾಂತ. ವಿವೇಕ್ ಅಗ್ನಿಹೋತ್ರಿಗೆ ನೀಡಿದ ಆಹ್ವಾನದಂತೆಯೇ ಆ ಸಂವಾದಕ್ಕೆ ಒಬ್ಬ ಪಾಕಿಸ್ತಾನಿ ವಾಗ್ಮಿಗೂ ಆಹ್ವಾನ ನೀಡಲಾಗಿತ್ತು. ಅಂದರೆ ಅದರ ಉದ್ದೇಶವೇನು ಎಂಬುದು ಇನ್ನೂ ಸ್ಪಷ್ಟವಾಗುತ್ತದೆ. ಜಾಗತಿಕ ಮಟ್ಟದಲ್ಲಿ ಕಾಶ್ಮೀರದ ವಿಷಯವನ್ನು ಚೌಕಟ್ಟು ಮೀರಿ ಪುನಃ ಚರ್ಚೆಗೆ ಎಳೆಯುವ ಹುನ್ನಾರ ಇದರ ಹಿಂದಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ದುಷ್ಪರಿಣಾಮ ಕಣ್ಣೆದುರೇ ಇರುವಾಗ ಅದನ್ನು ಮೈಮೇಲೆ ಎಳೆದುಕೊಳ್ಳುವವರು ದಡ್ಡರು.

ನಾವು ಎಲ್ಲಾ ರೀತಿಯ ಸಂವಾದಗಳಿಗೂ ಮುಕ್ತರಾಗಿದ್ದೇವೆ. ಆದರೆ, ಸಂವಾದದ ವಿಷಯವೇನು ಎಂಬುದರ ಬಗ್ಗೆ ನಮಗೆ ನಮ್ಮದೇ ಆದ ಆದ್ಯತೆಗಳೂ, ಆಯ್ಕೆಗಳೂ, ಸ್ಪಷ್ಟತೆಗಳೂ ಇವೆ. ಹೀಗಿರುವಾಗ ಆಕ್ಸ್‌ಫರ್ಡ್ ಯೂನಿಯನ್‌ನಂಥ ವಿದೇಶಿ ಸಂಸ್ಥೆಗಳು ಭಾರತದ ಕುರಿತು ಪೂರ್ವಗ್ರಹಪೀಡಿತ ವಿವಾದಾಸ್ಪದ ಚರ್ಚೆಗಳಿಗೆ ಕೈಹಾಕಿದರೆ ಅದನ್ನು ಭಾರತ ಸರಕಾರ ಕೂಡ ಅಧಿಕೃತವಾಗಿಯೇ ವಿರೋಧಿಸಬೇಕು. ನಿಮಗೆ ಸಂವಾದಗಳನ್ನು ಏರ್ಪಡಿಸಲೇಬೇಕು ಅಂತಾದರೆ ಕಾಶ್ಮೀರದಲ್ಲಿ ಈವರೆಗೆ 40,000ಕ್ಕೂ ಹೆಚ್ಚು ಜನರನ್ನು ಬಲಿ ಪಡೆದಿರುವ ಭಯೋತ್ಪಾದನೆಯ ಬಗ್ಗೆ ಸಂವಾದ ಏರ್ಪಡಿಸಿ. ಕಾಶ್ಮೀರದಲ್ಲಿ ಒಂದಿಡೀ ತಲೆಮಾರಿನ ಜನರು ಯೌವನದ ಸುಂದರ ದಿನಗಳನ್ನು ನೋಡದೆಯೇ ಬೆಳೆದು ಮುದುಕರಾಗಿದ್ದಾರೆ. ಒಳ್ಳೆಯ ಬದುಕು, ಸುಂದರ ಜಗತ್ತು, ಉತ್ತಮ ಶಿಕ್ಷಣ, ಆಟದ ಮೈದಾನ, ಸಿನಿಮಾ, ಮನರಂಜನೆ ಹೀಗೆ ಏನೂ ಇಲ್ಲದೆ ಅವರು ತಮ್ಮ ಬದುಕಿನ ಕೊನೆಯ ಘಟ್ಟವನ್ನು ತಲುಪಿದ್ದಾರೆ. ಆ ತಲೆಮಾರಿನ ಜನರು ಜೀವನದುದ್ದಕ್ಕೂ ನೋಡಿದ್ದು ಬರೀ ಭಯೋತ್ಪಾದನೆ, ಕೇಳಿಸಿಕೊಂಡಿದ್ದು ಗುಂಡಿನ ಸದ್ದು. ಅವರ ಬಾಲ್ಯ, ಯೌವನ ಹಾಗೂ ಫಲಪ್ರದ ವರ್ಷಗಳನ್ನು ಭಯೋತ್ಪಾದನೆಯೆಂಬ ರಾಕ್ಷಸ ಕಿತ್ತುಕೊಂಡಿದ್ದಾನೆ. ಭಯೋತ್ಪಾದನೆಯು ಅಲ್ಲಿನ ಹೆಣ್ಣುಮಕ್ಕಳನ್ನು ವಿಧವೆಯರನ್ನಾಗಿ ಮಾಡಿದೆ. ತಾಯಂದಿರಿಗೆ ಪುತ್ರವಿಯೋಗದ ದುಃಖ ನೀಡಿದೆ. ಈ ವಿಷಯದ ಬಗ್ಗೆ ಏಕೆ ಆಕ್ಸ್‌ಫರ್ಡ್ ಯೂನಿಯನ್ ಚರ್ಚಿಸಬಾರದು? ಅಥವಾ, ಚೀನಾದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಹತ್ತು ಲಕ್ಷಕ್ಕೂ ಹೆಚ್ಚು ಉಯಿಗುರ್ ಮುಸ್ಲಿಮರ ಬಗ್ಗೆ ಚರ್ಚೆ ನಡೆಸಲಿ. ಏಕೆ ಬರೀ ಕಾಶ್ಮೀರದ ಕಡೆಯೇ ಕಣ್ಣು ನೆಟ್ಟು ಕುಳಿತುಕೊಳ್ಳಬೇಕು? ಬ್ರಿಟಿಷರು ಚೀನಾದ ಬಗ್ಗೆ ಮಾತನಾಡುವುದಿಲ್ಲ, ಏಕೆಂದರೆ ಅವರಿಗೆ ಡ್ರ್ಯಾಗನ್ ದೇಶದ ಜತೆಗೆ ಒಳ್ಳೆಯ ಹೊಂದಾಣಿಕೆಯಿದೆ. ಆಕ್ಸ್‌ಫರ್ಡ್ ಯೂನಿಯನ್ನಿನಲ್ಲೇ ಆಕ್ಸ್‌ಫರ್ಡ್ ಚೀನಾ ಫೋರಂ ಎಂಬ ಇನ್ನೊಂದು ಘಟಕವೇ ಇದೆ. ಅವರು ಏನಾದರೂ ಮಾಡಿಕೊಳ್ಳಲಿ, ನನಗೆ ಅದರ ಬಗ್ಗೆ ಚಿಂತೆಯಿಲ್ಲ. ಆದರೆ, ಭಾರತದ ಬಗ್ಗೆ ಎಲ್ಲಾ ದಿಕ್ಕುಗಳಿಂದಲೂ ನಡೆಸುವ ಷಡ್ಯಂತ್ರಗಳ ಬಗ್ಗೆ ನನಗೆ ಕಳವಳವಿದೆ. ಇದನ್ನು ನಾನು ವಿರೋಧಿಸಿಯೇ ತೀರುತ್ತೇನೆ.

ಇಂಥ ವಿಚಾರಗಳಲ್ಲಿ ನಮ್ಮ ವಿದೇಶಾಂಗ ಸಚಿವ ಎಸ್. ಜೈಶಂಕರ್ ಬಹಳ ಸ್ಪಷ್ಟವಾದ ನಿಲುವು ವ್ಯಕ್ತಪಡಿಸುತ್ತಾರೆ. ನಾನು ಅವರನ್ನು ನೂರಕ್ಕೆ ನೂರು ಅನುಮೋದಿಸುತ್ತೇನೆ. ಬ್ರಿಟಿಷರಿಗೆ ಭಾರತದ ವಿಷಯದಲ್ಲಿ ಇನ್ನೂ ವಸಾಹತುಶಾಹಿ ಮನಸ್ಥಿತಿಯೇ ಉಳಿದುಕೊಂಡಿದೆ. ಅದರಿಂದ ಹೊರಬರುವುದಕ್ಕೆ ಅವರಿಗೆ ಆಗುತ್ತಿಲ್ಲ ಎಂದು ಜೈಶಂಕರ್ ಹೇಳಿದ್ದಾರೆ. ಖಂಡಿತ ನಿಜ. ಶತಮಾನಗಳ ಕಾಲ ತಮ್ಮಿಂದ ಆಳಿಸಿಕೊಂಡ ದೇಶವು ಇಂದು ಆರ್ಥಿಕಾಭಿವೃದ್ಧಿಯಲ್ಲಿ ತಮ್ಮನ್ನೇ ಮೀರಿಸಿ ಮುಂದೆ ಹೋಗುತ್ತಿದೆ ಎಂಬುದನ್ನು ಅರಗಿಸಿಕೊಳ್ಳಲು ಅವರಿಗೆ ಆಗುತ್ತಿಲ್ಲ, ತಮ್ಮನ್ನು ಹಿಂದಿಕ್ಕಿ ಭಾರತವೀಗ ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವತ್ತ ದಾಪುಗಾಲು ಇಡುತ್ತಿದೆ ಎಂಬ ಸಂಗತಿ ಅವರನ್ನು ಕಂಗೆಡಿಸಿದೆ. ನಮ್ಮ ನೆರೆರಾಷ್ಟ್ರದವರಿಗೂ ಈ ವಿಷಯ ಜೀರ್ಣವಾಗುತ್ತಿಲ್ಲ, ಹೀಗಾಗಿ ಅವರು ಭಯೋತ್ಪಾದನೆ ಹಾಗೂ ಇನ್ನಿತರ ಷಡ್ಯಂತ್ರಗಳನ್ನು ರೂಪಿಸಿ ಭಾರತವನ್ನು ಹಿಂದಕ್ಕೆ ಎಳೆಯಲು ಪ್ರಯತ್ನಿಸುತ್ತಾರೆ. ಆದರೆ ಅವರಿಗೆಲ್ಲ ನಾನು ಹೇಳುವುದಿಷ್ಟೇ: ನೀವು ಬೇಕಾದ್ದು ಮಾಡಿ, ಎಷ್ಟೇ ಅಡೆತಡೆಗಳನ್ನು ಒಡ್ಡಿ, ಬೇಕಾದರೆ ನಮ್ಮೆದುರು ತಲೆಕೆಳಗಾಗಿ ನಿಲ್ಲಿ, ನಿಮ್ಮಿಂದ ಭಾರತದ ಅಭಿವೃದ್ಧಿಯ ಓಟವನ್ನು ತಡೆಯಲು ಸಾಧ್ಯವೇ ಇಲ್ಲ. ಇದನ್ನು ಬೇಕಾದರೆ ಬರೆದಿಟ್ಟುಕೊಳ್ಳಿ.

'ಇತಿಹಾಸದ ಪುಟಗಳಲ್ಲಿ
ದುರಂತಗಳು ಸಮಾಧಿಯಾಗಿವೆ
ಇದು ಹೊಸಯುಗದ ಭಾರತ
ನಾವು ನಿಲ್ಲುವುದಿಲ್ಲ, ತಲೆಬಾಗುವುದಿಲ್ಲ
ನನ್ನ ಪ್ರೀತಿಯ ಶತ್ರುಗಳೇ,
ನಾವೀಗ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತೇವೆ!'

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ನಾಕ್

● **ಹರಿ ಓಂ ಶಾಸ್ತ್ರೀ, ಶಂಕರಪುರಂ**
ಭಟ್ರೇ, ಕ್ರಿಕೆಟ್ ತರಬೇತಿ ಸಿಗುತ್ತೆ ಅಂತ ಬ್ಯಾಟ್ ಹಿಡಿದು ಶಿಬಿರಕ್ಕೆ ಹೋದ ನನಗೆ ನಿರಾಸೆ ಆಯ್ತಲ್ಲ?
– ಕ್ರಿಟಿಕಲ್ ಕೇರ್ ತರಬೇತಿ ಅಂತ ತಪ್ಪು ತಿಳಿಬಾರದಿತ್ತು ಶಾಸ್ತ್ರಿಗಳೇ!

● **ರಾಘುರಾಯ, ಮೈಸೂರು**
ಭಟ್ರೇ, ಇಂದು ಇದ್ದಿದ್ದು ನಾಳೆ ಇಲ್ಲ ಎನ್ನುವ ಈ ಯುಗದಲ್ಲಿ ಯಾವ ಎರಡು ವಿಷಯಗಳಲ್ಲಿ ಆತುರ ಮಾಡಬಾರದು?
– ಒಂದು ಮದುವೆ ಆಗೋ ವಿಚಾರ, ಮತ್ತೊಂದು ಮೊಬೈಲ್ ಖರೀದಿಸುವ ವಿಚಾರ!

● **ಕಾಶಿ ಪ್ರಾಣೇಶ, ವಿದ್ಯಾಪೀಠ ಸರ್ಕಲ್**
ಭಟ್ರೇ, ಒಂದು ವೇಳೆ ಅಮೆರಿಕದಲ್ಲಿ ಕಮಲಾ ಮೇಡಂ ಡಿಕೆಶಿ ಅವರನ್ನು ಕರೆಸಿಕೊಂಡಿದ್ದಿದ್ದರೆ ಏನಾಗಿರುತ್ತಿತ್ತು?
– ರೆಸಾರ್ಟ್ ರಾಜಕಾರಣವನ್ನು ಅವರಿಗೆ ಅರ್ಥ ಮಾಡಿಸುತ್ತಿದ್ದರು!

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಈ ವಯಸ್ಸಾದ ಗಂಡಸರು ಬೇರೆ ಹೆಂಗಸರ ಕಡೆ ಕತ್ತೆತ್ತಿ ನೋಡ್ತಾರಲ್ಲ?
– ಏನೇ ಎತ್ತಿ ನೋಡಿದರೂ ಪ್ರಯೋಜನ ಆಗೊಲ್ಲ ಅಂತ ಅವರಿಗೆ ಗೊತ್ತು!

● **ದಿನೇಶ ಕಲ್ಲೂರು, ಬಾಗಲಕೋಟೆ**
ಭಟ್ರೇ, ಪ್ರೀತಿಯಿಂದ ಏನನ್ನೇ ಕೊಟ್ಟರೂ ಸ್ವೀಕರಿಸುತ್ತೇನೆ ಅಂತ ಹೇಳ್ತಾಳಲ್ಲ?
– ವಿಷ ಕೊಡಲು ಇದು ಒಳ್ಳೆಯ ಮತ್ತು ಕೊನೆಯ ಅವಕಾಶ!

● **ಸತೀಶ ಬಾಣಸೂಗೂರು, (ಇಮೇಲ್ ಮೂಲಕ)**
ಭಟ್ರೇ, ಬೈಕಿನಲ್ಲಿ ಹಿಂದಕ್ಕೆ ಕುಳಿತುಕೋ ಅಂತ ನನ್ನ ಪತ್ನಿ ಹೇಳ್ತಾಳಲ್ಲ?
– ನಿನಗೆ ಬ್ಯಾಕ್ ಸೀಟ್ ಡ್ರೈವಿಂಗ್ ಮಾಡಿ ಗೊತ್ತಲ್ಲ?!

● **ರೇವತಿ ಶರ್ಮ, ಬೆಂಗಳೂರು**
ಭಟ್ರೇ, ನಮ್ಮ ಆಸೆಗಳೆಲ್ಲ ಈಡೇರುತ್ತದಾ?
– ಈ ಪ್ರಶ್ನೆಯನ್ನು ಹುಡುಗರು ಕೇಳಿದ್ದರೆ ಉತ್ತರಿಸುತ್ತಿದ್ದೆ!

● **ಮಂಗಳಾ ವಿನೋದ, ಶಿವಮೊಗ್ಗ**
ಭಟ್ರೇ, ಎಷ್ಟೇ ಕರೆದರೂ ಬರದ ಗಂಡನಿಗೆ ಏನು ಮಾಡಲಿ?
– 'ಕುಡಿಯೋಣ ಬಾರಾ' ಎಂದು ಕರೆಯಬೇಕಿತ್ತು !

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ರಾಹುಲ್ ಗಾಂಧಿ ವಿದೇಶಕ್ಕೆ ಹೋಗಿ ಏನನ್ನು ಪ್ರೂವ್ ಮಾಡ್ತಾರೆ?
– ತಾವೊಬ್ಬ ಒಳ್ಳೆಯ ಕಾಮಿಡಿಯನ್ ಎಂಬುದನ್ನು!

ತಾಳಮದ್ದಳೆಯ ಹೆಸರಾಂತ ಅರ್ಥಧಾರಿ

ಹುಳಿಸೇಮಕ್ಕಿ ವೆಂಕಟ್ರಮಣ ಮಾಸ್ತರರಿಗೆ ತಾಳಮದ್ದಳೆಯ ಗೀಳು ತಗುಲಿದ್ದು ಯುವ ವಯಸ್ಸಿನಲ್ಲಿಯೇ. ಇದಕ್ಕೆ ಪ್ರೇರಣೆಯಾದವರು ಅಜ್ಜನ ಮನೆಯ 'ಮಾವ ಭಾಗವತ'ರು. ನಂತರ ನಿರಂತರವಾಗಿ ತಾಳಮದ್ದಳೆಯ ಅರ್ಥಗಾರಿಕೆಯಲ್ಲಿ ತೊಡಗಿಸಿಕೊಂಡರು. ವೇದ, ಉಪನಿಷತ್ ಮತ್ತು ಧರ್ಮಗ್ರಂಥಗಳ ಸಾರವನ್ನು ಆಳವಾಗಿ ತಿಳಿದುಕೊಂಡರು.

ಸವಿನೆನಪು
ಶಿವಾನಂದ ಜಿ.ಹೆಗಡೆ
vveditoped@gmail.com

1960ರಿಂದ 2000ನೇ ಇಸವಿಯ ನಡುವಿನ ಅವಧಿಯು ಯಕ್ಷಗಾನ ತಾಳಮದ್ದಳೆಯ ಉತ್ತುಂಗದ ಕಾಲವೆಂದೇ ಹೇಳಬೇಕು. ಏಕೆಂದರೆ ಹಲವಾರು ದಿಗ್ಗಜ ಪಾತ್ರಧಾರಿಗಳು ಉತ್ಕೃಷ್ಟತೆಯನ್ನು ಮೆರೆದ ಸಮಯವದು. ಶೇಣಿ ಗೋಪಾಲಕೃಷ್ಣ ಭಟ್, ಮಲ್ಪೆ ಸಾಮಗರು, ಕುಂಬ್ಳೆ ಸುಂದರ್ ರಾವ್, ತೆಕ್ಕಟ್ಟೆ ಆನಂದ್ ಮಾಸ್ತರ್, ಗೋವಿಂದ ಭಟ್, ಪೆರ್ಲ ಕೃಷ್ಣಭಟ್, ಡಾ. ಎಂ.ಪ್ರಭಾಕರ್ ಜೋಶಿ ಮುಂತಾದ ಮಹಾನ್ ಅರ್ಥಧಾರಿಗಳು ತಾಳಮದ್ದಳೆಯ ಕಾರ್ಯಕ್ರಮವನ್ನು ಅತ್ಯಂತ ಎತ್ತರದ ಮಟ್ಟಕ್ಕೆ ತಲುಪಿಸಿದ ಕಾಲವದು. ಜನರಿಗೆ ಶ್ರೇಷ್ಠ ಮಟ್ಟದ ಕಲಾಪ್ರದರ್ಶನ ನೀಡಿದ ಇವರೆಲ್ಲರೂ ದಕ್ಷಿಣಕನ್ನಡದ ಮೂಲದವರು.

ಉತ್ತರಕನ್ನಡದಲ್ಲಿಯೂ ತಾಳಮದ್ದಳೆಯು ಸಾಕಷ್ಟು ಜನಪ್ರಿಯವಾಗಿದ್ದ, ಅರ್ಥಧಾರಿಗಳು ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಿದ್ದ ಕಾಲವದು. ಮಾತಿನ ಮೋಡಿಯಲ್ಲಿ ಪಾತ್ರವನ್ನು ಜನಮನ ತಲುಪುವಂತೆ ಪ್ರದರ್ಶಿಸಿದ್ದ ಉತ್ತರಕನ್ನಡದ ಅಂದಿನ ಶ್ರೇಷ್ಠ ಅರ್ಥಧಾರಿಗಳ ಯಾದಿಯಲ್ಲಿ ವೆಂಕಟ್ರಮಣ ಹುಳಿಸೇಮಕ್ಕಿ ಅಗ್ರಗಣ್ಯರು. 'ಹುಳಿಸೇಮಕ್ಕಿ ಮಾಸ್ತರ್' ಎಂದೇ ಖ್ಯಾತರಾಗಿದ್ದ ಅವರು, ತಾಳಮದ್ದಳೆಯ ಅರ್ಥಧಾರಿತ್ವದಲ್ಲಿ 'ಮಾಸ್ಟರ್' ಎಂದೇ ನೆನಪಿನಲ್ಲುಳಿದವರು.

ವೆಂಕಟ್ರಮಣ ಹೆಗಡೆಯವರು ಉತ್ತರಕನ್ನಡದ ಕುಮಟಾ ತಾಲೂಕಿನ ಮೂರೂರಿನವರು. 'ಮೂರೂರು' ಹೆಸರು ಬಂದಾಗ ಯಕ್ಷಗಾನ ಮತ್ತು ತಾಳಮದ್ದಳೆ ಕ್ಷೇತ್ರದಲ್ಲಿ ಬೆಳಕಿಗೆ ಬಂದಿರುವ ಹಲವಾರು 'ಉಲ್ಲೇಖನೀಯ' ಕಲಾವಿದರಿದ್ದಾರೆ. ಯಕ್ಷಗಾನ ಪಾತ್ರಧಾರಿಗಳಾಗಿ ದೇವರು ಹೆಗಡೆ, ಈಶ್ವರ ಹೆಗಡೆ, ಗಜಾನನ ಹೆಗಡೆ ವರ್ಧನ್, ಸತ್ಯ ಭಟ್ಟರು, ವಿಷ್ಣು ಭಟ್, ರಮೇಶ್ ಭಂಡಾರಿ, ಸುಬ್ರಮಣ್ಯ ಹೆಗಡೆ, ಭಾಗವತರಾಗಿ ಸರ್ವೇಶ್ವರ ಹೆಗಡೆ, ಚಂಡೆ-ಮದ್ದಳೆ ವಾದಕರಾಗಿ ಗಜಾನನ ಹೆಗಡೆ ಮತ್ತು ನರಸಿಂಹ ಹೆಗಡೆ ಇವರೆಲ್ಲ ಮೂರೂರಿನವರು. ಇವರೆಲ್ಲ ವ್ಯವಸಾಯಿ ಮೇಳಗಳಲ್ಲಿ ಸೇವೆ ಸಲ್ಲಿಸಿ ಹೆಸರಾದವರು. ತಾಳಮದ್ದಳೆಗಷ್ಟೇ ಸೀಮಿತವಾಗಿ ಹೆಸರಿಸುವುದಾದರೆ ವೆಂಕಟ್ರಮಣ ಮಾಸ್ತರ್, ಮಧುಕೇಶ್ವರ್ ಆಡ್ಕೊಳ್ಳಿ, ಗಜಾನನ ಮಾಸ್ತರ್, ಜಿ.ವಿ.ಹೆಗಡೆ ಇವರೆಲ್ಲ ಇದೇ ಊರಿನವರು. ಯಕ್ಷಗಾನ ಕ್ಷೇತ್ರದ ಚಿರಪರಿಚಿತ ಕಲಾವಿದ ಮೂರೂರು ದೇವರು ಹೆಗಡೆಯವರ ನಿಜನಾಮವೂ ವೆಂಕಟ್ರಮಣ ಎಂದೇ. ಮೂರೂರು ಗ್ರಾಮವು ಯಕ್ಷಗಾನ ಮತ್ತು ತಾಳಮದ್ದಳೆ ಕ್ಷೇತ್ರಕ್ಕೆ ನೀಡಿದ ಇಬ್ಬರು ಹೆಸರಾಂತ ಕಲಾವಿದರ ಹೆಸರೂ ವೆಂಕಟ್ರಮಣ ಎಂಬುದು ಕುತೂಹಲಕಾರಿ ಸಂಗತಿ!

ಸಮುದ್ರ ತಟದಲ್ಲಿರುವ ಕುಮಟಾ ತಾಲೂಕು ಕೇಂದ್ರದಿಂದ ಸುಮಾರು 6 ಮೈಲು ದೂರವಿದೆ ಮೂರೂರು ಗ್ರಾಮ; ಕುಮಟಾದಿಂದ ಗುಡ್ಡ ಏರಿ ಹೊರಟು ಇನ್ನೊಂದು ಗುಡ್ಡ ಇಳಿದರೆ ಬಂತು ಮೂರೂರು. ಹುಳಿಸೇಮಕ್ಕಿಯು ಮೂರೂರಿನ ಭಾಗವಾಗಿರುವ ಚಿಕ್ಕಹಳ್ಳಿ. ಇಲ್ಲಿ ಗಣಪತಿ ಹೆಗಡೆ ಮತ್ತು ಮಹಾಲಕ್ಷ್ಮಿ ದಂಪತಿಯ ಮಗನಾಗಿ 1927ರಲ್ಲಿ ಜನಿಸಿದವರು ವೆಂಕಟ್ರಮಣ ಹೆಗಡೆ. ವೆಂಕಟ್ರಮಣನಿಗೆ ಎಳೆವಯಸ್ಸಿನಿಂದಲೇ ವಾತಪೀಡಿತ ಪ್ರಕೃತಿ. ಸ್ನಾಯುಸೆಳೆತದ ತೊಂದರೆಗೆ ಅಂದು ಪೂರ್ತಿಯಾಗಿಸುವ ಔಷಧಿ ಇರಲಿಲ್ಲ. ಅಂದಿನ ಬಡತನದ ಕುರಿತು ವಿವರಿಸಬೇಕಿಲ್ಲ. ಅಸಾಮಾನ್ಯ ಕಠಿಣ ಸ್ಥಿತಿಯಲ್ಲಿಯೂ ಅವರಿಗೆ ಒಸಗೆಯಾಗಿ ಬಂದ ಅದ್ಭುತ ಪ್ರತಿಭೆಯ ಜತೆಗೆ ಗಣಪತಿ-ಲಕ್ಷ್ಮಿಯ ವರಪ್ರಸಾದವೂ ಇತ್ತು. ಅವುಗಳ ಬಲದಿಂದ ಅವರು ಗೈದ ಸಾಧನೆ ಮಾತ್ರ ಅದ್ವಿತೀಯ, ಅಚ್ಚರಿ ಮೂಡಿಸುವಂಥದ್ದು ಎನ್ನಬೇಕು.

ಅಂದಿನ ಕಷ್ಟದ ದಿನಗಳಲ್ಲಿ ಶಾಲೆಗೆ ಹೋಗಿ ವಿದ್ಯಾವಂತರಾದವರು ಅಪರೂಪ. ಅಡಕೆ ತೋಟ, ಗದ್ದೆಯಲ್ಲಿ ಕೆಲಸ ಮಾಡಬೇಕಿದ್ದ, ಹೊಟ್ಟೆಪಾಡಿನ ಪ್ರಾಪ್ತಿಯು ಮುಖ್ಯ ಆದ್ಯತೆಯಾಗಿದ್ದ ದಿನಗಳವು. ವಾತ ಪೀಡೆಯಿಂದಾಗಿ ತೋಟ-ಗದ್ದೆಗಳಲ್ಲಿ ಶ್ರಮಪಡಲು ಸಾಧ್ಯವಾಗದೆಯೋ ಏನೋ ಓದಿನ ಹಾದಿ ಹಿಡಿದ ವೆಂಕಟ್ರಮಣ ಆರನೇ ತರಗತಿಯ ತನಕ ಮೂರೂರು ಕನ್ನಡ ಶಾಲೆಯಲ್ಲಿ ಓದಿದರು. ಏಳನೇ ತರಗತಿಯನ್ನು ಹೆಗಡೆ ಎಂಬ ಗ್ರಾಮದಲ್ಲಿ ವಾರಾನ್ನ ಉಂಡು ಕಲಿತಿದ್ದು. ನಂತರ ಎಸ್ಎಸ್ಎಲ್‌ಸಿಯನ್ನು ಬಾಹ್ಯ ವಿದ್ಯಾರ್ಥಿಯಾಗಿ ಕಟ್ಟಿ ಪಾಸು ಮಾಡಿಕೊಂಡರು. ಟಿಸಿಎಚ್ ಪಠ್ಯಕ್ರಮವನ್ನು ಕಾರವಾರದಲ್ಲಿ ಮುಗಿಸಿದರು. ನಂತರ ಶಿಕ್ಷಕರಾಗಿ ಅವರ ಸೇವೆ ಆರಂಭವಾಗಿದ್ದು ಮೂರೂರಿನ ಅಳವಳ್ಳಿ ಎಂಬ ಹಳ್ಳಿಯ ಗ್ರಾಂಟ್ ಶಾಲೆಯಲ್ಲಿ, ಸರಕಾರಿ ಶಿಕ್ಷಕರಾಗಿ ನೇಮಕವಾಗಿದ್ದು 1953ರಲ್ಲಿ. ಅವರು 'ಹುಳಿಸೇಮಕ್ಕಿ ವೆಂಕಟ್ರಮಣ ಮಾಸ್ತರ್' ಎಂದು ಹೆಸರು ಪಡೆದಿದ್ದು ಹೀಗೆ. ಅವರ ಜ್ಞಾನದಾಹ ಅಲ್ಲಿಗೇ ನಿಲ್ಲಲಿಲ್ಲ. 'ಹಿಂದಿ ರಾಷ್ಟ್ರಭಾಷಾ' ಅರಗಿಸಿಕೊಂಡು 'ವಿಶಾರದ'ರಾದರು. 'ಕನ್ನಡರತ್ನ' ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿದ್ಯಾರತ್ನರೆನಿಸಿಕೊಂಡರು. ಸಂಸ್ಕೃತದಲ್ಲಿಯೂ ಸಾಕಷ್ಟು ಅಧ್ಯಯನ ಮಾಡಿ ಪಾರಂಗತರಾದರು. ಅಂದಿನ ಕಾಲದಲ್ಲಿ ಹೀಗೆ ಪಟ್ಟು ಬಿಡದೆ ಸುಶಿಕ್ಷಿತರಾಗಿದ್ದು, ಅಷ್ಟೆಲ್ಲಾ ಜ್ಞಾನಸಂಪಾದನೆ ಮಾಡಿದ್ದು, ಉತ್ಕಟ ಮತ್ತು ಅಸಾಮಾನ್ಯ ವ್ಯಕ್ತಿತ್ವವೊಂದರ ನಿರೂಪಣೆಗೆ ಕಾರಣವಾಯಿತೆಂಬುದನ್ನು ಇಲ್ಲಿ ಗಮನಿಸಬೇಕು.

ಹುಳಿಸೇಮಕ್ಕಿ ವೆಂಕಟ್ರಮಣ ಮಾಸ್ತರರಿಗೆ ತಾಳಮದ್ದಳೆಯ ಗೀಳು ತಗುಲಿದ್ದು ಯುವ ವಯಸ್ಸಿನಲ್ಲಿಯೇ. 16ನೇ ವಯಸ್ಸಿನಲ್ಲಿ ಮೊಟ್ಟಮೊದಲ ತಾಳಮದ್ದಳೆಯಲ್ಲಿ ಪಾತ್ರರಾದರು ವೃಷಸೇನನಾಗಿ. ಇದಕ್ಕೆ ಪ್ರೇರಣೆಯಾದವರು ಅಜ್ಜನ ಮನೆಯ 'ಮಾವ ಭಾಗವತ'ರು. ನಂತರ ನಿರಂತರವಾಗಿ ತಾಳಮದ್ದಳೆಯ ಅರ್ಥಗಾರಿಕೆಯಲ್ಲಿ ತೊಡಗಿಸಿಕೊಂಡರು. ಪೌರಾಣಿಕ ಕಥನಗಳನ್ನಷ್ಟೇ ಅಲ್ಲದೆ ವೇದ, ಉಪನಿಷತ್ ಮತ್ತು ಧರ್ಮಗ್ರಂಥಗಳ ಸಾರವನ್ನು ಆಳವಾಗಿ ತಿಳಿದುಕೊಂಡರು. ಇದರಿಂದಾಗಿ ಪಾತ್ರಗಳನ್ನು ಅಂತರಾಳದಿಂದ ನೋಡುವುದು, ಪ್ರತಿನಿಧಿಸುವುದು ಅವರಿಗೆ ಸಾಧ್ಯವಾಯಿತು. 'ಕೃಷ್ಣ ಸಂಧಾನ'ದ ಕೃಷ್ಣ ಮತ್ತು ಕೌರವ, 'ವಾಲಿವಧೆ'ಯಲ್ಲಿ ವಾಲಿ ಮತ್ತು ರಾಮ, 'ಕರ್ಣಪರ್ವ'ದಲ್ಲಿ ಕರ್ಣ ಮತ್ತು ಶಲ್ಯ, 'ಕೃಷ್ಣಾರ್ಜುನ'ದ ಕೃಷ್ಣ ಮತ್ತು ಅರ್ಜುನ, 'ಸುಧನ್ವಾರ್ಜುನ'ದ ಸುಧನ್ವ ಮತ್ತು ಅರ್ಜುನ, 'ಪಾದುಕಾ ಪಟ್ಟಾಭಿಷೇಕ'ದ ಭರತ ಮತ್ತು ರಾಮ- ಹೀಗೆ ಬಹುತೇಕ ಪ್ರಸಂಗಗಳಲ್ಲಿ ವಿಮುಖ ಪಾತ್ರಗಳನ್ನು ಚಾಣಾಕ್ಷತೆಯಿಂದ ಮತ್ತು ವಿದ್ವತ್ಪೂರ್ಣವಾಗಿ ನಿರ್ವಹಿಸಿದ ಸವ್ಯಸಾಚಿ ಅವರು. ಹುಳಿಸೇಮಕ್ಕಿ ಮಾಸ್ತರರ ವಿದ್ವತ್ಪೂರ್ಣ ತರ್ಕ, ಭಾವಭರಿತವಾದ ಮಂಡನೆ, ಪಾತ್ರಗಳನ್ನು ನಿರೂಪಿಸುವ ಬಗೆಯು ಕೇಳುಗರನ್ನು ಪ್ರಸಂಗದ ಪ್ರಸ್ತುತತೆಯಲ್ಲಿ ಸೆರೆಹಿಡಿಯುವುದು ವಾಡಿಕೆಯಾಗಿತ್ತು.

ಪಾಂಡಿತ್ಯ ಮತ್ತು ತರ್ಕಶಕ್ತಿಯ ಜತೆಗೆ ಸೂಕ್ಷ್ಮ ಸಂವಹನ ಕಲೆಯನ್ನು ಅರಗಿಸಿಕೊಂಡಿದ್ದ ಹುಳಿಸೇಮಕ್ಕಿ ಮಾಸ್ತರ್ ಬೇಗನೆ ಪ್ರಸಿದ್ಧಿಗೆ ಬಂದರು. ತಾಳಮದ್ದಳೆ ಕಾರ್ಯಕ್ರಮವೇ ಹಳ್ಳಿಗಳಲ್ಲಿ ಅಂದು ಮನರಂಜನೆಯ ಮುಖ್ಯ ಮಾಧ್ಯಮವಾಗಿತ್ತು ಎನ್ನಬಹುದು. ಶ್ರಾವಣ ಮಾಸದಿಂದ ಶುರುವಾಗುವ ಹಬ್ಬ-ಹರಿದಿನಗಳಲ್ಲಿ ಆಗಾಗ ತಾಳಮದ್ದಳೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಅಂಥ ಒಂದು ಸಂದರ್ಭದಲ್ಲಿ, ಅದಾಗಲೇ ಮಾತುಗಾರರಾಗಿ ಬೆಳಕಿಗೆ ಬಂದಿದ್ದ ಹುಳಿಸೇಮಕ್ಕಿ ಮಾಸ್ತರರ ಅರ್ಥಗಾರಿಕೆಯನ್ನು ಕೇಳಲು ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು. ಮಾಸ್ತರರು ರಂಗಕ್ಕೆ ಬಂದು ಕುಳಿತಾಗ ಚಪ್ಪಾಳೆಯ ಸ್ವಾಗತ ಸಹಜವಾಗಿತ್ತು. ವಾತದ ತೊಂದರೆಯಿಂದಾಗಿ ಮಾತಾಡುವ ಸಮಯದಲ್ಲಿ ಕತ್ತು ಮತ್ತು ಬಾಯಿಯ ಭಾಗವು ಆಗಾಗ ಸ್ನಾಯುಸೆಳೆತಕ್ಕೆ ಸಿಲುಕುತ್ತಿದ್ದರೂ, ಮಾಸ್ತರರು ಪದ್ಯವೊಂದಕ್ಕೆ ತಾಸುಗಟ್ಟಲೆ ನಿರರ್ಗಳವಾಗಿ ಆಡಿದ ಮಾತುಗಳನ್ನು ಜನರು ತಲ್ಲೀನರಾಗಿ ಕೇಳಿದ್ದರು. ಅಂದಿನ ತಾಳಮದ್ದಳೆ ಕಾರ್ಯಕ್ರಮವು ರಾತ್ರಿ ಪೂರ್ತಿ, ಅಂದರೆ ಬೆಳಗಾಗುವ ತನಕ ನಡೆದಿದ್ದರೂ, ಕಲಾಭಿಮಾನಿಗಳು ಜಾಗಬಿಟ್ಟು ಕದಲದೇ ಕುಳಿತಿದ್ದು ಅದನ್ನು ಆಸ್ವಾದಿಸಿದ್ದರು. ಇಂದಿನ ದಿನಗಳಲ್ಲಿ ಅಷ್ಟೆಲ್ಲ ದೀರ್ಘವಾದ ತಾಳಮದ್ದಳೆ ಕಾರ್ಯಕ್ರಮವು ಮರೆಯಾಗಿ ಹೋಗಿರುವುದು ಕಹಿವಾಸ್ತವ.

ಕಟ್ಟೆ ಪರಮೇಶ್ವರ ಭಟ್ಟರು, ಬುಚ್ಚನ್ ನಾರಾಯಣ ಶಾಸ್ತ್ರಿಗಳು, ಎನ್.ಎಸ್.ಭಟ್ ಹೊಲನಗದ್ದೆ, ಕರಕೈ ಕೃಷ್ಣಭಟ್ಟರು, ಕೆರೆಮನೆ ವೆಂಕಟಾಚಲ ಭಟ್ಟರು, ಬೈಲ್‌ಕೇರಿ ಪರಮೇಶ್ವರ ಭಟ್ಟರು, ಎನ್.ಎಸ್.ಹೆಗಡೆ ಶೀಗೆಮನೆ, ರೋಹಿದಾಸ್ ಭಂಡಾರಿ, ಹೈಗುಂದ ಡಾಕ್ಟರು, ಹೊಸ್ತೋಟ ಮಂಜುನಾಥ ಭಟ್ಟರು- ಹೀಗೆ ಹುಳಿಸೇಮಕ್ಕಿ ಮಾಸ್ತರರ ಜತೆ ತಾಳಮದ್ದಳೆಯಲ್ಲಿ ಭಾಗಿಯಾದವರ ಪಟ್ಟಿ ಬಹಳ ದೊಡ್ಡದು. ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಡಾ. ಜಿ.ಎಲ್.ಹೆಗಡೆಯವರೂ ಹುಳಿಸೇಮಕ್ಕಿ ಮಾಸ್ತರರ ಜತೆ ತಾಳಮದ್ದಳೆಯಲ್ಲಿ ಭಾಗಿಯಾಗಿದ್ದವರೇ. ದಕ್ಷಿಣಕನ್ನಡದ ಹಲವಾರು ಘಟಾನುಘಟಿಗಳ ಜತೆ ತಾಳಮದ್ದಳೆಯ ಪಾತ್ರಧಾರಿಯಾಗಿ ಮಾಸ್ತರರು ಮಾತಿನ ಜಟಾಪಟಿ ನಡೆಸಿದ್ದಿದೆ. ಸುಮಾರು 45 ವರ್ಷಗಳಷ್ಟು ಕಾಲ ನೂರೆಂಟು ಹಳ್ಳಿಗಳಲ್ಲಿ ಸಹಸ್ರಾರು ತಾಳಮದ್ದಳೆ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ, ಅತ್ಯುತ್ತಮ ಮಾತುಗಾರರಲ್ಲಿ ಪ್ರಮುಖರಾಗಿ ಹೆಸರಾದವರು ವೆಂಕಟ್ರಮಣ ಮಾಸ್ತರ್.

ತಾಳಮದ್ದಳೆಯ ಶ್ರೇಷ್ಠ ಅರ್ಥಧಾರಿಯಾಗಿ ಜನಪ್ರಿಯರಾಗಿದ್ದ ಹುಳಿಸೇಮಕ್ಕಿ ಮಾಸ್ತರರು ಅತ್ಯುತ್ತಮ ಶಿಕ್ಷಕರೆಂದೂ ಹೆಸರು ಗಳಿಸಿದವರು. ಅಳವಳ್ಳಿ, ಕೆಕ್ಕಾರು, ಮಾರುಕೇರಿ, ಕಲ್ಲಬ್ಬೆ, ಮುಸುಗುಪ್ಪೆ, ಹಟ್ಟಿಕೇರಿ, ಕೂಜಳ್ಳಿ ಶಾಲೆಗಳಲ್ಲಿ ಶಿಕ್ಷಕರಾಗಿದ್ದ ವೆಂಕಟ್ರಮಣ ಮಾಸ್ತರರಿಂದ ಕಲಿತ ವಿದ್ಯಾರ್ಥಿಗಳು, ಅವರು ಹೇಳಿಕೊಟ್ಟ ಪಾಠವನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ತಿಳಿನೀಲಿ ಬಣ್ಣದ ಮೋಟು ಅಂಗಿ ಮತ್ತು ಪಂಚೆ ಧರಿಸುತ್ತಿದ್ದ ಅವರು ಸರಳ-ಸಜ್ಜನರೆಂದು ಗೌರವಕ್ಕೆ ಪಾತ್ರರಾದವರು. ಪ್ರಸಿದ್ಧ ಜ್ಯೋತಿಷಿಗಳಾಗಿದ್ದ ಭಟ್ಟರಕೇರಿ ನಾರಾಯಣ ಭಟ್ಟರಿಂದ ಶಾಸ್ತ್ರ ಕಲಿತಿದ್ದ ಹುಳಿಸೇಮಕ್ಕಿ ಮಾಸ್ತರರು, ಬಹಳ ಒಳ್ಳೆಯ ಜ್ಯೋತಿಷಿಗಳಾಗಿದ್ದುದು ಅವರ ಘನವ್ಯಕ್ತಿತ್ವದ ಇನ್ನೊಂದು ಮಹತ್ವದ ಆಯಾಮ.

ಬದುಕಿನುದ್ದಕ್ಕೂ ವಾತವ್ಯಾಧಿ ಪೀಡಿತರಾಗಿದ್ದ ಹುಳಿಸೇಮಕ್ಕಿ ವೆಂಕಟ್ರಮಣ ಮಾಸ್ತರ್ ತಮ್ಮ 74ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು. ಪತ್ನಿ, ಇಬ್ಬರು ಗಂಡು ಮಕ್ಕಳು, ಐವರು ಹೆಣ್ಣು ಮಕ್ಕಳು, ಬಹುದೊಡ್ಡ ಅಭಿಮಾನಿ ಬಳಗ ಹಾಗೂ ವಿದ್ಯಾರ್ಥಿವೃಂದವನ್ನು ಅಗಲಿದ ಅವರ ನೆನಪು ಮಾತ್ರ ಎಲ್ಲರಲ್ಲಿ ಚಿರಾಯು. ವೆಂಕಟ್ರಮಣ ಮಾಸ್ತರರ ಸುಪುತ್ರ ಜಿ.ವಿ.ಹೆಗಡೆಯವರು ಕೂಡ ತಾಳಮದ್ದಳೆಯ ಉತ್ತಮ ಅರ್ಥಧಾರಿಯಾಗಿದ್ದು, ತಾಳಮದ್ದಳೆ ಕ್ಷೇತ್ರಕ್ಕೆ ಮಾಸ್ತರರು ಕೊಟ್ಟುಹೋದ ಬಹಳ ಒಳ್ಳೆಯ ಕೊಡುಗೆ ಎನಿಸಿಕೊಂಡಿದ್ದಾರೆ.

ಸಂಘ-ಸಂಸ್ಥೆಗಳು ಮತ್ತು ಅಕಾಡೆಮಿ ನೀಡಬಹುದಾದ ಮರಣೋತ್ತರ ಪ್ರಶಸ್ತಿ ಮತ್ತು ಗೌರವಕ್ಕೆ ಹುಳಿಸೇಮಕ್ಕಿ ಮಾಸ್ತರರು ನಿಜವಾಗಿ ಪರಿಗಣನಾರ್ಹರು.

(ಲೇಖಕರು ಮುಂಬೈನ ಲಾಸಾ ಸೂಪರ್ ಜೆನರಿಕ್ಸ್‌ನ ನಿರ್ದೇಶಕರು)

ಪ್ರತಿಸ್ಪಂದನ
ಶಂಕರನಾರಾಯಣ ಭಟ್

ಈಗ ಮತ್ತದೇ ಕೂಗು?

'ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ', 'ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನ', 'ಅಭಿವೃದ್ಧಿಗೆ ಕಲ್ಯಾಣಮಸ್ತು' ಇವು ಸೆ.18ರ ಪ್ರಮುಖ ದಿನಪತ್ರಿಕೆಗಳಲ್ಲಿ ಕಂಡುಬಂದ ಮುಖಪುಟ ಸುದ್ದಿಶೀರ್ಷಿಕೆಗಳು. 'ವಿಶೇಷ ಸ್ಥಾನ' ಅಥವಾ 'ವಿಶೇಷ ಸ್ಥಾನಮಾನ' ಎಂಬ ಪದಗುಚ್ಛವೇ ದಿಗಿಲು ಮೂಡಿಸುವಂಥದ್ದು. ಅಂಥದ್ದರಲ್ಲಿ ಈಗ ಮತ್ತದೇ ಕೂಗೇ?!

ಒಂದು ರಾಜ್ಯವಾಗಿ ಕರ್ನಾಟಕದ ಕಲ್ಯಾಣವಾಗಬೇಕೇ ಅಥವಾ ಕೇವಲ ಕೆಲವಷ್ಟೇ ಜಿಲ್ಲೆಗಳನ್ನು ಸೇರಿಸಿ ಅವುಗಳಿಗೆ 'ಕಲ್ಯಾಣ' ಪದವಿ ನೀಡುವುದೇ? ಹಾಗೆ ನೋಡಿದರೆ, ಕರ್ನಾಟಕದ ಹೆಚ್ಚಿನ ಜಿಲ್ಲೆಗಳಲ್ಲಿ ಇಂದು ಮೂಲಭೂತ ಸೌಕರ್ಯಗಳ ಕೊರತೆ ಇದೆ- ಕುಡಿಯುವ ನೀರಿನಿಂದ ಹಿಡಿದು ರಸ್ತೆ, ಆಸ್ಪತ್ರೆ, ಅಂಗನವಾಡಿ ಇತ್ಯಾದಿ. ಹೀಗಿರುವಾಗ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಿಗಷ್ಟೇ ವಿಶೇಷ ಅನುದಾನ,



ಪ್ಯಾಕೇಜ್ ಘೋಷಣೆ ಯಾವ ಸೀಮೆಯ ನ್ಯಾಯ? ಒಂದಂತೂ ಸತ್ಯ- ಎಲ್ಲ ಜಿಲ್ಲೆಗಳಲ್ಲಿ ಸಮಸ್ಯೆ ಒಂದೇ ತೆರನಾಗಿಲ್ಲ ಅಥವಾ ಗಂಭೀರವಲ್ಲ. ಆಯಾ ಪ್ರದೇಶದ ಹಾಲಿ ಪರಿಸ್ಥಿತಿಗಳಿಗೆ ಅನುಗುಣವಾಗಿ ವಿಶೇಷ ಧ್ಯಾನ ಕೊಡುವಂತಾದರೇನೇ ಇಡೀ ರಾಜ್ಯದ ಅಭಿವೃದ್ಧಿ ಸಾಧ್ಯ. ಇಲ್ಲವೆಂದರೆ ಅನವಶ್ಯಕ ಗೊಂದಲಗಳಿಗೆ ಎಡೆಮಾಡಿಕೊಟ್ಟಂತೆ ಆಗುವುದಿಲ್ಲವೇ?

ವಿಶೇಷ ಸಚಿವ ಸಂಪುಟ ಸಭೆಯಲ್ಲಿ ನಡೆದ 56 ವಿಷಯಗಳ ಚರ್ಚೆಯಲ್ಲಿ 46 ವಿಷಯಗಳು ಕಲ್ಯಾಣ ಕರ್ನಾಟಕದ ಬಗ್ಗೆಯೇ ಮೀಸಲು! ರಾಜ್ಯದ ಹಲವು ಜಿಲ್ಲೆಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿವೆ. ಅವುಗಳ ಪೈಕಿ 7 ಜಿಲ್ಲೆಗಳನ್ನಷ್ಟೇ ಆಯ್ದುಕೊಂಡು ಕಲ್ಯಾಣ ಮಾಡಲು ಹೊರಟರೆ ಅದೆಂಥ ಕಲ್ಯಾಣ? ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಮಾನಾದ ಅಭಿವೃದ್ಧಿಯಾದರೇನೇ ಅದಕ್ಕೊಂದು ಅರ್ಥ ಬಂದೀತು. ಇಲ್ಲವಾದಲ್ಲಿ, ಈಗ ಕಲ್ಯಾಣ ಕರ್ನಾಟಕ, ನಾಳೆ ಹೈದರಾಬಾದ್ ಕರ್ನಾಟಕ, ನಂತರ ದಕ್ಷಿಣ ಕರ್ನಾಟಕ ಹೀಗೆ ಎಲ್ಲವೂ ತಮಗೆ ವಿಶೇಷ ಸ್ಥಾನ, ಪ್ರತ್ಯೇಕ ಸಚಿವಾಲಯದ ಬೇಡಿಕೆ ಇಡುತ್ತಾ ಹೋದರೆ, ಸರಕಾರವೇ ರಾಜ್ಯವನ್ನು ವಿಭಜಿಸುವ ಕೆಲಸಕ್ಕೆ ಮುಂದಾದಂತೆ ಆಗುವುದಿಲ್ಲವೇ?

ಕೇವಲ ಒಂದು ಕಡೆಗೆ ಒತ್ತುಕೊಡುವುದೆಂದರೆ, ಶರೀರದ ಒಂದು ಭಾಗವನ್ನಷ್ಟೇ ಮಜಬೂತ್ ಮಾಡಿ, ಮಿಕ್ಕವನ್ನು ಹಾಳುಗೆಡವಿದಂತೆ. ಸರ್ವಾಂಗೀಣ ಬೆಳವಣಿಗೆ ಆದಾಗಲೇ ಅದನ್ನು ನಿಜಾರ್ಥದ ಅಭಿವೃದ್ಧಿ ಅನ್ನಬಹುದಲ್ಲವೇ? ಹೀಗಾಗಿ ಇಲ್ಲಿ 'ವಿಶೇಷ ಸ್ಥಾನ' ಎಂಬ ಪರಿಕಲ್ಪನೆಯೇ ಅಪಾಯಕಾರಿಯಂತೆ ಕಾಣುತ್ತದೆ!

(ಲೇಖಕರು ಹವ್ಯಾಸಿ ಬರಹಗಾರರು)

ದಮನಿತರ ಬದುಕಿಗೆ ಆಸರೆಯಾದ ಡಿ.ಸಿ. ಭೂಮಿ ಯೋಜನೆ!

ದಲಿತರು, ಹಿಂದುಳಿದ ಭೂರಹಿತರ ಕುರಿತಂತೆ ಕಾಳಜಿ ತೋರಿದಂತೆ ಮಾಡಿ ಬ್ರಿಟಿಷರು ಹಲವು ನಿಯಮಗಳನ್ನು ರೂಪಿಸಿದರು. ಇದು, ಒಂದು ವರ್ಗಕ್ಕೆ ಸಹಾಯವಾಗುವುದು ಎಂಬಂತೆ ಮೇಲ್ನೋಟಕ್ಕೆ ಕಂಡುಬಂದರೂ, ಅಂದಿನ ಭಾರತದಲ್ಲಿ ಜಾತಿ-ಮತಭೇದ ಉಂಟುಮಾಡಲು ಈ ಅವಕಾಶವನ್ನು ಅವರು ದಾಳವನ್ನಾಗಿ ಮಾಡಿಕೊಂಡರು.

ಗಂಟಾಘೋಷ
ಗುರುರಾಜ ಗಂಟಿಹೊಳೆ
vveditoped@gmail.com

ಸಾಮಾಜಿಕವಾಗಿ ತುಳಿತಕ್ಕೊಳಗಾದ ವರ್ಗಗಳಿಗಾಗಿ ಬ್ರಿಟಿಷ್ ಸರಕಾರವು 1892ರಲ್ಲಿ ಭೂ ಕಾಯಿದೆಯನ್ನು ಜಾರಿಗೊಳಿಸಿತು. ಇದರ ಮೊದಲ ಭಾಗವಾಗಿ ಅಂದಿನ ಮದ್ರಾಸ್ ಪ್ರಾಂತ್ಯದ ತಮಿಳುನಾಡಿನಲ್ಲಿ 12 ಲಕ್ಷ ಎಕರೆ ಭೂಮಿಯನ್ನು ವಿತರಿಸಿತು. ಈ ಕೃಷಿಯೋಗ್ಯ ಭೂಮಿಯನ್ನು ತುಳಿತಕ್ಕೊಳಗಾದ ವರ್ಗದ ದಲಿತರಿಗೆ ನೀಡಲಾಗಿತ್ತು ಮತ್ತು ಈ ಭೂಮಿಯನ್ನು ಅನ್ಯರಿಗೆ ಮಾರಾಟ ಮಾಡುವಂತಿಲ್ಲ, ಗುತ್ತಿಗೆ ನೀಡುವಂತಿಲ್ಲ ಎಂಬ ಕೆಲವು ಷರತ್ತುಗಳನ್ನು ಅವರಿಗೆ ವಿಧಿಸಲಾಗಿತ್ತು. ಇದನ್ನು 'ಪಂಚಮಿ ಭೂಮಿ' ಎಂದು ಸಹ ಕರೆಯಲಾಗುತ್ತದೆ.

1891ರಲ್ಲಿ ಚೆಂಗಲ್ಪುಟ್ ಕಲೆಕ್ಟರ್ ಆಗಿದ್ದ ಜೆ.ಎಚ್.ಎ. ಟ್ರೆಮೆನ್ಹೀರೆ ಅವರು ಸಲ್ಲಿಸಿದ ವರದಿಯ ಆಧರದ ಮೇಲೆ ಭೂಮಿಯನ್ನು ವಿತರಿಸಲು ಅಂದಿನ ಬ್ರಿಟಿಷ್ ಸರಕಾರ ನಿರ್ಧಾರ ಮಾಡಿತು. 'ಚೆಂಗಲ್ಪುಟ್‌ನ ಪಾರಿಯಾಗಳ ಟಿಪ್ಪಣಿಗಳು' ಎಂಬ ಶೀರ್ಷಿಕೆಯ ವರದಿಯು, ಪಾರಿಯಾಗಳನ್ನು ಭೂಮಾಲೀಕ ಸಮುದಾಯವಾಗಿ ಪರಿವರ್ತಿಸಲು ಕರೆ ನೀಡಿತು. Govt Order 10/10, 10ಅ (Revenue act) ಅನ್ನು Depressed Classes Land Act-1892ರ ಅಡಿಯಲ್ಲಿ ಸೆಪ್ಟೆಂಬರ್ 30ರಂದು ಜಾರಿಗೆ ತಂದಿತು. ಇದರಿಂದಾಗಿ ದಲಿತರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲರಾಗುತ್ತಾರೆ ಎಂದು ಸರಕಾರ ನಂಬಿತ್ತು.

ಈ ಮೂಲಕ, ಬ್ರಿಟಿಷರು ಅಂದಿನ ಭಾರತದಲ್ಲಿನ ಕೆಳವರ್ಗದ, ದಲಿತರ ಏಳಿಗೆಗಾಗಿ ಶ್ರಮಿಸಿದರು ಎಂಬಂಥ ಹಲವು ವಿಚಾರಗಳನ್ನು ಅವರ ಪರವಾಗಿ ನಮ್ಮ ಇತಿಹಾಸದ ಪುಟಗಳಲ್ಲಿ ದಾಖಲಿಸಿದರು. ಆದರೆ, ಇದಕ್ಕೆ ಬೇರೆಯದೇ ಆದ ಒಂದು ಪ್ರಭಾವಿ ಹಿನ್ನೆಲೆ ಇದೆ. ಆ ಹಿನ್ನೆಲೆ ಅಂದಿನ ಬ್ರಿಟಿಷರ ಎದೆಯಲ್ಲಿ ಪುಟ್ಟ ನಡುಕವನ್ನು ಹುಟ್ಟಿಸಿತ್ತು. ಹೀಗಾಗಿ, ಇಂಗ್ಲೆಂಡಿನಲ್ಲಿ ನಡೆದ ಅನಾಹುತಗಳು ಭಾರತದಲ್ಲಿ ನಡೆಯದಂತೆ ಎಚ್ಚರವಹಿಸಿ ದೂರಗಾಮಿ ಯೋಜನೆ ರೂಪಿಸಿ ಭಾರತದಲ್ಲಿ ಕೆಲ ವರ್ಗಗಳನ್ನು ಈ ಯೋಜನೆಯಡಿಯಲ್ಲಿ ಪ್ರತ್ಯೇಕಿಸಿ ಜಾರಿಗೆ ತರಲಾಯಿತು.

ಗ್ರೇಟ್ ಬ್ರಿಟನ್‌ನಲ್ಲಿ ಉತ್ತಮ ಕೃಷಿ ಚಟುವಟಿಕೆಯಲ್ಲಿ ಕುಸಿತ ಕಾಣತೊಡಗಿತು. ಅಂದರೆ, ದಿನನಿತ್ಯ ಬಳಸುವ ಆಹಾರ ಧಾನ್ಯಗಳನ್ನು ಯಥೇಚ್ಛವಾಗಿ ಬೆಳೆಯುತ್ತಿದ್ದ ಅಲ್ಲಿನ ಕೃಷಿಕರು ಹತ್ತೊಂಬತ್ತನೇ ಶತಮಾನದ ಕೊನೆಯ ತ್ರೈಮಾಸಿಕದಲ್ಲಿ ಕೃಷಿ ಉತ್ಪನ್ನದಲ್ಲಿ ಕುಸಿತವನ್ನು ಕಾಣತೊಡಗಿದರು. ಈ ಕೃಷಿ ಕುಸಿತದ ನಿಖರ ಲಕ್ಷಣಗಳೆಂದರೆ ಬೆಲೆಗಳ ಕುಸಿತ, ನಂತರ ಉತ್ಪಾದನೆಯ ಕುಸಿತ ಮತ್ತು ಅಂತಿಮವಾಗಿ ಭೂ ಆದಾಯ ಹಾಗೂ ಸಂಪತ್ತು, ಬಾಡಿಗೆಗಳು ಮತ್ತು ಭೂಮಿಯ ಮೌಲ್ಯಗಳು ಕುಗ್ಗುವಿಕೆ ಇತ್ಯಾದಿ.

ಇದು ಯಾವ ಮಟ್ಟಕ್ಕೆ ಬಂದಿತೆಂದರೆ, ಬೆಳೆ ಮತ್ತು ಬೆಲೆ ಕುಸಿತವು, ಅಲ್ಲಿನ ಸಮಾಜ ಮತ್ತು ರಾಜಕೀಯ ವ್ಯವಸ್ಥೆಯ ಮೇಲಿದ್ದ ಬ್ರಿಟಿಷ್ ಭೂಮಾಲೀಕರ ಹಿಡಿತವನ್ನು ಸಡಿಲಗೊಳಿಸಿತು. ಇದು ಐರಿಶ್ ದಂಗೆ ಶುರುವಾಗಲು, ಲಿಬರಲ್ ಪಕ್ಷವನ್ನು ಮಧ್ಯದಲ್ಲಿ ವಿಭಜಿಸಿ ಅಧಿಕಾರದಿಂದ ದೂರವಿರಿಸಲು ಸಹಾಯ ಮಾಡಿತು. ಈ ಮಹತ್ತರ ಬದಲಾವಣೆಯು ಮೊದಲ ಮಹಾಯುದ್ಧದ ವೇದಿಕೆ ಸಿದ್ಧಗೊಳ್ಳುವಲ್ಲಿನ ದೂರದ ಕಾರಣಗಳಲ್ಲಿ ಒಂದಾಗಿತ್ತು ಎನ್ನಬಹುದು.

ಈ ಹಂತದಲ್ಲಿ ಲಕ್ಷಾಂತರ ಕಾರ್ಮಿಕರು ಗ್ರಾಮಾಂತರ ಪ್ರದೇಶವನ್ನು ತೊರೆದರು. ಇದರಿಂದಾಗಿ ಗೋಧಿಯ ಬೆಲೆಯು ಕಾಲುಭಾಗಕ್ಕೆ ಕುಸಿಯಿತು. ಮಾಂಸ ಮತ್ತು ಉಣ್ಣೆಯ ಬೆಲೆಯೂ ಕುಸಿಯಿತು. ಕೇವಲ ಧಾನ್ಯಗಳಿಗಾಗಿ, ಕೃಷಿಭೂಮಿಯನ್ನು ಮೂರನೇ ಎರಡರಷ್ಟು ಗುತ್ತಿಗೆ ಪಡೆದು ಪರಸ್ಪರ ಹಂಚಿಕೊಳ್ಳುವಂಥ ಒಪ್ಪಂದಕ್ಕೆ ಬಂದ ಬ್ರಿಟನ್, 1913ರ ಹೊತ್ತಿಗೆ ತಿನ್ನಲು ಗೋಧಿ ಮತ್ತು ಹಿಟ್ಟಿನ ಐದನೇ ನಾಲ್ಕರಷ್ಟು ಭಾಗವನ್ನು ಆಮದು ಮಾಡಿಕೊಳ್ಳುವಂಥ ದುರ್ದೆಸೆಗೆ ಬಂದಿತು.



ಇಂಥ ಒಂದು ಅತ್ಯಂತ ಕೆಟ್ಟ ಪರಿಸ್ಥಿತಿ ಬರಲು ಪ್ರಮುಖ ಕಾರಣ, ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಎಂಬ ಭಾವನೆಯು ಅಲ್ಲಿನ ದುಡಿಯುವ ವರ್ಗದವರಲ್ಲಿ, ಕೂಲಿ ಕಾರ್ಮಿಕರಲ್ಲಿ ಮೂಡುವಂತೆ ಮಾಡಿ ಉನ್ನತ ವರ್ಗದವರ ವಿರುದ್ಧ ಅವರನ್ನು ಎತ್ತಿಕಟ್ಟುವ ಮೂಲಕ ಸಾಮಾಜಿಕವಾಗಿ ಒಡೆಯಲು ನಡೆಸಿದ ಪ್ರಯತ್ನ. ಈ ಹಂತದಲ್ಲಿ ಭಾರತವು ಸಂಪೂರ್ಣವಾಗಿ ಹಳ್ಳಿಗಳಿಂದ ಕೂಡಿದ ದೇಶವಾಗಿತ್ತು. ಇಲ್ಲಿ ದುಡಿಯುವವರಿಂದ, ಕೂಲಿ, ಕಾರ್ಮಿಕ ವರ್ಗಕ್ಕೆ ಸೇರಿದವರಿಂದಲೇ ಕೃಷಿ ಕಾರ್ಯಗಳು, ಸೇವಾವಲಯದ ಕೆಲಸಗಳು ಹೆಚ್ಚಾಗಿ ನಡೆಯುತ್ತಿದ್ದುದನ್ನು ಗಮನಿಸಿದ ಬ್ರಿಟಿಷರು, ಇದೇ ಘಟನೆಗಳು ಭಾರತದಲ್ಲಿ ನಡೆಯದಂತೆ ತಡೆಯಲು ಕಂಪನಿ ಮೂಲಕ ಮುಂಜಾಗ್ರತಾ ಕ್ರಮವಾಗಿ ಜಾರಿಗೆ ತಂದದ್ದೇ ಇಂಥ ಹಲವು ಕಾನೂನುಗಳು.

ಈ ಹಂತದಲ್ಲಿ ಅಂದಿನ ಮದ್ರಾಸ್ ಸರಕಾರ 1918ರಲ್ಲಿ, ಬಳಕೆಯಿರದ ಭೂಮಿಯನ್ನು ರೈತವಾರಿ ಗ್ರಾಮಗಳಲ್ಲಿನ ದಮನಿತ ವರ್ಗಕ್ಕೆ ನೀಡುವಂತೆ ಮಾಡಿದ ಆದೇಶದಂತೆ, ಸುಮಾರು 40 ಸಾವಿರ ಎಕರೆಯಷ್ಟು ಜಮೀನನ್ನು ಕೇವಲ ಸೌತ್ ಕೆನರಾ ಜಿಲ್ಲೆಯೊಂದರಲ್ಲೇ 1945ರ ಸುಮಾರಿಗೆ ಮೀಸಲಿಡಲಾಯಿತು. ಇದರಂತೆ ಕುಂದಾಪುರ ತಾಲೂಕಿನಲ್ಲಿ 98ಕ್ಕೂ ಹೆಚ್ಚು ಹಳ್ಳಿಗಳಲ್ಲಿ 3,698 ಎಕರೆಯಷ್ಟು ಮೀಸಲಿಟ್ಟರೆ, ಕಾರ್ಕಳದಲ್ಲಿ 7 ಸಾವಿರ ಎಕರೆ, ಕಾಸರಗೋಡಿನಲ್ಲಿ 8,345 ಎಕರೆ, ಮಂಗಳೂರಿನಲ್ಲಿ 6,190 ಎಕರೆ, ಪುತ್ತೂರಿನಲ್ಲಿ 11 ಸಾವಿರ ಎಕರೆ ಮತ್ತು ಉಡುಪಿ ತಾಲೂಕಿನಲ್ಲಿ 4,332 ಎಕರೆಯಷ್ಟು ಜಮೀನು-ಜಾಗವನ್ನು ದಮನಿತ ವರ್ಗಗಳಿಗೆಂದು ಬಿಟ್ಟುಕೊಡಲಾಯಿತು.

ಹೀಗಿದ್ದರೂ, ಕೆಲವೊಂದು ಜಮೀನುಗಳು ಉಳುಮೆ ಮಾಡಲು ಬಾರದ ಸ್ಥಿತಿಯಲ್ಲಿದ್ದು, ಇನ್ನು ಕೆಲವು ವಿಪರೀತವಾಗಿ ಸಾಗುವಳಿ ಖರ್ಚು ಬೇಡುತ್ತಿದ್ದುದರಿಂದ ಬೇಸತ್ತ ಈ ಜನರು, ಸ್ಥಿತಿವಂತರಿಗೆ ಹಣಕ್ಕಾಗಿ ಕೊಡುವುದು ಅಥವಾ ಕಡಿಮೆ ಬೆಲೆಗೆ ಮಾರಿಬಿಡುವುದೆಲ್ಲ ನಡೆದಿದೆ. ಹಾಗಾಗಿ, ಇದನ್ನು ತಡೆಯಲು ಸರಕಾರದಿಂದ ಸ್ಥಳೀಯ ಮಟ್ಟದಲ್ಲಿ ಹಲವು ನೀತಿ ನಿಯಮಗಳಲ್ಲಿ ಬದಲಾವಣೆ ತರಲಾಗಿದೆ.

ತುಳಿತಕ್ಕೊಳಗಾದವರಿಗೆ ಬ್ರಿಟಿಷರಿಂದ ಬಳುವಳಿಯಾಗಿ ಬಂದ ಇಂಥ ಜಮೀನುಗಳು, ಕೃಷಿ ತೋಟಗಳಾಗಿ, ದೊಡ್ಡವರ ಫಾರ್ಮ್ ಹೌಸ್‌ಗಳಾಗಿ ಬದಲಾಗಿವೆ. ಒಟ್ಟಾರೆ ಎಷ್ಟು ಭೂಮಿಯನ್ನು ಎಲ್ಲೆಲ್ಲಿ ಬಿಟ್ಟುಕೊಡಲಾಗಿದೆ ಎಂಬ ಪೂರ್ಣ ಮಾಹಿತಿ ರಾಜ್ಯದ ಸರಕಾರದ ಬಳಿಯಿಲ್ಲದಿರುವುದು ಕೂಡ ಇಂಥ ಯೋಜನೆಗಳು ಸುಮ್ಮನೆ ಕಾಟಾಚಾರಕ್ಕೆ, ಕಡತಗಳಲ್ಲಿ ಧೂಳು ತಿನ್ನುತ್ತ ಮುಂದುವರಿಯುತ್ತಿವೆ ಎನ್ನುವುದಕ್ಕೆ ಪ್ರತ್ಯಕ್ಷ ನಿದರ್ಶನವಾಗಿದೆ ಎನ್ನಬಹುದು. ಹಾಗಾಗಿ, ಡಿ.ಸಿ.ಲ್ಯಾಂಡ್ ಯೋಜನೆ ಜಾರಿಗೊಂಡ ನಂತರ ಬಂದು ಹೋದ ಎಲ್ಲಾ ಸರಕಾರಗಳು ಇಂದಿನವರೆಗೂ ಮಕಾಡೆ ಮಲಗಿಯೇ ಇವೆ. ಪರಿಶಿಷ್ಟ ಜಾತಿ/ಪಂಗಡಗಳಿಗೆ ನೀಡಿದ ಭೂಮಿಯಲ್ಲಿ ನದಿ ಕಿನಾರೆಯ ಭೂಮಿಗಳೂ ಇದ್ದವು ಮತ್ತು ಮಾಯವಾದವು ಎನ್ನುವುದನ್ನು ಅಲ್ಲಗಳೆಯಲಾಗದು.

ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತರ ಹೆಸರಿನಲ್ಲಿ ನೂರಾರು ಯೋಜನೆಗಳು ಪಕ್ಷಭೇದ ಮರೆತು ರಾಜ್ಯ ಮತ್ತು ಕೇಂದ್ರ ಸರಕಾರಗಳಿಂದ ಕಾಲಕಾಲಕ್ಕೆ ಜಾರಿಯಾಗಿವೆ. ಇಂಥ ಯೋಜನೆಗಳಲ್ಲಿ ಹೆಚ್ಚಾಗಿ, ಕೃಷಿ ಜಮೀನು, ಮನೆಕಟ್ಟಿಕೊಳ್ಳಲು ಜಾಗ ಕೊಟ್ಟಿರುವಂಥವುಗಳೇ ಹೆಚ್ಚು. ಇಂಥ ಕಾಲಘಟ್ಟದಲ್ಲಿ, ಭಾರತದಲ್ಲಿ ಹಿಂದುಳಿದ ದಲಿತರಿಗೆ, ತುಳಿತಕ್ಕೊಳಗಾದವರಿಗೆ ಒಂದು ಹಂತದಲ್ಲಿ ಬಹುದೊಡ್ಡ ಆತ್ಮಸ್ಥೈರ್ಯ, ಆತ್ಮಸಮ್ಮಾನ, ಸಾಮಾಜಿಕ ಗೌರವವನ್ನು ತಂದುಕೊಟ್ಟವರಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರೂ ಒಬ್ಬರೆನ್ನಬಹುದು.

ಬಾಲ್ಯದಲ್ಲಿ ಸ್ವತಃ ಅನುಭವಿಸಿದ ಸಾಮಾಜಿಕ ಅಸಮಾನತೆ, ಜಾತಿ ಆಧರಿತ ತಾರತಮ್ಯವನ್ನು ಹೊಡೆದೋಡಿಸಲು ಶಿಕ್ಷಣವೇ ಬಹುದೊಡ್ಡ ಅಸ್ತ್ರವೆಂದು ಅರಿತುಕೊಂಡು ಆಳವಾದ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡ ಅಂಬೇಡ್ಕರ್ ಜ್ಯೂರಿಸ್ಟ್ ಆಗಿ, ಭಾರತದ ಸಂವಿಧಾನದ ಸಂರಚನೆಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದರು. ಬಿ.ಎನ್.ರಾವ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ರಾಜೇಂದ್ರ ಪ್ರಸಾದ್, ರಾಜಾಜಿ ಅವರಂಥ ಮಹನೀಯರ ಜತೆ ಬೆರೆಯುವ ಅವಕಾಶ ಅವರಿಗೆ ದೊರೆಯಿತು. ಬಳಿಕ, ಅಂಬೇಡ್ಕರ್ ಅವರ ವಿಚಾರಧಾರೆ ತುಳಿತಕ್ಕೊಳಗಾದವರ ಕಡೆಗೆ ಹರಿಯಿತು.

ತಮ್ಮ ಬರಹದ ಸಂಪುಟಗಳಲ್ಲಿ ಅಂದಿನ ಕಟುಸತ್ಯಗಳನ್ನು ಹಂಚಿಕೊಂಡಿರುವ ಬಾಬಾ ಸಾಹೇಬರು, 'ದೀನದಲಿತರ ಬಗೆಗೆ ಕೇವಲ ಭಾಷಣಗಳಲ್ಲಿ, ಪತ್ರಿಕೆಗಳಲ್ಲಿ ಅಂಕಣಗಳ ಮೂಲಕ ಬರೆದರೆ ಸಾಲದು; ಸ್ತರಮಟ್ಟದಲ್ಲಿ, ಹಾದಿಬೀದಿ-ಕೇರಿಗಳಿಗೆ ಹೋಗಿ ಜನಜಾಗೃತಿ ಮೂಡಿಸಬೇಕು' ಎಂಬ ದೃಢನಿರ್ಧಾರವನ್ನು ತಳೆದರು. ಹಾಗೆಯೇ, 'ಮೂಕನಾಯಕ' ಎಂಬ ಪತ್ರಿಕೆಯನ್ನು ದಮನಿತರ ಧ್ವನಿಯಾಗಿ ನಡೆಸಲು ಅಂಬೇಡ್ಕರ್ ಯತ್ನಿಸಿದರು. ಹೀಗೆ, ಅಂದಿನ ಭಾರತದ ಮಹಾನಾಯಕರೆಲ್ಲ ಅಂದಿನ ಸಾಮಾಜಿಕ ತಾರತಮ್ಯದ ಬಗ್ಗೆ ವಿವಿಧ ಮಾರ್ಗಗಳಲ್ಲಿ ಹೋರಾಡುತ್ತ ದಮನಿತರನ್ನು ಮೇಲಕ್ಕೆತ್ತುವ ಕಾರ್ಯದಲ್ಲಿ ತಮ್ಮದೇ ಆದ ಸೇವೆ ಸಲ್ಲಿಸಿದ್ದಾರೆ. ಸ್ವಾತಂತ್ರ್ಯಾನಂತರದಲ್ಲಿ ಈ ದಲಿತ-ದಮನಿತರ ವಿಚಾರದಲ್ಲಿ ಬಹಳಷ್ಟು ಹೋರಾಟಗಳು, ಚಳವಳಿಗಳು ನಡೆದವು. ಹಲವು ನಾಯಕರು ಹುಟ್ಟಿಕೊಂಡರು. ಇನ್ನೂ ಕೆಲವರು ನಿಸ್ವಾರ್ಥ ಸಾಮಾಜಿಕ ಸೇವೆಗೆ, ಭಾರತದಲ್ಲಿನ ಅಸ್ಪೃಶ್ಯತೆಯ ನಿವಾರಣೆಗಾಗಿ ಹೋರಾಡಿದರು. ಇದರ ಭಾಗವಾಗಿ ಜನಜನಿತವಾದ ಅಂದಿನ ಭೂದಾನ ಚಳವಳಿ ಎಲ್ಲರಿಗೂ ಗೊತ್ತಿರುವಂಥದೇ ಆಗಿದೆ. ವಿನೋಬಾ ಭಾವೆ ಅವರ ನೇತೃತ್ವದಲ್ಲಿ ಲೋಕನಾಯಕ ಜಯಪ್ರಕಾಶ ನಾರಾಯಣ ಅವರ ಪ್ರಖರ ಬೆಂಬಲದ ಮೂಲಕ ದೇಶಾದ್ಯಂತ ಹರಡುತ್ತ ಹೋದ ಈ ಚಳವಳಿಯು, ಮೊದಲ ಬಾರಿಗೆ ಮಹಾರಾಷ್ಟ್ರ ರಾಜ್ಯ ಭೂದಾನ ನಿಯಮ- ಸೆಕ್ಷನ್ 25 ಎಂಬುದರಡಿಯಲ್ಲಿ, ಯಾರಿಗೆ ಅಗತ್ಯಕ್ಕಿಂತ ಹೆಚ್ಚು ಜಮೀನಿದ್ದು, ಹತ್ತಾರು ವರ್ಷಗಳಿಂದ ಕೃಷಿ ಬಳಕೆಗೆ ಜಮೀನು ಬಳಸದಿದ್ದರೆ ಅದನ್ನು ಭೂರಹಿತ ವರ್ಗಕ್ಕೆ ಉಳುಮೆಗಾಗಿ ಕೊಡಬೇಕೆಂಬ ಕಾನೂನು ಜಾರಿಗೆ ಬಂದಿತು.

ಮುಂದೆ ಇದು 'ಬಳುವಳಿ ಭೂಮಿ' ಎಂದು ಆಂಧ್ರದಲ್ಲಿ, 'ಗೈರಾನ್ ಭೂಮಿ' ಎಂದು ಮಹಾರಾಷ್ಟ್ರದಲ್ಲಿ, 'ಮೋಹ್ ಜಮೀನ್ ಮೋಹ್ ದಿಹಾ ಭೂಮಿ' ಎಂದು ಅಸ್ಸಾಂನಲ್ಲಿ ಹೀಗೆ ದೇಶಾದ್ಯಂತ ವಿವಿಧ ಹೆಸರುಗಳಿಂದ ಕರೆಯಲ್ಪಟ್ಟಿತು. ಇಂದಿಗೂ ಇದು D.C. Land (Depressed Classes) ಎಂದು ಗುರುತಿಸಿಕೊಂಡು ವಿವಿಧ ಯೋಜನೆಗಳ ಮೂಲಕ ಅಗತ್ಯವಿರುವವರಿಗೆ ಹಂಚಿಕೆಯಾಗುತ್ತಿದೆ.

ಆದರೆ, ಇದಕ್ಕೂ ಮೊದಲು ಈ ಕಾಯ್ದೆಯನ್ನು ಜಾರಿಗೆ ತಂದಿದ್ದು ಬ್ರಿಟಿಷರು ಎಂದರೆ ನೀವು ನಂಬಲೇಬೇಕು! ಹೌದು, ದಲಿತರು, ಅಸ್ಪೃಶ್ಯರು, ಹಿಂದುಳಿದ ಭೂರಹಿತರ ಕುರಿತಂತೆ ಕಾಳಜಿ ತೋರಿದಂತೆ ಮಾಡಿ ಬ್ರಿಟಿಷರು ಹಲವು ನೀತಿ ನಿಯಮಗಳನ್ನು ರೂಪಿಸಿದರು. ಇದು, ಒಂದು ವರ್ಗಕ್ಕೆ ಸಹಾಯವಾಗುವುದು ಎಂಬಂತೆ ಮೇಲ್ನೋಟಕ್ಕೆ ಕಂಡುಬಂದರೂ, ಅಂದಿನ ಭಾರತದ ಸಾಮಾಜಿಕ ಪರಿಸ್ಥಿತಿಯಲ್ಲಿ ಜಾತಿ-ಮತಭೇದ ಉಂಟುಮಾಡಲು ಮತ್ತು ಪರಸ್ಪರರಲ್ಲಿ ತಾರತಮ್ಯ ಸೃಷ್ಟಿಸಲು ಈ ಅವಕಾಶವನ್ನು ಅವರು ದಾಳವನ್ನಾಗಿ ಮಾಡಿಕೊಂಡರು ಎಂಬುದು ಅವರ ದಾಖಲಾತಿಗಳಲ್ಲಿ ತಿಳಿದುಬರುತ್ತದೆ. ಇಂಥ ಜಾಗಗಳು ಮತ್ತು ಉಳುಮೆ ಜಮೀನುಗಳನ್ನು ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ವಿಸ್ತೀರ್ಣಗಳಲ್ಲಿ ಬಿಟ್ಟುಕೊಡಲಾಗಿದೆ ಎಂಬ ವಿಚಾರ ಮತ್ತು ಇನ್ನೂ ಇವುಗಳು ದಲಿತರ ಬಳಿ ಉಳಿದುಕೊಂಡಿವೆಯೇ ಎಂಬುದರ ಕುರಿತು ಸರಕಾರದ ಬಳಿ ಒಂದು ವ್ಯವಸ್ಥಿತ ಕ್ರೋಡೀಕೃತ ದಾಖಲಾತಿ ಇರಬೇಕಾದುದು ಅತ್ಯವಶ್ಯ. ಬಾಯಿಮಾತಿನಲ್ಲಿ ದಲಿತರ ಪರ ಎನ್ನುವ ಬದಲು ಇಂಥ ದಲಿತಪರ ಕಾರ್ಯಗಳನ್ನು ಜಾರಿಗೊಳಿಸುವುದರಲ್ಲಿ ನಿಜವಾದ ಕಳಕಳಿ ಅಡಗಿದೆ.

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಹೀಗೊಂದು ಸರ್ಜಿಕಲ್ ದಾಳಿ!

ಬಿಹಾರದಲ್ಲಿ ಮತ್ತೆ ನವರಂಗಿ ರಾಜಕೀಯದಾಟ ಶುರುವಾಗಿದೆ. ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಪಕ್ಷದ ನಾಯಕ ಲಾಲು ಪ್ರಸಾದ್ ಯಾದವ್ ಮತ್ತು ಅವರ ಕುಟುಂಬಿಕರ ಮೇಲೆ ಅವರ ರಾಜಕೀಯ ಎದುರಾಳಿಗಳು ಸಾರಾಸಗಟಾಗಿ ದಾಳಿಗಿಳಿದಿರುವುದು ಎಲ್ಲರನ್ನೂ ಅಚ್ಚರಿಗೆ ದೂಡಿದೆ. ಈ ಪೈಕಿ ಮೊದಲಿಗೆ ಬಾಣ ಬಿಟ್ಟಿದ್ದು ಕೇಂದ್ರ ಜವಳಿ ಖಾತೆಯ ಸಚಿವ ಮತ್ತು ಬಿಜೆಪಿಯ ಹಿರಿಯ ನಾಯಕ ಗಿರಿರಾಜ್ ಸಿಂಗ್. ''ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಆರ್‌ಜೆಡಿಯ ಚೇತರಿಕೆಗೆ ಅನುವು ಮಾಡಿಕೊಟ್ಟಿರುವುದಕ್ಕಾಗಿ ಮತ್ತು ಅದಕ್ಕೆ ಒಂದು ಹೊಸ ಜೀವಶಕ್ತಿ ಯನ್ನು ನೀಡಿರುವುದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಲೆಂದು ಲಾಲು ಯಾದವ್ ಮತ್ತು ಅವರ ಕುಟುಂಬಿಕರು ನಿತೀಶ್ ಕುಮಾರರ ಚಿತ್ರವುಳ್ಳ ಲಾಕೆಟ್ ಅನ್ನು ಕೊರಳಲ್ಲಿ ಧರಿಸಬೇಕು'' ಎಂದು ಅವರು ಟಾಂಗ್ ನೀಡಿದ್ದೇ ಇದಕ್ಕೆ ಸಾಕ್ಷಿ.

ಈ ಕೂರಂಬು ಹೊಮ್ಮಿದ್ದೇ ಹೊಮ್ಮಿದ್ದು, ತಗಳ್ಳಿ ಇನ್ನೊಂದಿಷ್ಟು ಜನ ತಾವೇನು ಕಮ್ಮಿ ಎನ್ನುವಂತೆ ಲಾಲು ಕುಟುಂಬಿಕರ ಕಾಲೆಳೆಯತೊಡಗಿದರಂತೆ. ಅವರ ಪೈಕಿ ಒಬ್ಬರಂತೂ, ''ಲಾಲೂ ಪ್ರಸಾದರ ಮನೆಯವರು ತಮ್ಮ ದೇವರ ಕೋಣೆಯಲ್ಲಿ ನಿತೀಶರ ಫೋಟೋ ಇಟ್ಟು ಪೂಜಿಸಿದರೆ ಇನ್ನೂ ಒಳ್ಳೆಯದು'' ಎಂದು ಸಲಹೆ ನೀಡಿದ್ದೂ ಉಂಟಂತೆ. ಈ ಮಾತು ಕೇಳಿಸಿಕೊಂಡ ರಾಜ್ಯದ ಇಂಧನ ಸಚಿವ ಬಿಜೇಂದ್ರ ಪ್ರಸಾದ್ ಯಾದವ್ ಅವರು ಒಂದು ಬಸ್‌ಸ್ಟಾಪ್ ಮುಂದೆ ಹೋಗಿ, ''ಅಷ್ಟಕ್ಕೂ ಲಾಲು ಪ್ರಸಾದರ ಮಗ ತೇಜಸ್ವಿ ಯಾದವ್ ಅವರು ಎರಡು ಸಲ ರಾಜ್ಯದ ಉಪ ಮುಖ್ಯಮಂತ್ರಿಯಾಗಿದ್ದಕ್ಕೆ ನಿತೀಶ್ ಕುಮಾರರ ಕೃಪಾಶೀರ್ವಾದಗಳೇ ಕಾರಣ'' ಎಂದು ಗಾಳಿಪಟ ಹಾರಿಸಿದರಂತೆ! ಈ ಇಬ್ಬರ ಟೀಕಾಪ್ರಹಾರವನ್ನು ಮರೆಯಲ್ಲಿ ನಿಂತು ಕೇಳಿಸಿಕೊಂಡ 'ಎನ್‌ಡಿಎ' ಒಕ್ಕೂಟದ ಮತ್ತಷ್ಟು ನಾಯಕರು, ''2010ರ ವಿಧಾನಸಭಾ ಚುನಾವಣೆಯಲ್ಲಿ ಆರ್‌ಜೆಡಿಯ ತೆಕ್ಕೆಗೆ ಬಿದ್ದಿದ್ದು ಕೇವಲ 22 ಸ್ಥಾನಗಳು; ನಿತೀಶರ ಸಹಾಯಹಸ್ತ ಸಿಕ್ಕಿದ್ದರಿಂ ದಲೇ ಆರ್‌ಜೆಡಿಯು 2015ರಲ್ಲಿ ಮರುಜೀವ ದಕ್ಕುವಂತಾಯಿತು'' ಎಂದು ಪಕ್ಕವಾದ್ಯ ನುಡಿಸಿದರಂತೆ!! ಮೈತ್ರಿಯ ಸಹಾಯಹಸ್ತದ ಅಗತ್ಯವಿದ್ದಾಗ, ''ನೀವೇ ನಮ್ಮ ಪ್ರಾಣ, ನಮ್ಮ ಹೃದಯ, ನಮ್ಮ ಕಣ್ಣು, ನಮ್ಮ ಕಿಡ್ನಿ'' ಎಂದೆಲ್ಲಾ ಕಾಗೆ ಹಾರಿಸುವ ರಾಜಕೀಯ ಪಕ್ಷಗಳು ಕಾವಲಿಯ ಮೇಲಿನ ದೋಸೆಯನ್ನು ಮಗುಚಿ ಹಾಕಿದಂತೆ ಅದೆಷ್ಟು ಬೇಗನೆ ನಿಷ್ಠೆಯನ್ನು ಬದಲಿಸಿಬಿಡುತ್ತವೆ, ಉಲ್ಟಾ ಹೊಡೆಯುತ್ತವೆ ಎಂಬುದಕ್ಕೆ ಮೇಲಿನ ಘಟನೆಗಿಂತ ಸಾಕ್ಷಿ ಬೇಕೇ?!

ಬಾಯಿ ಬ್ರಹ್ಮಾಂಡ...

ದೆಹಲಿಯ ನೂತನ ಮುಖ್ಯಮಂತ್ರಿಯಾಗಿ ಆಮ್ ಆದ್ಮಿ ಪಕ್ಷದ ಆತಿಶಿ ಮರ್ಲೇನಾ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂಬ ಸುದ್ದಿಯನ್ನು ಓದಿದ 'ಬ್ರಹ್ಮಾಂಡ' ಜ್ಯೋತಿಷಿಯೊಬ್ಬರು, ''ನಾನು ಒಂದು ವರ್ಷ ಮೊದಲೇ ಹೇಳಿರಲಿಲ್ವಾ? ಒಬ್ಬ ಹೆಣ್ಣು ಮುಖ್ಯಮಂತ್ರಿ ಆಗ್ತಾಳೆ ಅಂತ'' ಎಂದು ಜಂಭ ಕೊಚ್ಚಿಕೊಂಡರಂತೆ. ಇದನ್ನು ಕೇಳಿಸಿಕೊಂಡ ಹಳ್ಳಿಗನೊಬ್ಬ, ''ಅಲ್ಲ ಕಣ್ ಬುದ್ಧೀ, ನೀವ್ ಯೋಳಿದ್ದು ನಮ್ ರಾಜದಾನಿಯಾಗೆ ಒಂದ್ ಎಣ್ ಮಗಾ ಮುಖ್ಯಮಂತ್ರಿ ಆಯ್ತದೆ ಅಂತ ಅಲವ್ರಾ?'' ಎಂದು ಕ್ರಾಸ್ ಕ್ವೆಶ್ಚನ್ ಹಾಕಿದ್ದಕ್ಕೆ ಕೋಪಗೊಂಡ 'ಬ್ರಹ್ಮಾಂಡ' ಜ್ಯೋತಿಷಿಗಳು, ''ನಿನ್ ಮುಂಡಾ ಮೋಚ್ತು, ನಾನ್ ಸರಿಯಾಗೇ ಹೇಳಿದ್ದೆ; ಆದ್ರೆ ನಿಮ್ಮಂಥ ದಂಡ ಪಿಂಡಗಳು 'ರಾಷ್ಟ್ರದ ರಾಜಧಾನೀಲಿ' ಅಂತ ಅರ್ಥ ಮಾಡ್ಕೊಳ್ಳೋ ಬದಲು 'ರಾಜ್ಯದ ರಾಜಧಾನೀಲಿ' ಅಂತ ತಿಳ್ಕಂಡ್ರೆ ಅದಕ್ಕೆ ನಾನೇನ್ ಮಾಡ್ಲಿ? ರಾಷ್ಟ್ರದ ರಾಜಧಾನಿ ದೆಹಲಿ ತಾನೇ? ನಾನು ಹೇಳ್ದಂಗೆ ಅಲ್ಲಿ ಮಹಿಳೆನೇ ಮುಖ್ಯಮಂತ್ರಿ ಆಗ್ತಾ ಇದಾಳೆ, ಅಷ್ಟೇ...'' ಎಂದು ಗದರಿ ಬಾಯಿ ಮುಚ್ಚಿಸಿದರಂತೆ!!

ನಾರಾಯಣ ನಾರಾಯಣ!

ತಾಲೂಕು ಕೇಂದ್ರಗಳು ಸೇರಿದಂತೆ ಎಲ್ಲೆಲ್ಲಿ ಮಿನಿ ವಿಧಾನಸೌಧಗಳಿವೆ ಅವುಗಳ ಹೆಸರನ್ನು 'ಪ್ರಜಾಸೌಧ' ಎಂದು ಬದಲಾವಣೆ ಮಾಡುವ ಕುರಿತು ಚಿಂತನೆ ನಡೆಯುತ್ತಿದೆ ಎಂಬ ಸುದ್ದಿಯನ್ನು ಓದಿದ ಚಿತ್ರನಟ ಉಪೇಂದ್ರ ಅವರ ಅಭಿಮಾನಿಯೊಬ್ಬರು, ''ಅದೇ ಥರ 'ರಾಜಕೀಯ' ಎಂಬ ಹೆಸರನ್ನು 'ಪ್ರಜಾಕೀಯ' ಎಂದು ಬದಲಿಸಿದರೆ ಚೆನ್ನಾಗಿರುತ್ತಲ್ವಾ?'' ಎಂಬ ಸಲಹೆಯನ್ನು ತೂರಿಬಿಟ್ಟಿದ್ದಾರಂತೆ!!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 269

ಸಮಾಚಾರ ಸಣ್ಣದಲ್ಲ

ಎಮರ್ಜೆನ್ಸಿ ಸ್ಥಗಿತ ಕಂಗನಾಗೆ ನೋಟಿಸ್

ಚಂಡೀಗಢ: ಬಾಲಿವುಡ್ ನಟಿ, ಮಂಡಿ ಕ್ಷೇತ್ರದ ಬಿಜೆಪಿ ಸಂಸದೆ ಕಂಗನಾ ರಣಾವತ್ ನಟನೆಯ 'ಎಮರ್ಜೆನ್ಸಿ' ಹಿಂದಿ ಚಲನಚಿತ್ರಕ್ಕೆ ಒಂದಲ್ಲಾ ಒಂದು ಕಷ್ಟ ಎದುರಾಗು ತ್ತಲೇ ಇದೆ. ಈಗ ಚಂಡೀಗಢ ಜಿಲ್ಲಾ ನ್ಯಾಯಾಲಯ ಕಂಗನಾ ರಣಾವತ್, ಝೀ ಸ್ಟುಡಿಯೋ ಮತ್ತು ಚಿತ್ರಕಥೆ ಬರಹಗಾರನಿಗೆ ಬುಧವಾರ ನೋಟಿಸ್ ಜಾರಿ ಮಾಡಿದೆ. 'ಎಮರ್ಜೆನ್ಸಿ' ಚಿತ್ರದಲ್ಲಿ ಸಿಖ್ ಸಮುದಾಯದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಲಾಗಿದೆ ಎಂದು ವಕೀಲ ರವೀಂದ್ರ ಸಿಂಗ್ ಬಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಖಾಸಗಿ ಎಫ್‌ಐಆರ್ ದಾಖಲಿಸುವಂತೆ ಮನವಿ ಮಾಡಿದ್ದಾರೆ. ಡಿ.5ರಂದು ಅರ್ಜಿ ವಿಚಾರಣೆ ನಡೆಯಲಿದೆ. ಶಿರೋಮಣಿ ಅಕಾಲಿದಳ ಸೇರಿ ಹಲವು ಸಿಖ್ ಸಂಘಟನೆಗಳು ಕೂಡ ಸಮುದಾಯದ ವಿರುದ್ಧ ತಪ್ಪು ಮಾಹಿತಿ ನೀಡಿದ್ದು ಇತಿಹಾಸವನ್ನು ತಿರುಚಲಾಗಿದೆ ಎಂದು ಆರೋಪಿಸಿವೆ. ಜಿಲ್ಲಾ ನ್ಯಾಯಾಲಯ ಮೂವರಿಗೂ ಪ್ರತಿಕ್ರಿಯೆ ಕೇಳಿ ನೋಟಿಸ್ ನೀಡಿದೆ.

ಕೇರಳ ವ್ಯಕ್ತಿಯಲ್ಲಿ ಎಂಪಾಕ್ಸ್ ದೃಢ

ಮಲ್ಲಪುರಂ: ದುಬೈನಿಂದ ಕೇರಳದ ಮಲ್ಲಪುರಂಗೆ ಬಂದಿದ್ದ 38 ವರ್ಷದ ವ್ಯಕ್ತಿಯಲ್ಲಿ 'ಎಂಪಾಕ್ಸ್' ಸೋಂಕು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ಬುಧವಾರ ಮಾಹಿತಿ ನೀಡಿದೆ. ವಿದೇಶದಿಂದ ಬರುವ ಪ್ರಯಾಣಿಕರು ಯಾವುದೇ ರೋಗ ಲಕ್ಷಣ ಕಂಡುಬಂದಲ್ಲಿ ತಕ್ಷಣ ಮಾಹಿತಿ ನಿಡುವಂತೆ ಸರಕಾರ ಮನವಿ ಮಾಡಿದೆ. ತೀವ್ರ ಜ್ವರ ಮತ್ತು ದೇಹದ ಮೇಲೆ ಗುಳ್ಳೆಗಳಿಂದ ಬಳಲುತ್ತಿದ್ದ ವ್ಯಕ್ತಿಯನ್ನು ಮಂಜೇರಿ ವೈದ್ಯಕೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಎಂಪಾಕ್ಸ್ ಗುಣಲಕ್ಷಣವಿದ್ದ ಕಾರಣ ಆತನ ರಕ್ತದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ಮಂಕಿಪಾಕ್ಸ್ ಸೋಂಕು ಇರುವುದು ದೃಢಪಟ್ಟಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಸಹ ಸೈನಿಕನ ಗುಂಡಿಗೆ 2 ಯೋಧರು ಬಲಿ

ಬಲರಾಮ್‌ಪುರ: ಛತ್ತೀಸ್‌ಗಢದಲ್ಲಿನ ಬಲರಾಮ್‌ಪುರ ಜಿಲ್ಲೆಯ ಕ್ಯಾಂಪ್‌ನಲ್ಲಿನ ಕೇಂದ್ರ ಸಶಸ್ತ್ರ ಪಡೆಯ(ಸಿಎಎಫ್) ಯೋಧರೊಬ್ಬರು ತಮ್ಮ ಸರ್ವೀಸ್ ಬಂದೂಕಿನಿಂದ ಬುಧವಾರ ಬೆಳಗ್ಗೆ 11ರಲ್ಲಿ ಅಡ್ಡಾದಿಡ್ಡಿ ಗುಂಡು ಹಾರಿಸಿದ್ದರಿಂದ ಇಬ್ಬರು ಸಹೋದ್ಯೋಗಿಗಳು ಹತರಾಗಿದ್ದಾರೆ. ಆರೋಪಿ ಯೋಧ ಅಜಯ್ ಸಿದಾರ್ ಸಿಡಿಸಿದ ಗುಂಡಿನಿಂದ ಇನ್ನಿಬ್ಬರು ಯೋಧರು ಗಾಯಗೊಂಡಿದ್ದಾರೆ. ಭೂತಾಹಿ ಮೋಡ್ ಪ್ರದೇಶದಲ್ಲಿನ ಸಿಎಎಫ್ 11 ಬೆಟಾಲಿಯನ್ ಕ್ಯಾಂಪ್‌ನಲ್ಲಿ ಘಟನೆ ನಡೆದಿದೆ. ಯೋಧ ರೂಪೇಶ್ ಪಟೇಲ್ ಸ್ಥಳದಲ್ಲೇ ಸಾವನ್ನಪ್ಪಿ ದರೆ, ಯೋಧ ಸಂದೀಪ್ ಪಾಂಡೆ ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಕೊನೆಯುಸಿರೆಳೆದರು. ಅಜಯ್ ಸಿದಾರ್‌ನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ಗುಂಡಿನ ದಾಳಿಗೆ ನಿಖರ ಕಾರಣ ತಿಳಿದು ಬಂದಿಲ್ಲ.

ರಸಗೊಬ್ಬರಕ್ಕೆ ಸಬ್ಸಿಡಿ: ಸಂಪುಟ ಸಭೆ ಸಮ್ಮತಿ

ದೆಹಲಿ: ಒಂದು ದೇಶ-ಒಂದೇ ಚುನಾವಣೆ, ಚಂದ್ರಯಾನ-4, ಹಿಂಗಾರಿನಲ್ಲಿ ಪಿ-ಕೆ ರಸಗೊಬ್ಬರಕ್ಕೆ ಸಬ್ಸಿಡಿ, ಪಿಎಂ-ಆಶಾ ಯೋಜನೆ ವಿಸ್ತರಣೆ ಹಾಗೂ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಒತ್ತು ಸೇರಿದಂತೆ ವಿವಿಧ ಪ್ರಸ್ತಾವನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಸಮ್ಮತಿ ಸೂಚಿಸಿದೆ.

58 ಕ್ರಿಮಿನಲ್ ಕೇಸ್‌ನ ರೌಡಿಶೀಟರ್ ಎನ್ಕೌಂಟರ್

ಚೆನ್ನೈ: 6 ಕೊಲೆ, 17 ಕೊಲೆ ಯತ್ನ ಸೇರಿ 58 ಕ್ರಿಮಿನಲ್ ಪ್ರಕರಣಗಳನ್ನು ಹೊಂದಿದ್ದ ಕುಖ್ಯಾತ ಕಾಕತೋಪು ಬಾಲಾಜಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಸಾವನ್ನಪ್ಪಿದ್ದಾನೆ. 12 ಬಾರಿ ಗೂಂಡಾ ಕಾಯಿದೆ ಅಡಿ ಬಂಧನಕ್ಕೊಳಗಾಗಿದ್ದರೂ ಅಪರಾಧ ಕೃತ್ಯಗಳನ್ನು ಮುಂದುವರೆಸಿದ್ದ ಕಾಕತೋಪು ಬಾಲಾಜಿ ದೀರ್ಘ ಕಾಲದಿಂದ ಪೊಲೀಸ್ ಕಣ್ತಪ್ಪಿಸಿ ಓಡಾಡಿಕೊಂಡಿದ್ದ. ಆತ ಅಡಗಿರುವ ಸ್ಥಳದ ಮಾಹಿತಿ ಪಡೆದ ಪೊಲೀಸರು ಬುಧವಾರ ಪುಲಿಯನ್‌ತೋಪು ಪ್ರದೇಶದಲ್ಲಿ ಬಂಧಿಸಲು ಹೋದಾಗ ತಪ್ಪಿಸಿಕೊಂಡು ಹೋಗಲು ಯತ್ನಿಸಿದ್ದಾನೆ. ಈ ವೇಳೆ ಪೊಲೀಸರು ಗುಂಡು ಹಾರಿಸಿದ್ದು ಆರೋಪಿ ಮೃತಪಟ್ಟಿದ್ದಾನೆ. ನಗರದ ಸ್ಟಾನ್ಲೆ ಆಸ್ಪತ್ರೆಯಲ್ಲಿ ಬಾಲಾಜಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಆತ ಪ್ರಯಾಣಿಸುತ್ತಿದ್ದ ಬ್ಯಾಗ್‌ನಲ್ಲಿ 10 ಕೆಜಿ ಗಾಂಜಾ ಪತ್ತೆಯಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

{ ಅಸಾದುದ್ದೀನ್ ಒವೈಸಿ } ಎಐಎಂಐಎಂ ಮುಖ್ಯಸ್ಥ

ಒಂದು ದೇಶ ಒಂದು ಚುನಾವಣೆ ಜಾರಿಗೊಳಿಸಿ ಮೋದಿ ನೇತೃತ್ವದ ಸರಕಾರ ದೇಶದ ಒಕ್ಕೂಟ ವ್ಯವಸ್ಥೆ ನಾಶ ಮಾಡಲು ಹೊರಟಿದೆ. ಈ ಯೋಜನೆ ಸಂವಿಧಾನದ ಮೂಲ ರಚನೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತದೆ. ಆಗಾಗ್ಗೆ ಚುನಾವಣೆ ನಡೆಯುವುದರಿಂದ ಮೋದಿ ಮತ್ತು ಅಮಿತ್ ಶಾಗೆ ಮಾತ್ರ ಸಮಸ್ಯೆಯಾಗುತ್ತಿದೆ.

ಚಂದ್ರಯಾನ-4ಕ್ಕೆ 2,104 ಕೋಟಿ ರು. ಅನುದಾನ | ಚಂದ್ರನ ಶಿಲೆ-ಮಣ್ಣು ತರಲು ಚಂದ್ರಯಾನ-4
ಬಾಹ್ಯಾಕಾಶ ನಿಲ್ದಾಣ ಸ್ಥಾಪನೆಗೆ ಅಸ್ತು | ವೀನಸ್ ಗ್ರಹ ಅಧ್ಯಯನಕ್ಕೆ ಆರ್ಬಿಟರ್ ಮಿಷನ್

ಇಸ್ರೊ ಸಾಮರ್ಥ್ಯ ವೃದ್ಧಿಗೆ ಕೇಂದ್ರ ಸಮ್ಮತಿ

ದೆಹಲಿ: ಚಂದ್ರಯಾನ-3ರ ಯಶಸ್ಸಿನಿಂದಾಗಿ ಜಾಗತಿಕ ಮಟ್ಟದಲ್ಲಿ ಪ್ರತಿಷ್ಠಿತ ಸ್ಥಾನ ಪಡೆದಿರುವ 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ'(ಇಸ್ರೊ)ಗೆ ಕೇಂದ್ರ ಸರಕಾರ ದೊಡ್ಡ ಕೊಡುಗೆ ನೀಡಲು ಮುಂದಾಗಿದೆ. ಭಾರತದ್ದೇ ಸ್ವಂತದ 'ಬಾಹ್ಯಾಕಾಶ ನಿಲ್ದಾಣ' ನಿರ್ಮಾಣ, ಚಂದ್ರಯಾನ-4, ಶುಕ್ರಗ್ರಹ ಅಧ್ಯಯನ(ವೀನಸ್ ಆರ್ಬಿಟರ್ ಮಿಷನ್), ಮಾನವ ಸಹಿತ ಗಗನಯಾನ ಯೋಜನೆಯ ಮುಂದುವರಿದ ಭಾಗ ಹಾಗೂ ಹೊಸ ತಲೆಮಾರಿನ ಉಡ್ಡಯನ ರಾಕೆಟ್ ಅಭಿವೃದ್ಧಿ ಪ್ರಸ್ತಾವನೆಗಳಿಗೆ ಕೇಂದ್ರ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆ. ಇದರಿಂದ 'ಇಸ್ರೊ' ಸಾಮರ್ಥ್ಯ ಮತ್ತು ಕೀರ್ತಿ ಜಗದಗಲ ಇನ್ನಷ್ಟು ವಿಸ್ತರಿಸಲಿದೆ ಎಂಬ ನಿರೀಕ್ಷೆ ಒಡಮೂಡಿದೆ.

ಚಂದ್ರಯಾನ-4: ಚಂದ್ರನಿಂದ ಶಿಲೆ-ಮಣ್ಣು ತರುವ ಮಹತ್ವದ ಸಂಶೋಧನಾ ಕಾರ್ಯಕ್ಕಾಗಿ 2,104 ಕೋಟಿ ರು. ವೆಚ್ಚದಲ್ಲಿ ಚಂದ್ರಯಾನ -4 ಯೋಜನೆ ಕೈಗೊಳ್ಳುವುದಕ್ಕೆ ಕೇಂದ್ರದ ಎನ್‌ಡಿಎ ಸರಕಾರ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ದೆಹಲಿಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಚಂದ್ರಯಾನ-4, ಗಗನಯಾನ ನಂತರದ ಯೋಜನೆಗಳು, ವೀನಸ್ ಗ್ರಹದ ಅಧ್ಯಯನಕ್ಕೆ ವೀನಸ್ ಆರ್ಬಿಟರ್ ಮಿಷನ್ ಮೊದಲಾದ ಬಾಹ್ಯಾಕಾಶ ಸಂಶೋಧನಾ ಯೋಜನೆಗಳಿಗೆ ಹಸಿರು ನಿಶಾನೆ ತೋರಿದೆ. ಚಂದ್ರಯಾನ-4 ಚಂದ್ರನಲ್ಲಿ ಇಳಿದು ಶಿಲೆ ಮತ್ತು ಮಣ್ಣನ್ನು ಸಂಗ್ರಹಿಸಿ ಭೂಮಿಗೆ ತರುವ ಯೋಜನೆ ಇದಾಗಿದೆ. ಈ ಯೋಜನೆಯಲ್ಲಿ ಗಗನನೌಕೆಯನ್ನು ಎರಡು ಪ್ರತ್ಯೇಕ ವಿಭಾಗಗಳಲ್ಲಿ ಬಳಸಿಕೊಳ್ಳಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಇವೆಲ್ಲಾ ಯೋಜನೆಗಳ ಮೂಲಕ ಭಾರತ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ದೊಡ್ಡ ಹೆಜ್ಜೆಗಳನ್ನಿಡಲಿದೆ. ದೇಶದ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದ ದೊಡ್ಡ ಮಟ್ಟಕ್ಕೆ ವಿಸ್ತಾರಗೊಳ್ಳಲಿದೆ ಎಂದು ನಿರೀಕ್ಷಿಸಲಾಗಿದೆ. ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಸಚಿವ ಅಶ್ವಿನಿ ವೈಷ್ಣವ್ ವಿವರ ನೀಡಿದರು.

ಚಂದ್ರಯಾನ-4 ವಿಸ್ತೃತ ಯೋಜನೆಯಾಗಿದೆ. ಈ ಮೊದಲಿನ ಚಂದ್ರಯಾನಕ್ಕಿಂತ ಹೆಚ್ಚುವರಿ ಅಂಶಗಳನ್ನು ಒಳಗೊಂಡಿದೆ. ಇದರ ನಂತರದ ಹೆಜ್ಜೆಯಾಗಿ 'ಮಾನವ ಸಹಿತ ಚಂದ್ರಯಾನ' ಯೋಜನೆ ಹಮ್ಮಿಕೊಳ್ಳಲಾಗುವುದು. ಹೊಸ ತಲೆಮಾರಿನ ಉಡ್ಡಯನ ರಾಕೆಟ್‌ಗಳ ತಯಾರಿಕೆಗೂ ಹಸಿರು ನಿಶಾನೆ ತೋರಲಾಗಿದೆ ಎಂದು ಸಚಿವರು ವಿವರಿಸಿದರು.



ಏಪ್ರಿಲ್‌ನಲ್ಲೇ ನೀಲನಕ್ಷೆ

ಚಂದ್ರಯಾನ-4 ಸೇರಿದಂತೆ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದ ಈ ಮೂರೂ ಮಹತ್ವದ ಯೋಜನೆಗಳಿಗಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ(ಇಸ್ರೊ) ಏಪ್ರಿಲ್‌ನಲ್ಲಿಯೇ ನೀಲನಕ್ಷೆ ಸಿದ್ಧಪಡಿಸಿದೆ.

ಮಂಗಳ, ಚಂದ್ರ, ಸೂರ್ಯನ ಬಳಿಕ ಶುಕ್ರನತ್ತ ನೋಟ

ಮಂಗಳ ಗ್ರಹದ ಅಧ್ಯಯನಕ್ಕೆ ಇಸ್ರೊ ಉಪಗ್ರಹವನ್ನು ಯಶಸ್ವಿಯಾಗಿ ಕಳುಹಿಸಿಕೊಟ್ಟಿದೆ. ಬಳಿಕ ಚಂದ್ರಯಾನ-3ರಲ್ಲಿ ಚಂದ್ರನ ಯಾರೂ ಕಾಣದ ಮುಖ, ದಕ್ಷಿಣ ಧ್ರುವದಲ್ಲಿ ಬಲು ಯಶಸ್ವಿಯಾಗಿ ಪಜ್ಞಾನ್ ಉಪಗ್ರಹವನ್ನು ಇಳಿಸಿ, ಅದರ ಒಡಲಲ್ಲಿ ಕಾಪಿಟ್ಟ ರೋವರ್ ರೊಬೊ ಮೂಲಕ ಚಂದ್ರನ ಅಧ್ಯಯನ ನಡೆಸಿ ದೊಡ್ಡ ಸಾಧನೆ ಮಾಡಿದೆ. ಚಂದ್ರನ ದಕ್ಷಿಣ ಧ್ರುವದಲ್ಲಿ ಉಪಗ್ರಹವನ್ನು ಸಾಫ್ಟ್ ಲ್ಯಾಂಡಿಂಗ್ ಮಾಡಿದ ಮೊದಲ ದೇಶ ಎಂಬ ಹೆಮ್ಮೆಗೂ ಪಾತ್ರವಾಗಿದೆ. ಸೂರ್ಯ ಅಧ್ಯಯನಕ್ಕೆಂದು 'ಆದಿತ್ಯ-ಎಲ್1' ಆಕಾಶಕಾಯವನ್ನು ಕಳುಹಿಸಿಕೊಟ್ಟು ಮತ್ತೊಂದು ದೊಡ್ಡ ಸಾಧನೆ ಮಾಡಿದೆ. ಮುಂದಿನ ಹೆಜ್ಜೆಯಾಗಿ ಶುಕ್ರ ಗ್ರಹದ ಅಧ್ಯಯನಕ್ಕೆ ಸಜ್ಜಾಗುತ್ತಿದೆ. ಶುಕ್ರನ ಸಮೀಪಕ್ಕೆ ತೆರಳಿ ಆತನ ಬಗ್ಗೆ ತಿಳಿದುಕೊಳ್ಳಲೆಂದೇ 'ವೀನಸ್ ಆರ್ಬಿಟ್ ಮಿಷನ್'ಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಈ ಯೋಜನೆಗೂ ಕೇಂದ್ರ ಸರಕಾರ ಸಮ್ಮತಿ ನೀಡಿದೆ. ಇದರೊಟ್ಟಿಗೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ(ಐಎಸ್‌ಎಸ್) ಮಾದರಿಯಲ್ಲೇ ಭಾರತದ್ದೇ ಆದ ಬಾಹ್ಯಾಕಾಶ ನಿಲ್ದಾಣ ನಿರ್ಮಾಣಕ್ಕೂ ಇಸ್ರೊ ಮುಂದಾಗಿದ್ದು, ನರೇಂದ್ರ ಮೋದಿ ನೇತೃತ್ವದ ಸರಕಾರ ಅದಕ್ಕೆ ವೆಚ್ಚ ಮಾಡಲು ಒಪ್ಪಿಗೆ ಸೂಚಿಸಿದೆ.

ಇತ್ತೀಚಿನ ಸಾಧನೆಗಳು

- ಮಂಗಳಯಾನ, ಚಂದ್ರಯಾನ-3, ಆದಿತ್ಯ-ಎಲ್1
- ಹಲವು ಖಾಸಗಿ ಉಪಗ್ರಹಗಳ ವಾಣಿಜ್ಯಿಕ ಉಡ್ಡಯನ
- ಮಾನವಸಹಿತ ಗಗನಯಾನಕ್ಕೆ ಇಬ್ಬರು ಯಾತ್ರಿಗಳ ಆಯ್ಕೆ
- ಮರುಬಳಕೆ ಸಾಮರ್ಥ್ಯದ ಉಡ್ಡಯನ ರಾಕೆಟ್ ಅಭಿವೃದ್ಧಿ

36 ತಿಂಗಳ ಯೋಜನೆ

ಚಂದ್ರಯಾನ-4 ಯೋಜನೆ 36 ತಿಂಗಳ ಅವಧಿಯದ್ದಾಗಿದೆ. ಐದು ಮಾದರಿಗಳನ್ನು ಒಳಗೊಂಡಂತೆ ಎರಡು ಗಗನ ನೌಕೆಗಳನ್ನು ಈ ಮಹತ್ವದ ಬಾಹ್ಯಾಕಾಶ ಸಂಶೋಧನಾ ಯೋಜನೆಗೆ ಬಳಸಿಕೊಳ್ಳಲಾಗುತ್ತದೆ. ಒಂದು ಭಾಗ ಚಂದ್ರನಿಂದ ಶಿಲೆ ಮತ್ತು ಮಣ್ಣನ್ನು ಸಂಗ್ರಹಿಸುವ ಕಾರ್ಯ ನಿರ್ವಹಿಸಿದರೆ, ಮತ್ತೊಂದು ವಿಭಾಗ ಗಗನನೌಕೆಯ ಮರು ಪಯಣದ ಆರಂಭ, ವರ್ಗಾವಣೆ, ಭೂಮಿಗೆ ಮರಳಿ ಬರುವ ಸವಾಲಿನ ಕಾರ್ಯಗಳನ್ನು ನಿರ್ವಹಿಸಲಿದೆ. ಅದಕ್ಕಾಗಿ ಎಲ್‌ವಿಎಂ-3 ಮತ್ತು ಪಿಎಸ್‌ಎಲ್‌ವಿ ಬಳಸಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ. ಹಾಗಾಗಿಯೇ ಎಲ್‌ವಿಎಂ-3 ರಾಕೆಟ್‌ನಲ್ಲಿ ಬಹಳಷ್ಟು ಸುಧಾರಣೆ ತರಲು ಯೋಜಿಸಲಾಗಿದೆ. ಏಕೆಂದರೆ ಗಗನನೌಕೆಯು ಚಂದ್ರನಲ್ಲಿ ಜೋಪಾನವಾಗಿ ಇಳಿದು ಮಣ್ಣು-ಕಲ್ಲು ಸಂಗ್ರಹಿಸಿ ಭೂಮಿಗೆ ಮರಳಬೇಕಿದೆ. ಚಂದ್ರನ ಕಕ್ಷೆಯ ಪ್ರವೇಶ ಮತ್ತು ಮರಳುವಿಕೆಯ ಸವಾಲಿನ ಕಾರ್ಯ ಕೈಗೊಳ್ಳಬೇಕಿದೆ.

37,000ಕ್ಕೂ ಹೆಚ್ಚು ಗಣೇಶ ವಿಸರ್ಜನೆ

ಮುಂಬೈ: ದೇಶದ ವಾಣಿಜ್ಯ ರಾಜಧಾನಿ ಮುಂಬೈ ನಗರಿ ವಿಘ್ನ ವಿನಾಯಕನಿಗೆ ಅದ್ದೂರಿ ವಿದಾಯ ಹೇಳಿದೆ. ನಗರಾದ್ಯಂತ ಬುಧವಾರ ಬೆಳಗ್ಗೆ 37,000ಕ್ಕೂ ಹೆಚ್ಚು ಗೌರಿ-ಗಣೇಶ ಮೂರ್ತಿಗಳನ್ನು ಡೋಲು, ಹಾಡು-ಕುಣಿತ ಮೂಲಕ ಮೆರವಣಿಗೆಯಲ್ಲಿ ಕೊಂಡೊಯ್ದು ವಿಸರ್ಜನೆ ಮಾಡಲಾಗಿದೆ.

ವಿವಿಧ ಆಕೃತಿಗಳ ಗಣೇಶ ಮೂರ್ತಿಗಳ ಮೆರವಣಿಗೆ ಮಂಗಳವಾರ ಬೆಳಗ್ಗೆ ಆರಂಭವಾಗಿ ರಾತ್ರಿಯಿಡೀ ನಗರವನ್ನು ಸುತ್ತಾಡಿವೆ. ಗಿರಗಾಂವ್, ದಾದರ್, ಜುಹು, ಮಾರ್ವೆ, ಅಕ್ಸಾ ಕಡಲತೀರ, ಕೃತಕ ಕೊಳಗಳು, ನಗರದ ಕಡಲತೀರಗಳು, ಕೆರೆಗಳು ಮತ್ತು ಕೃತಕ ಕೊಳಗಳಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆ ನಡೆದಿದೆ. ಲಕ್ಷಾಂತರ ಭಕ್ತರನ್ನು ಸೆಳೆಯುವ 'ಲಾಲ್‌ಬಾಗ್ ಚಾ ರಾಜ ಗಣೇಶ' ಮೂರ್ತಿ ಅದ್ದೂರಿ ಮೆರವಣಿಗೆಯಲ್ಲಿ ಸಾಗಿ ದಕ್ಷಿಣ ಮುಂಬೈನ ಗಿರಗಾಂವ್ ಬೀಚ್‌ನಲ್ಲಿ ಬೆಳಿಗ್ಗೆ 10.30ರ ವೇಳೆ ಅರಬ್ಬಿ ಸಮುದ್ರದಲ್ಲಿ ವಿಸರ್ಜನೆಗೊಂಡಿತು. ಮೆರವಣಿಗೆ ಸಾಗಿದ ಮಾರ್ಗಗಳಲ್ಲಿ ದೇವರ ದರ್ಶನಕ್ಕಾಗಿ ಲಕ್ಷಾಂತರ ಭಕ್ತರು ಸಾಲುಗಟ್ಟಿದ್ದರು.

ಸೆ.7ಕ್ಕೆ ಪ್ರಾರಂಭವಾದ ಗಣೇಶೋತ್ಸವ ಸೆ.17ರಂದು ಸಮಾಪ್ತಿಗೊಂಡಿದೆ. ಮುಂಬೈನ ವಿವಿಧೆಡೆ ಪ್ರತಿಷ್ಠಾಪಿಸಿದ್ದ 37,064 ಗೌರಿ-ಗಣೇಶ ಮೂರ್ತಿಗಳನ್ನು ಬುಧವಾರ ಬೆಳಗ್ಗೆ 6ರ ವೇಳೆಗೆ ವಿಸರ್ಜನೆ ಮಾಡಲಾಯಿತು. ಇದರಲ್ಲಿ 5,762 'ಸಾರ್ವಜನಿಕ' ಗಣೇಶ ಮೂರ್ತಿಗಳಿದ್ದವು. ಬೃಹನ್ಮುಂಬೈ ಮುನ್ಸಿಪಲ್ ಕಾರ್ಪೊರೇಷನ್‌ನ ಸಾವಿರಾರು ಸಿಬ್ಬಂದಿ, ಜೀವರಕ್ಷಕ ದಳದವರು ಮತ್ತು ತುರ್ತು ಸೇವೆಗಳ ಸಿಬ್ಬಂದಿಗಳು ವಿಸರ್ಜನೆ ಸುಗಮವಾಗಿ ಸಾಗುವಂತೆ ಶ್ರಮಿಸಿದರು.

ಮೋದಿ-ಯೂನುಸ್ ಭೇಟಿ ಅನುಮಾನ

ದೆಹಲಿ: ನ್ಯೂಯಾರ್ಕ್‌ನಲ್ಲಿ ಸೆ.23ರಂದು ನಡೆಯಲಿರುವ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಭಾರತ-ಬಾಂಗ್ಲಾದೇಶ ಭಾಗವಹಿಸುತ್ತಿವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥ ಮಹಮ್ಮದ್ ಯೂನುಸ್ ಅವರನ್ನು ಭೇಟಿ ಆಗುವ ಸಾಧ್ಯತೆ ಇಲ್ಲ ಎಂದು ಹೇಳಲಾಗಿದೆ. ಬಾಂಗ್ಲಾದೇಶ ಈಗಾಗಲೇ ಮೋದಿ ಭೇಟಿಗೆ ಉತ್ಸುಕವಾಗಿದೆ. ಆದರೆ, ಭಾರತದ ಕಾರ್ಯಸೂಚಿಯಲ್ಲಿ ಇಬ್ಬರೂ ನಾಯಕರ ಭೇಟಿ ವಿಚಾರ ಇಲ್ಲ ಎಂದು ವರದಿಯಾಗಿದೆ.

ಪ್ರಧಾನಿ ಮೋದಿ ಭೇಟಿಯಾಗಿ ಎರಡೂ ರಾಷ್ಟ್ರಗಳ ನಡುವಿನ ಗೊಂದಲ-ಒತ್ತಡದ ವಾತಾವರಣ ತಿಳಿಗೊಳಿಸಿ ದ್ವಿಪಕ್ಷೀಯ ಸಂಬಂಧ ಸರಿಪಡಿಸುವ ಯತ್ನದಲ್ಲಿ ಬಾಂಗ್ಲಾದೇಶವಿದೆ. ಆದರೆ ಪ್ರಧಾನಿ ಮೋದಿ ನ್ಯೂಯಾರ್ಕ್ ಭೇಟಿ ಕಾರ್ಯಕ್ರಮಗಳು ಇರುವುದರಿಂದ ಯೂನುಸ್ ಭೇಟಿ ಸಾಧ್ಯತೆ ಇಲ್ಲ ಎನ್ನಲಾಗುತ್ತಿದೆ.

ಶೇಖ್ ಹಸೀನಾ ಭಾರತದಲ್ಲಿ ಆಶ್ರಯ ಪಡೆದಿರುವ ವಿಚಾರವಾಗಿ ಯೂನುಸ್ ಕಟುವಾಗಿ ಟೀಕಿಸಿದ್ದರು. 'ಅವಾಮಿ ಲೀಗ್' ಹೊರತು ಪಡಿಸಿ ಎಲ್ಲಾ ಪಕ್ಷಗಳು ಇಸ್ಲಾಮಿಸ್ಟ್ ಎಂಬ ಭಾವನೆಯಿಂದ ಭಾರತ ಹೊರಬರಬೇಕು ಎಂದಿದ್ದರು.

21ಕ್ಕೆ ಆತಿಶಿ ದೆಹಲಿ ಸಿಎಂ ಆಗಿ ಪ್ರಮಾಣ

ದೆಹಲಿ: ದೆಹಲಿ ಮುಖ್ಯಮಂತ್ರಿ ಹುದ್ದೆಗೆ ನಿಯೋಜನೆಗೊಂಡಿರುವ ಆತಿಶಿ ಮರ್ಲೆನಾ, ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೆನಾ ಸೆ.21ರ ದಿನಾಂಕ ಪ್ರಸ್ತಾಪಿಸಿದ್ದಾರೆ. ಸರಕಾರ ರಚನೆ ಹಕ್ಕು ಮಂಡಿಸಿ ಆತಿಶಿ ನೀಡಿದ ಪತ್ರವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರವಾನಿಸಿದ್ದು, ಪತ್ರ ಅಂಗೀಕಾರಗೊಂಡ ಬಳಿಕ ಸರಕಾರ ರಚನೆಗೆ ಆತಿಶಿ ಅವರನ್ನು ಲೆ.ಗವರ್ನರ್ ಆಹ್ವಾನಿಸಲಿದ್ದಾರೆ. ಪ್ರಮಾಣವಚನ ಬಳಿಕ ಸೆ.26-27ರಂದು ವಿಶೇಷ ಅಧಿವೇಶನ ನಡೆಸಿ ಆತಿಶಿ ಬಹುಮತ ಸಾಬೀತುಪಡಿಸಲಿದ್ದಾರೆ ಎಂದು ಎಎಪಿ ಮೂಲಗಳು ತಿಳಿಸಿವೆ.

ಮನೆ-ಭದ್ರತೆ ವಾಪಸ್: ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಅರವಿಂದ ಕೇಜ್ರಿವಾಲ್ ಅವರಿಗೆ ನೀಡಲಾಗಿದ್ದ ಸರಕಾರಿ ನಿವಾಸ, ಝೆಡ್ ಪ್ಲಸ್ ಭದ್ರತೆ ಮತ್ತು ಕಾರು ಮತ್ತಿತರ ಸವಲತ್ತುಗಳನ್ನು ಸರಕಾರಕ್ಕೆ ಹಿಂತಿರುಗಿಸಲಿದ್ದಾರೆ. 15 ದಿನದಲ್ಲಿ ಸರಕಾರಿ ಬಂಗಲೆ ತೊರೆಯಬೇಕಿದೆ. ಆದರೆ ಆಪ್ ನಾಯಕರು ಕೇಜ್ರಿವಾಲ್ ಭದ್ರತೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ರಾಜ್ಯಸಭಾ ಸಂಸದ ಸಂಜಯ್ ಸಿಂಗ್ 'ಈಗಾಗಲೇ ಹಲವು ಬಾರಿ ಕೇಜ್ರಿವಾಲ್ ಮೇಲೆ ದಾಳಿ ನಡೆದಿದೆ. ಸುರಕ್ಷತೆ ದೃಷ್ಟಿಯಿಂದ ಈಗಿದ್ದ ಮನೆಯೇ ಕೇಜ್ರಿವಾಲ್ ಅವರಿಗೆ ಸೂಕ್ತವಾಗಿದೆ' ಎಂದಿದ್ದಾರೆ.

ಜಮ್ಮು-ಕಾಶ್ಮೀರ ಮೊದಲ ಹಂತ ಶೇ.59 ಮತದಾನ

ಶ್ರೀನಗರ: ದಶಕದ ನಂತರ ಬಿಗಿ ಭದ್ರತೆ ಮಧ್ಯೆ ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆ ಪ್ರಕ್ರಿಯೆ ನಡೆಯುತ್ತಿದ್ದು, ಮೊದಲ ಹಂತದಲ್ಲಿ ಬುಧವಾರ 6 ಜಿಲ್ಲೆಗಳ 24 ಕ್ಷೇತ್ರಗಳಲ್ಲಿ 219 ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಬುಧವಾರ ಬೆಳಗ್ಗೆಯಿಂದಲೇ ಬಿರುಸಿನಿಂದ ಮತದಾನ ನಡೆದಿದೆ. ಸಂಜೆ 6ರ ವೇಳೆಗೆ 24 ಕ್ಷೇತ್ರಗಳಲ್ಲಿ ಸರಾಸರಿ ಶೇ.58.85ರಷ್ಟು ಮತದಾನವಾಗಿದೆ. ಗರಿಷ್ಠ ಎಂದರೆ ಕಿಸ್ತ್ವಾರಾ ಜಿಲ್ಲೆಯಲ್ಲಿ ಶೇ.77.23ರಷ್ಟು ಮತ ಹಕ್ಕು ಚಲಾವಣೆ ಆಗಿದೆ.

ಬೆಳಗ್ಗೆ 7ಕ್ಕೆ ಮತದಾನ ಆರಂಭಗೊಂಡಾಗ ಅದಾಗಲೇ ನೂರಾರು ಮತದಾರರು ಬಲು ಉತ್ಸಾಹದಿಂದ ಮತಗಟ್ಟೆಗಳ ಎದುರು ಸಾಲುಗಟ್ಟಿದ್ದರು. ಹಾಗಾಗಿ ಮೊದಲ 4 ತಾಸುಗಳಿಗೆಲ್ಲಾ ಶೇ.27ರಷ್ಟು ಮತದಾನವಾಗಿತ್ತು. ಮೊದಲ ಹಂತದ ಚುನಾವಣೆಯಲ್ಲಿ ಜಮ್ಮು ಭಾಗದ 8 ಕ್ಷೇತ್ರಗಳಿಗೆ, ಕಾಶ್ಮೀರ ಭಾಗದ 16 ಕ್ಷೇತ್ರಗಳಿಗೆ ಮತದಾನವಾಗಿದೆ. 11,76,462 ಪುರುಷ, 11,51,058 ಮಹಿಳೆ ಮತ್ತು 60 ತೃತೀಯ ಲಿಂಗಿ ವ್ಯಕ್ತಿ ಸೇರಿದಂತೆ ಒಟ್ಟು 23,27,580 ಮತದಾರರು ಹಕ್ಕು ಚಲಾಯಿಸುವ ಅವಕಾಶ ಪಡೆದಿದ್ದಾರೆ. 85 ವರ್ಷ ಮೇಲ್ಪಟ್ಟ 15,774 ವೃದ್ಧರು ಈ ಹಂತದಲ್ಲಿದ್ದಾರೆ.

6 ಜಿಲ್ಲೆಗಳ 24 ಕ್ಷೇತ್ರಗಳಲ್ಲಿ ಒಟ್ಟು 3,276 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. 14 ಸಾವಿರ ಚುನಾವಣಾ ಸಿಬ್ಬಂದಿ ಕಾರ್ಯನಿರ್ವಹಿಸಿದರು.

ಕೇಂದ್ರದ ಎನ್‌ಡಿಎ ಸರಕಾರ 2019ರ ಆಗಸ್ಟ್‌ನಲ್ಲಿ ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿದ ನಂತರ ನಡೆಯುತ್ತಿರುವ ಚುನಾವಣೆ ಇದಾಗಿದೆ. ಹಾಗಾಗಿ ಈ ಚುನಾವಣೆಗೆ ಹೆಚ್ಚಿನ ಕುತೂಹಲಕ್ಕೆ ಕಾರಣವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ದೃಷ್ಟಿಯಿಂದ ವಿಶೇಷ ಮಹತ್ವ ಪಡೆದಿದೆ.

- ದಶಕ ನಂತರ ಜಮ್ಮು-ಕಾಶ್ಮೀರ ಚುನಾವಣೆ
- 1ನೇ ಹಂತ 6 ಜಿಲ್ಲೆ-24 ಕ್ಷೇತ್ರ ಚುನಾವಣೆ
- ಒಟ್ಟು 219 ಅಭ್ಯರ್ಥಿಗಳ ಅದೃಷ್ಟ ಪರೀಕ್ಷೆ
- ಗರಿಷ್ಠ ಮತದಾನ ಕಿಸ್ತ್ವಾರದಲ್ಲಿ ಶೇ.77.23

ಸಾವಿನ ಸಂಖ್ಯೆ 11ಕ್ಕೇರಿಕೆ, 2800 ಗಾಯಾಳುಗಳಲ್ಲಿ 200 ಮಂದಿ ಸ್ಥಿತಿ ಗಂಭೀರ

ಪೇಜರ್‌ಗಳ ಸ್ಫೋಟದ ಹಿಂದೆ ಇಸ್ರೇಲ್ ಕೈವಾಡ ಶಂಕೆ

ಲೆಬನಾನ್: ಮೊಬೈಲ್ ಬಳಸಿದರೆ ಹ್ಯಾಕ್ ಮಾಡುತ್ತಾರೆಂಬ ಭಯದಲ್ಲೇ 3 ದಶಕಗಳ ಹಿಂದಿನ ತಂತ್ರಜ್ಞಾನ ಆಧರಿಸಿದ 'ಪೇಜರ್' ಬಳಸುತ್ತಿದ್ದ ಹೆಜ್ಬುಲ್ಲಾ ಬಂಡುಕೋರರಿಗೆ ಆ ಪೇಜರ್‌ನಿಂದಲೇ ದೊಡ್ಡ ಪೆಟ್ಟು ಬಿದ್ದಿದೆ.

ಮಂಗಳವಾರ ಒಂದೇ ದಿನ ಸಾವಿರಾರು ಪೇಜರ್ ದಿಢೀರ್ ಸ್ಫೋಟಗೊಂಡು 11 ಮಂದಿ ಬಲಿಯಾಗಿದ್ದಾರೆ. ಪೇಜರ್ ಸ್ಫೋಟದಲ್ಲಿ ಒಬ್ಬ ಯುವತಿಯೂ ಮೃತಳಾಗಿದ್ದಾಳೆ. 2800ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. 200 ಗಾಯಾಳುಗಳು ಗಂಭೀರ ಸ್ಥಿತಿಯಲ್ಲಿದ್ದಾರೆ. ಹೆಚ್ಚಿನವರಿಗೆ ಮುಖ, ಕೈಗಳು, ಹೊಟ್ಟೆ ಭಾಗದಲ್ಲಿ ಗಾಯವಾಗಿವೆ ಎಂದು ಲೆಬನಾನಿನ ಆರೋಗ್ಯ ಸಚಿವ ಫಿರಾಸ್ ಅಬಿಯಾಡ್ ಹೇಳಿದ್ದಾರೆ. ಪೇಜರ್ ರೇಡಿಯೋ ತರಂಗಗಳ ಮೇಲೆ ಕಾರ್ಯನಿರ್ವಹಿಸುತ್ತದೆ. ಸಾವಿರಾರು ಪೇಜರ್‌ಗಳನ್ನು ಇಸ್ರೇಲ್ ತಂತ್ರಜ್ಞರು ಹ್ಯಾಕ್ ಮಾಡಿ ಸ್ಫೋಟವಾಗುವಂತೆ ಮಾಡಿದ್ದಾರೆ ಎಂದು ಹೆಜ್ಬುಲ್ಲಾ ಮುಖಂಡರು ಆರೋಪಿಸಿದ್ದಾರೆ.

ಸ್ಫೋಟ ಹೇಗಾಯ್ತು?: ಪೇಜರ್‌ಗಳನ್ನು ಇಸ್ರೇಲ್ ತಜ್ಞರು ಹ್ಯಾಕ್ ಮಾಡಿ ಅದರಲ್ಲಿ ರವಾನೆ ಆಗುವ ಸಂದೇಶಗಳ ತರಂಗಗಳನ್ನು, ಡೇಟಾಗಳನ್ನು ಸಂಗ್ರಹಿಸಿ, ಯಾರ ಸಂದೇಶದಲ್ಲಿ ಉಗ್ರವಾದದ ಅಂಶಗಳಿವೆ ಎಂಬುದನ್ನು ಕಂಡುಕೊಂಡು, ಉಗ್ರರು ಬಳಸುವ ಪೇಜರ್ ಸಂಖ್ಯೆಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿದ್ದಾರೆ. ಬಳಿಕ ಉಗ್ರರ ಪೇಜರ್‌ಗಳನ್ನು ಮತ್ತೆ ಹ್ಯಾಕ್ ಮಾಡಿ ಅದಕ್ಕೆ ಪ್ರತ್ಯೇಕ ಸಾಫ್ಟ್‌ವೇರ್ ಪ್ರೋಗ್ರಾಂ ರಚನೆ ಮಾಡಿ(ಕೋಡಿಂಗ್ ಬದಲಿಸಿ) ಕೋಡಿಂಗ್‌ಗಳು ವೈರಸ್‌ನಂತೆ ಕೆಲಸ ಮಾಡಿ ಸ್ವತಃ ಸ್ಫೋಟಗೊಳ್ಳುವಂತೆ ಮಾಡಿದ್ದಾರೆ ಎಂದು ಹೆಜ್ಬುಲ್ಲಾ ಸಂಘಟನೆ ತಜ್ಞರು ವಿಶ್ಲೇಷಿಸಿದ್ದಾರೆ. ಗುರುತಿಸಿದ ಪೇಜರ್‌ಗಳನ್ನೇ ಟಾರ್ಗೆಟ್ ಮಾಡಿ ವೈರಸ್ ಸಿದ್ಧಪಡಿಸಿ ರೇಡಿಯೋ ತರಂಗಗಳ ನೆಟ್‌ವರ್ಕ್‌ನೊಳಕ್ಕೆ ತೂರಿಸಲಾಗಿದೆ. ಅವು ಗುರುತಿಸಿದ ಪೇಜರ್‌ಗಳೊಳಕ್ಕೆ ನುಸುಳಿಕೊಂಡು ಕೆಲವೇ ಸೆಕೆಂಡ್‌ಗಳಲ್ಲೇ ಪೇಜರ್ ಬ್ಯಾಟರಿಗಳು ವಿಪರೀತ ಬಿಸಿಯಾಗುವಂತೆ ಮಾಡಿವೆ. ಅತಿ ತಾಪಮಾನದಿಂದಾಗಿ ಪೇಜರ್‌ಗಳು ತಮ್ಮಷ್ಟಕ್ಕೇ ಸ್ಫೋಟಗೊಂಡಿವೆ ಎಂದು ಅಂದಾಜು ಮಾಡಲಾಗಿದೆ. ತಜ್ಞರುಗಳ ಮತ್ತೊಂದು ತಂಡದ ಪ್ರಕಾರ ತೈವಾನ್ ಮೂಲದ ಪೇಜರ್ ತಯಾರಿಕಾ ಸಂಸ್ಥೆ ತಯಾರಿಸಿದ ಪೇಜರ್‌ಗಳಲ್ಲಿ ದೂರದಿಂದಲೇ ಅವನ್ನು ಸ್ಫೋಟಿಸಲು ಪ್ರತ್ಯೇಕ ಸ್ವಿಚ್ ನಿಗೂಢವಾಗಿ ಜೋಡಿಸಲಾಗಿತ್ತು. ಆ ಮೂಲಕ ಸ್ಫೋಟವಾಗಿವೆ ಎನ್ನಲಾಗುತ್ತಿದೆ.

ಲೆಬನಾನ್‌ನಲ್ಲಿ ಮೊಬೈಲ್ ತಂತ್ರಜ್ಞಾನ ಸಂಹವನದ ಸುರಕ್ಷತಾ ಕ್ರಮಗಳು ಬಳಕೆಯಲ್ಲಿಲ್ಲ. ತರಂಗಗಳ ಸಂರಕ್ಷಣೆಗೆ ಪ್ರತ್ಯೇಕ ವ್ಯವಸ್ಥೆಯಿಲ್ಲ. ಇದನ್ನು ತಿಳಿದೇ ಇಸ್ರೇಲ್ ತಜ್ಞರು ಪೇಜರ್ ರೇಡಿಯೋ ತರಂಗಗಳನ್ನು ಹ್ಯಾಕ್ ಮಾಡಿದ್ದಾರೆ ಎಂದು ಹೇಳಲಾಗಿದೆ.

ಪ್ರತಿಕಾರ :ಹಿಜ್ಬುಲ್ಲಾ ಎಚ್ಚರಿಕೆ

ಲೆಬನಾನ್: ಪೇಜರ್ ಸ್ಫೋಟದಲ್ಲಿ ಇಸ್ರೇಲ್‌ನ ನೇರ ಕೈವಾಡವಿದೆ. ಏಕಕಾಲದಲ್ಲಿ ಸಾವಿರಾರು ಪೇಜರ್‌ಗಳು ಸ್ಫೋಟಗೊಳ್ಳುವಂತೆ ಮಾಡಿ 11 ಜನರ ಸಾವಿಗೆ ಇಸ್ರೇಲ್ ದೇಶವೇ ಕಾರಣ ಎಂದು ಇರಾನ್ ಬೆಂಬಲಿತ ಹೆಜ್ಬುಲ್ಲಾ ಉಗ್ರ ಸಂಘಟನೆ ಕಿಡಿಕಾರಿದೆ. ಇಸ್ರೇಲ್ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದೆ. ಬೈರೂತ್‌ನಲ್ಲಿರುವ ಇರಾನ್ ರಾಯಭಾರಿ ಕೂಡ ಪೇಜರ್ ಸ್ಫೋಟದಲ್ಲಿ ಗಾಯ ಗೊಂಡಿದ್ದಾರೆ. ಈ ಸ್ಫೋಟಕ್ಕೆ ಕಾರಣರಾದವರನ್ನು ಶಿಕ್ಷಿಸಲಾಗುತ್ತದೆ ಎಂದು ಹೆಜ್ಬುಲ್ಲಾ ಗುಡುಗಿದೆ.

ತೈವಾನ್‌ನಿಂದ ಬಂದ ಪೇಜರ್‌ಗಳ ಸ್ಫೋಟ

ಲೆಬನಾನ್: ಸ್ಫೋಟಗೊಂಡ ಪೇಜರ್‌ಗಳೆಲ್ಲಾ ತೈವಾನ್‌ನಲ್ಲಿ ತಯಾರಾಗಿ ಬಂದಿವೆ. ಪೇಜರ್‌ಗಳನ್ನು ತೈವಾನ್‌ನ ಗೋಲ್ಡ್ ಅಪೋಲೊ ಕಂಪನಿ ಪೂರೈಸಿದೆ. ಪೇಜರ್ ಲೆಬನಾನ್ ತಲುಪುವ ಮೊದಲೇ ಅವಕ್ಕೆ ಸ್ಫೋಟಕಗಳನ್ನು ಅಳವಡಿಸಲಾಗಿತ್ತು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಇತ್ತೀಚೆಗೆ ಸಾವಿರಕ್ಕೂ ಅಧಿಕ ಪೇಜರ್‌ಗಳನ್ನು ತೈವಾನ್‌ನಿಂದ ತರಿಸಿಕೊಳ್ಳಲಾಗಿತ್ತು. ಅಲ್ಲದೆ 3 ಸಾವಿರ ಪೇಜರ್‌ಗಳ ಖರೀದಿಗೂ ಆರ್ಡರ್ ಮಾಡಲಾಗಿದೆ. ಪೇಜರ್ ಲೆಬನಾನ್‌ಗೆ ರಫ್ತಾಗುವ ಮೊದಲೇ ಇಸ್ರೇಲ್ ಹ್ಯಾಕರ್‌ಗಳು ಹ್ಯಾಕ್ ಮಾಡಿ ಸುಧಾರಿತ ಸ್ಫೋಟಕ ಅಳವಡಿಸಿದ್ದಾರೆ ಎಂದು ಹೆಜ್ಬುಲ್ಲಾ ಮುಖಂಡರೊಬ್ಬರು ಆರೋಪಿಸಿರುವುದಾಗಿ ವರದಿಯಾಗಿದೆ. ಪೇಜರ್‌ಗಳಲ್ಲಿ ಇಸ್ರೇಲ್ ಸ್ಫೋಟಕ ಪ್ರಚೋದಕವನ್ನು ಎಂಬೆಡ್ ಮಾಡಿರಬಹುದು. ಇಸ್ರೇಲಿ ಗುಪ್ತಚರ ಸಂಸ್ಥೆ ಪೇಜರ್ ತಯಾರಿಕಾ ಪ್ರಕ್ರಿಯೆಯಲ್ಲಿ ಸೇರಿಕೊಂಡಿರಬಹುದು ಎನ್ನಲಾಗಿದೆ.

ಶ್ರೀನಗರದಲ್ಲಿ ಅದ್ದೂರಿ ಗಣೇಶ ಮೆರವಣಿಗೆ

ಶ್ರೀನಗರ: ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಜಮ್ಮು-ಕಾಶ್ಮೀರದ ಶ್ರೀನಗರದಲ್ಲಿ ಶ್ರೀ ಗಣೇಶ ಮೂರ್ತಿ ವಿಸರ್ಜನೆಯ ಮೆರವಣಿಗೆಯನ್ನು ಲಾಲ್‌ಚೌಕದವರೆಗೂ ಅದ್ದೂರಿಯಿಂದ ಕೊಂಡೊಯ್ಯಲಾಗಿತ್ತು. ಹರಿಸಿಂಗ್ ಹೈ ಸ್ಟ್ರೀಟ್‌ನಿಂದ ಸಂಗೀತದ ಬ್ಯಾಂಡ್, ಪುರುಷ-ಮಹಿಳೆಯರ ಹಾಡು-ನೃತ್ಯದೊಂದಿಗೆ ಸಾಗಿದ ಮೆರವಣಿಗೆ ಲಾಲ್‌ಚೌಕ್‌ನ ಐತಿಹಾಸಿಕ ಕ್ಲಾಕ್ ಟವರ್ ತಲುಪಿತು. ನಂತರ ಹನುಮಾನ್ ಮಂದಿರ ಬಳಿಯ ಝೇಲಂ ನದಿಯಲ್ಲಿ ಗಣಪತಿ ಮೂರ್ತಿಯನ್ನು ವಿಸರ್ಜನೆ ಮಾಡಲಾಯಿತು. ಬಣ್ಣಬಣ್ಣದ ಬಟ್ಟೆಗಳನ್ನು ಧರಿಸಿದ್ದ ಭಕ್ತರು ಮೆರವಣಿಗೆಯಲ್ಲಿ ಡೋಲು, ತಾಳಗಳ ಬಾರಿಸುತ್ತಾ ಕುಣಿದು ಕುಪ್ಪಳಿಸಿದರು. ಮೆರವಣಿಗೆಯಲ್ಲಿ ಭಾಗಿಯಾಗಿದ್ದ ಕೋಲ್ಕತ್ತ ನಿವಾಸಿ ಮಾಣಿಕ್ ಚತುರ್ದಾಸ್, ನಾನಿಲ್ಲ ವ್ಯಾಪಾರ ಮಾಡುತ್ತಿದ್ದೇನೆ. ನಮ್ಮ ಮರಾಠಿ ಸಹೋದರರು ಗಣಪತಿ ನಿಮಜ್ಜನ ಮೆರವಣಿಗೆ ಆಯೋಜಿಸಿದ್ದಾರೆ. ಕಾಶ್ಮೀರದಲ್ಲಿ ಕೆಲಸ ಮಾಡುತ್ತಿರುವ ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳದ ಜನರೆಲ್ಲರೂ ಗಣೇಶೋತ್ಸವ ಸಂಭ್ರಮದಲ್ಲಿ ಪಾಲ್ಗೊಂಡಿದ್ದಾರೆ ಎಂದು ಹೇಳಿದರು.

ನರೇಂದ್ರ ಮೋದಿ ಅದ್ಭುತ ವ್ಯಕ್ತಿ: ಟ್ರಂಪ್

ವಾಷಿಂಗ್ಟನ್: ಭಾರತದ ಪ್ರಧಾನಿ ನರೇಂದ್ರ ಮೋದಿ ಅದ್ಭುತ ವ್ಯಕ್ತಿ. ಅವರು ಮುಂದಿನ ವಾರ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ಆಗ ಭೇಟಿ ಮಾಡುವೆ ಎಂದು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಸೆ.21ರಿಂದ 23ರವರೆಗೆ ಮೋದಿ ಅಮೆರಿಕ ಭೇಟಿ ನಿಗದಿಯಾಗಿದೆ.

ಅಧ್ಯಕ್ಷ ಜೋ ಬೈಡನ್ ಡೆಲವೇರ್‌ನ ವಿಲ್ಮಿಂಗ್ಟನ್‌ನಲ್ಲಿ ಆಯೋಜಿಸಿರುವ 'ಕ್ವಾಡ್' ಸದಸ್ಯ ದೇಶಗಳ ನಾಯಕರ ಶೃಂಗಸಭೆಗೆ ಹಾಜರಾಗುವ ಮೂಲಕ ಮೋದಿ ಅಮೆರಿಕ ಪ್ರವಾಸ ಪ್ರಾರಂಭವಾಗಲಿದೆ. ಶೃಂಗದಲ್ಲಿ ಆಸ್ಟ್ರೇಲಿಯ ಪ್ರಧಾನಿ ಆಂಥೋನಿ ಅಲ್ಬನೀಸ್, ಜಪಾನ್ ಪ್ರಧಾನಿ ಕಿಶಿಡಾ ಫ್ಯೂಮಿಯೊ ಭಾಗವಹಿಸಲಿದ್ದಾರೆ. ನಂತರ ಮೋದಿ ನ್ಯೂಯಾರ್ಕ್‌ಗೆ ತೆರಳಿ ಸೆ.22ರಂದು ಲಾಂಗ್ ಐಲ್ಯಾಂಡ್‌ನಲ್ಲಿ ಭಾರತೀಯ ಸಮುದಾಯದ ಬೃಹತ್ ಕಾರ್ಯಕ್ರಮದಲ್ಲಿ ಮಾತನಾಡಲಿದ್ದಾರೆ. ಸೆ.23ರಂದು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಭವಿಷ್ಯದ ಶೃಂಗಸಭೆಯಲ್ಲಿ ವಿಶ್ವನಾಯಕರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

ನವೆಂಬರ್‌ನಲ್ಲಿ ಅಮೆರಿಕ ಅಧ್ಯಕ್ಷೀಯ ಚುನಾವಣೆ ನಡೆಯಲಿದ್ದು, ಡೊನಾಲ್ಡ್ ಟ್ರಂಪ್-ಕಮಲಾ ಹ್ಯಾರಿಸ್ ತೀವ್ರ ಪೈಪೋಟಿ ನಡೆಸಿದ್ದಾರೆ.

ಎನ್‌ಪಿಎಸ್ ವಾತ್ಸಲ್ಯ ಯೋಜನೆ ಆರಂಭ

ದೆಹಲಿ: ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದ 'ಕೇಂದ್ರ ಸರಕಾರದ ಎನ್‌ಪಿಎಸ್ ವಾತ್ಸಲ್ಯ' ಯೋಜನೆ ಬುಧವಾರ ದೇಶಾದ್ಯಂತ ಆರಂಭವಾಗಿದೆ. 18 ವರ್ಷದೊಳಗಿನ ಬಾಲಕ-ಬಾಲಕಿಯರ ಹೆಸರಲ್ಲಿ ಖಾತೆ ತೆರೆದು ಸಣ್ಣ ಮೊತ್ತದೊಂದಿಗೆ ಮಕ್ಕಳ ಭವಿಷ್ಯವನ್ನು ಆರ್ಥಿಕವಾಗಿ ಭದ್ರಗೊಳಿಸಬಹುದಾಗಿದೆ. ಕನಿಷ್ಟ 1 ಸಾವಿರ ರು.ನಂತೆ ಮಕ್ಕಳು 18 ವರ್ಷಕ್ಕೆ ಬರುವವರೆಗೂ ಪೋಷಕರು ಹೂಡಿಕೆ ಮಾಡಬಹುದಾಗಿದೆ. 18 ವರ್ಷ ತುಂಬಿದ ಬಳಿಕ ಸಾಮಾನ್ಯ ಎನ್‌ಪಿಎಸ್ ಖಾತೆಯಾಗಿ ಬದಲಾಗಲಿದೆ. ಇಲ್ಲವಾದರೆ ಪೋಷಕರು ಅಥವಾ ಮಕ್ಕಳು ಖಾತೆಯಿಂದ ಹಣ ಹಿಂಪಡೆಯಬಹುದು. ಹೂಡಿಕೆ ಆರಂಭಿಸಿದ 3 ವರ್ಷ ಬಳಿಕ ಶೇ.25 ರಷ್ಟು ಹಣವನ್ನು ಶಿಕ್ಷಣ, ಆರೋಗ್ಯ ಸಮಸ್ಯೆ, ಅಂಗವೈಕಲ್ಯ ವಿಚಾರಕ್ಕೆ ಹಿಂಪಡೆಯಬಹುದಾಗಿದೆ. ಪೆನ್ಷನ್ ಫಂಡ್ ರೆಗ್ಯುಲೇಟರಿ ಆ್ಯಂಡ್ ಡೆವಲಪ್‌ಮೆಂಟ್ ಅಥಾರಿಟಿ (ಪಿಇಆರ್‌ಡಿಎ) ಸಂಸ್ಥೆ ನಿರ್ವಹಿಸುವ ಯೋಜನೆ ಇದಾಗಿದೆ. ಯಾವುದೇ ನಾಗರಿಕರು ಮಕ್ಕಳ ಹೆಸರಲ್ಲಿ ಖಾತೆ ತೆರೆಯಬಹುದಾಗಿದೆ. ಮಕ್ಕಳಿಗೆ 18 ವರ್ಷವಾದಾಗ ಹೂಡಿಕೆ 2.5 ಲಕ್ಷ ರು. ಗಿಂತ ಹೆಚ್ಚಾಗಿದ್ದರೆ ಶೇ.20ರಷ್ಟು ಹಣ ಹಿಂಪಡೆಯಬಹುದು. ಶೇ.80 ಹಣ ಆನ್ಯುಯಿಟಿ ಖರೀದಿಗೆ ಬಳಸಲಾಗುತ್ತದೆ. 2.5 ಲಕ್ಷ ರು.ಗಿಂತ ಕಡಿಮೆ ಇದ್ದರೆ ಪೂರ್ಣ ಹಣ ಹಿಂಪಡೆಯಬಹುದಾಗಿದೆ.

ಗ್ಯಾರೆಂಟಿ ಯೋಜನೆ ಹರಿಯಾಣಕ್ಕೂ ರಿಪೀಟ್

ಚಂಡಿಗಢ: ಹರಿಯಾಣ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷ 7 ಗ್ಯಾರಂಟಿಗಳ ಪ್ರಣಾಳಿಕೆಯನ್ನು ಬುಧವಾರ ಬಿಡುಗಡೆ ಮಾಡಿದೆ. ಕನಿಷ್ಟ ಬೆಂಬಲ ಬೆಲೆಗೆ ಕಾನೂನು ಮಾನ್ಯತೆ, ಹಿರಿಯ ನಾಗರಿಕರು, ಅಂಗವಿಕಲರು ಮತ್ತು ವಿಧವೆಯರಿಗೆ ಮಾಸಿಕ 6 ಸಾವಿರ ರು. ಪಿಂಚಣಿ, ರಾಜ್ಯದಲ್ಲಿ ಜಾತಿ ಗಣತಿ, 300 ಯುನಿಟ್ ಉಚಿತ ವಿದ್ಯುತ್, 25 ಲಕ್ಷದ ರು.ವರೆಗೆ ಉಚಿತ ವೈದ್ಯಕೀಯ ಸೇವೆ ಮತ್ತಿತರ ಭರವಸೆಗಳನ್ನು ಕಾಂಗ್ರೆಸ್ ಘೋಷಿಸಿದೆ. ಜಾತಿ ಗಣತಿ ಮೂಲಕ ಕೆನೆ ಪದರ ಗುಂಪಿನ ಆದಾಯ ಮಿತಿಯನ್ನು 6 ಲಕ್ಷದಿಂದ 10 ಲಕ್ಷಕ್ಕೆ ಏರಿಸುವ ಭರವಸೆ ನೀಡಿದೆ. ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ, ಭೂಪೇಂದ್ರ ಸಿಂಗ್ ಹೂಡಾ ಸೇರಿ ಹಿರಿಯ ಮುಖಂಡರು ಭಾಗಿಯಾಗಿದ್ದರು. 'ಸಾಥ್ ವಾದೆ ಪಕ್ಕೆ ಇರಾದೆ' ಎಂದು ಹೇಳಿದ ಖರ್ಗೆ, ಅಧಿಕಾರಕ್ಕೆ ಬಂದರೆ ಎಲ್ಲಾ ಗ್ಯಾರಂಟಿ ಜಾರಿಯಾಗುವುದು ಖಚಿತ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೋಹನಾ ಸಿಂಗ್ ತೇಜಸ್‌ನ ಮೊದಲ ಮಹಿಳಾ ಪೈಲಟ್

ದೆಹಲಿ: ತೇಜಸ್ ಯುದ್ಧ ವಿಮಾನದ ಮೊದಲ ಮಹಿಳಾ ಪೈಲಟ್ ಆಗಿ ಮೋಹನಾ ಸಿಂಗ್ ಹೊರ ಹೊಮ್ಮಿದ್ದಾರೆ. ಭಾರತೀಯ ವಾಯು ಪಡೆಯ ಎಲೈಟ್ 18 ಫ್ಲೈಯಿಂಗ್ ಬುಲೆಟ್ಸ್ ಹಾರಾಟಕ್ಕೆ ಸ್ಕ್ವಾಡ್ರನ್ ಲೀಡರ್ ಮೋಹನಾ ಸಿಂಗ್ ಅನುಮತಿ ಪಡೆದುಕೊಂಡಿದ್ದು, ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಇತ್ತೀಚೆಗೆ ಜೋಧಪುರದಲ್ಲಿ ನಡೆದ ಮೇಕ್ ಇನ ಇಂಡಿಯಾ ಬೆಂಬಲಿಸುವ 'ತರಂಗ ಶಕ್ತಿ' ಮಿಲಿಟರಿ ವ್ಯಾಯಾಮದಲ್ಲಿ ಭಾಗಿಯಾಗಿದ್ದ ಅವರು ಎಲ್‌ಸಿಎ ತೇಜಸ್ ಫೈಟರ್ ಜೆಟ್‌ನಲ್ಲಿ ಭಾರತೀಯ ಸೇನೆ ಹಾಗೂ ನೌಕಾದಳದ ಉಪ ಮುಖ್ಯಸ್ಥರಿಗೆ ನಿರ್ದೇಶನ ನೀಡುವುದು ಕಂಡು ಬಂದಿತ್ತು. 2016 ರಲ್ಲಿ ಮೋಹನಾ ಸಿಂಗ್, ಭಾವನಾ ಕಾಂತ್ ಮತ್ತು ಅವನಿ ಚತುರ್ವೇದಿ ಮೊದಲ ಬಾರಿಗೆ ಭಾರತೀಯ ವಾಯು ದಳದ ಯುದ್ಧ ವಿಮಾನದ ಪೈಲಟ್‌ಗಳಾಗಿ ಸೇರ್ಪಡೆಗೊಂಡಿದ್ದರು. 2016ಕ್ಕೂ ಮೊದಲು ಮಹಿಳಾ ಪೈಲೆಟ್‌ಗಳಿಗೆ ಹೆಲಿಕಾಪ್ಟರ್ ಮತ್ತು ಟ್ರಾನ್ಸ್‌ಪೋರ್ಟ್ ಏರ್‌ಕ್ರಾಫ್ಟ್ ಹಾರಾಟಕ್ಕೆ ಮಾತ್ರ ಅನುಮತಿ ನೀಡಲಾಗುತ್ತಿತ್ತು. ರಾಜಸ್ಥಾನದ ಝುನ್‌ಝುನು ಮೂಲದ ಮೋಹನ ಸಿಂಗ್ ಈಗ ತೇಜಸ್ ಯುದ್ಧ ವಿಮಾನದ ಮೊದಲ ಮಹಿಳಾ ಪೈಲಟ್ ಎಂಬ ಕೀರ್ತಿ ಪಡೆದಿದ್ದಾರೆ.

ಸಿಂಧೂ ಒಪ್ಪಂದ ತಿದ್ದುಪಡಿ ಪಾಕ್‌ಗೆ ಭಾರತ ನೋಟಿಸ್

ದೆಹಲಿ: ಸಿಂಧೂ ನದಿ ನೀರು ಹಂಚಿಕೆ ಒಪ್ಪಂದದಲ್ಲಿ ಕೆಲವು ಬದಲಾವಣೆ ಮಾಡುವ ಉದ್ದೇಶ ಹಾಗೂ ಷರತ್ತುಗಳ ಮರು ಪರಿಪರಿಶೀಲನೆಗಾಗಿ ಪಾಕಿಸ್ತಾನಕ್ಕೆ ಭಾರತ ಬುಧವಾರ ಔಪಚಾರಿಕ ನೋಟೀಸ್ ಜಾರಿ ಮಾಡಿದೆ. ಒಪ್ಪಂದ ಜಾರಿಗೊಳಿಸುವಲ್ಲಿ ಪಾಕಿಸ್ತಾನ ಅಸಹಕಾರ ತೋರುತ್ತಿರುವ ಹಿನ್ನೆಲೆ ಭಾರತ ಈ ಕ್ರಮ ಕೈಗೊಂಡಿದೆ. 1960ರ ಸಿಂಧೂ ಜಲ ಒಪ್ಪಂದದಲ್ಲಿ ಕೆಲವು ಮಾರ್ಪಾಡುಗಳನ್ನು ಬಯಸಿ ಭಾರತ ನೋಟಿಸ್ ನೀಡಿದೆ. 2023ರ ಜನವರಿಯಲ್ಲೂ ನೋಟಿಸ್ ನೀಡಲಾಗಿತ್ತು. ಒಪ್ಪಂದ ಪ್ರಕಾರ ಭಾರತದ ಪಾಲಿಗೆ ಹಂಚಿಕೆಯಾದ ನೀರಿನ ಪ್ರಮಾಣದಲ್ಲಿ ನಿರ್ದಿಷ್ಟ ಕಾರ್ಯ ಯೋಜನೆ ಮತ್ತು ವಿನ್ಯಾಸದೊಂದಿಗೆ ಭಾರತಕ್ಕೆ ಜಲವಿದ್ಯುತ್ ಯೋಜನೆ ಕೈಗೊಳ್ಳಲು, ಅಣೆಕಟ್ಟೆ ನಿರ್ಮಿಸಲು, ಹಕ್ಕಿನ ನೀರು ಬಳಸಲು ಪೂರ್ಣ ಅಧಿಕಾರವಿದೆ. ಆದರೆ ಪಾಕ್ ಈ ಎಲ್ಲಾ ಕಾರ್ಯಗಳಿಗೂ ಪದೇ ಪದೇ ತಗಾದೆ ತೆಗೆಯುತ್ತಿದೆ. ತುಲಬುಲ್ ನ್ಯಾವಿಗೇಶನ್ ಯೋಜನೆ ರೀತಿಯ ಹಲವು ಯೋಜನೆಗೆ ಅಡ್ಡಗಾಲು ಹಾಕುತ್ತಿದೆ ಎನ್ನಲಾಗಿದೆ.

ರಾಹುಲ್ ವಿರುದ್ಧ ಮತ್ತೊಬ್ಬ ಸಂಸದ ಕಿಡಿ

ಮುಂಬೈ: ಮೀಸಲಾತಿಯ ವಿಚಾರವಾಗಿ ಅಮೆರಿಕದಲ್ಲಿ ಮಾತನಾಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಾಲಗೆಯನ್ನು ಸುಟ್ಟು ಹಾಕಬೇಕು ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯ ಅನಿಲ್ ಬೊಂಡೆ ಹೇಳಿದ್ದಾರೆ. ಶಿವಸೇನಾ ಶಾಸಕ ಸಂಜಯ್ ಗಾಯಕವಾಡ್ ಅವರು ಕೂಡ ರಾಹುಲ್ ಅವರನ್ನು ಉದ್ದೇಶಿಸಿದ ಆಕ್ಷೇಪಾರ್ಹ ಮಾತುಗಳನ್ನು ಆಡಿದ್ದಾರೆ. ಗಾಯಕವಾಡ್ ಅವರು, ರಾಹುಲ್ ಅವರ ನಾಲಗೆಯನ್ನು ಕತ್ತರಿಸಿಹಾಕುವುದಾಗಿ ಹೇಳಿರುವುದು ಸರಿಯಲ್ಲ. ರಾಹುಲ್ ಗಾಂಧಿ ಅವರು ಮೀಸಲಾತಿಯ ಬಗ್ಗೆ ಆಡಿರುವ ಮಾತುಗಳು ಆಘಾತಕಾರಿ. ಅಂಥವರ ನಾಲಗೆಯನ್ನು ಸುಡಬೇಕು ಎಂದು ಬೊಂಡೆ ಹೇಳಿದ್ದಾರೆ.

ಎಬಿಸಿಗೆ ರಿಯಾದ್ ಮ್ಯಾಥ್ಯೂ ಅಧ್ಯಕ್ಷ

ದೆಹಲಿ: ಮಲಯಾಳ ಮನೋರಮಾ ಸಮೂಹದ ನಿರ್ದೇಶಕ ಮತ್ತು ಮುಖ್ಯ ಸಹ ಸಂಪಾದಕ ರಿಯಾದ್ ಮ್ಯಾಥ್ಯೂ ಅವರು ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇಷನ್‌ನ (ಎಬಿಸಿ) 2024–25ನೇ ಸಾಲಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ರಿಯಾದ್ ಮ್ಯಾಥ್ಯೂ ಅವರು ಮೇರಿಲ್ಯಾಂಡ್ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ವಾಷಿಂಗ್ಟನ್ ಪೋಸ್ಟ್, ವಾಷಿಂಗ್ಟನ್ ಟೈಮ್ಸ್ ಮತ್ತು ಕ್ಯಾಪಿಟಲ್ ನ್ಯೂಸ್ ಸರ್ವೀಸಸ್‌ನಲ್ಲಿ ತರಬೇತಿ ಪಡೆದಿದ್ದಾರೆ. ಎಬಿಸಿಯ ಆಡಳಿತ ಮಂಡಳಿಯಲ್ಲಿ ಜಾಹೀರಾತುದಾರರು/ಗ್ರಾಹಕರನ್ನು ಪ್ರತಿನಿಧಿಸುವ ಐಟಿಸಿ ಲಿಮಿಟೆಡ್‌ನ ಕರುಣೇಶ್ ಬಜಾಜ್ ಅವರು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ ಎಂದು ಎಬಿಸಿಯು ಬುಧವಾರ ಹೇಳಿಕೆಯಲ್ಲಿ ತಿಳಿಸಿದೆ. ಮಂಡಳಿಯಲ್ಲಿ ಪ್ರಕಾಶಕ ಸದಸ್ಯರನ್ನು ಪ್ರತಿನಿಧಿಸುವ ಬೆನೆಟ್ ಕೋಲ್ಮನ್ ಆ್ಯಂಡ್ ಕಂಪನಿ ಲಿಮಿಟೆಡ್‌ನ ಮೋಹಿತ್ ಜೈನ್ ಅವರು ಕಾರ್ಯದರ್ಶಿಯಾಗಿ ಮತ್ತು ಖಜಾಂಚಿಯಾಗಿ ಜಾಹೀರಾತು ಏಜೆನ್ಸಿಗಳ ಸದಸ್ಯರ ಪ್ರತಿನಿಧಿ ಮ್ಯಾಡಿಸನ್ ಕಮ್ಯುನಿಕೇಷನ್ ಪ್ರೈವೇಟ್ ಲಿಮಿಟೆಡ್‌ನ ವಿಕ್ರಮ್ ಸಖೂಜ ಅವರನ್ನು ಅವಿರೋಧವಾಗಿ ಪುನರಾಯ್ಕೆ ಮಾಡಲಾಗಿದೆ.

{ಎಂ.ಕೆ. ಸ್ಟಾಲಿನ್} ತಮಿಳುನಾಡು ಮುಖ್ಯಮಂತ್ರಿ

ರಾಹುಲ್ ಗಾಂಧಿಗೆ ತಮ್ಮ ಅಜ್ಜಿಯ ಗತಿಯೇ ಬರಲಿದೆ ಎಂಬ ಬಿಜೆಪಿ ನಾಯಕರ ಬೆದರಿಕೆ ಮತ್ತು ರಾಹುಲ್ ನಾಲಿಗೆ ಕತ್ತರಿಸಿದವರಿಗೆ ಬಹುಮಾನ ನೀಡುವುದಾಗಿ ಶಿವಸೇನೆ ಶಾಸಕರೊಬ್ಬರು ಹೇಳಿರುವುದು ಆತಂಕದ ವಿಚಾರ. ರಾಹುಲ್ ಗಾಂಧಿ ವರ್ಚಸ್ಸು ಹೆಚ್ಚುತ್ತಿರುವುದು ಇವರಿಗೆ ಸಹಿಸಲಾಗುತ್ತಿಲ್ಲ.

ಮಂಥನ್–2024ರ ಕಾರ್ಯಕ್ರಮದಲ್ಲಿ ವಿಜೇತ ತಂಡಗಳಿಗೆ ಪ್ರಶಸ್ತಿ, ಬಹುಮಾನ ವಿತರಣೆ ಮಾಡಿದ ಮುರುಗೇಶ ನಿರಾಣಿ

ಶಿಕ್ಷಣ ಪದ್ಧತಿಯಲ್ಲಿ ಉದ್ಯಮಶೀಲತೆಗೆ ಪ್ರೋತ್ಸಾಹ ಅಗತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೇಶವನ್ನು ಪ್ರಗತಿಯ ಪಥದತ್ತ ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ಕೈಗಾರಿಕೆಗಳದ್ದಾಗಿದ್ದು, ಸರಕಾರಗಳು ಕೈಗಾರಿಕಾ ಸ್ನೇಹಿ ನೀತಿಗಳನ್ನು ರೂಪಿಸಲು ಕೈಗಾರಿಕೋದ್ಯಮಿಗಳು ಸಲಹೆ ನೀಡುವುದು ಬಹಳ ಅವಶ್ಯಕವಾಗಿದೆ ಎಂದು ಮಾಜಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ತಿಳಿಸಿದರು.

ಎಫ್‌ಕೆಸಿಸಿಐ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಮಂಥನ್ – 2024 ರ ಕಾರ್ಯಕ್ರಮದಲ್ಲಿ ವಿಜೇತ ತಂಡಗಳಿಗೆ ಪ್ರಶಸ್ತಿ ಹಾಗೂ ಬಹುಮಾನ ವಿತರಿಸಿ ಮಾತನಾಡಿ, ರಾಜ್ಯ ಹಾಗೂ ಕೇಂದ್ರ ಸರಕಾರ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಕೈಗಾರಿಕೆಗಳು ನೀಡುವ ತೆರಿಗೆ ಬಹಳ ಮುಖ್ಯವಾಗಿದೆ. ಇಂತಹ ಪ್ರಮುಖ ಪಾತ್ರ ವಹಿಸುವ ಕೈಗಾರಿಕೆಗಳಿಗೆ ಅನುಕೂಲ ಮಾಡಿಕೊಡುವ, ಬೇರೆ ದೇಶಗಳೊಂದಿಗೆ ಸಮರ್ಥವಾದ ಸ್ಪರ್ಧೆ ನೀಡಲು ಸಾಧ್ಯವಾಗುವಂತಹ ನೀತಿಗಳನ್ನು ರೂಪಿಸಲು ಕೈಗಾರಿಕೆಗಳು ಹಾಗೂ ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳು ಸಲಹೆ ನೀಡಬೇಕು. ಇವುಗಳ ಆಧಾರದ ಮೇಲೆಯೇ ಸರಕಾರಗಳು ನೀತಿಗಳನ್ನು ರೂಪಿಸುವ ಅನಿವಾರ್ಯತೆಯನ್ನು ಸೃಷ್ಟಿಸಬೇಕಾಗಿದೆ ಎಂದರು.

ನಮ್ಮ ದೇಶ ಹಾಗೂ ರಾಜ್ಯದಲ್ಲಿ ಕೈಗಾರಿಕೆಗಳು ಹಾಗೂ ಉದ್ಯಮಗಳ ಬೆಳವಣಿಗೆಗೆ ಪೂರಕವಾದ ವಾತಾವರಣವಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹೊಸ ಉದ್ದಿಮೆಗಳ ಸ್ಥಾಪನೆಗೆ ಹಾಗೂ ಇರುವಂತಹ ಉದ್ದಿಮೆಗಳ ಅಭಿವೃದ್ದಿಗೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ಇಂತಹ ಸಂದರ್ಭದಲ್ಲಿ ನಮ್ಮ ಯುವ ಜನತೆ ತಮ್ಮದೇ ಆದ ಉದ್ದಿಮೆಗಳ ಸ್ಥಾಪನೆ ಹಾಗೂ ಉದ್ಯೋಗಾವಕಾಶಗಳ ನಿರ್ಮಾಣಕ್ಕೆ ಮುಂದಾಗಬೇಕು. ಇದಕ್ಕೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಕೌಶಲ್ಯದ ಅಳವಡಿಕೆ ಹಾಗೂ ಸ್ವಂತ ಉದ್ಯಮ ಪ್ರಾರಂಭಿಸಲು ಪ್ರೋತ್ಸಾಹ ನೀಡಬೇಕಾದ ಅಗತ್ಯವಿದೆ ಎಂದರು.

ಎಫ್‌ಕೆಸಿಸಿಐ ಕೈಗೊಂಡಿರುವ ಮಂಥನ್ ಕಾರ್ಯಕ್ರಮ ಹೊಸ ಆವಿಷ್ಕಾರಗಳು, ಸಂಶೋಧನೆಗಳನ್ನ ಕೈಗೊಂಡು ಬೆರಗು ಮೂಡಿಸುತ್ತಿರುವ ಪ್ರತಿಭಾನ್ವಿತರಿಗೆ ಸೂಕ್ತ ವೇದಿಕೆ ಕಲ್ಪಿಸುತ್ತಿದೆ. ಅಲ್ಲದೇ, ಪರಿಣಿತ ಕೈಗಾರಿಕೋದ್ಯಮಿಗಳು ಅವರಿಗೆ ಮಾರ್ಗದರ್ಶನ ಮಾಡುವ ಪರಿಕಲ್ಪನೆ ಬಹಳ ವಿನೂತನವಾಗಿದೆ. ಈ ಸ್ಪರ್ಧೆಯಲ್ಲಿ ಪಾಲ್ಗೊಂಡು ಗೆಲುವು ಸಾಧಿಸಿದ ವಿದ್ಯಾರ್ಥಿಗಳು ಅಷ್ಟೇ ಅಲ್ಲದೇ ಎಲ್ಲರೂ ಸ್ವಂತ ಬಲದ ಮೇಲೆ ಹೊಸ ಉದ್ಯಮ ಪ್ರಾರಂಭಿಸುವ ತಮ್ಮ ಕನಸು ನನಸಾಗುವಂತೆ ಪ್ರಯತ್ನಪಡಬೇಕು ಎಂದು ಹೇಳಿದರು.

ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮಾತನಾಡಿ, ಪ್ರಸಕ್ತ ಸಾಲಿನ ಮಂಥನ್ – 2024 ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಭಾಗಗಳ 395 ತಂಡಗಳು ಭಾಗಿಯಾಗಿ ತಮ್ಮ ಯೋಜನೆಯನ್ನು ನಮ್ಮ ಮುಂದೆ ಪ್ರಸ್ತುತಪಡಿಸಿವೆ. ಮಂಥನ್ ಕೇವಲ ಸ್ಪರ್ಧೆಯಲ್ಲ, ಮುಂದಿನ ಪೀಳಿಗೆಯ ಉದ್ಯಮಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಕಾರ್ಯಕ್ರಮವಾಗಿದೆ. ಎಫ್‌ಕೆಸಿಸಿಐ ಪ್ರಸ್ತಾವನೆ ರೂಪಿಸುವ ನಿಟ್ಟಿನಲ್ಲಿ ಪಾಲ್ಗೊಂಡ ತಂಡಗಳಿಗೆ ಮಾರ್ಗದರ್ಶನ ನೀಡಿತ್ತು. ತಮ್ಮ ಯೋಜನೆಯನ್ನ ಉದ್ದಿಮೆಯಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಬೇಕಾದಂತಹ ಕೌಶಲ್ಯ ಹಾಗೂ ತಂತ್ರಗಳ ಬಗ್ಗೆ ಅವರಲ್ಲಿ ತಿಳುವಳಿಕೆ ನೀಡಲಾಯಿತು. ಮುಂದಿನ ದಿನಗಳಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಯಶಸ್ವಿ ಉದ್ದಿಮೆದಾರರಾಗಲಿ ಎನ್ನುವುದು ನಮ್ಮ ಉದ್ದೇಶವಾಗಿದೆ. ಯುವ ಉದ್ದಿಮೆದಾರರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ರಾಜ್ಯ ಸರಕಾರ ಎಲ್ಲಾ ಸಲಹೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದರು.

ಎಫ್‌ಕೆಸಿಸಿಐನ ಹಿಂದಿನ ಅಧ್ಯಕ್ಷ ಡಿ ಮುರಳೀಧರ್, ಪ್ರಸಿಡೆಂಟ್ ಎಲೆಕ್ಟ್ ಎಂ.ಜಿ ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷೆ ಉಮಾ ರೆಡ್ಡಿ, ಮಂಥನ್ – 2024 ರ ಅಧ್ಯಕ್ಷ ಎಂ ಕೀರ್ತನ್ ಕುಮಾರ್ ಇದ್ದರು.

ಎಫ್‌ಕೆಸಿಸಿಐ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಮಂಥನ್ – 2024 ರ ಕಾರ್ಯಕ್ರಮದಲ್ಲಿ ವಿಜೇತ ತಂಡಗಳಿಗೆ ಪ್ರಶಸ್ತಿ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ಮುರುಗೇಶ್ ನಿರಾಣಿ, ರಮೇಶ್ ಚಂದ್ರ ಲಹೋಟಿ, ಡಿ ಮುರಳೀಧರ್, ಎಂ.ಜಿ ಬಾಲಕೃಷ್ಣ, ಉಮಾ ರೆಡ್ಡಿ, ಎಂ ಕೀರ್ತನ್ ಕುಮಾರ್ ಸೇರಿದಂತೆ ಇನ್ನಿತರರು ಇದ್ದರು.

ಪ್ರಮುಖಾಂಶ

- ಸರಕಾರ ಕೈಗಾರಿಕಾ ಸ್ನೇಹಿ ನೀತಿಗಳನ್ನು ರೂಪಿಸಲು ಕೈಗಾರಿಕೋದ್ಯಮಿಗಳ ಸಲಹೆ ಅವಶ್ಯಕ
- ದೇಶ ಹಾಗೂ ರಾಜ್ಯದಲ್ಲಿ ಕೈಗಾರಿಕೆಗಳು ಹಾಗೂ ಉದ್ಯಮಗಳ ಬೆಳವಣಿಗೆಗೆ ಪೂರಕವಾದ ವಾತಾವರಣ
- ಮಂಥನ್‌ನಲ್ಲಿ ಪಾಲ್ಗೊಂಡ ಎಲ್ಲರೂ ಸ್ವಂತ ಬಲದ ಮೇಲೆ ಹೊಸ ಉದ್ಯಮ ಪ್ರಾರಂಭಿಸುವ ತಮ್ಮ ಕನಸು ನನಸಾಗುವಂತೆ ಪ್ರಯತ್ನಪಡಬೇಕು

ಮಾಹೆಗೆ ಮೊದಲ ಬಹುಮಾನ

ಪ್ರಥಮ ಸ್ಥಾನ ಪಡೆದ ಉಡುಪಿಯ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶ್ ತಂಡಕ್ಕೆ ಮೂರು ಲಕ್ಷ ರು.ಗಳ ನಗದು ಹಾಗೂ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಎರಡನೇ ಸ್ಥಾನ ಪಡೆದ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಮಹಿಳಾ ತಂಡಕ್ಕೆ ಒಂದುವರೆ ಲಕ್ಷ ರು.ನಗದು, ಮೂರನೇ ಸ್ಥಾನ ಪಡೆದ ಬೆಂಗಳೂರಿನ ಶೇಷಾದ್ರಿಪುರ ಪೋಸ್ಟ್ ಗ್ರಾಜುಯೇಟ್ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ತಂಡಕ್ಕೆ ಒಂದು ಲಕ್ಷ ರು. ನಗದು ಬಹುಮಾನ ನೀಡಿ ಗೌರವಿಸಲಾಯಿತು. ಬಿಎಂಎಸ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ಮ್ಯಾನೇಜ್‌ಮೆಂಟ್ ನ ತಂಡಕ್ಕೆ ನಾಲ್ಕನೇ ಸ್ಥಾನ, ಆರ್‌ವಿ ವಿಶ್ವವಿದ್ಯಾಲಯದ ತಂಡ ಐದನೇ ಸ್ಥಾನ, ಪಿಇಎಸ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯ ತಂಡಕ್ಕೆ ಆರನೇ ಸ್ಥಾನ, ಸಿಎಂಆರ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯ ತಂಡ ಏಳನೇ ಸ್ಥಾನ, ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನೀಯರಿಂಗ್‌ನ ತಂಡ ಎಂಟನೇ ಸ್ಥಾನ, ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಾಲಜಿಯ ತಂಡ ಒಂಬತ್ತನೇ ಸ್ಥಾನ ಹಾಗೂ ಕೃಷಿ ಕಾಲೇಜು ಧಾರವಾಡದ ವಿದ್ಯಾರ್ಥಿಗಳ ತಂಡ ಹತ್ತನೇ ಸ್ಥಾನ ಪಡೆದುಕೊಂಡಿದ್ದು, ಆಯ್ಕೆಯಾದ ಎಲ್ಲಾ ತಂಡ ಗಳಿಗೂ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಉಕ್ಕು ಕ್ಷೇತ್ರದ ರಕ್ಷಣೆಗೆ ಅಗತ್ಯ ಕ್ರಮ: ಎಚ್.ಡಿ.ಕುಮಾರಸ್ವಾಮಿ ಭರವಸೆ

ಚೀನಾ ಉಕ್ಕಿನ ಮೇಲೆ ಆಮದು ಸುಂಕ

ದೆಹಲಿ: ಚೀನಾದ ಅಗ್ಗದ ಉಕ್ಕಿನ ಸವಾಲು ಸೇರಿದಂತೆ ದೇಶೀಯ ಉಕ್ಕು ಕ್ಷೇತ್ರದ ರಕ್ಷಣೆಗೆ ಅಗತ್ಯವಾದ ಎಲ್ಲ ಕ್ರಮವನ್ನು ಕೇಂದ್ರ ಸರಕಾರ ಕೈಗೊಳ್ಳಲಿದೆ ಎಂದು ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ದೇಶೀಯ ಮಿಶ್ರಲೋಹ ತಯಾರಕರ ಒಕ್ಕೂಟ (ಐಎಫ್‌ಎಪಿಎ) ದೆಹಲಿಯಲ್ಲಿ ಹಮ್ಮಿಕೊಂಡಿದ್ದ ದೇಶೀಯ ಮಿಶ್ರಲೋಹ ಉದ್ಯಮ ಸಮ್ಮೇಳನದಲ್ಲಿ ಪಾಲ್ಗೊಂಡ ನಂತರ ಚೀನಾದಿಂದ ಅನಿಯಂತ್ರಿತವಾಗಿ ಆಮದಾಗುತ್ತಿರುವ ಉಕ್ಕಿನ ಸಂಬಂಧಿತ ಪ್ರಶ್ನೆಗೆ, ಉಕ್ಕಿನ ಮೇಲೆ ಹೆಚ್ಚಿನ ಆಮದು ಸುಂಕ ವಿಧಿಸುವ ಬಗ್ಗೆ ಆದಷ್ಟು ಬೇಗ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಚರ್ಚೆ ನಡೆಸಲಾಗುವುದು. ಯಾವುದೇ ಕಾರಣಕ್ಕೂ ದೇಶೀಯ ಉಕ್ಕು ಕ್ಷೇತ್ರ ಅಪಾಯಕ್ಕೆ ಸಿಲುಕಲು ಬಿಡುವುದಿಲ್ಲ ಎಂದರು.

ಉಕ್ಕಿನ ಕ್ಷೇತ್ರದ ಜತೆಗೆ ದೇಶೀಯ ಮಿಶ್ರಲೋಹ ಉದ್ಯಮ ರಕ್ಷಿಸಬೇಕಾದ ಹೊಣೆ ನಮ್ಮ ಮೇಲಿದೆ. ಸವಾಲುಗಳಿಂದ ಉದ್ಯಮಕ್ಕೆ ರಕ್ಷಣೆ ಕೊಡಬೇಕಿದೆ. ಈ ನಿಟ್ಟಿನಲ್ಲಿ ಉಕ್ಕಿನ ಮೇಲೆ ಕನಿಷ್ಠ ಪ್ರಮಾಣದ ಆಮದು ಸುಂಕ ವಿಧಿಸುವ ಬಗ್ಗೆ ಹಣಕಾಸು ಸಚಿವರ ಜತೆ ಸಮಾಲೋಚನೆ ನಡೆಸಲಾಗುವುದು. ಈ ಬಗ್ಗೆ ಪ್ರಾಥಮಿಕ ಹಂತದ ಚರ್ಚೆ ನಡೆಯುತ್ತಿವೆ. ವಿತ್ತ ಸಚಿವರನ್ನು ಒಪ್ಪಿಸುವ ಕೆಲಸ ಮಾಡಲಾಗುವುದು. ದೇಶದ ಆರ್ಥಿಕತೆಯ ಬೆನ್ನೆಲುಬು ಉಕ್ಕಿನ ಕ್ಷೇತ್ರ. ಅದಕ್ಕೆ ಶಕ್ತಿ ತುಂಬುವ ಕೆಲಸ ಮಾಡಲು ಸಚಿವಾಲಯದಲ್ಲಿ ನಿರಂತರ ಚರ್ಚೆಗಳು ನಡೆದಿವೆ ಎಂದರು. ಭಾರತೀಯ ಮ್ಯಾಂಗನೀಸ್ ಅದಿರುವ ಸಂಸ್ಥೆಯ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಅಜಿತ್ ಕುರ್ಮಾ ಸಕ್ಸೇನಾ ಹಾಗೂ ದೇಶೀಯ ಮಿಶ್ರಲೋಹ ತಯಾರಕರ ಒಕ್ಕೂಟದ ಅಧ್ಯಕ್ಷ ಮನೀಶ್ ಸರಡಾ ಉಪಸ್ಥಿತರಿದ್ದರು.

ವೈಜಾಗ್ ಉಳಿಸಲು ಕ್ರಮ

ವಿಶಾಖಪಟ್ಟಣದ ರಾಷ್ಟ್ರೀಯ ಉಕ್ಕು ಕಾರ್ಖಾನೆ -ಆರ್‌ಎನ್‌ಐಎಲ್ (ವೈಜಾಗ್ ಸ್ಟೀಲ್) ಖಾಸಗೀಕರಣ ಮಾಡಬಾರದು ಎಂದು ಒತ್ತಾಯಿಸಿ ನಡೆದ ಪ್ರತಿಭಟನೆಗಳು ನನ್ನ ಗಮನಕ್ಕೆ ಬಂದಿದೆ. ನಮ್ಮ ಮುಂದೆ ಸವಾಲುಗಳು ಇವೆ. ಆ ಕಾರ್ಖಾನೆ ಸುಸ್ಥಿತಿಗೆ ತಂದು ಉಳಿಸುವ ನಿಟ್ಟಿನಲ್ಲಿ ಸರ್ವ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಸಿಎಂ, ಡಿಸಿಎಂಗೆ ದಿನೇಶ್ ಗೂಳಿಗೌಡ ಅಭಿನಂದನೆ

ಶಿವಪುರದ ಸ್ಮಾರಕ ಸೌಧಕ್ಕೆ 2 ಕೋಟಿ

ಬೆಂಗಳೂರು: ಮಂಡ್ಯ ಜಿಲ್ಲೆ ಮದ್ದೂರಿನ ಶಿವಪುರದ ಧ್ವಜ ಸತ್ಯಾಗ್ರಹ ಸ್ಮಾರಕ ಸೌಧ ಪುನರುಜ್ಜೀವನಕ್ಕೆ 2 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶಿಸಿದ್ದು, ಇದಕ್ಕಾಗಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅಭಿನಂದನೆ ಸಲ್ಲಿಸಿದ್ದಾರೆ.

1937ರಲ್ಲಿ ಶಿವಪುರದಲ್ಲಿ ಹೋರಾಟಗಾರರಾದ ಎನ್. ವೀರಣ್ಣಗೌಡ, ಕೊಪ್ಪದ ಜೋಗಿಗೌಡ, ಸಾಹುಕಾರ ಚೆನ್ನಯ್ಯ ನೇತೃತ್ವದಲ್ಲಿ ನಡೆದಿದ್ದ ಹೋರಾಟದ ನೆನಪಿಗೆ ಅಲ್ಲಿ ಸೌಧ ನಿರ್ಮಾಣ ಮಾಡಲಾಗಿತ್ತು.

ಆದರೆ, ಸೌಧ ನಿರ್ವಹಣೆ ಇಲ್ಲದೇ ಹಾಳು ಬಿದ್ದಿದೆ. ಸ್ಮಾರಕದ ಒಳಗಡೆ ಇರುವ ಚಿತ್ರಪಟಗಳು ಹಾಳಾಗಿವೆ. ಉದ್ಯಾನವನ ನಿರ್ವಹಣೆ ಇಲ್ಲದೇ ಸೊರಗಿದೆ. ಸಂಗೀತ ಕಾರಂಜಿ ಕಾರ್ಯ ನಿರ್ವಹಿಸುತ್ತಿಲ್ಲ. ಭವನದ ಬಾಗಿಲು ಸದಾ ಹಾಕಿರುವುದರಿಂದ ಪ್ರವಾಸಿಗರಿಗೆ, ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ ಎಂದು ದಿನೇಶ ಗೂಳಿಗೌಡ ಅವರು ಸೆ.9ರಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರು.

ಸ್ವಾತಂತ್ರ್ಯ ಪೂರ್ವ ಹೋರಾಟದಲ್ಲಿ ಶಿವಪುರ ಧ್ವಜ ಸತ್ಯಾಗ್ರಹದ ಪಾತ್ರ ಅವಿಸ್ಮರಣೀಯ. ಇದರ ನೆನಪಿಗಾಗಿ ಶಿವಪುರ ಧ್ವಜ ಸತ್ಯಾಗ್ರಹ ಸೌಧವನ್ನು ನಿರ್ಮಿಸಿದ್ದು, 1979ರ ಸೆಪ್ಟೆಂಬರ್26ರಂದು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಮತ್ತು ಕೆಂಗಲ್ ಹನುಮಂತಯ್ಯ ಅವರು ಉದ್ಘಾಟಿಸಿದ್ದರು.

ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಗ್ರಂಥಾಲಯಕ್ಕೆಂದು ಸ್ಮಾರಕ ಭವನ ನಿರ್ಮಿಸಿದ್ದು ಬಿಟ್ಟರೆ, ಬೇರೆ ಕಾರ್ಯವಾಗಿಲ್ಲ ಎಂದು ಗಮನ ಸೆಳೆದಿದ್ದರು. ಇದನ್ನು ಪರಿಗಣಿಸಿದ ಸಿದ್ದರಾಮಯ್ಯ ಅವರು 2 ಕೋಟಿ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದ್ದಾರೆ.

ಇದಕ್ಕಾಗಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಿಗೆ ದಿನೇಶ್ ಗೂಳಿಗೌಡ ಅಭಿನಂದನೆ ಸಲ್ಲಿಸಿದ್ದಾರೆ.

ರಾಜ್ಯಾದ್ಯಂತ ಪ್ರವಾಸ: ರಾಜ್ಯಾಧ್ಯಕ್ಷ ವಿಜಯೇಂದ್ರ

ಟೇಕ್‌ಆಫ್ ಆಗದ ಅಭಿಯಾನ; ಎಚ್ಚೆತ್ತ ರಾಜ್ಯ ಬಿಜೆಪಿ ಘಟಕ

ಬೆಂಗಳೂರು: ಬಿಜೆಪಿಯಲ್ಲಿ ಅಧ್ಯಕ್ಷರ ಬದಲಾವಣೆಯ ಕೂಗಿನ ಮಧ್ಯೆಯೇ, ನಿರೀಕ್ಷಿತ ಮಟ್ಟದಲ್ಲಿ ಸದಸ್ಯತ್ವ ಅಭಿಯಾನ ನಡೆದಿಲ್ಲ ಎಂಬ ಕೂಗು ಎದ್ದಿದೆ. ಸದಸ್ಯತ್ವ ನೋಂದಣಿಗೆ ಸಂಬಂಧಿಸಿದಂತೆ ತೀವ್ರ ಗದ್ದಲ ಶುರುವಾಗುತ್ತಿದ್ದಂತೆ ಎಚ್ಚೆತ್ತಿರುವ ರಾಜ್ಯ ಬಿಜೆಪಿ ಘಟಕ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಅಭಿಯಾನಕ್ಕೆ ವೇಗ ನೀಡಲು ಮುಂದಾಗಿದೆ. ರಾಜ್ಯ ಬಿಜೆಪಿಯಲ್ಲಿ ತಮ್ಮ ತಮ್ಮಲ್ಲೇ ಗುಂಪು ಮಾಡಿಕೊಂಡಿದ್ದಾರೆ ಎಂದು ಹಿರಿಯ ನಾಯಕರು ಅವಲತ್ತುಕೊಳ್ಳುತ್ತಿರುವಾಗಲೇ ಪಕ್ಷದೊಳಗೆ ಅಸಮಾಧಾನ ತೀವ್ರಗೊಳ್ಳುತ್ತಿದೆ. ಇತ್ತ ಕಲಬುರಗಿಯಲ್ಲಿ ಮಾತನಾಡಿರುವ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ , ರಾಜ್ಯದಲ್ಲಿ ಸದಸ್ಯತ್ವ ಅಭಿಯಾನ ಯಶಸ್ವಿಗೊಳಿಸುವ ಗುರಿ ನಮ್ಮ ಮುಂದಿದೆ. ಅದನ್ನು ಇನ್ನೂ ಚುರುಕುಗೊಳಿಸಬೇಕಿದೆ. ಮುಂದಿನ ಒಂದೂವರೆ ತಿಂಗಳ ಕಾಲ ಸದಸ್ಯತ್ವ ಅಭಿಯಾನದಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಲಾಗುವುದು. ಈ ಕಾರ್ಯದಲ್ಲಿ ನಮ್ಮ ಕಾರ್ಯಕರ್ತರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲಿದ್ದಾರೆ ಎಂದಿದ್ದಾರೆ.

ಈ ಸಂಬಂಧ ತಮ್ಮ ಹೇಳಿಕೆ ನೀಡಿರುವ ವಿಜಯೇಂದ್ರ, ಕರ್ನಾಟಕದಲ್ಲಿ ದಾಖಲೆಯ ಪ್ರಮಾಣದಲ್ಲಿ ಸದಸ್ಯರನ್ನು ಸೇರ್ಪಡೆಗೊಳಿಸಿ ಈ ಅಭಿಯಾನಕ್ಕೆ ಮಹತ್ವದ ಕೊಡುಗೆ ನೀಡಬೇಕೆಂದು ಮಹಾ ಸಂಕಲ್ಪ ಮಾಡೋಣ ಎಂದಿದ್ದಾರೆ. ಸದಸ್ಯತ್ವ ಕಾರ್ಯ ಮತ್ತಷ್ಟು ವೇಗ ಪಡೆಯಲು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುವೆ. ಈ ವೇಳೆ ಸದಸ್ಯತ್ವ ನೋಂದಣಿಯತ್ತ ಕಾರ್ಯಕರ್ತರು ಪರಿಪೂರ್ಣವಾಗಿ ಕ್ರೋಢೀಕರಣವಾಗಿದಬೇಕು. ಈ ವೇಳೆಯಲ್ಲಿ ಹಾರ, ತುರಾಯಿ, ಶಾಲು ಸಮರ್ಪಿಸುವುದಕ್ಕೆ ತಿಲಾಂಜಲಿ ನೀಡುವಂತೆ ಅವರು ಕೋರಿದ್ದಾರೆ.

ವ್ಯಾಪಾರಿಗಳ ಸ್ಥಳವಾಗಿ ಮಾರ್ಪಟ್ಟ ಪಾದಚಾರಿ ಮಾರ್ಗ | ಹಲವೆಡೆ ಪಾರ್ಕಿಂಗ್, ತ್ಯಾಜ್ಯ ರಾಶಿ

ಇದು ಪಾದಚಾರಿ ಮಾರ್ಗವಯ್ಯ; ಜನರೇ ಓಡಾಡಬೇಕಯ್ಯ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಪಾದಚಾರಿ ಮಾರ್ಗಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಅಂಗಡಿಗಳನ್ನಿಟ್ಟುಕೊಂಡಿದ್ದು, ಸಾರ್ವಜನಿಕರಿಗೆ ಸಂಚರಿಸಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ.

ವಸತಿ ಪ್ರದೇಶಗಳಲ್ಲಿ, ಪಾದಚಾರಿ ಮಾರ್ಗಗಳು ಜನರ ಓಡಾಡಕ್ಕೆ ಮಾತ್ರ ಬಳಕೆಯಾಗಬೇಕೆಂಬುದು ಸರಕಾರದ ನಿಯಮವಾಗಿದೆ. ವಸತಿ ಪ್ರದೇಶ ಗಳಲ್ಲಿ ಪಾದಚಾರಿ ಮಾರ್ಗಗಳನ್ನು ವಾಹನಗಳ ನಿಲ್ದಾಣವನ್ನಾಗಿ ಬಳಸುತ್ತಿದ್ದು, ಜತೆಗೆ ಮರದ ಕುಂಡಗಳನ್ನು, ಇಟ್ಟಿಗೆಗಳು, ಮರಳು, ತ್ಯಾಜ್ಯ ವಸ್ತುಗಳಂತಹ ನಿರ್ಮಾಣ ಸಾಮಾಗ್ರಿಗಳನ್ನು ಪಾದಚಾರಿ ಮಾರ್ಗಗಳಲ್ಲಿ ಎಸೆಯುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ತೀವ್ರ ಸಮಸ್ಯೆ ಯಾಗುತ್ತಿದೆ ಎನ್ನುವ ಆರೋಪ ಕೇಳಿಬಂದಿದೆ.

ಕನಕಪುರ ರಸ್ತೆಯ ನಿವಾಸಿಯೊಬ್ಬರು ಮಾತನಾಡಿ, ಕನಕಪುರ ರಸ್ತೆ ಹಾಗೂ ಅಕ್ಕಪಕ್ಕದ ರಸ್ತೆಗಳಲ್ಲಿ ಫುಟ್‌ಪಾತ್‌ಗಳ ಅತಿಕ್ರಮಣ ವಿಪ ರೀತವಾಗಿದ್ದು, ಹಲವಾರು ವಾಣಿಜ್ಯ ಚಟು ವಟಿಕೆಗಳು ಮತ್ತು ಅವುಗಳಲ್ಲಿ ಯಾವುದೂ ಮುಖ್ಯ ರಸ್ತೆ ಮತ್ತು ವಸತಿ ಪ್ರದೇಶಗಳಲ್ಲಿ ತಮ್ಮ ಆವರಣದೊಳಗೆ ಪಾರ್ಕಿಂಗ್ ಸೌಲಭ್ಯ ಗಳನ್ನು ಮಾಡಿಲ್ಲ, ಸಾರ್ವಜನಿಕ ಕಾಲುದಾರಿ ಗಳನ್ನು ಅವರ ಖಾಸಗಿ ಪಾರ್ಕಿಂಗ್ ಸ್ಥಳವಾಗಿ ಪರಿವರ್ತಿಸಲಾಗಿದೆ. ಸಾರಕ್ಕಿಯಿಂದ ನೈಸ್ ರಸ್ತೆವರೆಗಿನ ಕನಕಪುರ ಮುಖ್ಯರಸ್ತೆ ಮತ್ತು ವಸಂತಪುರ ಮುಖ್ಯರಸ್ತೆಯ ಅಕ್ಕಪಕ್ಕದ ರಸ್ತೆ ಗಳು, ರಾಗುವನಹಳ್ಳಿ 80 ಅಡಿ ರಸ್ತೆ, ವಾಜರ ಹಳ್ಳಿ 100 ಅಡಿ ರಸ್ತೆ, ಕೋಣನಕುಂಟೆ ಮುಖ್ಯ ರಸ್ತೆ ಹೀಗೆ ಅನೇಕ ಕಡೆ ನಿಯಮ ಗಳನ್ನು ಗಾಳಿಗೆ ತೂರಲಾಗಿದೆ. ವಾಣಿಜ್ಯ ಸಂಸ್ಥೆಗಳ ಜತೆಗೆ ತರಕಾರಿ ಮಾರಾಟಗಾರರು, ಪಾನಿ ಪುರಿ ಅಂಗಡಿಗಳು, ಇತರ ತಿನಿಸು ಕೇಂದ್ರಗಳು, ಪಾನ್ ಬೀಡಾ ಅಂಗಡಿಗಳು ಮತ್ತು ನಂದಿನಿ ಬೂತ್‌ಗಳು ಕೂಡಾ ಪಾದಚಾರಿ ಮಾರ್ಗ ಗಳನ್ನು ಅತಿಕ್ರಮಿಸಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಾಲಿಕೆಯು ಪಾದಚಾರಿ ಮಾರ್ಗಗಳಲ್ಲಿ ಟೈಲ್ಸ್‌ಗಳನ್ನು ಹಾಕಲು ಲಕ್ಷ ರುಪಾಯಿಗಳನ್ನು ಖರ್ಚು ಮಾಡಿದರೆ, ಅದನ್ನು ಮಾರಾಟಗಾರರ ಅವಶ್ಯಕತೆಗೆ ಅನುಗುಣವಾಗಿ ಸ್ವಲ್ಪ ಸಮಯದೊಳಗೆ ಮಾರ್ಪಡಿಸಲಾಗುತ್ತದೆ. ಶೇ.95ರಷ್ಟು ಪಾದಚಾರಿ ಮಾರ್ಗಗಳು ಬಳಕೆಗೆ ಯೋಗ್ಯವಾಗಿಲ್ಲ, ಪಾದಚಾರಿಗಳು ಅನಿವಾರ್ಯವಾಗಿ ರಸ್ತೆಗಳಲ್ಲಿ ಓಡಾಡುವುದರಿಂದ ಅತಿವೇಗದ ವಾಹನಗಳಿಗೆ ಸಿಕ್ಕಿ ಅಪಘಾತವಾಗುವ ಸಾಧ್ಯತೆ ಹೆಚ್ಚಾಗಿದೆ ಎಂದರು.

ಪಾದಚಾರಿ ಮಾರ್ಗಕ್ಕಾಗಿ 60 ಲಕ್ಷ ರು. ಮೀಸಲು

ವಸತಿ ಪ್ರದೇಶಗಳಲ್ಲಿ ವ್ಯಾಪಕವಾಗಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದ್ದು, ಕಚೇರಿಗಳು, ಅಂಗಡಿಗಳು, ಗೋಡೌನ್‌ಗಳು ತಲೆಯೆತ್ತುತ್ತಿವೆ. ಇದರಿಮದ ಗ್ರಾಹಕರು ತಮ್ಮ ವಾಹನಗಳನ್ನು ಪಾದಚಾರಿ ಮಾರ್ಗ ಗಳಲ್ಲಿ ನಿಲ್ಲಿಸಿ ಪಾದಚಾರಿಗಳು ಸಂಚರಿಸದಂತೆ ಮಾಡುತ್ತಿದ್ದಾರೆ ಎಂದು ನಿವಾಸಿಗಳು ಹೇಳಿದ್ದಾರೆ. ಒಂದೆರಡು ವರ್ಷಗಳ ಹಿಂದೆ ಪಾಲಿಕೆಯು ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಪ್ರತಿ ವಾರ್ಡ್ ಸಮಿತಿಗೆ ನೀಡಲಾದ 60 ಲಕ್ಷ ರು. ಬಜೆಟ್‌ನಲ್ಲಿ ಮೀಸಲಿಟ್ಟದ್ದು ಈ ಮೂಲಕ ಪ್ರಗತಿಪರ ಹೆಜ್ಜೆಯನ್ನು ತೆಗೆದು ಕೊಳ್ಳಲಾಗಿದೆ. ಈ ನೀತಿಯು ವಿನ್ಯಾಸ ಮತ್ತು ಅನುಷ್ಠಾನಕ್ಕೆ ಹೆಚ್ಚಿನ ಹೂಡಿಕೆಯ ದೃಷ್ಟಿ ಯಿಂದ ಮತ್ತಷ್ಟು ವಿಕಸನಗೊಳ್ಳಬೇಕು. ಬೆಂಗಳೂರಿನಾದ್ಯಂತ ಉತ್ತಮ ಗುಣಮಟ್ಟದ ಕಾಲುದಾರಿಗಳು ರೂಪುಗೊಳ್ಳಬೇಕು. ಪಾದಚಾರಿ ಮಾರ್ಗಗಳನ್ನು ಬಳಸಿಕೊಳ್ಳುವ ಮತ್ತು ನಿರ್ವಹಿಸುವ ನಂತರದ ಹಂತವೂ ಅಷ್ಟೇ ಮುಖ್ಯವಾಗಿದೆ ಎಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪುಣೆಯ ಇ–ವೈ ಕಂಪನಿಗೆ ತಾಯಿ ನೋವಿನ ಪತ್ರ

ಕೆಲಸದ ಒತ್ತಡಕ್ಕೆ ನವ ಉದ್ಯೋಗಿ ಸಾವು!



ಪುಣೆ: ಮಹಾರಾಷ್ಟ್ರದಲ್ಲಿರುವ ಬಹುರಾಷ್ಟ್ರೀಯ ಕಂಪನಿ 'ಅರ್ನೆಸ್ಟ್ ಆ್ಯಂಡ್ ಯಂಗ್'(ಇವೈ)ನ ನವ ಉದ್ಯೋಗಿ ಯುವತಿ ಕೆಲಸಕ್ಕೆ ಸೇರಿದ 4 ತಿಂಗಳಲ್ಲೇ ಕೆಲಸದ ಅತಿಯಾದ ಒತ್ತಡದಿಂದ ಸಾವನ್ನಪ್ಪಿದ್ದಾಳೆ. ಪರಿಣಾಮ ಕಚೇರಿಗಳಲ್ಲಿ ಕೆಲಸದ ಒತ್ತಡ, ಋಣಾತ್ಮಕ ವಾತಾವರಣ ಕುರಿತು ಜಾಲತಾಣದಲ್ಲಿ ಚರ್ಚೆ ಶುರುವಾಗಿದೆ. ಇಂತಹುದೇ ಸಮಸ್ಯೆಯಿಂದ ಪರಿತಪಿಸುವ ನೂರಾರು ಉದ್ಯೋಗಿಗಳೂ ತಮ್ಮ ಸಮಸ್ಯೆ ಹೇಳಿಕೊಂಡಿದ್ದಾರೆ.

ಅನ್ನಾ ಸಬಾಸ್ಟಿಯನ್ ಪೆರಾಯಿಲ್ (26) 'ಇ–ವೈ' ಕಂಪನಿಗೆ 2024ರ ಮಾ.19ರಂದು ಸೇರಿದ್ದರು. 4 ತಿಂಗಳಲ್ಲೇ(ಜು.20) ಕೆಲಸದ ಒತ್ತಡ ಸಹಿಸ ಲಾಗದೇ ಸಾವನ್ನಪ್ಪಿದರು. ಆಕೆಯ ಸಾವಿಗೆ ಸಂಸ್ಥೆಯ ಅಧಿಕ ಕೆಲಸದ ಒತ್ತಡವೇ ಕಾರಣ ಎಂದು ತಾಯಿ ಅನಿತಾ ಆಗಸ್ಟೀನ್ ಆರೋಪಿಸಿ ಕಂಪನಿ ಮುಖ್ಯಸ್ಥರಿಗೆ ಪತ್ರ ಬರೆದಿದ್ದಾರೆ.

'ಅನ್ನಾ ಶಾಲೆ-ಕಾಲೇಜಲ್ಲೆಲ್ಲಾ ಟಾಪರ್. ಮೊದಲ ನೌಕರಿ ಎಂಬ ಖುಷಿಯಲ್ಲೇ ಕೆಲಸಕ್ಕೆ ಸೇರಿದ್ದಳು. ಬಹಳಷ್ಟು ಶ್ರಮವಹಿಸಿ ನಿಮ್ಮ ಕಂಪನಿಯಲ್ಲಿ ಕೆಲಸ ಮಾಡಿದ್ದಾಳೆ. ಆದರೆ ಅಧಿಕ ಕೆಲಸದ ಒತ್ತಡ ಹಾಕಿದ್ದ ರಿಂದಲೇ ಅಸುನೀಗಿದ್ದಾಳೆ. ಆಕೆಯ ತಂಡದಲ್ಲೇ ಇದ್ದ ಹಲವರು ಈಗಾಗಲೇ ಒತ್ತಡ ಸಹಿಸಲಾಗದೇ ಕೆಲಸ ಬಿಟ್ಟಿದ್ದಾರೆ. ಅನ್ನಾ ಮಾತ್ರ ಎಷ್ಟು ಸಾಧ್ಯವೋ ಅಷ್ಟು ಶ್ರಮ ವಹಿಸಿ ತಡರಾತ್ರಿ. ವರೆಗೂ ಕೆಲಸ ಮಾಡಿದ್ದಳು. ವಾರಾತ್ಯದಲ್ಲೂ ಬಿಡುವು ನೀಡದೇ ಆಕೆಯ ಮ್ಯಾನೇಜರ್ ಕೆಲಸ ತೆಗೆದಿದ್ದಾರೆ. ನಿತ್ಯವೂ ಮನೆಗೆ ತಡವಾಗಿ ಖಿನ್ನತೆಯಿಂದಲೇ ಬರುತ್ತಿದ್ದಳು. ಮಗಳ ಸಾವಿಗೆ ಈ ಕೆಲಸವೇ ಕಾರಣವಾಗಬಹುದು ಎಂದು ತಿಳಿದಿರಲಿಲ್ಲ. ಆಕೆ ಸತ್ತಾಗ ಸಂಸ್ಥೆಯಿಂದ ಒಬ್ಬರೂ ಬರಲಿಲ್ಲ. ಸಾಂತ್ವನದ ಪತ್ರವೂ ಇಲ್ಲ' ಎಂದು ಅನಿತಾ ನೋವಿನಿಂದ ಬರೆದಿದ್ದಾರೆ. ನನ್ನ ಮಗಳ ಸಾವು ಇ–ವೈ ಕಂಪನಿಯ ಕೆಲಸದ ಅವಧಿ ಬದಲಾವಣೆಗಾದರೂ ಪಾಠವಾಗಲಿ ಎಂದೂ ಆಶಿಸಿದ್ದಾರೆ.

ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳ ಎಚ್ಚರಿಕೆ

ಬೇಡಿಕೆ ಈಡೇರಿಸದಿದ್ದರೆ ಅ.4ರಿಂದ ಗ್ರಾ.ಪಂ. ಸೇವೆ ಸ್ಥಗಿತ; ನೌಕರರ ಎಚ್ಚರಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧಿಕಾರಿಗಳ ಮತ್ತು ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸದಿದ್ದರೆ ಅ.4 ರಿಂದ ಗ್ರಾಮ ಪಂಚಾಯತ್ ಸೇವೆಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳು ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ರಾಜು ವಾರದ, ಗ್ರಾಮ ಪಂಚಾಯತ್ ಸದಸ್ಯರ ಒಕ್ಕೂಟದ ರಾಜ್ಯಾಧ್ಯಕ್ಷ ಕಾಡಶೆಟ್ಟಿ ಹಳ್ಳಿ ಸತೀಶ್, ಪತ್ರಾಂಕಿತ ಅಧಿಕಾರಿಗಳ ಸಂಘದ ಅಧ್ಯಕ್ಷ ಡಿ.ಎ. ರಮೇಶ್ ಮತ್ತಿತರರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಮಾಡಿದ ಮನವಿಗಳಿಗೆ ಸೂಕ್ತ ಸ್ಪಂದನೆ ದೊರೆತಿಲ್ಲ. ಆದರೆ ಎಲ್ಲಾ ಸಮಸ್ಯೆಗಳಿಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಗಳನ್ನೇ ಹೊಣೆ ಮಾಡಲಾಗುತ್ತಿದೆ. ಈ ಧೋರಣೆಯನ್ನು ಖಂಡಿಸಿ ಹೋರಾಟ ಮಾಡುತ್ತೇವೆ ಎಂದರು.

ಪಂಚಾಯತ್‌ಗಳ ಜನಸಂಖ್ಯೆ ಎರಡರಿಂದ ಮೂರು ಪಟ್ಟು ಹೆಚ್ಚಾಗಿದ್ದರೂ 30 ವರ್ಷಗಳ ಹಿಂದಿನಂತೆ ಸಿಬ್ಬಂದಿ ಹೊಂದಿದ್ದು, ಇದರಿಂದ ಎಲ್ಲಾ ಹೊರೆ ನಮ್ಮ ಮೇಲೆ ಬೀಳುತ್ತಿದೆ. ದಿನದಿಂದ ದಿನಕ್ಕೆ ಕೆಲಸದ ಒತ್ತಡ ತೀವ್ರಗೊಳ್ಳುತ್ತಿದೆ.

ಮೂರು ವರ್ಷಗಳಿಂದ ಖಾಲಿಯಾಗಿರುವ ಪಂಚಾಯತ್ ಸಿಬ್ಬಂದಿಯನ್ನು ಭರ್ತಿ ಮಾಡಿಕೊಂಡಿಲ್ಲ. ಕಾರ್ಯದರ್ಶಿ ಮತ್ತು ಲೆಕ್ಕ ಪರಿಶೋಧಕರ ಹುದ್ದೆಗಳು ಖಾಲಿ ಇವೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವಾಗ ಪಿಡಿಒಗಳ ಸಲಹೆಗಳನ್ನು ಪರಿಗಣಿಸಿಲ್ಲ. ಅವೈಜ್ಞಾನಿಕ ನಿಯಮಗಳನ್ನು ಅಳವಡಿಸಲಾಗಿದೆ. ಕುಂದುಕೊರತೆ ಪ್ರಾಧಿಕಾರವನ್ನು ನೆಪಮಾತ್ರಕ್ಕೆ ರಚಿಸಿ ಕೈಬಿಡಲಾಗಿದೆ. ನಮ್ಮ ಅಹವಾಲುಗಳಿಗೆ ಮನ್ನಣೆ ದೊರೆಯುತ್ತಿಲ್ಲ ಎಂದು ಹೇಳಿದರು.

ಎಲ್ಲಾ ಪಿಡಿಒ ಹುದ್ದೆಗಳನ್ನು ಗೆಜೆಟೆಡ್ ಬಿ ಗುಂಪಿಗೆ ಉನ್ನತೀಕರಣ ಮಾಡಬೇಕು. ಒಂದೇ ತಾಲೂಕಿನಲ್ಲಿ 7 ವರ್ಷ ಸೇವೆ ಸಲ್ಲಿಸಿದವರನ್ನು ವರ್ಗಾವಣೆ ಮಾಡುವ ನಿಯಮವನ್ನು ಬಲವಂತವಾಗಿ ಹೇರಲಾಗಿದೆ. ಸರಕಾರದ ಒತ್ತಡ ಕಾರ್ಯತಂತ್ರದ ಪರಿಣಾಮ 21 ಪಿಡಿಒಗಳು ಇತ್ತೀಚೆಗೆ ಜೀವ ಕಳೆದುಕೊಂಡಿದ್ದಾರೆ. ಸಾಕಷ್ಟು ಆರೋಗ್ಯ ಸಮಸ್ಯೆಗಳಿಗೆ ಸಿಲುಕಿದ್ದು, ಪಿಡಿಒಗಳ ಇಚ್ಛೆ ಇಲ್ಲದೆ ಬಲವಂತವಾಗಿ ಸಾರ್ವಜನಿಕ ಹಿತಾಸಕ್ತಿ ಹೆಸರಿನಲ್ಲಿ ವರ್ಗಾವಣೆ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ವರ್ಗಾವಣೆ ನಿಯಮಗಳಲ್ಲಿ ಬದಲಾವಣೆಗೂ ಮುನ್ನ ಸಂಘದ ಸಲಹೆ ಪಡೆಯಬೇಕು. 7 ವರ್ಷ ಪೂರ್ಣಗೊಂಡಿರುವವರನ್ನು ವರ್ಗಾವಣೆ ಮಾಡುವುದನ್ನು ಕೈಬಿಡಬೇಕು.

ಪಂಚಾಯತಿಗಳಿಗೆ ಅಗತ್ಯ ಪೂರಕ ಸಿಬ್ಬಂದಿಯನ್ನು ನೇಮಿಸಬೇಕು. ಪಿಡಿಒ ಜ್ಯೇಷ್ಠತಾ ಪಟ್ಟಿ ಅಂತಿಮಗೊಳಿಸಿ ಆದೇಶ ಹೊರಡಿಸಬೇಕು. ಪೊಲೀಸ್ ಇಲಾಖೆ ಮಾದರಿಯಲ್ಲಿ ಕುಂದು ಕೊರತೆ ಪ್ರಾಧಿಕಾರ ಸ್ಥಾಪಿಸಬೇಕು ಎಂದರು.

ಈ ವೇಳೆ ಗ್ರೇಡ್ 2 ಕಾರ್ಯದರ್ಶಿಗಳ ಸಂಘದ ಅಧ್ಯಕ್ಷ ಜಗದೀಶ್ ಮಣ್ಣನವರ್, ಲೆಕ್ಕ ಸಹಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹಾಂತೇಶ್ ಖೋತಾ, ಡಾಟಾ ಎಂಟ್ರಿ ಆಪರೇಟರ್ ಸಂಘದ ಅಧ್ಯಕ್ಷ ಭೀಮರೆಡ್ಡಿ ಪಾಟೀಲ್, ಕರವಸೂಲಿಗಾರರ ಸಂಘದ ಅಧ್ಯಕ್ಷ ಎಚ್. ಲಿಂಗೇಶ್, ನೀರಗಂಟಿ ವೃಂದ ಸಂಘದ ಅಧ್ಯಕ್ಷ ರಾಮಕೃಷ್ಣಪ್ಪ ಮತ್ತಿತರರು ಇದ್ದರು.

ಚಿತ್ತ ವಿಹಾರ

ಮನಸ್ಸಿನೊಂದಿಗೆ ಮಾತನಾಡೋಣ..

ಬದಲಾಗುತ್ತಿರುವ ಕಾಲಘಟ್ಟದಲ್ಲಿ ನಾವು ಸದಾ ಯಾವುದಾದರೊಂದು ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತೇವೆ. ಒಂದಷ್ಟು ಬಿಡುವು ಎನ್ನುವುದೇ ಇಲ್ಲ. ಎಲ್ಲವೂ ಯಾಂತ್ರಿಕವಾಗಿಯೂ ನಡೆಯುತ್ತಿದೆ. ಎಲ್ಲ ಭೌತಿಕ ಸೌಲಭ್ಯಗಳು ಇದ್ದಾಗಲೂ ಕೂಡ ನಮಗೆ ವಾಸ್ತವಿಕತೆಯಲ್ಲಿ ಸಂತೋಷ ಮತ್ತು ಸಮೃದ್ಧಿಯನ್ನು ಅನುಭವಿಸಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ನಮ್ಮ ಬದುಕಿಗೆ ಅಪಾರವಾದ ಸುಖ-ಸಂತಸ ಯಶಸ್ಸಿನ ಅನುಭೂತಿಯನ್ನು ನೀಡಬಲ್ಲ, ನಮ್ಮ ಮನಸ್ಸಿನ ಶಕ್ತಿಯ ಕುರಿತಾಗಿ ನಮಗೆ ಅರಿವಿಲ್ಲದಿರುವುದು. ನಮ್ಮ ಮನಸ್ಸನ್ನು ಶ್ರೀಮಂತಗೊಳಿಸುವಲ್ಲಿ ಸೋಲುತ್ತಿರುವದು. ಸಾಧ್ಯವಾದಷ್ಟು ನಾವು ನಮ್ಮ ಮನಸ್ಸಿನೊಂದಿಗೆ ಸಾಮರಸ್ಯ ಸಾಧಿಸಲು ಪ್ರಯತ್ನಿಸಬೇಕು. ನಮ್ಮ ಮನಸ್ಸನ್ನು ಆಗಾಗ ತರಬೇತಿ ನೀಡಬೇಕು.

ಎಂಥದೇ ವಿಷಮ ಸ್ಥಿತಿಯಲ್ಲಿಯೂ ಸದಾ ಹಸನ್ಮುಖಿಯಾಗಿರುವ ಸಂತರೊಬ್ಬರನ್ನು ಅವರ ಆಪ್ತ ಶಿಷ್ಯ ತಾವು 'ಯಾವಾಗಲೂ ಸಂತಸ ಭಾವದಿಂದಲೇ ಇರುತ್ತೀರಿ. ಒಮ್ಮೆಯೂ ಕೋಪಗೊಳ್ಳುವುದನ್ನಾಗಲಿ, ಅಸಂತೋಷ ಭಾವ ನಿಮ್ಮನ್ನು ಆವರಿಸಿಕೊಂಡಿದ್ದನ್ನು ನಾನು ನೋಡಲೇ ಇಲ್ಲ. ಇದನ್ನು ಸಾಧ್ಯವಾಗಿಸಿಕೊಂಡಿದ್ದು ಹೇಗೆ?' ಎಂದು ಪ್ರಶ್ನಿಸಿದ. ಆಗ ಸಂತರು 'ನನ್ನ ಪ್ರತಿ ಉಸಿರಿನಲ್ಲಿ ಸದಾ ನಾನು ಅತ್ಯಂತ ಶಾಂತ ವ್ಯಕ್ತಿ, ಯಾವುದೇ ಸಂಕಷ್ಟದ ಸಂದರ್ಭದಲ್ಲಿಯೂ ಸಂತೋಷವನ್ನು ಕಳೆದುಕೊಳ್ಳದಷ್ಟು, ಕೋಪಗೊಳ್ಳದಷ್ಟು ಶಕ್ತಿಶಾಲಿಯಾಗಿರುವೆ' ಎಂಬ ಮಂತ್ರವನ್ನು ಉಸುರುತ್ತಿರುತ್ತೇನೆ ಎಂದರಂತೆ.

ನಾವು ಹೆಚ್ಚು ಯಶಸ್ಸನ್ನು ಪಡೆಯಬೇಕಿದ್ದರೆ ಪದೇ ಪದೇ ನಮ್ಮ ಮನಸ್ಸಿಗೆ 'ನಾನು ಬುದ್ಧಿವಂತ. ನನಗೆ ಎಲ್ಲವನ್ನೂ ಸಾಧಿಸುವ ಸಾಮರ್ಥ್ಯವಿದೆ. ನಿರಂತರ ಪ್ರಯತ್ನದಿಂದ ಎಲ್ಲವೂ ಸಾಧ್ಯ' ಎಂಬ ಸಂಗತಿಯನ್ನು ಮತ್ತೆ ಮತ್ತೆ ಮನಸ್ಸಿಗೆ ಹೇಳುತ್ತಲೇ ಇರಬೇಕು. ನಮಗೆ ಆಂತರಿಕ ನೆಮ್ಮದಿ ಮತ್ತು ಪ್ರಶಾಂತತೆ ಬೇಕಿದ್ದರೆ ಮನಸ್ಸಿಗೆ ನಾನು ಶಾಂತ ಸ್ವಭಾವದ ವ್ಯಕ್ತಿ. ಸರಳತೆಯೇ ನನಗೆ ಬಹು ಇಷ್ಟವಾದ ಸಂಗತಿ. ಅನಗತ್ಯ ಗೊಂದಲಗಳಿಂದ ನಾನು ದೂರ ಬಹು ದೂರ ಎಂದು ಮನದಟ್ಟು ಮಾಡಿಸುತ್ತಲೇ ಇರಬೇಕು. ಮನಸ್ಸನ್ನು ಉದಾರ ಮತ್ತು ಉದಾತ್ತ ನಿಲುವುಗಳಿಂದ ಪೋಷಿಸುತ್ತಿರಬೇಕು. ನಮ್ಮ ದೇಹವನ್ನು ಬೆಳ್ಳಿ ಬಂಗಾರ, ವಜ್ರ ವೈಢೂರ್ಯಗಳಿಂದ ಅಲಂಕರಿಸುವುದಕ್ಕಿಂತ ಮನಸ್ಸನ್ನು ಉತ್ತಮ ಮೌಲ್ಯಗಳಿಂದ ಅಲಂಕರಿಸಿ ಸಂಭ್ರಮಿಸಬೇಕು. ನಮ್ಮ ಯೋಚನೆಗಳು ಸಶಕ್ತವಾಗಿರಬೇಕು. ಇನಾಯತ್ ಖಾನ್ ಅವರು ಒಂದೆಡೆ ಹೇಳುತ್ತಾರೆ; ಆತ್ಮವನ್ನು ಉದ್ದೀಪನಗೊಳಿಸುವ ಶಬ್ದಗಳು ಆಭರಣಗಳಿಗಿಂತ ಅತಿ ಹೆಚ್ಚು ಅಮೂಲ್ಯವಾದವು ಎಂದು. ಅಂತೆಯೇ ನಮ್ಮ ಮನಸ್ಸಿನೊಂದಿಗೆ ಉತ್ಕೃಷ್ಟ ಭಾವಗಳಿಂದ ಮಾತನಾಡುತ್ತಿದ್ದರೆ ಖಂಡಿತವಾಗಿ ಬದುಕು ಸಮೃದ್ಧಗೊಳ್ಳುತ್ತದೆ.

● ಮಹಾದೇವ ಬಸರಕೋಡ

ಯುವ ಕಾವ್ಯ

ಪ್ರಕೃತಿ ಹೊನ್ನು

ಜೋಗದ ಜಲಪಾತ ಕಂಡು
'ಎಷ್ಟೊಂದು ಶಕ್ತಿ ವ್ಯರ್ಥ!'
ಎಂದರು ವಿಶ್ವೇಶ್ವರಯ್ಯ
ಜಲಪಾತದ ನೆಗೆತ ಕಂಡು
ಇಳಿದು ಬಾ ತಾಯೆ ಎಂದರು
ಭಕ್ತಿ ಭಾವದಿಂದ ಬೇಂದ್ರೆ.
ಕಾವ್ಯ, ವಿಜ್ಞಾನಗಳ ತಾಯಿ
ಪ್ರಕೃತಿ.

ಬಳಸೋಣ ವಿಜ್ಞಾನವನ್ನು;
ಉಳಿಸೋಣ, ಬೆಳೆಸೋಣ
ಪ್ರಕೃತಿಯನ್ನು.
ನಳನಳಿಸಲಿನ್ನು
ಕವಿಹೃದಯವೆಂಬ
ರತ್ನದ ಜೊತೆಗೆ
ವಿಜ್ಞಾನವೆಂಬ ಹೊನ್ನು.

● ಎಚ್. ಆನಂದರಾಮ ಶಾಸ್ತ್ರೀ

ನಮ್ಮಿಂದ ಎಲ್ಲವೂ ಸಾಧ್ಯ

ನಮ್ಮ ಮನಸು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಮೇಲಾಗಿ ಅದೊಂದು ಅಪಾರ ಶಕ್ತಿ, ಕೌಶಲಗಳ ಆಗರ. ಮನಸು ಚಲನಶೀಲತೆ ಹೊಂದಿರಬೇಕು. ಅದಕ್ಕೊಮ್ಮೆ ಜಡತ್ವ ಅಂಟಿಕೊಂಡರೆ ಮುಗಿಯಿತು. ಸರಿದಾರಿಗೆ ಬರಲು ಕಾಲಾವಕಾಶ ಕೇಳುತ್ತದೆ. ಅಪ್ಪಿತಪ್ಪಿಯೂ ಮನಸಿಗೆ ಸೋಮಾರಿತನ, ನಿರಾಶಾಭಾವ ಕಲ್ಪಿಸಬಾರದು. ಅಕಸ್ಮಾತ್ ಕಲ್ಪಿಸಿದ್ದಾರೆ, ಮೈಮನಗಳ ತುಂಬೆಲ್ಲ ಆಲಸ್ಯತನವೇ ಆವರಿಸಿಕೊಂಡು ಬಿಡುತ್ತದೆ. ನಾವು ಮಾನವ ಜನ್ಮ ಪಡೆದುಕೊಂಡು ಈ ಭೂಮಿಯ ಮೇಲೆ ಅವತರಿಸಿರುವುದೇ ಅಸಾಧ್ಯವಾದುದನ್ನು ಸಾಧ್ಯವಾಗಿಸುವುದಕ್ಕೆ. ಜೀವನದಲ್ಲಿ ಸಾಧ್ಯ ಅಥವಾ ಅಸಾಧ್ಯ ಎನ್ನುವುದರ ನಡುವಿನ ಅಂತರ ತೀರಾ ಸಣ್ಣದು. ಅಸಾಧ್ಯ ಎನ್ನುವ ಪದದಲ್ಲಿಯೇ ಸಾಧ್ಯ ಅನ್ನೋ ಪದ ಇರುವಾಗ ಕೊನೆವರೆಗೂ ಸಾಧಿಸುವ ಛಾತಿ ಬಿಡಬಾರದು. ನಾವು ಸಾಧ್ಯ ಅಂತ ಎಂದುಕೊಂಡರೆ ಸಾಧ್ಯ. ಅಸಾಧ್ಯವೆಂದು ಅಂದುಕೊಂಡರೆ ಅಸಾಧ್ಯವೇ! ನಾವು ಎಂದರೆ ನಂಬಿಕೆ. ನಮ್ಮದು ಎಂದರೆ ಅಪಾರ ಭರವಸೆ. ನಮ್ಮಿಂದ ಏನೆಲ್ಲ ಸಾಧ್ಯವೆಂದು ಒಂದರೆಕ್ಷಣ ಯೋಚಿಸಿ, ನಮ್ಮನ್ನೇ ನಾವು ಪ್ರಶ್ನಿಸಿಕೊಂಡರೆ ಕೊನೆಯಲಿ ಸಿಕ್ಕುವ ಉತ್ತರವೇ ಎಲ್ಲವೂ ಸಾಧ್ಯವೆಂದು. ಈ ಸಾಧ್ಯ ಎನ್ನುವ ಸಣ್ಣ ಪದವೇ ಸೋತು ಸೋತು ಕಂಗಾಲಾಗಿ ಹೋದ ಮನಸು ಮತ್ತೆ ಜೀವಗಳಿಗೆ ಅಪಾರ ಪ್ರಮಾಣದ ಸಾಂತ್ವನ ನೀಡುತ್ತದೆ. ನಮಗೆ ಅಸಾಧ್ಯವೆನಿಸಿದ ಕಾರ್ಯಗಳನ್ನು ಆಗಾಗ ಕೈಗೆತ್ತಿಕೊಂಡು ಅದಕೆ ತಕ್ಕಂತೆ ಪ್ರಯತ್ನ ಪಡುತ್ತಲೆ ಇರಬೇಕು. ಇಂತಹ ಕೆಲಸವನ್ನು ಯಾರೂ ತಮ್ಮ ಜೀವಕ್ಕಿಂತ ಹೆಚ್ಚು ಪ್ರೀತಿಸಿ, ಅದರಲ್ಲಿ ತಲ್ಲೀನರಾಗು ತ್ತಾರೋ ಅವರಿಗೆ ಯಶಸ್ಸು ನಿಶ್ಚಿತ.

● ರಂಗನಾಥ್ ಗುಡಿಮನಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ವಿಶ್ವವಾಣಿ

ಕಾಡು ದಾರಿಯ ಗುಂಟ..

ಕಾಡು ಎನ್ನುವ ಪದವೇ ಬಹಳ ಆಪ್ತವಾಗಿ ಕಾಡುವಂತಹದು.

● ರಶ್ಮಿ ಗೋಖಲೆ

ಕಾಡು ಹಾಗಲ ಗಿಡವು ತೋಟದ ಬಳಿಯಲ್ಲಿ ಬೆಳೆದಿತ್ತು. ಕಾಡಿನ ಅಂಚಿನಲ್ಲಿ ಸಾಗುವ ಮಾಸಲು ದಾರಿಯ ಗುಂಟ ಬೆಳೆಯಬಹುದಾದ ಆ ಗಿಡದ ಕಾಯಿಯಿಂದ ಬಜ್ಜಿ ಮಾಡಿದರೆ ಬಹಳ ರುಚಿ; ಅದಕ್ಕಿಂತಲೂ ಮುಖ್ಯವಾಗಿ, ತನ್ನ ಪಾಡಿಗೆ ಬೆಳೆಯುವ ಈ ಗಿಡವು ತರಕಾರಿಯಂತಹ ಕಾಯಿಗಳನ್ನು ನೀಡುವುದೇ ಬಹಳ ವಿಶೇಷ. ಮಳೆಗಾಲದ ವಾತಾವರಣ, ಆಗಾಗ ಬೀಳುವ ಮಳೆ, ತಂಪು ಗಾಳಿ – ಇವೆಲ್ಲವೂ ಕೂಡಿದಾಗ, ಕಾಡು ಹಾಗಲ ಗಿಡವು ಕಾಯಿಗಳನ್ನು ಬಿಡುತ್ತದೆ. ಹೆಸರಿನಲ್ಲಿ ಹಾಗಲ ಎಂದಿದ್ದರೂ, ಇದರ ಕಾಯಿ ಕಹಿ ಇರುವುದಿಲ್ಲವಾದ್ದರಿಂದ, ಇದೊಂದು ಅಪರೂಪದ ತರಕಾರಿ ಎಂದೂ ಹೇಳಬಹುದು.

ಇತ್ತೀಚಿನ ದಿನಗಳಲ್ಲಿ ಕೈತೋಟಗಳಲ್ಲಿ ನಾವು ನೆಟ್ಟು, ಗೊಬ್ಬರ ಹಾಕಿ ಬೆಳೆಸುವ ಕೆಲವು ಪ್ರಭೇದಗಳ ತರಕಾರಿ ಬಳ್ಳಿಗಳಾಗಲೀ, ಗಿಡಗಳಾಗಲೀ ದಿನವೂ ಆರೈಕೆ ಮಾಡಿದರೂ ಬೆಳೆದು ಫಲ ಕೊಡುವುದು ಮರೀಚಿಕೆಯೇ ಆಗಿದೆ. ಸಾವಯವವಾಗಿ ಬೆಳೆಯಲು ಇಂದು ಹಳ್ಳಿಗಳ ನಮ್ಮ ಒಲೆಗಳಲ್ಲೂ ಬೂದಿ ಸಿಗುವುದಿಲ್ಲ, ಗೊಬ್ಬರಕ್ಕೆ ಹಟ್ಟಿಯಲ್ಲಿ ಎಮ್ಮೆ ಹಸುಕರುಗಳಿಲ್ಲ, ಎಲ್ಲವೂ ಅಂಗಡಿಯಿಂದ ತಂದೇ ಉಪಯೋಗಿಸಬೇಕು.

ಕೆಲವು ಅಂಗಡಿಗಳಲ್ಲಿ ಸಾವಯವ ಎಂಬ ಲೇಬಲ್ ಅಂಟಿಸಿಕೊಂಡು ಕೆಲವು ವಸ್ತುಗಳನ್ನು ಮಾರುತ್ತಾರೆ. ಅದೊಂದು ಫ್ಯಾಷನ್ ಸಹ ಆಗಿದೆ. ಆದರೆ, ಅದು ಸಾವಯವ ಎಂದು ಬರೆದುಕೊಂಡಿದ್ದರೂ, ಅದು ಪೂರ್ತಿ ಸಾವಯವವೆಂದು ಒಪ್ಪುವುದು ಕಷ್ಟ. ತೆಂಗಿನ ಮರದಲ್ಲಿ ತನ್ನ ಪಾಡಿಗೆ ಬೆಳೆಯುವ ತೆಂಗಿನಕಾಯಿಯನ್ನೂ ಸಾವಯವ ಎಂದು ಆನ್‌ಲೈನ್ ಮಾರಾಟದ ಅಂಗಡಿಗಳು ಮಾರುತ್ತಿವೆ!

ಇಂದು ತರಕಾರಿ ಬೆಳೆಯುವವರ ಪರಿಸ್ಥಿತಿ ಹೇಗೆ ಆಗಿದೆ ಎಂದರೆ, ತರಕಾರಿಗಳ ಬೀಜ ಬಿತ್ತಿದಂದಿನಿಂದಲೂ ಅದಕ್ಕೆ ವಿಷಪ್ರಾಷನವನ್ನೇ ಮಾಡಿ, ಫಲವನ್ನು ಬೆಳೆಯುತ್ತೇವೆ. ಆ ರೀತಿ ಕೃತಕವಾಗಿ ಬೆಳೆದ ತರಕಾರಿಗಳನ್ನು ಸೇವಿಸಿ ನಾವು ಕೂಡಾ ವಿಷಜಂತುಗಳೇ ಆಗಿದ್ದೇವೆ! ನೋಡಲು ಮಾತ್ರ ಅವು ತರಕಾರಿ, ಅವುಗಳ ಒಳಗೆ ನಾನಾ ರೀತಿಯ ರಾಸಾಯನಿಕ ಗೊಬ್ಬರದ ಫಲವಾಗಿ ಬೆಳೆದ ತಿರುಳು, ಕೀಟನಾಶಕಗಳ ವಿಷವನ್ನುಂಡ ಜೀವಾಂಗಳೇ ತುಂಬಿರುತ್ತವೆ, ಅಲ್ಲವೆ! ಅದಕ್ಕೇ ಇರಬಹುದು, ಆ ತರಕಾರಿಯ ರುಚಿ ಸಹ ಕಡಿಮೆ. ಬೀಜ ಬಿತ್ತಿದ ಕೂಡಲೇ ಆ ಬೀಜಗಳನ್ನು ಇರುವೆಗಳು ತಿನ್ನುತ್ತವೆ, ಬೀಜಗಳನ್ನೇ ತಿಂದರೆ ಮೊಳಕೆಯೊಡೆಯುವುದೆಲ್ಲಿ? ಬೆಳೆದು ಗಿಡ ಬಳ್ಳಿಗಳಾಗುವುದೆಲ್ಲಿ? ಹಾಗಾಗಿ ಬೀಜ ಬಿತ್ತಿ ಒಂದಷ್ಟು ಡಿಡಿಟಿಯೋ ಅಥವಾ ಇನ್ನೊಂದು ಕೀಟನಾಶಕಗಳನ್ನು ಸಿಂಪಡಿಸುವುದು ಅನಿವಾರ್ಯವಾಗುತ್ತದೆ. ಈಗಿನ ದಿನಗಳಲ್ಲಿ ಎಲ್ಲ ಊರುಗಳಲ್ಲಿಯೂ ನಮ್ಮ 'ರಾಷ್ಟ್ರೀಯ ಪಕ್ಷಿ'ಯ ಉಪಟಳ ವಿಪರೀತವಾಗಿದೆ. ಎಲೆ, ಚಿಗುರುಗಳನ್ನು ತಿಂದು ಹಾಕಿ ಗಿಡ ಮೇಲೇಳಲು ಬಿಡುವುದೇ ಇಲ್ಲ. ನೋಡಲು ಮಾತ್ರ ಚಂದದ ಈ ಪಕ್ಷಿ, ತನ್ನ ಉದ್ದನೆಯ, ಬಣ್ಣ ಬಣ್ಣದ ಬಾಲವನ್ನು ಇಳಿಬಿಟ್ಟುಕೊಂಡು ಓಡಾಡುತ್ತಾ, ನೆಲದಲ್ಲಿ ಬೆಳೆದ ತರಕಾರಿ ಗಿಡಗಳ ಎಲೆ ಚಿಗುರುಗಳನ್ನು ತಿಂದು ಸಾಕಷ್ಟು ತೊಂದರೆ ಕೊಡುತ್ತವೆ. ಅವುಗಳನ್ನು ಓಡಿಸಬೇಕು 'ಶೂ' ಎಂದು – ಕೋಳಿ ಓಡಿಸಿದ ಹಾಗೆ!

ಇವೆಲ್ಲವುಗಳಿಗೆ ಏನಾದರೊಂದು ಪರಿಹಾರ ಕಂಡುಕೊಡು ಗಿಡಗಳ ತುಂಬಾ ಕಾಯಿ ಬಿಟ್ಟ ಸಂದರ್ಭದಲ್ಲಿ, ಆಂಜನೇಯನ ಪ್ರತಿರೂಪ ಎನಿಸಿರುವ ಕೋತಿಗಳ ಹಾವಳಿ ಶುರುವಾಗುತ್ತದೆ. ಮಾಗಿದ ಹಣ್ಣು

ಅಥವಾ ಕಾಯಿಗಳನ್ನು ತಿನ್ನುವುದು ಮಾತ್ರವಲ್ಲದೇ, ಹೂವು ಹೀಚು ಎಲ್ಲವನ್ನೂ ಮನಸೋ ಇಚ್ಛೆ ಎಳೆದು ನಾಶಮಾಡುತ್ತವೆ. ಎಳನೀರುಗಳಿಗೆ ತೂತ ಮಾಡಿ, ನೀರು ಕುಡಿದು, ಖಾಲಿ ಬೊಂಡವನ್ನು ಮರದಿಂದ ಕೆಳಗೆ ಬಿಸಾಡುತ್ತವೆ! ಅಲಸಂಡೆ, ಬಾಳೆ, ತೊಂಡೆ ಮೊದಲಾದವುಗಳೆಲ್ಲವೂ ಕೋತಿ ತಿಮ್ಮಣ್ಣನ ಕೀಟಲೆಗೆ ಬಲಿಯಾಗುತ್ತವೆ! ಆಂಜನೇಯನ ಪ್ರತಿರೂಪ ಎಂದು ಕೋತಿಗಳಿಗೆ ಒಂದಿಷ್ಟು ಗೌರವ ಕೊಟ್ಟು, 'ಹುಡಾ ಹುಡಾ' ಎಂದು ಕೂಗಿ ಓಡಿಸುವುದರಲ್ಲಿ, ಸುಸ್ತು! ಇಂತಹ ಸಂಕಷ್ಟದಲ್ಲಿ ರೈತ ಬೆಳೆ ಬೆಳೆಯುವುದಾದರೂ ಹೇಗೆ ಎಂಬ ನಿರಾಸೆ ಹುಟ್ಟುತ್ತದೆ. ಇಷ್ಟೆಲ್ಲಾ ಕಷ್ಟಪಟ್ಟರೂ ಸಿಗದ ಫಲವು ಮನಸ್ಸಿನಲ್ಲಿ ಬೇಸರ ಮೂಡಿಸಿರುವಾಗಲೇ, ಒಮ್ಮೊಮ್ಮೆ ಆಕಸ್ಮಿಕವಾಗಿ, ನಿರಾಯಾಸವಾಗಿ ಕಾಡು ಹಾಗಲದ ರೀತಿಯ ತರಕಾರಿ ಸಿಕ್ಕಾಗ ಸಂತೋಷ ಪಡಬೇಕು. ಬೊಗಸೆ ತುಂಬಾ ಸಿಕ್ಕ ಕಾಡುಹಾಗಲವನ್ನು ಕಣ್ಣಿಗೊತ್ತಿಕೊಂಡು, ಭಕ್ತಿಯಿಂದ ಅಡುಗೆಮನೆಯೊಳಗೆ ತಂದು, ಸೂಕ್ತ ಸಿದ್ಧತೆಯ ನಂತರ ಅದರ ವಿವಿಧ ವ್ಯಂಜನಗಳ ತಯಾರಿಯಾಗಿ ಭುಂಜಿಸಲ್ಪಟ್ಟವು.

ಕಾಡಿನ ವೈಖರಿಯೇ ಹಾಗೆ, ಪ್ರತಿಕೂಲ ಪರಿಸ್ಥಿತಿಯನ್ನು ಕೂಡಾ ಅನುಕೂಲಕರ ವಾತಾವರಣವನ್ನಾಗಿ ಮಾಡುವುದು. ಕಾಡು ಎನ್ನುವ ಪದವೇ ಬಹಳ ಆಪ್ತವಾಗಿ ಕಾಡುವಂತಹದು. ಈ ಕಾಡು ಒದಗಿಸುವ ಪ್ರತಿಯೊಂದು ಉತ್ಪನ್ನವೂ ಅಷ್ಟೇ ಶ್ರೇಷ್ಠ. ಈ ದೃಷ್ಟಿಯಲ್ಲಿ ನೋಡಿದರೆ ಮನುಷ್ಯನು ಕಾಡಿನ ಕೂಸು!

ಮೆಣಸಿನಕಾಯಿ, ಅರಳು ಸಂಡಿಗೆ ಒಣಗಿ ಬಂದವು. ಮೊಮ್ಮಗ ಯಮ್ಮಿ ಅಂತ ಸರ್ಟಿಫಿಕೇಟ್ ಕೊಟ್ಟ.

ಅಮೆರಿಕದಲ್ಲಿ ಮರಳಿ ಅರಳು

● ವಸುಂಧರಾ ದೇಸಾಯಿ

ಹಪ್ಪಳ ಸಂಡಿಗೆಗಳಲ್ಲೆಲ್ಲ ನಂಗ ಅವಲಕ್ಕಿ ಹಪ್ಪಳ, ಅರಳು ಸಂಡಿಗೆ ಭಾಳು ಮೆಚ್ಚು. ಅವ್ವನ ಹಪ್ಪಳ ಸಂಡಿಗೆ ಜೊತೆಗಿನ ಅಂದಿನ ಊಟ ನೆನೆಸ್ಕೊಂಡ್ರ ಈಗೂ ಬಾಯಾಗ ನೀರು ಬರ್ತಾವ. ಒಂದೆರಡ ಸಲ ಅಂಗ್ಡಿಯಿಂದ ತಂದೆ ಬಗೀಹರೀಲಿಲ್ಲ. ಹೆಂಗೂ ಮಿಸ್. ಪರ್ಫೆಕ್ಷನಿಸ್ಟ ಅವ್ವನ ಸಂತೀ ಮಾಡಿ ರೂಢಿ ಇತ್ತು, ಹಪ್ಪಳ ಲಟ್ಟಸ್ಬೇಕಾರ ಚೂರೂ ಮೂಗ ಹರೀಬಾರ್ದು, ಸಂಡಿಗಿ ಮ್ಯಾಲೆ ಬಟ್ ಮೂಡಬಾರ್ದು ಅಂತ ತಿದ್ದಿ ತೀಡಿ ಕಲಿಸಿದ್ಲು. ನಾನ ಮಾಡಿಕೊಳ್ಳಿಕ್ಕೆ ಸುರುಮಾಡ್ದೆ. ಹಪ್ಪಳ ಆಗ್ದಿದ್ರೂ, ಸಂಡಿಗಿ, ಬಾಳಕ, ರಂಜಕ, ಕರಿಂಡಿ ತಪ್ಪದ ಮಾಡ್ಕೋತೇನಿ, ಮಕ್ಕಳೂ ಇವಕ್ಕೆಲ್ಲ ಅಡಿಕ್ಟ್ ಆಗಿಬಿಟ್ಟಾರ.

ಆದ್ರ, ಈ ಸಲ ಏನೇನೋ ಅನಾನುಕೂಲದಿಂದ

ಮಾಡ್ಲಿಕ್ಕೆ ಆಗ್ಲಿಲ್ಲ. ಅಮೆರಿಕಕ್ಕೆ ಪ್ರವಾಸ ಬಂದ ಕೂಡಲೇ ಮಗಳು ಕೇಳಿದ ಮೊದ್ಲೇ ಪ್ರಶ್ನಿನ 'ಭಾಳಷ್ಟು ಅಳ್ಳ ಸಂಡಿಗಿ ತಂದೀ ಹೌದಲ್ಲೋ' ಅಂತ. ನಂಗ ಹಳಹಳಿ ಸುರು ಆತು.

ಸಂಜಿಗೆ, ತರಕಾರಿ, ಸಾಮಾನು ತರ್ಲಿಕ್ಕೆ ಇಂಡಿಯನ್ ಸ್ಟೋರ್‌ಗೆ ಹೋದಾಗ ಅಲ್ಲೆ ಬೂದುಗುಂಬಳ ಕಾಯಿ, ಭತ್ತರಳು ಕಂಡವು. ನನ್ನ ಸಂಡಿಗಿ ಮಾಡೋ ಹುಕಿ ಗರಿಗೆದರ್ತು. ಸಾಮಾನೇನೋ ತಂದು ಇಟ್ಕೊಂಡೆ. ಆದ್ರ ಇಲ್ಲಿ ಹವಾಮಾನ ಭಾಳಂದ್ರ ಬಾಳು ಅನಿಶ್ಚಿತ. ಮುಂಜಾನೆ ರಣರಣ ಬಿಸಿಲಿದ್ರ ಮಧ್ಯಾಹ್ನ ಮುಗಲು ಹರ್ಕೊಂಡು ಬೀಳೋಹಂಗ ಮಳಿ. 3-4 ದಿನಾ ಮಳಿ ಇಲ್ದ ಬಿಸಿಲು ಆದ ಅಂದ್ರ, ಕುಂಬಳಕಾಯಿ ಖಾಲಿ ಆಗಿರ್ತಿತ್ತು..

ಅಂತೂ ಕಡೀಕೆ ಎಲ್ಲಾ ಕೂಡಿಬಂದು ನನ್ನ ಮೆಣಸಿನಕಾಯಿ, ಅರಳು ಸಂಡಿಗೆ ಒಣಗಿ ಬಂದವು. ಮೊಮ್ಮಗ 'ಯಮ್ಮಿ' ಅಂತ ಸರ್ಟಿಫಿಕೇಟ್ ಕೊಟ್ಟ. ಭತ್ತರಳ ಜತಿ ಅಲ್ಲೆ ಜ್ವಾಳದ ಅರಳೂ ಇದ್ದವು, ಅದನ್ನೂ ತಂದು ಮಿಕ್ಸರ್‌ಗೆ ಹಾಕಿ ಅಳ್ಳಿಟ್ಟು ಮಾಡಿ ಇಟ್ಟೇನಿ. ಬೆಲ್ಲಾ ಹಿಟ್ಟು, ಹುಳಿ, ಬೆಲ್ಲಾ, ವಗ್ಗರಣೆ ಹಾಕಿದ ಅಳ್ಳಿಟ್ಟು ತಿಂದು ಮಗಳು, 'ಸುಸ್ತಾಗಿ ಬಂದಾಗ ತಕ್ಷಣ ಕಲಿಸಿಕೊಂಡು ತಿನ್ನಲಿಕ್ಕೆ ಬಾಳು ಅನುಕೂಲ ಆತಮ್ಮಾ, ಎಷ್ಟು ದಿನಾ ಆಗಿತ್ತು ತಿನ್ನದ' ಅಂತ ಖುಷಿ ಪಟ್ಟಲು.

ಬೇಂದ್ರೆ ಅಜ್ಜ ಅರವತ್ತಕ್ಕ ಅರಳು ಮರಳು ಅಲ್ಲ, ಮರಳಿ ಅರಳು ಅಂತ ಹೇಳ್ಯಾನ. ಅಂವಾ ಹೇಳಿದ್ದಂಗ ನಂಗ ಅರಳಲಿಕ್ಕೆ ಆಗುತ್ತದೋ ಇಲ್ಲೋ, ಆದ್ರ ಅಮೆರಿಕಕ್ಕ ಬಂದು ಹಿಂದಿನ್ಹಂಗ ಅರಳಿಗಂತೂ ಮರಳೇನಿ.

ಇಲ್ಲೇ ಭಾಳು ವರ್ಷದಿಂದ ನೆಲೆಸಿದ ಕೆಲವರು ನನ್ನ ಅಳ್ಳಸಂಡಿಗಿ ಕಥೀ ಕೇಳಿ 'ಅರೇ! ಇಲ್ಲೆ ಅರಳು ಸಿಗ್ತಾವ ಅಂತ ನಮಗೆ ಗೊತ್ತೇ ಇರಲಿಲ್ಲ' ಅಂದರು. ಕಂಡವರಿಗಲ್ಲ ಕಂಡವರಿಗಷ್ಟೇ ಅಂತಾನೂ ಬೇಂದ್ರೆ ಅಜ್ಜಹೇಳಿದ್ದು ಇಂಥದೇ ಸಂದರ್ಭದಾಗ ಅನ್ನೋ ಯೋಚನೆ ಮನಸ್ನ್ಯಾಗ ಹಾದು ಹೋತು.

ಚಿತ್ತ ಕದ್ದ ಚೆಣ್ಣರ ಚಿತ್ರಗಳು

● ಪ್ರೊ ಬಳಕೂರು ವಿ.ಎಸ್.ನಾಯಕ

ಗರಿಗೆದರಿ ಕುಣಿಯುತ್ತಿರುವ ಆಕರ್ಷಕ ನವಿಲಿನ ನರ್ತನ, ವರ್ಣ ರಂಜಿತ ಗಿಳಿಗಳ ಚಿತ್ರ, ಕೊಳಲಿನ ಗಾನಕ್ಕೆ ತಲ್ಲೀನಳಾದ ರಾಧೆ, ಬೆಟ್ಟದಿಂದ ಧುಮುಕುವ ಜಲಪಾತಗಳ ರಮಣೀಯ ದೃಶ್ಯಾವಳಿ, ಯಕ್ಷಗಾನದ ವಿವಿಧ ಭಾವ ಭಂಗಿಗಳು, ಹಳ್ಳಿಯ ವಾತಾವರಣದ ರಮಣೀಯ ದೃಶ್ಯಗಳು, ತದೇ ಕ ಚಿತ್ತದಿಂದ ವೀಕ್ಷಿಸುತ್ತಿರುವ ಜಿಂಕೆ ಚಿತ್ರ, ಹೀಗೆ ವಿಭಿನ್ನ ಕಲಾಕೃತಿಗಳ ಕಲಾ ಪ್ರದರ್ಶನ ಎಲ್ಲರ ಮನಸೂರಿಗೊಂಡಿದ್ದು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಆರ್ಟ್ ಫಾರ್ ಹಾರ್ಟ್ ಕಲಾ ಸಂಸ್ಥೆಯು ಏರ್ಪಡಿಸಿದ್ದ ಕಲಾಪ್ರದರ್ಶನದಲ್ಲಿ. ಆರ್ಟ್ ಫಾರ್ ಹಾರ್ಟ್ ಕಲಾ ಗ್ಯಾಲರಿಯಲ್ಲಿ ಕಲಾವಿದರಾದ ವಿಜಯಕುಮಾರ್ ಯಾದವ್‌ರವರ ಮಾರ್ಗದರ್ಶನದಲ್ಲಿ ಸಂಸ್ಥೆಯ ಸುಮಾರು 40 ವಿದ್ಯಾರ್ಥಿಗಳು ರಚಿಸಿರುವ ಕಲಾ ಕೃತಿಗಳ ಪ್ರದರ್ಶನ ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಅಕ್ರಲಿಕ್ ಮಾಧ್ಯಮ, ಆಯಿಲ್ ಪೇಸ್ಟಲ್ಸ್, ಚಾರ್ಕೋಲ್, ಕಲರ್ ಪೆನ್ಸಿಲ್, ಸಾಫ್ಟ್ ಪೆಸ್ಟಿಲ್ಸ್, ತೈಲ ವರ್ಣ ಮತ್ತು ಜಲ ವರ್ಣಮಾಧ್ಯಮ ಕಲಾಕೃತಿಗಳು, ಮಿಕ್ಸ್ ಮೀಡಿಯಾ ಮಾಧ್ಯಮದ ಕಲಾಕೃತಿಗಳು, ಒಂದ ಕ್ಕಿಂತ ಒಂದು ವಿಭಿನ್ನವಾಗಿ ಗೋಚರವಾಗುತ್ತಿದ್ದವು. ಬಾಲ್ಯ ದಲ್ಲಿ ಮಕ್ಕಳಿಗೆ ಕಲಾಸಕ್ತಿ ಮೂಡಿ ಬಂದರೆ ಅವರು ಕುಂಚ ದಲ್ಲಿ ಒಂದು ವಿಸ್ಮಯಕಾರಿ ಕಲಾ ಪ್ರಪಂಚವನ್ನು ಮಾಡಿ ಬಿಡುತ್ತಾರೆ. ಇಲ್ಲಿನ ವಿದ್ಯಾರ್ಥಿಗಳು ತಾವು ಕಂಡು ಅನುಭವಿಸಿದ ವಿಭಿನ್ನ ಚಿತ್ರಗಳನ್ನು ಅರ್ಥಪೂರ್ಣವಾಗಿ ಬಿಡಿಸಿ ಎಲ್ಲರ ಗಮನ ಸೆಳೆದಿದ್ದಾರೆ. ಎದ್ದು ಕಾಣುವ ಸಹಜತೆ, ನೆರಳು ಮತ್ತು ಬೆಳಕಿನ ಪ್ರತಿಫಲನ, ಎಲ್ಲರನ್ನೂ ಆಕರ್ಷಿಸುವ ಅರ್ಥಪೂರ್ಣ ಜೋಡಣೆ, ದೂರದಿಂದಲೇ ಆಕರ್ಷಿಸುವ ಚಿತ್ರಗಳ ಸೌಂದರ್ಯ, ಹೀಗೆ ಈ ಕಲಾಕೃತಿ ಗಳು ಎಲ್ಲರನ್ನು ಒಂದು ಭಾವಪೂರ್ಣ ಲೋಕಕ್ಕೆ ಹೋದ ಅನುಭವದಂತಿತ್ತು. ಕಲಾವಿದರ ಚಾಣಾಕ್ಷತೆ, ವಿಭಿನ್ನತೆ, ವಿನೂತನತೆ, ಅಚ್ಚರಿಯ ನೋಟಕ್ಕೆ ಕಾರಣವಾಗಿದೆ.

ಸಾಹಸದ ಬದುಕು

ಎಲ್ಲಾ ಅಡೆತಡೆಗಳನ್ನು ಜಯಿಸಿ ಒಂದು ಬೃಹತ್ ಕಲ್ಲಿನ ಬಂಡೆಯ ಬಿರುಕಿ ನಲ್ಲಿ ಬೇರು ಬಿಟ್ಟು ಬೆಳೆದಿರುವ ಈ ಮರ ಜೀವನದಲ್ಲಿ ಯಾವುದೂ ಅಸಾಧ್ಯವೆಂಬುದಿಲ್ಲ, ಬದುಕಿನಲ್ಲಿ ಎದುರಾಗುವ ಎಲ್ಲಾ ಸವಾಲುಗಳನ್ನು ಎದುರಿಸಿ ನಿಲ್ಲಬಲ್ಲ ಶಕ್ತಿ ನಮ್ಮಲ್ಲಿಯೇ ಇದೆ ಎಂಬುದನ್ನು ನಮಗೆ ತೋರಿಸುತ್ತದೆ. ಕೇವಲ ಪ್ರಕೃತಿಯ ಸೌಂದರ್ಯಕ್ಕಷ್ಟೇ ಈ ಮರ ಸಾಕ್ಷಿಯಾಗುವುದಿಲ್ಲ. ಸಹನೆ, ಜೀವನ ಪ್ರೀತಿ, ಹೊಂದಾಣಿಕೆ, ಕಷ್ಟಗಳನ್ನು ಎದುರಿಸುವ ಶಕ್ತಿ, ಗುರಿಯತ್ತ ಸಾಗುವುದು, ಪರಿಸರದೊಂದಿಗೆ ಹೊಂದಿಕೊಳ್ಳುವುದು ಹೀಗೆ; ಜೀವನದ ಕುರಿತಾದ ಹಲವಾರು ಪಾಠಗಳನ್ನು ಹೇಳುತ್ತದೆ. ದೇವರಾಯನ ದುರ್ಗದ ಬೆಟ್ಟದ ತುದಿಯಲ್ಲಿರುವ ಯೋಗ ನರಸಿಂಹ ದೇವಾಲಯಕ್ಕೆ ಸಾಗುವ ಮಾರ್ಗದಲ್ಲಿ ಈ ದೃಶ್ಯವು ಕ್ಯಾಮೆರಾದಲ್ಲಿ ಸೆರೆಯಾಯಿತು.

● ಚಿತ್ರ- ಬರಹ: ಹೊಸ್ಮನೆ ಮುತ್ತು

ರಸ್ತೆಯಲ್ಲಿ ನಡೆದು ಹೋದರೆ, ಜಿಪುಣ ಎಂದು ಕರೆಯುವುದುಂಟು. ಅದು ಜಿಪುಣತನವೆ? ಅಲ್ಲ!

ನಡೆದು ಹೋದರೆ ಜಿಪುಣ?

● ಹುಳಿಗೆರೆ ಮಲ್ಲಿಕಾರ್ಜುನ್

ಸಂಜೆ 5:00 ಗಂಟೆ. ಡ್ಯೂಟಿ ಮುಗಿಸಿಕೊಂಡು ತನ್ನ ಪಾಡಿಗೆ ತಾನು ಮೇಡಂ ಮನೆ ಕಡೆಗೆ ಹೊರಟರು. ಕಛೇರಿಗೂ ಮನೆಗೂ ಎರಡು ಕಿಲೋಮೀಟರ್ ದೂರವಿದೆ. ಹತ್ತು ರೂಪಾಯಿಗಳನ್ನು ಕೊಟ್ಟರೆ ಸಾಕು ಇವರ ಮನೆಯ ಹತ್ತಿರದ ಬಸ್ ಸ್ಟಾಪ್‌ಗೆ ಬಸ್‌ಗಳಿವೆ, ಆಟೋಗಳಿವೆ. ಆದರೂ ನಡೆದು ಹೋಗುತ್ತಿದ್ದರು. ಅವರದು ಸ್ಕೂಟಿ ಇದೆ ಆದರೂ ಡ್ಯೂಟಿಗೆ ಸ್ಕೂಟಿ ತರುವುದಿಲ್ಲ.

ಸಹೊದ್ಯೋಗಿ ಮೇಡಂ ಕೇಳಿಯೇ ಬಿಟ್ಟರು. 'ಅಲ್ಲ ರೀ, ಹತ್ತು ರೂಪಾಯಿ ಕೊಟ್ಟರೆ ಸಾಕು ಮನೆ ಹತ್ರಕ್ಕೆ ಹೋಗಬಹುದು. ಸ್ಕೂಟಿ ಇದ್ದರೂ ತರುವುದಿಲ್ಲ. ನಡೆದೇ ಹೋಗುತ್ತಿರಿ ದಿನ. ಎಲ್ಲರೂ ನಿಮ್ಮನ್ನು ಜಿಪುಣರು, ಜಿಪುಣರು ಅಂತ ಕರೆಯುತ್ತಾರೆ ಗೊತ್ತಾ? ಈ ಮಾತನ್ನು ಎಲ್ಲರೂ ಹೇಳುತ್ತಿರುತ್ತಾರೆ. ನಾನು ಮಾತ್ರ ನೇರ ಹೇಳಿದೆ, ನೀವು ಸ್ವಲ್ಪ ಬದಲಾಗಿ.' ವಾಕಿಂಗ್ ಮೇಡಂ ಒಮ್ಮೆ ನಕ್ಕರು ಅಷ್ಟೇ ವಿನಃ ಏನೂ ಮಾತನಾಡಲಿಲ್ಲ. 'ನಾಳೆಯಿಂದ ನಮ್ಮ ಜೊತೇನೆ ಬರುತ್ತೀರಾ?' ಸಹೋದ್ಯೋಗಿ ಮೇಡಂ ಮತ್ತೆ ಕೇಳಿದರು.

'ಇಲ್ಲ ಖಂಡಿತ ಬರುವುದಿಲ್ಲ. ಯಾರೋ ನನ್ನ ಜಿಪುಣರು ಅಂದರು ಅಂದ ಮಾತ್ರಕ್ಕೆ ನಾನು ಜಿಪುಣೇ ಅಲ್ಲ ಅಂತ ಅವರಿಗೆ ತೋರಿಸಬೇಕಾಗಿಲ್ಲ. ಬದಲಾಯಿಸಿಕೊಳ್ಳಬೇಕಾದ ಯಾವ ಕೆಟ್ಟ ಗುಣನೂ ಅದಲ್ಲ!'

'ಪ್ರತಿದಿನ 10 ರಿಂದ ಐದರವರೆಗೆ ಛೇರ್‌ನಲ್ಲಿ ಕುಳಿತುಕೊಂಡೇ ಡ್ಯೂಟಿ ಮಾಡುತ್ತೇವೆ. ಮನೆಗೆ ಹೋದ ಮೇಲೆ, ಅಡುಗೆ ಮುಗಿದ ಮೇಲೆ ಟಿವಿ ಕುಳಿತುಕೊಂಡೇ ನೋಡುತ್ತೇವೆ. ವಾಕಿಂಗ್‌ಗೆ ಸಮಯವೇ ಇರುವುದಿಲ್ಲ. ಸಿಕ್ಕಿರುವ ಈ

ವಾಕಿಂಗ್ ಸಮಯವನ್ನು ಬಳಸಿಕೊಳ್ಳಬೇಕು. ನಡೆದುಹೋಗುವುದು ತಪ್ಪಲ್ಲ, ಹೋಗುವಾಗ ಕಿವಿ ಹತ್ರ ಫೋನ್ ಇಟ್ಟುಕೊಂಡು ಮಾತನಾಡುತ್ತಾ ಹೋಗುವುದು ತಪ್ಪು ಅಲ್ವಾ? ನೀವು ನಡೆದುಕೊಂಡು ಹೋದರೆ ಜಿಪುಣ ಅಂತಾರೆ. ಕಾರು, ಬೈಕಿನಲ್ಲಿ ಹೋದರೆ ಜಂಭ ಎನ್ನುತ್ತಾರೆ. ಕುಳಿತಿದ್ದರೆ ಒಂದು ಮಾತನಾಡುತ್ತಾರೆ. ನಿಂತಿದ್ದರೆ ಮತ್ತೊಂದು ಮಾತನಾಡುತ್ತಾರೆ. ಜನಗಳ ಮಾತನ್ನು ಜನಗಳಿಗೆ ಬಿಟ್ಟುಬಿಡಿ' ಎಂದವರೇ, ವಾಕಿಂಗ್ ಮೇಡಂ ತಮ್ಮ ಕೆಲಸದಲ್ಲಿ ತೊಡಗಿಕೊಂಡರು.

ದೇಹ ದಂಡನೆಗಾಗಿ, ಆಸ್ಪತ್ರೆಗಾಗಿ ಲಕ್ಷಾಂತರ ಹಣ ಖರ್ಚು ಮಾಡುವ ಬದಲು ಕನಿಷ್ಠ 30 ನಿಮಿಷವಾದರೂ ವಾಕಿಂಗ್ ಮಾಡಿ. ನವ ಚೇತನ ನಿಮ್ಮದಾಗುತ್ತೆ. ದೇಹದಲ್ಲಿ ಉಲ್ಲಾಸ ತುಂಬುತ್ತೆ. ಟಿವಿ ನೋಡುತ್ತಾ, ಮೊಬೈಲ್ ನೋಡುತ್ತಾ ಕೂರುವುದು, ಆಫೀಸ್‌ನಲ್ಲಿ ಛೇರ್‌ನಲ್ಲಿ ಫಿಕ್ಸ್ ಆಗಿ ಕುಳಿತುಕೊಳ್ಳುವುದು ಇಂದು ಸಾಮಾನ್ಯ ಎನಿಸಿದೆ. ನಾಲ್ಕು ಹೆಜ್ಜೆಯ ಕೆಲಸಕ್ಕೆ ಬೈಕ್ ತೆಗೆದುಕೊಂಡು ಹೋಗುತ್ತೇವೆ. ಅಂಗಡಿಗೆ, ಹಾಲಿಗೆ, ಹತ್ತಿರದ ಬೀದಿಯ ಫಂಕ್ಷನ್‌ಗೆ ಬೈಕು ಬೇಕೇ ಬೇಕು, ಇಲ್ಲ ಕಾರು ಬೇಕು ಎನ್ನುವುದು ಕಡಿಮೆಯಾಗಲಿ. ನಡೆದು ಹೋಗುವ ಅಭ್ಯಾಸ ಬರಲಿ. ಮನಸ್ಸಿಗೂ ಒಳ್ಳೆಯದು, ಆರೋಗ್ಯಕ್ಕೂ ಒಳ್ಳೆಯದು.

ಸೊಂಟ ನೋವು, ಕಾಲು ನೋವು, ಕೈ ನೋವು, ಮಂಡಿ ನೋವು, ಅದು ನೋವು, ಇದು ನೋವು ಬಿಟ್ಟು ಬೆಳಗ್ಗೆ ಬೇಗ ಎದ್ದು ವಾಕಿಂಗ್ ಹೋಗಿ. ಕುಂಟು ನೆಪ ಪಕ್ಕಕ್ಕೆ ಇಡಿ. ಕೆಲಸನೇ ತುಂಬಾ ಇರುತ್ತೆ ಎಂಬುದು ಸಹ ಒಂದು ನೆಪ! ಬೆಳಗ್ಗೆ ಆಗದಿದ್ದರೆ, ಸಂಜೆ ಹೋಗಿ; ಇಲ್ಲವಾದರೆ ಸಮಯವಾದಾಗ ಹೋಗಿ; ಒಟ್ಟಿನಲ್ಲಿ ವಾಕಿಂಗ್ ಮಾಡಿ.

ಹೊರಗೆ ಹೋಗಲು ಆಗದಿದ್ದರೆ, ಮನೆಯೊಳಗೆ, ಇಲ್ಲ ಮನೆಯ ಮೇಲೆ, ಆರ್ ಸಿ ಸಿ ಮೇಲೆ ನಡೆದಾಡಿ. ಯಾವುದೇ ಕಾರಣಕ್ಕೂ ಕಿವಿಗೆ ಹಾಡು ಹಾಕಿಕೊಳ್ಳಬೇಡಿ.

ಇನ್ನು ಡಾಕ್ಟರ್ ತಾಕೀತು ಮಾಡುವವರೆಗೂ ವಾಕಿಂಗ್‌ಗೆ ಹೋಗಬಾರದು ಅಂದುಕೊಂಡರೆ ಏನೂ ಮಾಡಲು ಆಗುವುದಿಲ್ಲ. ಜಿಪುಣ ಅಂದರು ಓಕೆ, ನಿಪುಣ ಅಂದರು ಓಕೆ! ನಡೆದಾಡಿ ಬಿಡೋಣ. ಆರೋಗ್ಯ ವೃದ್ಧಿಸುತ್ತೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ

19.09.2024 ಗುರುವಾರ

vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಕೃಷ್ಣ ಪಕ್ಷ, ದ್ವಿತೀಯಾ ತಿಥಿ, ಉತ್ತರ ಭಾದ್ರಪದ ನಕ್ಷತ್ರ, ವೃದ್ಧಿ ಯೋಗ, ತೈತಿಲ ನಕ್ಷತ್ರ, 1946 ಕ್ರೋಧಿ ನಾಮ ಸಂವತ್ಸರ, ವಿಕ್ರಮಶಕೆ ಸಂವತ್ಸರ, ದ್ರಿಕ್ ಋತು ಶರದ್, ದ್ರಿಕ್ ಆಯನ ದಕ್ಷಿಣಾಯನ

ಮನೆಮದ್ದು

ಕರಿಬೇವಿನ ಸೊಪ್ಪಿನಲ್ಲಿ ವಾಯುಕಾರಕವನ್ನು ತೆಗೆದುಹಾಕುವ ಮತ್ತು ನಾರಿನಂಶ ಇದ್ದು, ಇದು ಜೀರ್ಣಕ್ರಿಯೆಯನ್ನು ಹೆಚ್ಚಿಸಿ, ಅನಗತ್ಯ ವಿಷ ಪದಾರ್ಥವನ್ನು ದೇಹದಿಂದ ಹೊರ ಹಾಕಲು ಸಹಾಯ ಮಾಡುತ್ತದೆ. ದಿನಾ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸ್ವಲ್ಪ ಕರಿಬೇವು ತಿಂದರೆ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುವುದು, ಮೈ ತೂಕವೂ ಇಳಿಯುವುದು.

ಸೌಂದರ್ಯ ಸೂತ್ರ

ಒಂದು ಲೋಟ ಬೆಚ್ಚಗಿನ ನೀರಿಗೆ ಸ್ವಲ್ಪ ನಿಂಬೆ ರಸವನ್ನು ಹಿಂಡಿ ಅದನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯಿರಿ. ಇದರಿಂದ ಆರೋಗ್ಯಕರ ಚರ್ಮವನ್ನು ಹೊಂದಬಹುದು. ಸಿಹಿಗಾಗಿ ನೀವು ಇದಕ್ಕೆ ಸ್ವಲ್ಪ ಜೇನುತುಪ್ಪವನ್ನು ಸಹ ಸೇರಿಸಬಹುದು. ಯಾಕೆಂದರೆ ಜೇನುತುಪ್ಪ ಕೂಡ ಚರ್ಮದ ಆರೋಗ್ಯಕ್ಕೆ ಒಳ್ಳೆಯದು.

ದಿನ ಭವಿಷ್ಯ

ಮೇಷ
ಧ್ಯಾನ, ಯೋಗವನ್ನು ಆಧ್ಯಾತ್ಮಿಕ, ಭೌತಿಕ ಲಾಭಗಳಿಗೆ ಆಚರಿಸಬೇಕು. ಇಂದು ಸಾಲಗಾರನು ಹೇಳದೇ ಹಣ ವಾಪಾಸ್ ಮಾಡಬಹುದು.

ವೃಷಭ
ಹಣದ ಉಪಯೋಗ ಪಡೆಯುವ ಸಾಧ್ಯತೆ ಇದೆ. ಆದರೆ ಕೋಪದ ಕೈಗೆ ಬುದ್ಧಿ ಕೊಟ್ಟು, ಹಣ ಗಳಿಸುವಲ್ಲಿ ಹಿನ್ನಡೆ ಹೊಂದಬಹುದು.

ಮಿಥುನ
ಧಾರ್ಮಿಕ ಭಾವನೆಗಳನ್ನು ಉದ್ಭವಿಸಿ ಒಬ್ಬ ಪವಿತ್ರ ವ್ಯಕ್ತಿಯಿಂದ ದೈವಿಕ ಜ್ಞಾನ ಪಡೆಯಲು ಧಾರ್ಮಿಕ ಸ್ಥಳಕ್ಕೆ ಭೇಟಿ ನೀಡುವಂತೆ ಮಾಡುತ್ತವೆ.

ಕಟಕ
ಸಂಗಾತಿಯ ಅದ್ಭುತ ಚೈತನ್ಯ ನಿಮಗೆ ಸಂತೋಷ ನೀಡಬಹುದು. ಜೀವನದ ಕೆಟ್ಟ ಕಾಲದಲ್ಲಿ ಹಣ ಕೆಲಸಕ್ಕೆ ಬರುತ್ತದೆ.

ಸಿಂಹ
ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ, ಅಹಂಭಾವ, ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

ಕನ್ಯಾ
ದೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ, ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ಧವಾಗಿರಿ.

ತುಲಾ
ನಿಮ್ಮ ಸಂಗಾತಿಯ ಅಹ್ಲಾದಕರ ಮನಸ್ಥಿತಿ ನಿಮ್ಮ ದಿನವನ್ನು ಉಜ್ವಲವಾಗಿಸಬಹುದು. ಉಳಿಸಲಾಗಿರುವ ಹಣ ಕೆಲಸಕ್ಕೆ ಬರಬಹುದು

ವೃಶ್ಚಿಕ
ಇಂದು ಆರಾಮವಾಗಿ ವಿಶ್ರಾಂತಿ ಪಡೆಯಬೇಕು, ಆಸಕ್ತಿದಾಯಕ ವಿಷಯಗಳಲ್ಲಿ ತೊಡಗಿಕೊಳ್ಳಿ. ಹಣ ಮಾಡುತ್ತೀರಿ

ಧನು
ಹಿಂದೆ ತಮ್ಮ ಹಣ ಹೂಡಿಕೆ ಮಾಡಿದ ಜನರು ಇಂದು ಆ ಹಣದಿಂದ ಲಾಭ ಪಡೆಯುವ ಸಾಧ್ಯತೆಯಿದೆ. ಸ್ನೇಹಿತರ ಸಹಾಯ ಇರುತ್ತದೆ.

ಮಕರ
ಇತರರ ವಿರುದ್ಧ ದ್ವೇಷ ಕಾರುವುದು ಮಾನಸಿಕ ಒತ್ತಡವನ್ನು ನೀಡುತ್ತದೆ. ಈ ರೀತಿಯ ಆಲೋಚನೆಗಳನ್ನು ತಪ್ಪಿಸಿ, ಆರಾಮವಾಗಿರಿ.

ಕುಂಭ
ಕೆಲಸದ ಒತ್ತಡ ಇರಬಹುದು. ಭಾವನಾತ್ಮಕ ಭರವಸೆಗಳನ್ನು ಬಯಸುವವರು ಹಿರಿಯರು ಅವರ ನೆರವಿಗೆ ಬರುವುದನ್ನು ನೋಡಬಹುದು.

ಮೀನ
ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಇಂದು ಎಷ್ಟೇ ಒತ್ತಡ ಬಂದರೂ, ಮನೆಯವರ ವಿರುದ್ಧ ಮಾತನಾಡದಿರಿ. ಸುಖೀ ಜೀವನಕ್ಕೆ ಅದೇ ದಾರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಅಂತಾರಾಷ್ಟ್ರೀಯ ಬಾಹ್ಯಾಕಾಶ ವಿಜ್ಞಾನಿ, ನಾಸಾದಿಂದ ಬಾಹ್ಯಾಕಾಶಕ್ಕೆ ಹೋಗಿ ಸದ್ಯ ಅಲ್ಲೇ ಇರುವ ಸುನಿತಾ ವಿಲಿಯಮ್ಸ್ ಅವರ ಹುಟ್ಟುಹಬ್ಬ
- 1960: ಭಾರತ ಮತ್ತು ಪಾಕಿಸ್ತಾನದ ನಡುವೆ ಸಿಂಧೂ ನದಿ ನೀರು ಹಂಚಿಕೆಯ ಒಪ್ಪಂದ ಮಾಡಲಾಯಿತು,
- ಖ್ಯಾತ ಗಾಯಕ ಲಕ್ಕಿ ಆಲಿ ಅವರ ಹುಟ್ಟುಹಬ್ಬ

ಚಿತ್ರಸ್ಫೂರ್ತಿ

ವಿಧಾನಸೌಧದಲ್ಲಿರುವವರು ಕೆಲವರಿಗೆ ರಾಕ್ಷಸರಾಗಿ ಕಂಡರೆ, ಇನ್ನೂ ಕೆಲವರಿಗೆ ದೇವರಾಗಿ ಕಾಣಿಸುತ್ತಾರೆ! ಚಿತ್ರ ಕೃಪೆ: ಸುಧಾಕರ್ ದೇವರಾಜ್

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ದಯೆಯೇ ಧರ್ಮದ ಮೂಲ

ಒಮ್ಮೆ, ಬುದ್ಧರ ಶಿಷ್ಯ ಒಂದು ಹೊಲದ ಪಕ್ಕದ ದಾರಿಯಲ್ಲಿ ನಡೆದು ಹೋಗುತ್ತಿದ್ದ. ದಾರಿಯ ಪಕ್ಕದಲ್ಲಿದ್ದ ಒಂದು ಹೊಲದಲ್ಲಿ ಒಬ್ಬ ಯುವಕ ಉಳುಮೆ ಮಾಡುತ್ತಿದ್ದ. ಇದ್ದಕ್ಕಿದ್ದಂತೆ ಅವನು ಉಳಿಮೆ ಮಾಡುತ್ತಿದ್ದ ನೇಗಿಲು ಹೊಲದ ಅಂಚಿನಲಿದ್ದ ಮೊಲದ ಗೂಡಿಗೆ ತಗುಲಿ, ಅದರ ಗೂಡು ಒಡೆದು ಮರಿಗಳು ಚೆಲ್ಲಾಪಿಲ್ಲಿಯಾದವು. ಕೂಡಲೇ ಆ ಮರಿಗಳ ತಾಯಿ, ಗಾಬರಿಯಿಂದ ಜಿಗಿದು ಓಡತೊಡಗಿತು. ಸ್ವಲ್ಪ ದೂರ ಹೋದ ತಕ್ಷಣ ತನ್ನ ಮರಿಗಳ ನೆನಪಾಗಿ ಅವುಗಳನ್ನು ರಕ್ಷಿಸಲು ಆತಂಕದಿಂದ ಹಿಂದಕ್ಕೆ ಓಡಿ ಬಂತು. ಆಗ ಉಳುಮೆ ಮಾಡುತ್ತಿದ್ದ ಯುವಕ ತನ್ನ ಬಾರುಕೋಲಿನಿಂದ ಬೀಸುತ್ತ ಮೊಲವನ್ನು ಅಟ್ಟಿಸಿಕೊಂಡು ಹೋಗಿ ಅದನ್ನು ಹೊಡೆಯಲು ಪ್ರಯತ್ನಿಸಿದ.

ಇದನ್ನು ಗಮನಿಸಿದ ಬುದ್ಧರ ಶಿಷ್ಯ, 'ಯಾಕೆ ಮಿತ್ರಾ? ಆ ಬಡಪಾಯಿ ಮೊಲ ಏನು ತಪ್ಪು ಮಾಡಿದೆ? ಅದನ್ನೇಕೆ ನೀನು ಕೊಲ್ಲಲು ಹೊರಟಿರುವೆ' ಎಂದು ಕೇಳಿದ.

ಆಗ ಆತ, 'ಈ ಮೊಲ, ನನ್ನ ಜಮೀನಿನಲ್ಲಿ ವಾಸ ಮಾಡುತ್ತಿದೆ, ಅದಕ್ಕೆ ಅದನ್ನು ಓಡಿಸುತ್ತಿದ್ದೇನೆ. ಅದನ್ನು ಬಿಟ್ಟರೆ ಅದು ಇನ್ನೇನೂ ತಪ್ಪು ಮಾಡಿಲ್ಲ' ಎಂದ.

ಆಗ ಬೌದ್ಧ ಬಿಕ್ಷು, 'ಗೆಳೆಯ, ನೀನು ಬಹಳ ಧೈರ್ಯಶಾಲಿಯಲ್ಲವೇ? ಯಾರಾದರೂ, ನಿನ್ನ ತಂದೆ ತಾಯಿ ಮಕ್ಕಳು ಹಾಗೂ ನಿನ್ನ ಪ್ರೀತಿ ಪಾತ್ರರಾದವರನ್ನು ಕೊಂದುಹಾಕಿ ನಿನ್ನನ್ನು ಮಾತ್ರ ಉಳಿಸಿ, ನಿನ್ನ ದುಃಸ್ಥಿತಿಯನ್ನು ನೋಡಿ ಅಣಕಿಸುವಂತ ಪರಿಸ್ಥಿತಿ ಈ ಮೊಲದ ಹಾಗೆ ನಿನಗೂ ಬಂದಿದ್ದರೆ, ಆಗ ನಿನಗೇನೆನಿಸುತ್ತಿತ್ತು? ನೀನೇ ಊಹೆ ಮಾಡಿಕೋ!' ಎಂದ ಭಿಕ್ಷು.

ಈಗ ಯುವಕನಿಗೆ ನಾಚಿಕೆಯಾಯಿತು, ಆತ ಇಂತಹ ವಿಚಾರಗಳಿಗೆ ಎಂದೂ ಕೂಡಾ ತಲೆಕೆಡಿಸಿಕೊಂಡಿರಲಿಲ್ಲ. ಅದರ ಅರಿವು ಕೂಡಾ ಅವನಿಗೆ ಇರಲಿಲ್ಲ. ತನಗಿಂತ ದುರ್ಬಲರಾದ ಪ್ರಾಣಿಗಳ ಮೇಲೆ ಎಂದೂ ಕೂಡ ದಯೆ ತೋರಿಸುತ್ತಿರಲಿಲ್ಲ. ಅದು ಅವನ ತಪ್ಪಲ್ಲ, ಇದರ ಬಗ್ಗೆ ಅವನಿಗೆ ಸರಿಯಾದ ತಿಳುವಳಿಕೆ ಇರಲಿಲ್ಲ ಅಷ್ಟೇ.

ಈ ಬೌದ್ಧ ಬಿಕ್ಷುವಿನ ಬೇಟಿ, ಈ ಯುವಕನಿಗೆ ಒಂದು ನಿರ್ಣಾಯಕ ಸಂದರ್ಭವನ್ನು ಒದಗಿಸಿಕೊಟ್ಟಿತು. ತನ್ನ ಪೌರುಷ, ಧೈರ್ಯ, ತನ್ನ ಅನಿಯಂತ್ರಿತವಾದ ಶಕ್ತಿ ಪ್ರವಾಹ, ಸಮಾಜಕ್ಕೆ ಕೆಡುಕನ್ನು ಉಂಟುಮಾಡುತ್ತದೆ ಎಂದವನಿಗೆ ಅರಿವಾಯಿತು.

ಬುದ್ಧರು, ಪ್ರಾಣಿಗಳ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಹೇಳಿರುವುದು ನಿನಗೆ ತಿಳಿದಿಲ್ಲವೇ? ಪ್ರಪಂಚದ ಎಲ್ಲ ಪ್ರಾಣಿಗಳೊಂದಿಗೆ ಮೈತ್ರಿಯಿಂದ ಇರುವುದು. ಅದನ್ನೇ ಅವರು, ಮೈತ್ರಿ ಧ್ಯಾನ ಎಂದಿರುವುದು.

ಈ ಮೊಲವೂ ಕೂಡಾ ಪ್ರಪಂಚದಲ್ಲಿರುವ ಇತರ ಎಲ್ಲ ಜೀವಿಗಳಂತೆಯೇ ಬದುಕು ಸಾಗಿಸುತ್ತದೆ, ನೀನು ಅನುಭವಿಸುತ್ತಿರುವ ಕೋಮಲ ಭಾವನೆಗಳು ಅದಕ್ಕೂ ಇದೆ. ನಿನ್ನ ಹಾಗೆಯೇ, ಅದು ಕೂಡ ಬಾಲ್ಯ ಯೌವನ ವೃದ್ಧಾಪ್ಯ ಸಾವು ನೋವುಗಳನ್ನು, ಅನುಭವಿಸುತ್ತದೆ. ಎಲ್ಲ ಸಮಯದಲ್ಲಿಯೂ ನೀನು ಕೂಡಾ ಶಕ್ತಿವಂತನಾಗಿ ಆರೋಗ್ಯವಂತನಾಗಿಯೇ ಇರಲಿಲ್ಲ ಅಲ್ಲವೇ? ಕೆಲವು ವರ್ಷಗಳ ಹಿಂದೆ ನೀನು ಕೂಡಾ ಪುಟ್ಟ ಮಗು ಆಗಿದ್ದೆ, ನಿನ್ನ ಪ್ರೀತಿಯ ತಾಯಿಯ ಆರೈಕೆ, ನಿನ್ನ ತಂದೆಯ ಅಕ್ಕರೆಯ ರಕ್ಷಣೆ ಇಲ್ಲದೆ ಹೋಗಿದ್ದರೆ, ನೀನು ಇಂದು ಬದುಕಿರುತ್ತಿರಲಿಲ್ಲ ಎಂದ. ಈಗ ಮೊಲದ ಮರಿಗಳದ್ದು ಅದೇ ಪರಿಸ್ಥಿತಿ ಎಂದ. ಯುವಕ, ಬೌದ್ಧ ಬಿಕ್ಷುಗೆ ಕೈಮುಗಿಯುತ್ತ, ಪೂಜ್ಯರೇ ನೀವು ಬಹಳ ಒಳ್ಳೆಯ ಗುರುಗಳು, ನಾನು ನಿಮ್ಮಿಂದ ಇನ್ನೂ ಬಹಳಷ್ಟನ್ನು ಕಲಿಯಬೇಕೆಂದು ಸಂಕಲ್ಪ ಮಾಡಿದ್ದೇನೆ, ಎಂದು ಆ ಭಿಕ್ಷುಗೆ ಭಕ್ತಿಯಿಂದ ವಂದಿಸಿ, ಮುಂದೆ ಅವನನ್ನೇ ಅನುಸರಿಸಿದ.

ನಮ್ಮ ಮಕ್ಕಳಿಗೂ ಕೂಡ ನಾವು ಇಂತಹ ಬದುಕುವ ಕಲೆಗಳನ್ನ ಅವರ ಎಳೆವೆಯಿಂದಲೇ ಹೇಳಿಕೊಡಬೇಕು. ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ ಎಂದು ಹೇಳುತ್ತಾರೆ. ಅಂತೆಯೇ ಬಾಲ್ಯದಲ್ಲಿ ನಾವು ಕೊಟ್ಟ ಸಂಸ್ಕಾರಗಳು ನಮ್ಮ ಮಕ್ಕಳನ್ನು ಶ್ರೇಷ್ಠ ವ್ಯಕ್ತಿಗಳಾಗಿ ರೂಪಿಸುತ್ತವೆ.

ಪದಬಂಧ



ಎಡದಿಂದ ಬಲಕ್ಕೆ

1. ಮದುವೆಯ ಗಂಡಿನೊಂದಿಗೆ ಇರುವ ಒಂದು ಲೋಹ (3)
3. ಸಾಮಾನುಗಳ ಸಂಗ್ರಹಣೆ (3)
5. ಕಡೆಗೆ ತೆಗೆದುಕೊಂಡ ಸಾಲ (2)
6. ಪ್ರೀತಿಪಾತ್ರರ ಅಗಲಿಕೆ (3)
8. ತಿರುಗಿ ಬಂದಿರುವ ಎಲ್ಲೆ (2)
10. ಜೇನಿಗೆ ಅಳವಡಿಸಿರುವ ಬಳೆ (3)
12. ಮಳೆಯ ದೇವರು (3)
13. ಬೇರೆಯದೇ ನೆಪ (5)
14. ಕೈಯಿಂದ ನೇವರಿಸು (3)
15. ದಿನದ ಮಧ್ಯೆ ಸಿಲುಕಿದ ಮಂತ್ರಿ (3)
18. ಗಂಡನಿಗೆ ಮತ್ತೊಂದು ಹೆಸರು (2)
20. ಗಜ ಅಥವಾ ಆನೆ (3)
22. ಬರುವಾಗಲೇ ಕಂಡಿತು ಕ್ಷಾಮ (2)
23. ಅಂಕೆ, ಕಡಿವಾಣ (3)
24. ಜೋಡಿಯ ಆರಂಭದಲ್ಲಿ ಮೃತ್ಯು ದೇವತೆಯಿದ್ದಾನೆ (3)

ಎಡದಿಂದ ಬಲಕ್ಕೆ

1. ನಿಧಾನ ಅಥವಾ ವಿಳಂಬ (2)
2. ಸೂರ್ಯನಿಗೆ ಮತ್ತೊಂದು ಹೆಸರು (2)
3. ನೀರು ಕುಡಿಯಬೇಕೆನಿಸಿದ ಬಾಯಾರಿಕೆ (2)
4. ಮಾತು ಎಂದರ್ಥ (2)
5. ಕತ್ತೆಗೇನು ಗೊತ್ತು ಇದರ ವಾಸನೆ (3)
7. ವಾಹನ ಹೋಗುವ ಹಾದಿ (2)
9. ಒಂದು ಬಗೆಯ ಚಿನ್ನದ ನಾಣ್ಯ (3)
11. ಕಾರು ಕೊಳ್ಳುವಾಗ ಏನು ಗದ್ದಲ (3)
12. ವಿಷಯವೊಂದರ ಕುರಿತು ಪ್ರಕಟಣೆಗಾಗಿ ಬರೆದಿರುವ ನಿರೂಪಣೆ (3)
14. ಸರಸವಾದ ಮಾತುಕತೆ (3)
16. ಶಾಶ್ವತವಲ್ಲದ್ದು (3)
17. ಚಂದ್ರನಿಗೊಂದು ಪರ್ಯಾಯ ಹೆಸರು (2)
19. ಎಳ್ಳು ಎರಡಕ್ಷರದಲ್ಲೇ ಬಂದಿದೆ(2)
20. ಶಾರೀರಿಕ ವ್ಯಾಯಾಮ (2)
21. ಗೆಲುವು ಎಂದರ್ಥ (2)
22. ಕಪಟಕ್ಕೆ ಹೆಸರಾದ ಕೊಕ್ಕರೆ ಜಾತಿಗೆ ಸೇರಿದ ಪಕ್ಷಿ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಮದ 3. ಧಾಮ 6. ರಜಕ 8. ಹಿಮಾಂಶು 9. ರಣಕಹಳೆ 10. ಸತು 12. ಆದಿ 13. ಲವಣ 14. ಪ್ರಮಾದ 15. ಮೇನೆ 17. ರಗ 19. ವನಪಾಲಕ 21. ತರುಣಿ 22. ಪಾವಲಿ 23. ಕಪ್ಪೆ 24. ತಾಟು

ಮೇಲಿನಿಂದ ಕೆಳಕ್ಕೆ: 1. ದುರಭ್ಯಾಸ 2. ಮಕರ 4. ಮಹಿಳೆ 5. ಆಶುಕವಿ 7. ತಾಕತ್ತು 11. ತುಲನೆ 12. ಆದರ 15. ಮೇಲಂತಸ್ತು 16. ರಂಪಾಟ 18. ಗಯುಲಿಕ 19. ವಣಿಕ 20. ಕಪಾಟು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ವೇಗದ ಹಾದಿ ಹಿಡಿವ ಇರುವೆ

ಬೆಳಕಿನಂತೆ ಇರುವೆಗಳು ಕೂಡಾ ಹತ್ತಿರದ ಹಾದಿಗೆ ಬದಲಾಗಿ ದೂರವಾಗಿದ್ದರೂ ವೇಗದ ಹಾದಿಯನ್ನು ಅರಿಸುತ್ತವೆ ಎಂಬುದು ಜರ್ಮನಿ, ಫ್ರಾನ್ಸ್ ಮತ್ತು ಚೀನಾಗಳ ವಿಜ್ಞಾನಿಗಳು, ಕಂಪಿರುವೆಗಳ ಮೇಲೆ ನಡೆಸಲಾದ ಇತ್ತೀಚಿನ ಸಂಶೋಧನೆಯಿಂದ ತಿಳಿದುಬಂದಿದೆ. ಇರುವೆಗಳು ಹೊರಡುವಾಗ ಮುಂದಿನ ಇರುವೆಗಳು ಬಿಡುವ ರಾಸಾಯನಿಕಗಳ ಜಾಡು ಹಿಡಿದು ಹೊರಡುತ್ತವೆ. ಹೀಗಾಗಿ ಮೊದ ಮೊದಲು ಇರುವೆಗಳು ಹಲವಾರು ಹಾದಿಗಳಲ್ಲಿ ಸಾಗುತ್ತವೆ. ಆದರೆ ಮುಂದೆ ಸಾಗಿದಂತೆ ಎಲ್ಲ ಇರುವೆಗಳು ಬೇಗನೆ ತಲಪಬಹುದಾದಂತ ಹಾದಿಯ ಮೇಲೆಯೆ ಒಗ್ಗೂಡುತ್ತವೆ. ಇದು ಅವುಗಳ ಚುರುಕುತನ ಮತ್ತು ಅಚ್ಚುಕಟ್ಟಿನ ಬದುಕಿಗೂ ಕನ್ನಡಿಯಾಗಿದೆ.

ಪುಸ್ತಕ ಲೋಕ

ಘಾಚರ್ ಘೋಚರ್

ಕನ್ನಡದ ಖ್ಯಾತ ಲೇಖಕ ವಿವೇಕ ಶಾನಭಾಗ ಅವರು ಕಳೆದ ಕೆಲವು ವರ್ಷಗಳಲ್ಲಿ ರಚಿಸಿದ ಆರು ಕಥೆಗಳು ಘಾರ್ಚರ್ ಘೋಚರ್ ಕಥಾ ಸಂಕಲನದಲ್ಲಿದೆ. ಈ ಕೃತಿಯಲ್ಲಿ ಆಧುನಿಕ ಬೆಂಗಳೂರು ನಗರದ ಜೀವನವನ್ನು ಸಂವೇದನಾಶೀಲವಾಗಿ, ಸೂಕ್ಷ್ಮವಾಗಿ, ಹೃದಯಂಗಮವಾಗಿ ವಿವೇಚಿಸಲಾಗಿದೆ. ಇಲ್ಲಿ ಕೇವಲ ಸಾಂಸಾರಿಕ ರಗಳೆಯಾಗಬಹುದಾಗಿದ್ದ ಕಥನವೊಂದು ಮನುಷ್ಯ ಸ್ವಭಾವ ಮತ್ತು ವರ್ತನೆಗಳ ಹಿಂದಿನ ನಿಗೂಢತೆಗೆ ಹಿಡಿದ ಕನ್ನಡಿಯಾಗಿ ಬಿಡುತ್ತದೆ. ಒಂದಿಡೀ ತಲೆಮಾರಿನ ತಲ್ಲಣವನ್ನೂ ಇದು ಕುತೂಹಲಕಾರಿಯಾಗಿ ಕಾದಿಟ್ಟುಕೊಂಡಿದೆ.



ಟ್ವೀಟ್‌ಮೆಂಟ್

ಇಹ್ತಿಶಾಂ ಉಲ್ ಹಕ್: ಏನಾದ್ರೂ, ನಮ್ಮ ಶೆಹನ್ ಶಾ ಶಾಹಿದ್ ಆಫ್ರೀದಿ ಐಪಿಎಲ್ ಹರಾಜಿಗೆ ಬಂದರೆ, ಅವರು 200 ಕೋಟಿಗೂ ಅಧಿಕ ಮೊತ್ತಕ್ಕೆ ಬಿಕರಿಯಾಗುತ್ತಿದ್ದರು.

ನೀಚೆಸೇ ಟಾಪರ್: ಹಾಗಾದರೆ, ನಿಮ್ಮ ಶೆಹನ್ ಶಾ ಆಫ್ರೀದಿ ಆ ಮೊತ್ತವನ್ನು ವರ್ಲ್ಡ್ ಬ್ಯಾಂಕ್‌ಗೆ ಕೊಟ್ಟರೆ ನಿಮ್ಮ ದೇಶದ ಸಾಲ ಸ್ವಲ್ಪ ಕಮ್ಮಿಯಾಗುತ್ತಿತ್ತು.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ವಾಯುಮಂಡಲದ ಅಲೆಗಳ ಪ್ರಯೋಗವು ಯಾವ ಬಾಹ್ಯಾಕಾಶ ಸಂಸ್ಥೆಗೆ ಸಂಬಂಧಿಸಿದೆ?

- ಎ. ಇಸ್ರೋ.
- ಬಿ. ಸ್ಪೇಸ್ ಎಕ್ಸ್.
- ಸಿ. ಟೆಸ್ಲಾ.
- ಡಿ. ನಾಸಾ.

ಉತ್ತರ: ಡಿ. ನಾಸಾ.



ಮಾಹಿತಿ

ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾದ 'ನಾಸಾ'ವು ವಾಯುಮಂಡಲದ ಅಲೆಗಳ ಪ್ರಯೋಗ ಪ್ರಾರಂಭಿಸಲು ಸಜ್ಜಾಗಿದೆ. ಇದು ಬಾಹ್ಯಾಕಾಶ ಹವಾಮಾನದ ಮೇಲೆ ಪ್ರಭಾವ ಬೀರುವಲ್ಲಿನ ನಿರ್ಣಾಯಕ ಅಂಶವನ್ನು ತನಿಖೆ ಮಾಡಲು ವಿನ್ಯಾಸಗೊಳಿಸಲಾಗಿದೆ. ಇದರಿಂದ ಭೂಮಿಯ ವಾತಾವರಣದ ಪರಿಸ್ಥಿತಿಗಳನ್ನು ನಿಖರವಾಗಿ ತಿಳಿಯಬಹುದಾಗಿದೆ. ಅಧ್ಯಯನದ ಗಮನವು ವಾಯುಮಂಡಲದ ಗುರುತ್ವಾಕರ್ಷಣೆಯ ಅಲೆಗಳ ಮೇಲೆ ಇರುತ್ತದೆ. ಇದು ನಿರ್ದಿಷ್ಟ ರೀತಿಯ ಲಂಬ ತರಂಗವಾಗಿದೆ.

ಜೀವನ ನಡೆಸುತ್ತ, ಸವೆಸುತ್ತ ಬರುವ ಹೆಣ್ಣಿನ ಪಾತ್ರಗಳು!

● ಸುಮನಾ ರಮಾನಂದ, ಮುಂಬೈ

ಈ ಜಗತ್ತಿನಲ್ಲಿ ಬದುಕುತ್ತಿರುವ ಎಲ್ಲರೂ ಒಂದಲ್ಲ ಒಂದು ಪಾತ್ರಧಾರಿಯೇ ಆಗಿರುತ್ತಾರೆ.ಹೀಗೆ ಬೆಳೆಯುವ ಪ್ರತಿಯೊಂದು ಪಾತ್ರಗಳಿಗೂ ಅವರದೇ ಆದ ಭಾವನೆಗಳಿರುತ್ತವೆ. ಜೀವನದಲ್ಲಿ ಪರಸ್ಪರರ ಪಾತ್ರಗಳಿಗೆ ಸರಿಯಾದ ಸ್ಪಂದನೆ, ಕಾಳಜಿ ದೊರೆತರೆ ಮಾತ್ರ ಬದುಕಿನಲ್ಲಿ ಯಶಸ್ಸು, ದಿನನಿತ್ಯದ ಬಾಳಿನಲ್ಲಿ ನೆಮ್ಮದಿ ಸಿಗಲು ಸಾಧ್ಯ. ಹಾಗಾಗಿ ನಾನಿಂದು ಬರೆಯಲು ಪ್ರಯತ್ನಿಸಿರುವುದು ಪ್ರತಿಯೊಬ್ಬರ ಬಾಳಿನಲೂ ಅನ್ವಯಿಸುವಂತಹ ಹೆಣ್ಣಿನ ಪಾತ್ರಗಳ ಬಗ್ಗೆ.

ಪ್ರತಿ ಮನುಷ್ಯನ ಜೀವನದಲ್ಲಿ ಹೆಣ್ಣಿನ ಮಹತ್ವದ ಪಾತ್ರವಿರುವುದು ಲೋಕವೇ ತಿಳಿದಿರುವ ಸತ್ಯವಾಗಿದೆ. ಅವನ ಬದುಕಿನಲ್ಲಿ ಹೆತ್ತ ತಾಯಿಯಾಗಿ, ಒಡಹುಟ್ಟಿದ ಸಹೋದರಿಯಾಗಿ,ಪ್ರೀತಿಯ ಮಡದಿಯಾಗಿ, ಸಂತೈಸುವ ಗೆಳತಿಯಾಗಿ, ಮುದ್ದಿನ ಮಗಳಾಗಿ... ನಿರ್ವಹಿಸುವ ಪಾತ್ರಗಳ ಜವಾಬ್ದಾರಿ ಮಹತ್ತರವಾಗಿರುತ್ತದೆ. ಒಂದೊಂದು ಪಾತ್ರಕ್ಕೂ ಒಂದೊಂದು ಅರ್ಥವಿರುವುದಂತೂ ದಿಟ. ಆದರೆ ಹೆಣ್ಣಿನ ಮೂಲಕವೇ ಜನ್ಮತಳೆದು ಹೆಣ್ಣನ್ನೇ ಶೋಷಿಸುವ ಮಟ್ಟಕ್ಕೆ ಬೆಳೆದಿರುವ ಈ ಸಮಾಜದ ನಿಲುವು ಮಾತ್ರ ಶೋಚನೀಯವಾಗಿದೆ. ಎಲ್ಲರೂ ಹೀಗೆ ಇರುವುದಿಲ್ಲ, ಆದರೆ ಕೆಲವು ಜನರಿಗೆ ತಮ್ಮ ಬಾಳಿನಲ್ಲಿರುವ ಹೆಣ್ಣಿನ ಪಾತ್ರಗಳ ಅರಿವೇ ಇರುವುದಿಲ್ಲ. ಅರಿವು ಮೂಡುವ ವೇಳೆಗೆ ಅವಳ ಪಾತ್ರವೇ ಮುಗಿದಿರುತ್ತದೆ!!

ಮೊದಲಿಗೆ ತಾಯಿಯಾಗಿ ಅವಳ ಪಾತ್ರವು ಕಂದನ ಪ್ರತಿಯೊಂದು ಹೆಜ್ಜೆಯಲ್ಲೂ ತನ್ನ ಛಾಪು ಮೂಡಿಸಿ ಅವನನು ಏಳಿಗೆಯ ಪಥದತ್ತ ಸಾಗುವಂತೆ ಮಾಡುವಂತೆ ಪ್ರೇರೇಪಿಸುತ್ತದೆ. ತಾಯಿಗಿಂತ ಮಿಗಿಲಾದ ದೇವರಿಲ್ಲ ಎಂಬ ನಾಣ್ಣುಡಿಯಂತೆ ಮಕ್ಕಳಿಗೆ ಅವಳು ಕಲಿಸುವ ಮೌಲ್ಯಗಳಲ್ಲಿ, ನೀಡುವ ಸಂಸ್ಕಾರಗಳಲ್ಲಿ, ಕೊಡುವ ಪೋಷಣೆಯಲ್ಲಿ ಯಾವ ತರಹದ ಕುಂದುಕೊರತೆಗಳನ್ನು ಮಾಡದೇ ಅಚ್ಚುಕಟ್ಟಾಗಿ ನಿರ್ವಹಿಸಿ ನಿಜಕ್ಕೂ ದೇವರ ತದ್ರೂಪವೆನಿಸಿ ಸೈಯೆನಿಸಿ ಕೊಳ್ಳುತ್ತಾಳೆ.

ತಾಯಿಯು ತನ್ನ ಕಂದನನು ಗರ್ಭದಲ್ಲಿ ಒಂಬತ್ತು ತಿಂಗಳು ಹೊತ್ತು ಹೆತ್ತು ಅವನನು ದೊಡ್ಡ ಮಾಡುವುದರಲ್ಲೇ ಅರ್ಧ ಆಯಸ್ಸು ಕಳೆದಿರುತ್ತಾಳೆ. ಆ ಹೆತ್ತ ಕರುಳಿಗೆ ಮಕ್ಕಳ ಏಳಿಗೆಯನ್ನು ನೋಡುವುದರಲಿಯೇ ಸಂತಸ. ನಂತರ ಬೆನ್ನಿಗಂಟಿದ ಸೋದರಿಯಾಗಿ ಅವಳ ಪಾತ್ರ ತನ್ನ ಬೆಳವಣಿಗೆಯ ಜೊತೆಗೆ ತನ್ನ ಒಡಹುಟ್ಟಿದವರನ್ನೂ ಬೆಳೆಸುವ ಪಣತೊಟ್ಟಿರುವಂತಿರುತ್ತದೆ. ಅಣ್ಣತಮ್ಮಂದಿರನ್ನು ಗೋಳಾಡಿಸುತ್ತಾ, ರೇಗಿಸುತ್ತಾ, ಅವರಿಂದ ಬೈಗುಳಗಳ ತಿಂದು ಅವರಿಗೂ ತಾಯ್ತಂದೆಯರಿಂದ ಗದರಿಸಿಸುತಾ, ತಾನು ಪತಿಯ ಮನೆಬೆಳಗಲು ಹೊರಟಾಗ ಅವರ ಕಣ್ಣಾಲಿಗಳೂ ತುಂಬುವಂತೆ ಮಾಡುತ್ತಾಳೆ.

ಇನ್ನು ಅವನ ಬಾಳಿನಲ್ಲಿ ಮಡದಿಯ ಪಾತ್ರವನ್ನು ಬರೆದಷ್ಟೂ ಮುಗಿಯದು.ಅವನ ಒಂಟಿತನದ ಜೀವನದಲ್ಲಿ ತಂಪಾದ ತಂಗಾಳಿಯಂತೆ ಬಂದು ಅವನ ಎಲ್ಲ ಬೇಕುಬೇಡಗಳನ್ನೆಲ್ಲ ಗಮನಿಸಿ ಸಂಸಾರದಲ್ಲಿ ನೆಮ್ಮದಿ ಅರಳುವಂತೆ ಮಾಡುವ ಜವಾಬ್ದಾರಿಯನ್ನು ಹೊಂದಿರುವಳವಳು. ಮಕ್ಕಳು ಮಾಡುವ ಜಗಳ, ಗಲಾಟೆಗಳಿಗೆ ಪತಿಯ ಕೆಲಸಗಳಿಗೆ ಕಿರಿಕಿರಿಯಾಗದಂತೆ ನೋಡಿಕೊಳ್ಳುವ ಚಾಕಚಕ್ಯತೆ ಸಹ ಅವಳಿಗೆ ಸಹಜವಾಗಿ ಒಲಿದು ಬಂದಿರುತ್ತದೆ.ನಮ್ಮ ಸತ್ಯೇಶ್ ಸರ್ ಅವರ ಒಂದು ಚೌಪದಿಯಲ್ಲಿ ಹೀಗೆ ಬರೆದಿದ್ದಾರೆ.

ಸಹನೆಯನು ತೋರುತ್ತಾ ಒಡಕು ಮಾತುಗಳಿರದೆ
ಸಹಧರ್ಮಿಣಿಯ ನೀನು ನಡೆಸಿಕೊಂಡಿರಲು
ಸಹಜವಾಗಿಯೇ ಅವಳು ನಿನ್ನೆಲ್ಲ ನೋವುಗಳ
ಸಹಭಾಗಿಯಾಗುವಳು - ನವ್ಯಜೀವಿ

ಈ ಚೌಪದಿಯ ತಾತ್ಪರ್ಯವೇನೆಂದರೆ ಸಂಸಾರದಲ್ಲಿ ಒಬ್ಬ ಪತಿಯಾದವನು ತನ್ನ ಪತ್ನಿಯನ್ನು ಸಹನೆಯಿಂದ, ಕೊಂಕುಮಾತುಗಳಿಂದ ಅವಳ ನೋಯಿಸದೇ ಅವಳ ಮನಸ್ಸಿಗೆ ಹಿತವಾದ ರೀತಿಯಲ್ಲಿ ನಡೆದುಕೊಂಡರೆ, ಅವಳೂ ಸಹ ತನ್ನ ಪತಿಯ ಎಲ್ಲ ಸಂಕಷ್ಟದಲ್ಲಿ, ಅನುಭವಿಸುವ ನೋವುಗಳಲ್ಲಿ ಸಮಭಾಗಿಯಾಗಿ ಸಂಸಾರದಲ್ಲಿ ಎಲ್ಲರಿಗೂ ಒಳಿತಾಗಲಿ ಎಂಬಂತೆ ನಡೆದುಕೊಳ್ಳುತ್ತಾಳೆ ಎನ್ನುವುದು.

ಅದೆಷ್ಟು ಸತ್ಯವಡಗಿದೆಯಲ್ಲವೇ ಈ ಚೌಪದಿಯಲ್ಲಿ. ಪತ್ನಿ ಸಂಸಾರದ ಎಲ್ಲರ ಸಂತಸಕ್ಕೆ ಕಾರಣಳಾಗಬೇಕಾದರೆ ತನ್ನನು ತಾನಿದ್ದಂತೆಯೇ ಅರ್ಥಮಾಡಿಕೊಳ್ಳುವ ಪತಿಯ ಒಲವಿದ್ದರೆ ಮಾತ್ರ ಸಾಧ್ಯವಾಗುವುದಂತೂ ದಿಟ.

ಇನ್ನು ಅವಳು ನಿರ್ವಹಿಸುವ ಮಗಳ ಪಾತ್ರವಂತೂ ತುಂಬಾ ಸೊಗಸು ತರುವಂತಹದ್ದು ಪ್ರತಿಯೊಬ್ಬರ ಜೀವನದಲ್ಲಿ. ಪುಟ್ಟ ಪುಟ್ಟ ಕಾಲ್ಗಳಲಿ ಗೆಜ್ಜೆನಾದ ಮಾಡುತ್ತಾ ಮನೆತುಂಬಾ ಓಡಾಡುತ್ತಾ ಚಿನಕುರಳಿಯಂತೆ ಪಟಪಟನೇ ಮಾತಾಡುತ್ತಾ ಎಲ್ಲರ ಮೊಗದಲಿ ಸಂತಸದ ಮುಗುಳ್ನಗೆಯರಳಿಸುವವಳು ಮಗಳೇ ಆಗಿರುವಳು. ಅಪ್ಪನ ಕಷ್ಟಗಳಿಗೆ ಸ್ಪಂದಿಸುತಾ ಪ್ರೀತಿಯಿಂದ ಅವರ ಕಾಳಜಿ ಮಾಡಿ, ಅಮ್ಮನ ಕೆಲಸಗಳಲ್ಲಿ ಸಹಾಯ ಮಾಡುತ್ತಾ, ಅಣ್ಣಂತಮ್ಮಂದಿರ ಮುದ್ದಿನ ಕಣ್ಮಣಿಯಾಗಿ ಬೆಳೆಯುವುದು ಅರಿಯುವುದರಲ್ಲಿ ಮದುವೆಯಾಗಿ ಪತಿಯೊಂದಿಗೆ ಹೊರಟಾಗ ಕಂಗಳಲಿ ಕಂಬನಿಯಾಗಿ ಉಳಿಯುವವಳೇ ಮಗಳಾಗಿರುವಳು.

ಇನ್ನು ಮುಂದೆ ಸಾಗುತ್ತಾ ಅವಳು ನಿರ್ವಹಿಸುವ ಅಜ್ಜಿಯು ಪಾತ್ರವೂ ಸ್ವಾರಸ್ಯವಾಗಿರುತ್ತದೆ. ಪರಂಪರೆಯ ಪ್ರತೀಕದಂತಿರುವ ಅವಳಿಂದ ಕಲಿಯುವುದು ಬಹಳವಿರುತ್ತದೆ.ಪೌರಾಣಿಕ ಕಥೆಗಳಿಂದ ಹಿಡಿದು, ತರತರದ ರುಚಿಯಾದ ಅಡುಗೆಯ ಅಚ್ಚುಕಟ್ಟುತನವನ್ನೂ ಎಲ್ಲರಿಗೂ ಕಲಿಸುತ್ತಾಳವಳು. ತಾಯ್ತಂದೆಯರ ಬೈಗುಳದಿಂದ ತನ್ನ ಮೊಮ್ಮಕ್ಕಳನು ರಕ್ಷಿಸುವ ಗುರಿಯೇ ಹೊಂದಿರುತ್ತಾಳವಳು. ಅವಳ ಅನುಭವದ ಮೂಸೆಯಿಂದ ಹೊರಬಂದ ನೀತಿಗಳನ್ನು ಬಾಳಲಿ ಅಳವಡಿಸಿಕೊಂಡರೇ ಒಳಿತೇ ಆಗುವುದು ಎಲ್ಲರಿಗೂ.

ಇನ್ನು ಕಡೆಯದಾಗಿ ಅವಳು ನಿರ್ವಹಿಸುವ ಗೆಳತಿಯ ಪಾತ್ರವಂತೂ ಪದಗಳಿಗೆ ನಿಲುಕದು. ಅವನ ವೈಯಕ್ತಿಕ ಜೀವನದಲ್ಲಿ, ಕಾರ್ಯನಿರ್ವಹಿಸುವ ಆಫೀಸಿನಲ್ಲಿ ಏನೇ ತೊಂದರೆಯಾದರೂ ಹೆಗಲು ನೀಡಿ ಧೈರ್ಯದಿಂದ ಸಮಸ್ಯೆಗಳನು ಎದುರಿಸಿ ಗೆಲ್ಲಿಸುವವಳಾಗಿರುತ್ತಾಳೆ. ಅವನ ಬಾಳಲಿ ಸ್ಫೂರ್ತಿಯ ಚಿಲುಮೆಯಾಗಿ ಅವನ ಯಶಸ್ವಿ ಜೀವನದಲಿ ದಾರಿದೀಪವಾಗಿರುತ್ತಾಳೆ.

ಹೀಗೆ ಪ್ರತಿಯೊಬ್ಬರ ಜೀವನದಲ್ಲೂ ಹೆಣ್ಣಿನ ಪಾತ್ರಗಳ ವಿವಿಧ ಮಜಲುಗಳು ಅನಾವರಣಗೊಳ್ಳುತ್ತದೆ. ಅವೆಲ್ಲವನೂ ಸಮರ್ಥವಾಗಿ ನಿಭಾಯಿಸುವ ತಾಳ್ಮೆಯನ್ನು, ಉದಾರತೆಯನ್ನು ಒಬ್ಬ ಹೆಣ್ಣುಮಗಳು ಖಂಡಿತಾ ಹೊಂದಿರುತ್ತಾಳೆ ಎಂದರೆ ಅತಿಶಯೋಕ್ತಿಯಾಗದು. ಇದಕ್ಕೆ ಪೂರಕವಾಗಿ ದಿವಿಜರ ಕಗ್ಗವೊಂದು ಹೀಗೆ ಸಾಗುತ್ತದೆ.

ಮುಳುಗದಿರು,ಜೀವನದ ತೆರೆಯ ಮೇಲಿಜುತಿರು
ಒಳಿತನಾಗಿಸು,ಕೊಡುತ ಕೊಳುತ ಸಂತಸವ
ಕಳವಳಂಬಡದೆ ನಡೆ ಕಡೆಯ ಕರೆ ಬಂದಂದು
ಮಿಳಿತನಿರು ವಿಶ್ವದಲ್ಲಿ - ಮಂಕುತಿಮ್ಮ

ಯಾವ ಪಾತ್ರವಾದರೂ ಕಡೆಗೆ ನಮ್ಮ ದಿವಿಜರೇ ತಮ್ಮ ಈ ಕಗ್ಗದಲ್ಲಿ ಹೇಳಿರುವಂತೆ ಎಲ್ಲಾ ಪಾತ್ರಗಳನೂ ಒಳ್ಳೆಯ ರೀತಿಯಲ್ಲಿ ಮುಗಿಸಿ, ಸಂತಸವ ಬದುಕಲಿ ಕೊಡುತಾ, ಕಳವಳ ಪಡದೆ ಆ ದೈವನಲ್ಲಿ ವಿಲೀನವಾಗುವುದೇ ಬದುಕಿನ ಶೋಧದ ಸತ್ಯವಲ್ಲವೇ!!?

ಸಮಾಚಾರ ಸಣ್ಣದಲ್ಲ

ಪಂಜಾಬ್ ಕಿಂಗ್ಸ್‌ಗೆ ಪಾಟಿಂಗ್ ಕೋಚ್

ಮುಂಬಯಿ: ಕಳೆದ ಕೆಲ ಆವೃತ್ತಿಗಳಲ್ಲಿ ಡೆಲ್ಲಿ ತಂಡದ ಮುಖ್ಯ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದ ಆಸ್ಟ್ರೇಲಿಯಾದ ಮಾಜಿ ನಾಯಕ ರಿಕಿ ಪಾಂಟಿಂಗ್ ಅವರನ್ನು ಮುಂದಿನ ಆವೃತ್ತಿಯ ಐಪಿಎಲ್ ಆರಂಭಕ್ಕೂ ಮುನ್ನವೇ ಅವರನ್ನು ತಂಡದಿಂದ ಕೈಬಿಟ್ಟಿತ್ತು. ಇದೀಗ ಪಾಂಟಿಂಗ್ ಪಂಜಾಬ್ ಕಿಂಗ್ಸ್ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ. ವರದಿಯಾದ ಪ್ರಕಾರ ಪಂಜಾಬ್ ಕಿಂಗ್ಸ್ ಪಾಂಟಿಂಗ್ ಜತೆ ಎಲ್ಲ ಮಾತುಕತೆ ನಡೆಸಿದ್ದು ಪಾಂಟಿಂಗ್ ಕೂಡ ಕೋಚ್ ಆಗಲು ಒಪ್ಪಿಗೆ ಸೂಚಿಸಿದ್ದಾರೆ ಎನ್ನಲಾಗಿದೆ. ಅಧಿಕೃತ ಪ್ರಕಟನೆ ಶೀಘ್ರದಲ್ಲೇ ಪ್ರಕಟಗೊಳ್ಳಬೇಕಿದೆ. ಪಾಂಟಿಂಗ್ ಅವರಿಂದ ತೆರವಾದ ಡೆಲ್ಲಿ ತಂಡದ ಕೋಚ್ ಹುದ್ದೆಗೆ ಭಾರತ ಹಾಗೂ ಡೆಲ್ಲಿ ತಂಡದ ಮಾಜಿ ಆಟಗಾರ ಯುವರಾಜ್ ಸಿಂಗ್ ಕೋಚ್ ಆಗುವ ಸಾಧ್ಯತೆ ಕಂಡುಬಂದಿದೆ. ಕಳೆದ ಬಾರಿ ಅತ್ಯಂತ ಕಳಪೆ ಪ್ರದರ್ಶನ ತೋರಿದ್ದ ಡೆಲ್ಲಿ, ಈ ಬಾರಿಯ ಆವೃತ್ತಿಯಲ್ಲಿ ಆಡಿದ 14 ಪಂದ್ಯಗಳಲ್ಲಿ 7 ಪಂದ್ಯ ಗೆದ್ದು ಅಂಕಪಟ್ಟಿಯಲ್ಲಿ 6 ನೇ ಸ್ಥಾನಿಯಾಗಿತ್ತು.

ಒಗ್ಗಟ್ಟೇ ಗೆಲುವಿನ ಮಂತ್ರ: ಪ್ರೀತ್

ದೆಹಲಿ: ತಂಡದ ಒಗ್ಗಟ್ಟಿನ ಮನೋಭಾವ ಮತ್ತು ಆಟಗಾರರ ನಡುವಿನ ಉತ್ತಮ ಒಡನಾಟದಿಂದಾಗಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆಲ್ಲಲು ಸಾಧ್ಯವಾಯಿತು ಎಂದು ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಹೇಳಿದ್ದಾರೆ. ಜುಗರಾಗ್ ಸಿಂಗ್ ಗಳಿಸಿದ ಗೋಲಿನ ನೆರವಿನಿಂದ ಮಂಗಳವಾರ ಭಾರತ ತಂಡವು 1-0ರಿಂದ ಆತಿಥೇಯ ಚೀನಾ ತಂಡವನ್ನು ಮಣಿಸಿ, ಐದನೇ ಬಾರಿ ಏಷ್ಯನ್ ಚಾಂಪಿಯನ್ ಟ್ರೋಫಿಯನ್ನು ಮುಡಿಗೇರಿಸಿ ಕೊಂಡಿತು. ಗೆಲುವಿನ ಬಳಿಕ ಪ್ರತಿಕ್ರಿಯಿಸಿದ ಹರ್ಮನ್‌ಪ್ರೀತ್, ತಂಡದ ಆಟಗಾರರು ಒಬ್ಬರಿಗೊಬ್ಬರು ಪ್ರಾಣಕೊಡಲು ತಯಾರಿದ್ದೇವೆ. ನಮ್ಮ ನಡುವೆ ಅಂತಹ ಬಾಂಧವ್ಯ ಬೆಳೆದಿದೆ. ಇದು ಇತ್ತೀಚೆಗೆ ಯಶಸ್ಸು ಸಾಧಿಸುತ್ತಿರುವುದಕ್ಕೆ ಪ್ರಮುಖ ಕಾರಣ ಎಂದಿದ್ದಾರೆ. ಫೈನಲ್ ಹಣಾಹಣಿ ನಿಜವಾಗಿಯೂ ತೀವ್ರ ಪೈಪೋಟಿಯಿಂದ ಕೂಡಿತ್ತು. ಆತಿಥೇಯ ದೇಶದ ಆಟಗಾರರು ಪಂದ್ಯದುದ್ದಕ್ಕೂ ನಮ್ಮನ್ನು ಕಟ್ಟಿಹಾಕುವ ಪ್ರಯತ್ನ ಮಾಡುತ್ತಿದ್ದರು. ಹೀಗಾಗಿ, ಗೋಲು ಅವಕಾಶ ಸೃಷ್ಟಿಸುವುದು ನಮಗೆ ಕಷ್ಟವಾಯಿತು ಎಂದು ಹಾಕಿ ಇಂಡಿಯಾದ ಪ್ರಕಟಣೆಯಲ್ಲಿ ಹರ್ಮನ್‌ಪ್ರೀತ್ ತಿಳಿಸಿದ್ದಾರೆ.

ಗಂಭೀರ್ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಮೊದಲನೇ ಪಂದ್ಯ | ಭಾರತಕ್ಕೆ ವಿಶ್ವಕಪ್ ಗೆದ್ದಿರುವ ಹುಮ್ಮಸ್ಸು | ಬಾಂಗ್ಲಾಗೆ ಪಾಕಿಸ್ತಾನವನ್ನು ಸೋಲಿಸಿದ ಉಮೇದು

ಇಂದಿನಿಂದ ಭಾರತ-ಬಾಂಗ್ಲಾ ನಡುವೆ ಟೆಸ್ಟ್

ಚೆನ್ನೈ: ಪಾಕಿಸ್ತಾನವನ್ನು ಅವರದೇ ಅಂಗಳದಲ್ಲಿ 2-0 ಅಂತರದಿಂದ ಮಣಿಸಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಪ್ರವಾಸಿ ಬಾಂಗ್ಲಾದೇಶ, ಆತಿಥೇಯ ಭಾರತ ವಿರುದ್ಧ ಟೆಸ್ಟ್ ಸಮರಕ್ಕೆ ಇಳಿಯಲಿದೆ. ಇದು 2 ಪಂದ್ಯಗಳ ಕಿರು ಸರಣಿಯಾಗಿದ್ದು ಮೊದಲ ಟೆಸ್ಟ್ ಗುರುವಾರದಿಂದ ಆರಂಭವಾಗಲಿದೆ. ಎಂ.ಎ. ಚಿದಂಬರಂ ಸ್ಟೇಡಿಯಂನಲ್ಲಿ ಪಂದ್ಯ ನಡೆಯಲಿದೆ. ಇದು ನೂತನ ಕೋಚ್ ಗೌತಮ್ ಗಂಭೀರ್ ಅವರ ಮೊದಲ ತವರು ಪಂದ್ಯವಾಗಿದೆ. ಹೀಗಾಗಿ ನಿರೀಕ್ಷೆ ಬೆಟ್ಟದಷ್ಟಿದೆ.

ರಾಹುಲ್‌ಗೆ 5ನೇ ಕ್ರಮಾಂಕ: ಬ್ಯಾಟಿಂಗ್ ಫಾರ್ಮ್ ಕಳೆದುಕೊಂಡಿರುವ ಕನ್ನಡಿಗ, ಕೆ.ಎಲ್ ರಾಹುಲ್‌ಗೆ ಈ ಸರಣಿ ಅಗ್ನಿ ಪರೀಕ್ಷೆ ಎಂದರೂ ತಪ್ಪಾಗಲಾರದು. ಈಗಾಗಲೇ ಕಳಪೆ ಬ್ಯಾಟಿಂಗ್‌ನಿಂದ ಅವರು ಏಕದಿನ ಮತ್ತು ಟಿ20 ತಂಡದಲ್ಲಿ ಸ್ಥಾನ ಕಳೆದುಕೊಂಡಿದ್ದಾರೆ. ತಂಡದಲ್ಲಿ ಉಳಿಯಬೇಕಿದ್ದರೆ ಟೆಸ್ಟ್‌ನಲ್ಲಿ ನಿರೀಕ್ಷಿತ ಪ್ರದರ್ಶನ ತೋರಲೇ ಬೇಕು. ರಾಹುಲ್ ಅವರನ್ನು ಮೊದಲ ಪಂದ್ಯದಲ್ಲಿ ಆಡಿಸುವ ಬಗ್ಗೆ ನಾಯಕ ರೋಹಿತ್ ಸುದ್ದಿಗೋಷ್ಠಿಯಲ್ಲಿ ಸುಳಿವು ಕೊಟ್ಟಿದ್ದಾರೆ. 5ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ನಡೆಸುವ ಸಾಧ್ಯತೆ ಇದೆ.

ರೋಹಿತ್ ಜತೆ ಜೈಸ್ವಾಲ್ ಆರಂಭಿಕನಾಗಿ ಕಣಕ್ಕಿಳಿದರೆ, ದ್ವಿತೀಯ ಕ್ರಮಾಂಕದಲ್ಲಿ ಶುಭಮನ್ ಗಿಲ್, ಆ ಬಳಿಕ ಕೊಹ್ಲಿ ಆಡಬಹುದು. ಪಂತ್ 2022ರಲ್ಲಿ ಸಂಭವಿಸಿದ್ದ ಕಾರು ಅಪಘಾತದ ಬಳಿಕ ಆಡುತ್ತಿರುವ ಮೊದಲ ಟೆಸ್ಟ್ ಸರಣಿ ಇದಾಗಿದೆ. ಪಂತ್ ಮೊದಲ ಆಯ್ಕೆ ಕೀಪರ್ ಆದ ಕಾರಣ ಧ್ರುವ್ ಜುರೇಲ್‌ಗೆ ಅವಕಾಶ ಕಷ್ಟ.

ಸ್ಪಿನ್‌ಗೆ ಅಗ್ರ ಪ್ರಾಶಸ್ತ್ಯ: ಬೌಲಿಂಗ್ ವಿಭಾಗದತ್ತ ಬಂದಾಗ ಸ್ಪಿನ್ನರ್‌ಗಳಿಗೆ ಮೊದಲ ಆದ್ಯತೆ ನೀಡಬೇಕಾಗುತ್ತದೆ. ಏಷ್ಯನ್ ಟ್ರ್ಯಾಕ್ ಆದ ಕಾರಣ ತಿರುವು ಪಡೆಯುವ ಸಾಧ್ಯತೆ ಹೆಚ್ಚು. ಇದು ಮಾತ್ರವಲ್ಲದೆ ಚೆಪಾಕ್ ಮೈದಾನ ಸಾಮಾನ್ಯವಾಗಿ ಸ್ಪಿನ್ನರ್‌ಗಳಿಗೆ ಹೆಚ್ಚಿನ ನೆರವು ನೀಡುವ ಕಾರಣ ಈ ಪಂದ್ಯದಲ್ಲಿ ಭಾರತ ತ್ರಿವಳಿ ಸ್ಪಿನ್ ಅಸ್ತ್ರವನ್ನು ಪ್ರಯೋಗಿಸುವ ಸಾಧ್ಯತೆ ಹೆಚ್ಚು. ಇಲ್ಲಿ ಆರ್.ಅಶ್ವಿನ್, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲದೀಪ್ ಯಾದವ್ ಇದ್ದಾರೆ. ಮೂರು ಆಯ್ಕೆಗಳಿದ್ದರೆ ಅನುಭವಿ ಅಶ್ವಿನ್, ಜಡೇಜಾ ಮತ್ತು ಕುಲ್ದೀಪ್ ಆಯ್ಕೆ ಸಾಧ್ಯತೆ ಹೆಚ್ಚು. ವೇಗಿಗಳಾಗಿ ಜಸ್ಪ್ರೀತ್ ಬುಮ್ರಾ ಮತ್ತು ಸಿರಾಜ್ ಕಣಕ್ಕಿಳಿಯಬಹುದು.

ಬಾಂಗ್ಲಾ ವಿರುದ್ಧ ಅಜೇಯ ದಾಖಲೆ: ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾದೇಶವಿನ್ನೂ ಭಾರತವನ್ನು ಸೋಲಿಸಿಲ್ಲ. ಈವರೆಗಿನ 13 ಟೆಸ್ಟ್‌ಗಳಲ್ಲಿ ಭಾರತ 11 ರಲ್ಲಿ ಜಯ ಸಾಧಿಸಿದೆ. 2 ಪಂದ್ಯ ಡ್ರಾಗೊಂಡಿದೆ. ಕೊನೆಯ ಪಂದ್ಯ ನಡೆದದ್ದು 2022ರಲ್ಲಿ. ಢಾಕಾದಲ್ಲಿ ನಡೆದ ಈ ಪಂದ್ಯವನ್ನು ಭಾರತ 3 ವಿಕೆಟ್‌ಗಳಿಂದ ಗೆದ್ದು ಬೀಗಿತ್ತು. ಭಾರತ ತಂಡ ಇದೇ ಲಯದಲ್ಲಿ ಸಾಗಬಹುದೇ ಎಂಬುದೊಂದು ನಿರೀಕ್ಷೆ.

ಬಾಂಗ್ಲಾ ಕೂಡ ಬಲಿಷ್ಠ: ಪಾಕಿಸ್ತಾನ ವಿರುದ್ಧ ಮಾಡಿದ ಕಾರ್ಯತಂತ್ರವನ್ನೇ ಭಾರತ ವಿರುದ್ಧವೂ ಪ್ರಯೋಗಿಸಲಿದ್ದೇವೆ ಎಂದು ಬಾಂಗ್ಲಾದೇಶ ತಂಡದ ನಾಯಕ ನಜ್ಮುಲ್ ಹುಸೇನ್ ಶಾಂತೊ ಪಂದ್ಯಕ್ಕೂ ಮುನ್ನವೇ ಹೇಳಿದ್ದಾರೆ. ಈ ಹಿಂದಿಗಿಂತ ಬಾಂಗ್ಲಾ ಈ ಬಾರಿ ಬಲಿಷ್ಠವಾಗಿ ಗೋಚರಿಸಿದೆ. ಅನುಭವಿ ಆಟಗಾರರ ಜತೆ ಯುವ ಆಟಗಾರರು ಕೂಡ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಬಾಂಗ್ಲಾದೇಶದ ಬ್ಯಾಟಿಂಗ್ ಬಲಿಷ್ಠ ಎಂಬುದರಲ್ಲಿ ಎರಡು ಮಾತಿಲ್ಲ. ಶಕಿಬ್ ಅಲ್ ಹಸನ್, ಮುಶ್ಫಿಕರ್ ರಹೀಂ, ಲಿಟ್ಟನ್ ಕುಮಾರ್ ದಾಸ್, ಮೆಹಿದಿ ಹಸನ್ ಮತ್ತು ನಜ್ಮುಲ್ ಹೊಸೈನ್ ಶಾಂಟೊ ಯಾವುದೇ ಹಂತದಲ್ಲಿಯೂ ತಂಡಕ್ಕೆ ನೆರವಾಗಬಲ್ಲರು.

ಸಂಭಾವ್ಯ ತಂಡಗಳು

ಭಾರತ: ರೋಹಿತ್ ಶರ್ಮ(ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ರಿಷಭ್ ಪಂತ್(ವಿ.ಕೀ), ರವೀಂದ್ರ ಜಡೇಜಾ, ರವಿಚಂದ್ರನ್ ಅಶ್ವಿನ್, ಅಕ್ಷರ್ ಪಟೇಲ್ / ಕುಲದೀಪ್ ಯಾದವ್, ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್.

ಬಾಂಗ್ಲಾದೇಶ: ನಜ್ಮುಲ್ ಹೊಸೈನ್ ಶಾಂಟೊ (ನಾಯಕ), ಝಾಕಿರ್ ಹಸನ್, ಮೊಮಿನುಲ್ ಹಕ್, ಮುಶ್ಫಿಕರ್ ರಹೀಮ್, ಲಿಟ್ಟನ್ ಕುಮಾರ್ ದಾಸ್(ವಿ.ಕೀ), ಶಕೀಬ್ ಅಲ್ ಹಸನ್, ಮೆಹಿದಿ ಹಸನ್ ಮಿರಾಜ್, ತೈಜುಲ್ ಇಸ್ಲಾಂ, ಹಸನ್ ಮಹಮ್ಮದ್, ಟಸ್ಕಿನ್ ಅಹ್ಮದ್. ನಹಿದ್ ರಾಣಾ.

ಪಿಚ್ ರಿಪೋರ್ಟ್

ಚೆನ್ನೈ ಭಾರತದ ಅತೀ ಪುರಾತನ ಕ್ರಿಕೆಟ್ ತಾಣ. ಭಾರತಕ್ಕೆ ಟೆಸ್ಟ್ ಮಾನ್ಯತೆ ಲಭಿಸಿದ ಎರಡೇ ವರ್ಷದಲ್ಲಿ (1934) ಇಲ್ಲಿ ಮೊದಲ ಪಂದ್ಯ ನಡೆದಿತ್ತು. ಇದು ಸ್ಪಿನ್ ಸ್ನೇಹಿ ಪಿಚ್ ಆಗಿದೆ. ಆದರೆ ಈ ಬಾರಿ ಕೆಂಪು ಮಣ್ಣಿನ ಬೌನ್ಸಿ ಪಿಚ್ ನಿರ್ಮಿಸಲಾಗಿದೆ. ಆರಂಭದಲ್ಲಿ ವೇಗಿಗಳಿಗೆ ಈ ಪಿಚ್ ನೆರವಾದರೂ ಕೂಡ ಬಳಿಕ ಸ್ಪಿನ್ ಬೌಲರ್‌ಗಳಿಗೆ ನೆರವು ನೀಡಲಿದೆ ಎಂದು ಪಿಚ್ ಕ್ಯೂರೇಟರ್ ತಿಳಿಸಿದ್ದಾರೆ.

ಹವಾಮಾನ ವರದಿ

ಚೆನ್ನೈನಲ್ಲಿ ಬಿಸಿಲಿನ ತಾಪ ವಿಪರೀತವಾಗಿರುವ ಕಾರಣ ಆಟಗಾರರು ಅತಿಯಾಗಿ ಬಳಲುವುದು ಖಚಿತ. ದಿನವಿಡೀ ಸುಡು ಬಿಸಿಲಿನ ಉರಿ ಇರಲಿದೆ. ಪಂದ್ಯಕ್ಕೆ ಯಾವುದೇ ಮಳೆಯ ಭೀತಿ ಇಲ್ಲ.

ಆರಂಭಿಕ ಸುತ್ತಿನಲ್ಲಿ ಗ್ರೆಗೋರಿಯಾಗೆ ಆಘಾತ ನೀಡಿದ ಮಾಳವಿಕಾ

ಚೀನಾ ಓಪನ್: ಭಾರತಕ್ಕೆ ಶುಭದಿನ

ಚಾಂಗ್ಝೌ: ಭಾರತದ ಉದಯೋನ್ಮುಖ ತಾರೆ ಮಾಳವಿಕಾ ಬನ್ಸೋಡ್ ಅವರು ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತೆ ಗ್ರೆಗೋರಿಯಾ ಮರಿಸ್ಕಾ ತುಂಜಂಗ್ ಅವರಿಗೆ ಆಘಾತ ನೀಡಿದರು.

ಬುಧವಾರ ನಡೆದ 32ರ ಘಟ್ಟದ ಪಂದ್ಯದಲ್ಲಿ 22 ವರ್ಷ ವಯಸ್ಸಿನ ಬನ್ಸೋಡ್ 26-24, 21-19ರಿಂದ ಇಂಡೋನೇಷ್ಯಾದ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿ, ಎರಡನೇ ಸುತ್ತಿಗೆ ಮುನ್ನಡೆದರು.

ವಿಶ್ವದ ಏಳನೇ ಕ್ರಮಾಂಕದ ಗ್ರೆಗೋರಿಯಾ ಅವರನ್ನು 43ನೇ ಯ್ಯಾಂಕ್‌ನ ಭಾರತದ ಆಟಗಾರ್ತಿ 46 ನಿಮಿಷದಲ್ಲಿ ಸದೆಬಡಿದರು. ಇದು ಬನ್ಸೋಡ್ ಅವರಿಗೆ ವೃತ್ತಿಜೀವನದಲ್ಲಿ ಬಹು ದೊಡ್ಡ ಗೆಲುವಾಗಿದೆ.

ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬನ್ಸೋಡ್ ಎರಡು ಬಾರಿ ಕಾಮನ್ವೆಲ್ತ್ ಗೇಮ್ಸ್ ಪದಕ ವಿಜೇತೆ ಕ್ರಿಸ್ಟಿ ಗಿಲ್ಮೊರ್ (ಸ್ಕಾಟ್ಲೆಂಡ್) ಅವರನ್ನು ಎದುರಿಸಲಿದ್ದಾರೆ. ಅವರು ಟೂರ್ನಿಯಲ್ಲಿ ಉಳಿದಿರುವ ಭಾರತದ ಏಕೈಕ ಭರವಸೆಯಾಗಿದ್ದಾರೆ.

ಮಹಿಳಾ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲೇ ಆಕರ್ಷಿ ಕಶ್ಯಪ್ ಮತ್ತು ಸಮಿಯಾ ಇಮಾದ್ ಫಾರೂಕಿ ನಿರಾಸೆ ಅನುಭವಿಸಿದರು. ಆಕರ್ಷಿ 15-21 19-21ರಿಂದ ಚೀನಾ ತೈಪೆಯ ಚಿಯು ಪಿನ್-ಚಿಯಾನ್ ವಿರುದ್ಧ; ಸಮಿಯಾ 9-21 7-21ರಿಂದ ಗಿಲ್ಮೊರ್ ವಿರುದ್ಧ ಪರಾಭವಗೊಂಡರು.

ಪುರುಷರ ಸಿಂಗಲ್ಸ್‌ನಲ್ಲಿ 40ನೇ ಕ್ರಮಾಂಕದ ಕಿರಣ್ ಜಾರ್ಜ್ 21-4, 10-21, 21-23ರಿಂದ ಜಪಾನ್‌ನ ಕೆಂಟಾ ನಿಶಿಮೊಟೊ ಅವರ ವಿರುದ್ಧ ಮುಗ್ಗರಿಸಿದರು.

ಉದ್ದೇಶಪೂರ್ವಕವಾಗಿ ಪಂದ್ಯ ತಪ್ಪಿಸಿಕೊಂಡ ನಗಾಲ್: ಟೆನಿಸ್ ಸಂಸ್ಥೆ

ದೆಹಲಿ: ಬೆನ್ನುನೋವು ಇರುವುದಾಗಿ ಹೇಳಿ ಕಳೆದ ವಾರ ಸ್ವೀಡನ್ ವಿರುದ್ಧ ಡೇವಿಸ್ ಕಪ್ ವಿಶ್ವ ಗುಂಪಿನ (1) ಪಂದ್ಯದಿಂದ ಹಿಂದೆಸರಿದಿದ್ದ ದೇಶದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಈಗ ಚೀನಾದಲ್ಲಿ ಎಟಿಪಿ ಟೂರ್ನಿಯಲ್ಲಿ ಆಡಲು ಸಜ್ಜಾಗಿದ್ದಾರೆ. ಅವರು ಡೇವಿಸ್ ಕಪ್ ಪಂದ್ಯವನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಂಡಿರಬಹುದು ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆ ಮಂಗಳವಾರ ಹೇಳಿದೆ. ಸ್ಟಾಕ್‌ಹೋಮ್‌ನಲ್ಲಿ ನಡೆದ ಆ ಪಂದ್ಯದಲ್ಲಿ ಭಾರತ 0-4 ರಿಂದ ಸ್ವೀಡನ್ ಕೈಲಿ ಮುಖಭಂಗ ಅನುಭವಿಸಿತ್ತು. ನಗಾಲ್, ಯುಕಿ ಭಾಂಬ್ರಿ ಅನುಪಸ್ಥಿತಿಯಲ್ಲಿ ಡಬಲ್ಸ್ ಆಟಗಾರನನ್ನು ಸಿಂಗಲ್ಸ್‌ಗೆ ಆಡಿಸಬೇಕಾದ ದುಃಸ್ಥಿತಿಯನ್ನು ಭಾರತ ಎದುರಿಸಿತ್ತು. ಪ್ರಮುಖ ಆಟಗಾರ ಮುಕುಂದ್ ಶಶಿಕುಮಾರ್ ಈಗಾಗಲೇ ಎಐಟಿಎನಿಂದ ಅಮಾನತಿಗೆ ಒಳಗಾಗಿರುವ ಬಗ್ಗೆ ಕೇಳಿದಾಗ, 'ನಾಯಕ ರೋಹಿತ್ ರಾಜಪಾಲ್ ಅವರು, ಶಶಿಕುಮಾರ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಲು ಯತ್ನಿಸಿದ್ದರು. ಸುಮಾರು 10 ಸಲ ಕರೆ ಮಾಡಿದ್ದರು. ಅಮಾನತು ವಾಪಸು ಪಡೆಯಲು ಯತ್ನಿಸುವುದಾಗಿಯೂ ಕರೆ ಮಾಡಿ ಹೇಳಿದ್ದರು. ಆದರೆ ಅವರು (ಆಟಗಾರ) ನಿರಾಕರಿಸಿದರು' ಎಂದು ಅವರು ಹೇಳಿದರು.

ಫಿಜಿನಲ್ಲಿ ನಡೆಯುತ್ತಿರುವ ಕಾಮನ್ವೆಲ್ತ್ ಯೂತ್, ಜೂನಿಯರ್ ಮತ್ತು ಸೀನಿಯರ್ ವೇಯ್ಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್

ವೇಯ್ಟ್‌ಲಿಫ್ಟಿಂಗ್: ಭಾರತಕ್ಕೆ 11 ಪದಕ

ಸುವಾ (ಫಿಜಿ): ಭಾರತದ ವೇಯ್ಟ್‌ಲಿಫ್ಟರ್‌ಗಳು ಇಲ್ಲಿ ನಡೆಯುತ್ತಿರುವ ಕಾಮನ್ವೆಲ್ತ್ ಯೂತ್, ಜೂನಿಯರ್ ಮತ್ತು ಸೀನಿಯರ್ ವೇಯ್ಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಈತನಕ 11 ಚಿನ್ನ ಮತ್ತು ಮೂರು ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ.

ಬಾಬುಲಾಲ್ ಹೆಂಬ್ರೋಮ್ ಅವರು 49 ಕೆಜಿ ಯೂತ್ ಪುರುಷರ ವಿಭಾಗದ ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ 114 ಕೆಜಿ ಎತ್ತುವ ಮೂಲಕ ಕಾಮನ್ವೆಲ್ತ್ ಮತ್ತು ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಮಿನಾ ಸಾಂತಾ ಅವರು 55 ಕೆಜಿ ಯೂತ್ ಮಹಿಳೆಯರ ವಿಭಾಗದ ಸ್ನ್ಯಾಚ್‌ನಲ್ಲಿ 81 ಕೆಜಿ ಹಾಗೂ ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ 99 ಕೆಜಿ ಹೀಗೆ ಒಟ್ಟು 180 ಕೆಜಿ ಭಾರ ಎತ್ತಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು. ಬೇಡಬರತ್ ಭಾರಾಲಿ ಅವರು 73 ಕೆಜಿ ಯೂತ್ ಪುರುಷರ ವಿಭಾಗದ ಸ್ನ್ಯಾಚ್, ಕ್ಲೀನ್ ಮತ್ತು ಜರ್ಕ್‌ನಲ್ಲಿ ಒಟ್ಟು 200 ಕೆಜಿ ಪ್ರಯತ್ನದೊಂದಿಗೆ ರಾಷ್ಟ್ರೀಯ ದಾಖಲೆ ಬರೆದರು.

ಜ್ಯೋಷ್ನಾ ಸಬರ್, ಆಕಾಂಕ್ಷಾ ವ್ಯವಹಾರೆ, ಅಶ್ಮಿತಾ ಧೋನೆ, ಭಾರ್ಗವಿ ಬಿ, ಎ. ಮಹಾರಾಜನ್, ವಿ. ಕಿಶೋರ್, ಟಿ. ಮಾಧವನ್, ಬೋಲೋ ಯಾಲಂ ಚಿನ್ನ ಗೆದ್ದ ಭಾರತದ ಇತರ ವೇಯ್ಟ್‌ಲಿಫ್ಟರ್‌ಗಳು. ಚಾಂಪಿಯನ್‌ಶಿಪ್ ಇದೇ 21ರವರೆಗೆ ನಡೆಯಲಿದೆ.

ಶಾಕಿಂಗ್ ವಿಚಾರ ಹೇಳಿದ ಚೈತ್ರಾ

ಮಲೆಯಾಳಂ ಚಿತ್ರರಂಗದಲ್ಲಿ ಹೇಮಾ ಕಮಿಟಿ ವರದಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ. ಮಾಲಿವುಡ್ ಬಳಿಕ ಎಲ್ಲಾ ಚಿತ್ರರಂಗದಲ್ಲಿಯೂ ಸಮಿತಿ ರಚಿಸಬೇಕು ಚಿತ್ರರಂಗದಲ್ಲಿ ಮಹಿಳೆಯರ ವಿರುದ್ಧ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದ ಬಗ್ಗೆ ತಮಿಖೆ ನಡೆಯಬೇಕು ಎಂದು ಆಗ್ರಹ ಕೇಳಿಬರುತ್ತಿವೆ. ಕನ್ನಡ ಚಿತ್ರರಂಗದಲ್ಲಿಯೂ ಪಾಶ್ ಸಮಿತಿ ನೇಮಿಸಬೇಕು ಎಂದು ಮಹಿಳಾ ಆಯೋಗ ಸೂಚಿಸಿದೆ. ಈ ನಡುವೆಯೇ ನಟಿ ಚೈತ್ರಾ ಆಚಾರ್ ಚಿತ್ರರಂಗದಲ್ಲಿನ ಶೋಷಣೆಯ ಬಗ್ಗೆ ಮಾತನಾಡಿದ್ದಾರೆ. ಚಿತ್ರರಂಗದಲ್ಲಿ ಶೋಷಣೆ ಇಲ್ಲ ಅಂತಿಲ್ಲ, ಖಂಡಿತವಾಗಿಯೂ ಇದೆ. ನನಗೆ ಅಂತಹ ಅನುಭವ ಆಗಿಲ್ಲ. ಆದರೆ ನನ್ನ ಜೂನಿಯರ್ ಆರ್ಟಿಸ್ಟ್ ಒಬ್ಬರಿಗೆ ಆದ ಶೋಷಣೆಯ ಬಗ್ಗೆ ನನ್ನ ಬಳಿ ಹೇಳಿಕೊಂಡಿದ್ದರು. ಮೊದಲು ಆಡಿಷನ್‌ಗೆ ಹೋಗಿದ್ದರಂತೆ ಅಲ್ಲಿ ಸೆಲೆಕ್ಟ್ ಆದಾಗ, ನಮ್ಮ ಜತೆ ಟ್ರಿಪ್‌ಗೆ ಬಂದರೆ ನಾಯಕಿಯಾಗಿ ಮಾಡುತ್ತೇನೆ ಎಂದು ಆಮಿಷ ಒಡ್ಡಿದ್ದರಂತೆ. ಇದರಿಂದ ನೊಂದ ನವ ಕಲಾವಿದೆ ಹಿಂದೆ ಸರಿದರಂತೆ ಎಂಬ ಶಾಂಕಿಂಗ್ ವಿಚಾರವನ್ನು ಚೈತ್ರಾ ಹಂಚಿಕೊಂಡಿದ್ದಾರೆ.

ಎಷ್ಟೋ ನವ ಕಲಾವಿದರು ಹೀಗೆ ಚಿತ್ರರಂಗದಲ್ಲಿ ಮಿಂಚಬೇಕು ಎಂಬ ಕನಸು ಹೊತ್ತು ಬರುತ್ತಾರೆ ಆದರೆ ಕೆಲವರ ಶೋಷಣೆಯಿಂದ ಅವರ ಕನಸು ಅಲ್ಲಿಯೇ ಕಮರಿ ಹೋಗುತ್ತದೆ ಎಂದು ಚೈತ್ರಾ ಬೇಸರ ವ್ಯಕ್ತಪಡಿಸಿದ್ದಾರೆ.

ರಣಾಕ್ಷನ ಸಂಘರ್ಷ ಶುರು

ಕಾಮಿಡಿ ಕಿಲಾಡಿಗಳು ಖ್ಯಾತಿಯ ಸೀರುಂಡೆ ರಘು ನಾಯಕನಾಗಿ ನಟಿಸಿರುವ, ಸಂಘರ್ಷ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ದೇವರು, ದೆವ್ವದ ನಡುವಿನ ಸಂಘರ್ಷದ ಸುತ್ತ ನಡೆಯೋ ಸಸ್ಪೆನ್ಸ್, ಥ್ರಿಲ್ಲರ್ ಕಥನ ಚಿತ್ರದಲ್ಲಿದೆ. ರಣಾಕ್ಷ ಎಂದರೆ ಹದ್ದಿನಂತೆ ಕಣ್ಣಿಟ್ಟು ಕಾಯುವವನು ಎಂದರ್ಥ. ಕೆ.ರಾಘವ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸುಮಾರು ಇಪ್ಪತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಸಣ್ಣ ಪುಟ್ಟ ಪಾತ್ರಗಳಲ್ಲಿ ಅಭಿನಯಿಸಿ, ಮೊದಲ ಬಾರಿಗೆ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಎಂಟು ಜನ ಸ್ನೇಹಿತರ ಜತೆ ಸಾಗುವ ಪಾತ್ರ. ಕೊನೆಯಲ್ಲಿ ಅದೇನೆಂದು ರಿವೀಲ್ ಆಗುತ್ತದೆ ಎಂದು ರಘು ತಮ್ಮ ಪಾತ್ರದ ಬಗ್ಗೆ ತಿಳಿಸಿದರು. ನಾಯಕಿಯಾಗಿ ರಕ್ಷಾ ಬಣ್ಣಹಚ್ಚಿದ್ದು, ಮುಗ್ಧ ಹಳ್ಳಿ ಹುಡುಗಿಯಾಗಿ ನಟಿಸಿದ್ದಾರೆ. ಚಿತ್ರದಲ್ಲಿ ಒಟ್ಟು ಮೂರು ಹಾಡುಗಳಿದ್ದು ವಿಶಾಲ್ ಆಲಾಪ್ ಸಂಗೀತ ಸಂಯೋಜಿಸಿದ್ದಾರೆ. ಸಕಲೇಶಪುರ, ಹೊನ್ನಾವರ, ಮೂಡಬಿದ್ರೆ, ಕಾರ್ಕಳ ಸೇರಿದಂತೆ ರಾಜ್ಯದ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಶೀಘ್ರದಲ್ಲಿಯೇ ರಣಾಕ್ಷ ತೆರೆಗೆ ಬರಲಿದೆ.

> ಇದು ನನ್ನ ಎರಡನೇ ಚಿತ್ರ. ಕಲಾವಿದನಾಗಿ ಬಂದವನು ನಿರ್ದೇಶಕನಾಗಿದ್ದೇನೆ. ನಿರ್ಮಾಪಕರಿಗೆ ಒನ್ ಲೈನ್ ಕಥೆ ಹೇಳಿದಾಗ ಸ್ಟೋರಿ ಮೆಚ್ಚಿ ನಿರ್ಮಾಣಕ್ಕೆ ಸಂತಸದಿಂದ ಒಪ್ಪಿದರು. ರಣಾಕ್ಷ ಎಂದರೆ ಹದ್ದಿನಂತೆ ಕಣ್ಣಿಟ್ಟು ಕಾಯುವವನು ಎಂದರ್ಥ. ಫ್ಯಾಮಿಲಿ ಹಿನ್ನೆಲೆಯಲ್ಲಿ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರವಿದು. ದೇವರು ದೆವ್ವ ಎರಡರ ನಡುವಿನ ಸಂಘರ್ಷವೇ ಚಿತ್ರದ ಕಾನ್ಸೆಪ್ಟ್.
> -ರಾಘವ ನಿರ್ದೇಶಕ

> ರಣಾಕ್ಷ ಎಲ್ಲಾ ವಯೋಮಾನದವರು ಕುಳಿತು ನೋಡುವ ಸಿನಿಮಾವಾಗಿದೆ. ಹಳ್ಳಿ ಸೊಗಡಿನ ಕೌಟುಂಬಿಕ ಕಥನ ಇಲ್ಲಿದೆ. ಸಿನಿಮಾ ನೋಡಿ ಹೊರಬಂದ ಮೇಲೂ ಹಲವು ಪ್ರಶ್ನೆಗಳು ನಿಮ್ಮನ್ನು ಆವರಿಸು ತ್ತವೆ. ಪ್ರತಿ ಪಾತ್ರಗಳು ನಿಮ್ಮನ್ನು ಕಾಡುತ್ತವೆ. ಎಲ್ಲರಿಗೂ ನಮ್ಮ ಸಿನಿಮಾ ಹಿಡಿಸುತ್ತದೆ ಎಂಬ ನಂಬಿಕೆ ನನಗಿದೆ.
> -ರಾಮು ನಿರ್ಮಾಪಕ

ಉಪ್ಪಿ ಬರ್ತ್‌ಡೇಗೆ ಯುಐ ಗಿಫ್ಟ್

ನಟ ಉಪೇಂದ್ರ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ, 56ನೇ ವಸಂತಕ್ಕೆ ಕಾಲಿಟ್ಟ ಉಪ್ಪಿಗೆ ಅಭಿಮಾನಿಗಳು, ಗಣ್ಯರು ಶುಭಕೋರಿದ್ದಾರೆ. ಉಪೇಂದ್ರ ಅವರ ಹುಟ್ಟುಹಬ್ಬದಂದು ಯುಐ ಬಗ್ಗೆ ಹೊಸ ಅಪ್ಡೇಟ್ ಸಿಗಬಹುದು ಎಂದು ಸಿನಿಪ್ರಿಯರು ಕಾದು ಕುಳಿತ್ತಿದ್ದರು. ಅಂತೆಯೇ ಸಿನಿಮಾದ ಬಗ್ಗೆ ಉಪ್ಪಿ ಒಂದಷ್ಟು ಹೊಸ ವಿಚಾರಗಳನ್ನು ಹೇಳಿದ್ದಾರೆ. ಜತೆಗೆ ಯುಐ ಚಿತ್ರದ ವಿಭಿನ್ನ ಪೋಸ್ಟರ್ ಸಹ ಬಿಡುಗಡೆಯಾಗಿದೆ. ಕುದುರೆಯ ಮೇಲೆ ಕುಳಿತ ಉಪ್ಪಿಯ ಲುಕ್ ನೋಡಿ ಅಭಿಮಾನಿಗಳು ಖುಷಿಯಾಗಿದ್ದಾರೆ.

ಒಂದು ಚಿತ್ರ ನಿರ್ದೇಶನ ಮಾಡುವುದು ಸವಾಲಿನ ಕೆಲಸ, ನಾನು ಬಹಳ ವರ್ಷಗಳ ನಂತರ ನಿರ್ದೇಶಿಸಿರುವ ಯುಐ ಚಿತ್ರ ಬಿಡುಗಡೆಯ ಹಂತಕ್ಕೆ ತಲುಪಿದೆ. ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸಿರುವ ನಿರ್ಮಾಪಕರು ಅಕ್ಟೋಬರ್‌ನಲ್ಲಿ ತೆರೆಗೆ ತರುವ ಪ್ರಯತ್ನದಲ್ಲಿದ್ದಾರೆ. ತಾಂತ್ರಿಕ ಕಾರ್ಯಗಳು ಹೆಚ್ಚಾಗಿವೆ. ಜತೆಗೆ ಯುಐ ಕನ್ನಡ ಸೇರಿದಂತೆ ಬಹು ಭಾಷೆಗಳಲ್ಲಿ ನಿರ್ಮಾಣವಾಗಿರುವುದರಿಂದ ಬಿಡುಗಡೆ ಸ್ವಲ್ಪ ವಿಳಂಬ ವಾಗುತ್ತಿದೆ. ಜನರು ಯಾವಾಗಲೂ ನನಗೆ ತಲೆಯಲ್ಲಿ ಹುಳ ಬಿಡುತ್ತೀರಾ ಎನ್ನುತ್ತಾರೆ. ಆದರೆ ಈ ಚಿತ್ರದಲ್ಲಿ ಹುಳ ತೆಗೆಯುವ ಕೆಲಸ ಮಾಡುತ್ತಿದ್ದೇನೆ. ಪ್ರೇಕ್ಷಕರು ನಮಗಿಂತ ತುಂಬಾ ಬುದ್ಧಿವಂತರು. ಅವರ ನಿರೀಕ್ಷೆ ಹೆಚ್ಚಾಗಿರುತ್ತದೆ, ಅದಕ್ಕೆ ತಕ್ಕ ಹಾಗೆ ಸಿನಿಮಾ ಮಾಡುವ ಜವಾಬ್ದಾರಿ ನಮ್ಮ ಮೇಲಿರುತ್ತದೆ. ಇಡೀ ಚಿತ್ರತಂಡದ ಶ್ರಮದಿಂದ ನಮ್ಮ ಚಿತ್ರ ಉತ್ತಮವಾಗಿ ಮೂಡಿಬಂದಿದೆ ಎಂದು ಉಪೇಂದ್ರ ಹೇಳಿದರು.

ಯುಐ ಚಿತ್ರದಲ್ಲಿ ಉಪ್ಪಿ ಕಲ್ಕಿ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಎಂಬುದು ಈ ಹಿಂದೆ ಬಿಡುಗಡೆಯಾದ ಟೀಸರ್‌ನಲ್ಲಿ ಸ್ಪಷ್ಟವಾಗಿದೆ. ರೀಷ್ಮಾ ನಾಣಯ್ಯ, ನಿಧಿ, ಅಚ್ಯುತ್ ಕುಮಾರ್, ಸಾಧು ಕೋಕಿಲ, ರವಿಶಂಕರ್ ಮತ್ತಿತರರು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಇದು ಹೈಬಜೆಟ್ ಸಿನಿಮಾವಾಗಿದ್ದು, ಜಿ. ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಜಂಟಿಯಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

> ಇಪ್ಪತ್ತೈದು ವರ್ಷಗಳ ನನ್ನ ಸಿನಿಮಾ ಜರ್ನಿಯಲ್ಲಿ ಶಿವಣ್ಣ ಅವರ ಜತೆಗಿನ ಒಡನಾಟ ಹಾಗೂ ಉಪೇಂದ್ರ ಅವರು ನಮ್ಮ ಬ್ಯಾನರ್‌ನ ಚಿತ್ರವನ್ನು ನಿರ್ದೇಶಿಸಿರುವುದು ನನಗೆ ತುಂಬಾ ಖುಷಿಕೊಟ್ಟ ವಿಚಾರ. ಎಲ್ಲರಂತೆ ನಾನು ಉಪೇಂದ್ರ ಅವರ ನಿರ್ದೇಶನವನ್ನು ಬಲು ಇಷ್ಟಪಡುತ್ತೇನೆ. ಯುಐ ಚಿತ್ರವನ್ನು ತೆರೆಯ ಮೇಲೆ ನೋಡುವ ಕಾತುರ ಅವರ ಅಭಿಮಾನಿ ಗಳಂತೆ ನನಗೂ ಇದೆ. ಸದ್ಯದಲ್ಲೇ ಚಿತ್ರದ ಬಿಡುಗಡೆ ದಿನಾಂಕ ಘೋಷಣೆ ಮಾಡುತ್ತೇವೆ
> ಕೆ.ಪಿ.ಶ್ರೀಕಾಂತ್ ನಿರ್ಮಾಪಕ

ದೀಪಾವಳಿಗೆ ಬರಲಿದೆ ಜೀಬ್ರಾ

ಡಾಲಿ ಧನಂಜಯ ಕನ್ನಡದ ಜತೆಗೆ ಪರಭಾಷ ಚಿತ್ರಗಳಲ್ಲಿಯೂ ನಟಿಸಿದ್ದು, ಪ್ರೇಕ್ಷಕರ ಮನಗೆದ್ದಿದ್ದಾರೆ. ಪುಷ್ಪ ಚಿತ್ರದಲ್ಲಿ ಜಾಲಿ ರೆಡ್ಡಿಯಾಗಿ ಮಿಂಚಿದ್ದ ಡಾಲಿ, ಜೀಬ್ರಾ, ಚಿತ್ರದಲ್ಲಿಯೂ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಜೀಬ್ರಾ, ಮಲ್ಟಿಸ್ಟಾರ್ ಸಿನಿಮಾವಾಗಿದ್ದು, ಸತ್ಯದೇವ್ ಕೂಡ ಸಿನಿಮಾದಲ್ಲಿ ನಟಿಸಿದ್ದಾರೆ. ಫಸ್ಟ್ ಲುಕ್ ಮೂಲಕ ಗಮನಸೆಳೆದಿದ್ದ ಜೀಬ್ರಾ, ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಯಾಗಿದೆ. ಮೋಷನ್ ಪೋಸ್ಟರ್‌ನಲ್ಲಿ ಸತ್ಯರಾಜ್, ಸತ್ಯ ಅಕ್ಕಲಾ, ಜೆನ್ನಿಫರ್ ಪಿಕ್ಕಿನಾಟೊ, ಸುನಿಲ್, ಪ್ರಿಯಾ ಭವಾನಿ ಶಂಕರ್, ಡಾಲಿ ಧನಂಜಯ್ ಮತ್ತು ಸತ್ಯ ದೇವ್ ಅವರನ್ನು ಪರಿಚಯಿಸಲಾಗಿದೆ.

ಮೋಷನ್ ಪೋಸ್ಟರ್ ನಲ್ಲಿ ಚೆಸ್ ಆಟ, ಕಾಯಿನ್ ಫ್ಲಿಪ್ಪಿಂಗ್, ಕರೆನ್ಸಿ ನೋಟುಗಳು ಮತ್ತು ಫ್ಲೈಓವರ್ ನಿಂದ ಕಾರು ಇಳಿಯುವ ದೃಶ್ಯಗಳು ಆಕರ್ಷಕವಾಗಿವೆ. ಬಹಳ ಕ್ರಿಯೇಟಿವಿಟಿ ಯಾಗಿ ಮೋಷನ್ ಪೋಸ್ಟರ್ ಅನ್ನು ಚಿತ್ರೀಕರಿಸಲಾಗಿದೆ. ಜೀಬ್ರಾ ಕ್ರೈಂ, ಥ್ರಿಲ್ಲರ್ ಜಾನ್‌ನ ಸಿನಿಮಾವಾಗಿದ್ದು, ಈಶ್ವರ್ ಕಾರ್ತಿಕ್ ನಿರ್ದೇಶನ ಮಾಡಿದ್ದಾರೆ.ಪದ್ಮಜಾ ಫಿಲಂಸ್ ಪ್ರೈವೇಯ್ಟ್ ಲಿಮಿಟೆಡ್ ಮತ್ತು ಓಲ್ಡ್ ಟೌನ್ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಎಸ್.ಎನ್. ರೆಡ್ಡಿ, ಎಸ್ ಪದ್ಮಜಾ, ಬಾಲ ಸುಂದರಂ ಮತ್ತು ದಿನೇಶ್ ಸುಂದರಂ ಒಟ್ಟಾಗಿ ನಿರ್ಮಾಣ ಮಾಡಿ ದ್ದಾರೆ. ಕೆಜಿಎಫ್ ಮತ್ತು ಸಲಾರ್ ಖ್ಯಾತಿ ಯ ರವಿ ಬಸ್ರೂರ್ ಚಿತ್ರಕ್ಕೆ ಸಂಗೀತ ಸಂಯೋಜಿ ಸಿದ್ದು, ಸತ್ಯ ಪೊನ್ಮಾರ್ ಛಾಯಾಗ್ರಹಣ ನಿರ್ವಹಿಸಿದ್ದಾರೆ. ಅನಿಲ್ ಕ್ರಿಶ್ ಸಂಕಲನ, ಮೀರಾಖ್ ಸಂಭಾಷಣೆ ಚಿತ್ರಕ್ಕಿದೆ. ಮೋಷನ್ ಪೋಸ್ಟರ್‌ನಲ್ಲಿ ಮನಗೆದ್ದಿರುವ ಜೀಬ್ರಾ, ಬೆಳಕಿನ ಹಬ್ಬ ದೀಪಾವಳಿಗೆ ಅದ್ದೂರಿಯಾಗಿ ತೆರೆಗೆ ಬರಲಿದೆ.

ಶ್ರೀವತ್ಸ ಕಟ್ಟಿದ ಗ್ಯಾಂಗ್ಸ್ ಆಫ್ ಯುಕೆ



ಡೆಡ್ಲಿ ಸೋಮ, ಮಾದೇಶ, ದಶಮುಖ ಹಿಟ್ ಚಿತ್ರಗಳನ್ನು ನಿರ್ದೇಶಿಸಿದ ರವಿ ಶ್ರೀವತ್ಸ ಈಗ ತಮ್ಮದೇ ಆದ ಹೊಸ ನಿರ್ಮಾಣ ಸಂಸ್ಥೆಯೊಂದನ್ನು ಸ್ಥಾಪಿಸಿದ್ದು, ಆ ಮೂಲಕ ಹೊಸ ಕಥೆಯನ್ನು ಹೊತ್ತುಬರುತ್ತಿದ್ದಾರೆ. ಗ್ಯಾಂಗ್ಸ್ ಆಫ್ ಯುಕೆ ಶೀರ್ಷಿಕೆಯಲ್ಲಿ ಸೆಟ್ಟೇರಿದ್ದ ಚಿತ್ರ ಈಗಾಗಲೇ ಶೂಟಿಂಗ್ ಮುಗಿಸಿದೆ. ಗ್ಯಾಂಗ್ಸ್ ಆಫ್ ಯುಕೆ ನೈಜ ಘಟನೆಯಾಧಾರಿತ ಚಿತ್ರವಾಗಿದ್ದು, ಉತ್ತರ ಕರ್ನಾಟಕದ ಹತ್ಯಾಕಾಂಡ ಎಂಬ ಟ್ಯಾಗ್ ಲೈನ್ ಈ ಚಿತ್ರಕ್ಕಿದೆ. ಬಾಗಲಕೋಟೆಯ ಪಿಲ್ಲಾರಿ ಫಾಲ್ಸ್‌ನಲ್ಲಿ ನಡೆದ ಘಟನೆ ಇಟ್ಟುಕೊಂಡು ಮಾಡಿದ ಚಿತ್ರಕಥೆಯಿದು. ರಕ್ತ ತನ್ನ ಕುರುಹನ್ನು ಬಿಟ್ಟು ಹೋಗುತ್ತೆ, ಜಿದ್ದು ಒಬ್ಬರಿಂದ ಒಬ್ಬರಿಗೆ ಟ್ರಾವೆಲ್ ಆಗುತ್ತದೆ. ಇದು ಚಿತ್ರದ ಕಾನ್ಸೆಪ್ಟ್. ಆರು ವರ್ಷಗಳ ಹಿಂದೆಯೇ ಸಿದ್ಧವಾದ ಕಥೆ ಇದು. ಆನಂತರದಲ್ಲಿ ಮುಹೂರ್ತ ನೆರವೇರಿಸಿ ಸಿನಿಮಾದ ಚಿತ್ರೀಕರಣ ನಡೆಸಿದೆವು. ಒರಟ ಪ್ರಶಾಂತ್, ಜ್ಯೋತಿ ಶೆಟ್ಟಿ, ಕೋಟೆ ಪ್ರಭಾಕರ್, ಪದ್ಮಾ ವಾಸಂತಿ, ಮುನಿ ಜತೆಗೆ ಹೊಸಬರ ದಂಡೇ ನಮ್ಮ ಚಿತ್ರದಲ್ಲಿದೆ ಎಂದು ನಿರ್ದೇಶಕ ರವಿ ಶ್ರೀವತ್ಸ ಹೇಳಿದರು. ರಾ ಫೀಲ್ ಕೊಡುವಂಥ ಡೈಲಾಗ್‌ಗಳು ಚಿತ್ರದಲ್ಲಿವೆಯಂತೆ. ಖ್ಯಾತ ನಿರ್ದೇಶಕ ಕೆವಿ.ರಾಜು ಅವರ ಪುತ್ರ ಅಮೋಘ್ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸೋನು ಉಪಾಧ್ಯ, ಪ್ರವೀಣ್, ಉಗ್ರಂ ರೆಡ್ಡಿ, ಸತ್ಯ, ಧಿಲ್ಲಾನ್, ನವೀನ್, ಪ್ರಜ್ವಲ್ ಮಸ್ಕಿ, ಉಮೇಶ್, ವಿಕಾಸ್ ಹೀಗೆ ಸಾಕಷ್ಟು ನವ ಪ್ರತಿಭೆಗಳನ್ನು ಚಿತ್ರದಲ್ಲಿ ಅಭಿನಯಿಸಿದ್ದಾರೆ. ವಿಶೇಷ ವಾಗಿ ಶಿಶುನಾಳ ಷರೀಫರ ಎಂಟು ಗೀತೆಗಳನ್ನು ಆಯ್ದು ಕೊಂಡು ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಚಿತ್ರದ ಹಾಡುಗಳಿಗೆ ಸಾಧು ಕೋಕಿಲ ಸಂಗೀತ ಸಂಯೋಜಿಸಿದ್ದಾರೆ. ಗ್ಯಾಂಗ್ಸ್ ಆಫ್ ಯುಕೆ ಡಿಸೆಂಬರ್ ಅಥವಾ ಜನವರಿಗೆ ತೆರೆಗೆ ಬರಲಿದೆ.